ಬುಧವಾರ, ಫೆಬ್ರುವರಿ 14, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 45 | ಪುಟ 18


www.prajavani.net

prajavani.net prajavani prajavani prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ
ಈಗ ಯಂತ್ರಗಳ ಮುಂದೆ ಮನುಷ್ಯರು ತಮ್ಮನ್ನು ತಾವು ಮನುಷ್ಯರು ಎಂದು ಸಾಬೀತು ಮಾಡಿಕೊಳ್ಳಬೇಕಿದೆ!



ಆಳ-ಅಗಲ ರೈತರು ಮತ್ತೆ ಪ್ರತಿಭಟನೆಗೆ ಇಳಿದದ್ದು ಏಕೆ?

ಸಿನಿಮಾ ಪ್ರಶಸ್ತಿ: 'ಇಂದಿರಾ', 'ನರ್ಗೀಸ್' ಹೆಸರಿಗೆ ಕೊಕ್ 14

ಆಶಾ ಕಾರ್ಯಕರ್ತೆಯರ ಅಹೋರಾತ್ರಿ ಧರಣಿ 12

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
71,555 ▲	21,743 ▲	₹64,150 (ಬೆಂಗಳೂರು) ▼	₹72,700 (ಬೆಂಗಳೂರು) ▼	83.08 ▼

ಎಲ್ಲ ಸರ್ಕಾರಿ ಕಚೇರಿಯಲ್ಲಿ ಬಸವಣ್ಣನ ಭಾವಚಿತ್ರ

ಬೆಂಗಳೂರು: 'ವಿಶ್ವ ಗುರು ಬಸವಣ್ಣ ಸಾಂಸ್ಕೃತಿಕ ನಾಯಕ' ಎಂಬ ಘೋಷವಾಕ್ಯ ಇಡೀ ರಾಜ್ಯದ ತುಂಬ ಮೊಳಗಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು. 11

ಡಿಕೆಶಿ ವಿರುದ್ಧ ಲೋಕಾಯುಕ್ತ ಎಫ್‌ಐಆರ್

ಬೆಂಗಳೂರು: 2013ರ ಏಪ್ರಿಲ್ 1ರಿಂದ 2018ರ ಏ. 30ರ ಅವಧಿಯಲ್ಲಿ ಅಕ್ರಮವಾಗಿ ₹74.93 ಕೋಟಿ ಮೌಲ್ಯದ ಆಸ್ತಿಗಳಿಸಿರುವ ಆರೋಪದ ಮೇಲೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ವಿರುದ್ಧ ಲೋಕಾಯುಕ್ತ ಪೊಲೀಸರು ನಾಲ್ಕು ದಿನಗಳ ಹಿಂದೆ ಎಫ್‌ಐಆರ್ ದಾಖಲಿಸಿದ್ದಾರೆ. 11

'ಲೋಕಸಭೆ ಚುನಾವಣೆ: ಎಚ್‌ಡಿಕೆ ಸ್ಪರ್ಧೆ ಇಲ್ಲ' 12

ಹೂಡಿಕೆ ಉತ್ತೇಜನಕ್ಕೆ ಒಪ್ಪಂದ 14

ಚಿನಕುರಳಿ

ಪ್ರಕಾಶ್ ಶೆಟ್ಟಿ



ಎಂಎಸ್‌ಪಿ: ಕಾನೂನು ಖಾತ್ರಿಗೆ ಆಗ್ರಹ ● ಪ್ರತಿಭಟನಕಾರರ ಮೇಲೆ ಅಶ್ರುವಾಯು

ದೆಹಲಿಯತ್ತ ನುಗ್ಗಿದ ರೈತಪಡೆ

ಪ್ರಜಾವಾಣಿ ವಾರ್ತೆ

ನವದೆಹಲಿ: 'ಕನಿಷ್ಠ ಬೆಂಬಲ ಬೆಲೆಗೆ (ಎಂಎಸ್‌ಪಿ) ಕಾನೂನಿನ ಖಾತರಿ' ಒದಗಿಸುವುದೂ ಸೇರಿದಂತೆ ಹಲವು ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಪ್ರತಿಭಟನೆ ನಡೆಸುತ್ತಿರುವ ಪಂಜಾಬ್ ರೈತರು, ಹರಿಯಾಣ–ಪಂಜಾಬ್ ಗಡಿಯಲ್ಲಿ ಹಾಕಿರುವ ಭಾರಿ ಭದ್ರತೆಯನ್ನು ಭೇದಿಸಿ ರಾಷ್ಟ್ರ ರಾಜಧಾನಿ ಪ್ರವೇಶಿಸಲು ಮಂಗಳವಾರ ಯತ್ನಿಸಿದರು.

'ದೆಹಲಿ ಚಲೋ' ರೈತರ ಪ್ರತಿಭಟನಾ ಮೆರವಣಿಗೆ ಆರಂಭವಾಗುತ್ತಿದ್ದಂತೆ, ಅದರಲ್ಲಿ ಪಾಲ್ಗೊಂಡಿದ್ದ ಯುವಕರ ಗುಂಪೊಂದು ಅಂಬಾಲಾ ಬಳಿಯ ಶಂಭು ಗಡಿಯಲ್ಲಿ ಬ್ಯಾರಿಕೇಡ್‌ಗಳನ್ನು ಕಿತ್ತು ಹಾಕಿ, ನುಗ್ಗಲು ಯತ್ನಿಸಿತು. ಪೊಲೀಸರು ಅಶ್ರುವಾಯು ಶೆಲ್ ಪ್ರಯೋಗಿಸಿ ಗುಂಪನ್ನು ಚದುರಿಸಿದರು.

ಅಂಬಾಲಾ ಗಡಿಯಲ್ಲಿ ಕೆಲ ರೈತರನ್ನು ಪೊಲೀಸರು ವಶಕ್ಕೆ ತೆಗೆದುಕೊಂಡರು. ಪಂಜಾಬ್ ಮತ್ತು ಹರಿಯಾಣಕ್ಕೆ ಹೊಂದಿಕೊಂಡಿರುವ ಗಡಿಗಳಲ್ಲಿ ಜಲ ಫಿರಂಗಿ ವಾಹನಗಳನ್ನೂ ನಿಯೋಜನೆ ಮಾಡಲಾಗಿತ್ತು.

ಈ ಮಧ್ಯೆ, ತಾತ್ಕಾಲಿಕವಾಗಿ ಪ್ರತಿಭಟನಾ ಮೆರವಣಿಗೆಯನ್ನು ಸ್ಥಗಿತಗೊಳಿಸಲಾಗುವುದು ಎಂದು ಸಂಜೆ ಪ್ರಕಟಿಸಿದ ರೈತ ಮುಖಂಡರು, ಬೇಡಿಕೆಗಳ ಕುರಿತಂತೆ ಬುಧವಾರ ಬೆಳಿಗ್ಗೆ ಮತ್ತೆ ಚರ್ಚಿಸಲಾಗುತ್ತದೆ ಎಂದು ಘೋಷಿಸಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮುಖಂಡರು, 'ಪ್ರತಿಭಟನೆ ನಡೆಸುತ್ತಿದ್ದವರ ಪೈಕಿ 60ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ. ರಬ್ಬರ್ ಗುಂಡುಗಳನ್ನು ಹೊಡೆಯುವ, ಅಶ್ರುವಾಯು ಶೆಲ್‌ಗಳನ್ನು ಪ್ರಯೋಗಿಸುವ ಮೂಲಕ ಸರ್ಕಾರ ನಮ್ಮನ್ನು ಪ್ರಚೋದಿಸುತ್ತಿದೆ' ಎಂದು ಹೇಳಿದರು.

13ನೇ ಪುಟ ನೋಡಿ



ಪಂಜಾಬ್–ಹರಿಯಾಣದ ಶಂಭು ಗಡಿಯಲ್ಲಿ ಪ್ರತಿಭಟನೆ ನಿರತ ರೈತರನ್ನು ಚದುರಿಸಲು ಪೊಲೀಸರು ಮಂಗಳವಾರ ಆಶ್ರುವಾಯು ಪ್ರಯೋಗಿಸಿದರು —ಪಿಟಿಐ ಚಿತ್ರ

ಅವಸರದಲ್ಲಿ ಕಾನೂನು ರಚನೆ ಅಸಾಧ್ಯ: ಮುಂಡಾ



ಅರ್ಜುನ್ ಮುಂಡಾ

ನವದೆಹಲಿ(ಪಿಟಿಐ): 'ಎಲ್ಲ ಭಾಗೀದಾರರೊಂದಿಗೆ ಮಾತುಕತೆ ನಡೆಸುವುದು ಅಗತ್ಯ. ಹೀಗಾಗಿ ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ಖಾತರಿಪಡಿಸುವ ಕಾನೂನನ್ನು ಅವಸರದಲ್ಲಿ ರಚಿಸಲು ಸಾಧ್ಯ ಇಲ್ಲ' ಎಂದು ಕೇಂದ್ರ ಕೃಷಿ ಸಚಿವ ಅರ್ಜುನ್ ಮುಂಡಾ ಮಂಗಳವಾರ ಹೇಳಿದ್ದಾರೆ.

'ಪ್ರತಿಭಟನೆ ನಡೆಸುತ್ತಿರುವ ರೈತರ ಗುಂಪುಗಳು, ಈ ವಿಚಾರವಾಗಿ ಸರ್ಕಾರದೊಂದಿಗೆ ರಚನಾತ್ಮಕ ಚರ್ಚೆ ನಡೆಸಬೇಕು. ಅಷ್ಟಕ್ಕೂ, ಕೃಷಿಯು ರಾಜ್ಯಗಳಿಗೆ ಸಂಬಂಧಪಟ್ಟ ವಿಷಯ' ಎಂದು ಹೇಳಿದ್ದಾರೆ.

ಪಿಟಿಐಗೆ ನೀಡಿರುವ ಸಂದರ್ಶನದಲ್ಲಿ ಈ ಕುರಿತು ಮಾತನಾಡಿರುವ ಅವರು, 'ಕೆಲ ಪಟ್ಟಭದ್ರ ಹಿತಾಸಕ್ತಿಗಳು ತಮ್ಮ ರಾಜಕೀಯ ಲಾಭಕ್ಕಾಗಿ ಈ ಪ್ರತಿಭಟನೆಗೆ ಮಸಿ ಬಳಿಯಲು ಯತ್ನಿಸುವ ಬಗ್ಗೆ ರೈತರಲ್ಲಿ ಅರಿವು ಮತ್ತು ಜಾಗ್ರತೆ ಅಗತ್ಯ' ಎಂದು ತಿಳಿಸಿದ್ದಾರೆ.

'ಪ್ರತಿಭಟನೆ ನಡೆಸುತ್ತಿರುವ ರೈತರೊಂದಿಗೆ ಎರಡು ಸುತ್ತು ಮಾತುಕತೆ ನಡೆಸಲಾಗಿದ್ದು, ಅವರ ಹಲವು ಬೇಡಿಕೆಗಳನ್ನು ಒಪ್ಪಿಕೊಂಡಿದ್ದೇವೆ. ಆದರೆ, ಕೆಲ ವಿಷಯಗಳ ಕುರಿತು ಸಹಮತ ಮೂಡದ ಕಾರಣ ಮಾತುಕತೆ ನಡೆಯುತ್ತಿದೆ' ಎಂದಿದ್ದಾರೆ.

'ರೈತರ ಕೆಲ ಬೇಡಿಕೆಗಳನ್ನು ಕೇಂದ್ರ ಸರ್ಕಾರ ಒಪ್ಪಿಕೊಂಡಿದ್ದು, ಅವುಗಳನ್ನು ಆಡಳಿತಾತ್ಮಕ ಹಂತದಲ್ಲಿಯೇ ಈಡೇರಿಸಬಹುದಾಗಿದೆ. ಎಂಎಸ್‌ಪಿಗೆ ಕಾನೂನು ಖಾತರಿ ನೀಡಬೇಕು ಎಂಬ ಬೇಡಿಕೆಯು ನೀತಿ ನಿರೂಪಣೆಗೆ ಸಂಬಂಧಪಟ್ಟಿರುವ ಕಾರಣ, ಸಮಗ್ರ ಪರಿಶೀಲನೆ ಅಗತ್ಯ' ಎಂದರು.

13ನೇ ಪುಟ ನೋಡಿ



ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದಲ್ಲಿ ಸ್ವಾಮಿನಾಥನ್ ಆಯೋಗದ ಶಿಫಾರಸಿನಂತೆ ಬೆಳೆಗಳಿಗೆ ನೀಡುವ ಎಂಎಸ್‌ಪಿಗೆ ಕಾನೂನು ಖಾತರಿ ನೀಡಲು ಕಾಂಗ್ರೆಸ್ ತೀರ್ಮಾನಿಸಿದೆ

ರಾಹುಲ್ ಗಾಂಧಿ, ಕಾಂಗ್ರೆಸ್ ನಾಯಕ

ಪಾರ್ಟ್‌ಟೈಮ್ ಕೆಲಸದ ವಂಚನೆ ಜಾಲ ● ಚಿನ್ನ, ಮನೆ ಅಡವಿಟ್ಟು ಹಣ ಕಳುಹಿಸಿದ್ದ ಶಿಕ್ಷಕಿ

₹2.77 ಕೋಟಿ ಪಡೆದು ಶಿಕ್ಷಕಿ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು/ರಾಯಚೂರು: ಅರೆಕಾಲಿಕ (ಪಾರ್ಟ್‌ಟೈಂ) ಕೆಲಸದ ಸೋಗಿನಲ್ಲಿ ಸಿಂಧನೂರು ತಾಲ್ಲೂಕಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕಿಯೊಬ್ಬರಿಂದ ₹ 2.77 ಕೋಟಿ ಪಡೆದು ವಂಚಿಸಿರುವ ಪ್ರಕರಣದ ತನಿಖೆ ನಡೆಸುತ್ತಿರುವ ರಾಯಚೂರು ಪೊಲೀಸರು, ಸೈಬರ್ ವಂಚಕರ 82 ಖಾತೆಗಳಿಗೆ ಹಣ ಜಮೆ ಆಗಿರುವುದನ್ನು ಪತ್ತೆ ಮಾಡಿದ್ದಾರೆ.

ಮಸ್ಕಿ ನಿವಾಸಿಯಾದ 38 ವರ್ಷದ ಶಿಕ್ಷಕಿ, ಬಿಡುವಿನ ಅವಧಿಯಲ್ಲಿ ಅರೆಕಾಲಿಕ ಕೆಲಸ ಮಾಡಿ ಹೆಚ್ಚು ಹಣ ಸಂಪಾದಿಸಲು ಮುಂದಾಗಿದ್ದರೆಂದು ಗೊತ್ತಾಗಿದೆ. ಸಾಮಾಜಿಕ ಜಾಲತಾಣದಲ್ಲಿ ಬಂದಿದ್ದ ಸಂದೇಶ ನಂಬಿ ₹2.77 ಕೋಟಿ ಕಳೆದುಕೊಂಡಿದ್ದಾರೆ.

2023ರ ಸೆಪ್ಟೆಂಬರ್‌ನಿಂದ 2024ರ ಜನವರಿ 12ರವರೆಗಿನ ಅವಧಿಯಲ್ಲಿ ನಡೆದಿರುವ ವಂಚನೆ ಬಗ್ಗೆ ಶಿಕ್ಷಕಿ, ರಾಯಚೂರು ಸೆನ್ (ಸೈಬರ್, ಆರ್ಥಿಕ ಹಾಗೂ ಮಾದಕ ದ್ರವ್ಯ ಅಪರಾಧ) ಠಾಣೆಗೆ ಜ. 14ರಂದು ದೂರು ನೀಡಿದ್ದಾರೆ. ಎಫ್‌ಐಆರ್ ದಾಖಲಿಸಿಕೊಂಡಿರುವ ಇನ್‌ಸ್ಪೆಕ್ಟರ್ ಮಂಜುನಾಥ್, ತನಿಖೆ ಮುಂದುವರಿಸಿದ್ದಾರೆ.

ಮುಖ್ಯಾಂಶಗಳು
- ರಾಯಚೂರು ಸೆನ್ ಠಾಣೆಯಲ್ಲಿ ಎಫ್‌ಐಆರ್
- ಹೆಚ್ಚು ಹಣ ಸಂಪಾದಿಸಲು ಮುಂದಾಗಿದ್ದ ಶಿಕ್ಷಕಿ
- ಶಿಕ್ಷಕಿ ಬೆನ್ನು ಬಿದ್ದ ಸಾಲಗಾರರು

ಇನ್‌ಸ್ಟಾಗ್ರಾಂ ಜಾಹೀರಾತು: 'ಸ್ನಾತಕೋತ್ತರ ಪದವೀಧರರಾದ ಶಿಕ್ಷಕಿ, ಶಾಲಾ ಅವಧಿ ಮುಗಿದ ನಂತರ ಹಾಗೂ ರಜಾ ದಿನಗಳಲ್ಲಿ ಮಾಡಬಹುದಾದ ಕೆಲಸಗಳ ಬಗ್ಗೆ ಹುಡುಕಾಡುತ್ತಿದ್ದರು. ಇನ್‌ಸ್ಟಾಗ್ರಾಂ ಖಾತೆ ಹೊಂದಿದ್ದ ಶಿಕ್ಷಕಿ, 'ಮನೆಯಿಂದಲೇ ಕೆಲಸ ಮಾಡಿ ಲಕ್ಷ ಲಕ್ಷ ದುಡಿಯಿರಿ' ಎಂಬ ಜಾಹೀರಾತು ನೋಡಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಜಾಹೀರಾತು ಪ್ರಕಟಗೊಂಡಿದ್ದ ಇನ್‌ಸ್ಟಾಗ್ರಾಂ ಖಾತೆಗೆ ಸಂದೇಶ ಕಳುಹಿಸಿದ್ದರು. ಪ್ರತಿಕ್ರಿಯಿಸಿದ್ದ ಆರೋಪಿಗಳು, 'ನಮ್ಮ ಕಂಪನಿಯಿಂದ ವಿಮಾನ ಟಿಕೆಟ್ ಬುಕ್ಕಿಂಗ್ ಮಾಡುತ್ತೇವೆ. ನೀವು ಏಜೆನ್ಸಿಯಾಗಿ ಕೆಲಸ ಮಾಡಬೇಕು. ನಾವು ಗ್ರಾಹಕರ ವಿವರ ನೀಡುತ್ತೇವೆ. ಅವರ ಹೆಸರಿನಲ್ಲಿ ಟಿಕೆಟ್ ಬುಕ್ಕಿಂಗ್ ಮಾಡಬೇಕು. ಇದರಿಂದ ಪ್ರತಿ ನಿತ್ಯ ₹ 1 ಸಾವಿರದಿಂದ ₹ 3,600 ಗಳಿಸಬಹುದು' ಎಂದಿದ್ದರು. ಅದನ್ನು ನಂಬಿದ್ದ ಶಿಕ್ಷಕಿ, ಆರೋಪಿಗಳು ಕಳುಹಿಸಿದ್ದ ಜಾಲತಾಣವೊಂದರ ಲಿಂಕ್ ತೆರೆದು ವೈಯಕ್ತಿಕ ಮಾಹಿತಿ ನಮೂದಿಸಿ ನೋಂದಣಿ ಮಾಡಿಕೊಂಡಿದ್ದರು' ಎಂದು ತಿಳಿಸಿವೆ.

'ನೋಂದಣಿಯಾದ ನಂತರ ಜಾಲತಾಣದ ಮೂಲಕ ಮೊದಲ ವಿಮಾನ ಟಿಕೆಟ್ ಬುಕ್ಕಿಂಗ್ ಮಾಡಿದ್ದರು. ಅದನ್ನು ಮೆಚ್ಚಿದ್ದ ಆರೋಪಿಗಳು, ಶಿಕ್ಷಕಿ ಖಾತೆಗೆ ಲಾಭಾಂಶದ ಹಣ ಹಾಕಿದ್ದರು.

ಚಿನ್ನ, ಮನೆ ಅಡವಿಟ್ಟಿದ್ದ ಶಿಕ್ಷಕಿ

'ಮತ್ತಷ್ಟು ಟಿಕೆಟ್ ಬುಕ್ಕಿಂಗ್ ಮಾಡಿದ್ದ ಶಿಕ್ಷಕಿಯ ಜಾಲತಾಣದ ಖಾತೆಗೆ ಹಣ ಜಮೆ ಆಗಿತ್ತು. ಆದರೆ, ಹಣ ಡ್ರಾ ಮಾಡಿಕೊಳ್ಳಲು ಸಾಧ್ಯವಿಲ್ಲವೆಂದು ಆರೋಪಿಗಳು ಹೇಳಿದ್ದರು. ಕೆಲ ಶುಲ್ಕ ಪಾವತಿ ಮಾಡಬೇಕೆಂದು ತಿಳಿಸಿದ್ದರು. ಅದನ್ನು ನಂಬಿದ್ದ ಶಿಕ್ಷಕಿ, ಹಣ ಪಾವತಿಸಿದ್ದರು. ಬುಕ್ಕಿಂಗ್ ಮುಂದುವರಿಸಿದ್ದರು. ಜಾಲತಾಣದಲ್ಲಿದ್ದ ಖಾತೆಯಲ್ಲಿ ಹಣದ ಪ್ರಮಾಣ ಹೆಚ್ಚುತ್ತಿತ್ತು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಹಣವನ್ನು ಬ್ಯಾಂಕ್ ಖಾತೆಗೆ ವರ್ಗಾಯಿಸಲು ಹಿಂದೇಟು ಹಾಕಿದ್ದ ಆರೋಪಿಗಳು, ವಿವಿಧ ಶುಲ್ಕ ಹಾಗೂ ಕಾರಣಗಳನ್ನು ನೀಡಿ ಶಿಕ್ಷಕಿಯಿಂದ ಹಂತ ಹಂತವಾಗಿ ₹ 2.77 ಕೋಟಿ ಪಡೆದುಕೊಂಡಿದ್ದಾರೆ. ಬ್ಯಾಂಕ್ ಖಾತೆಯಲ್ಲಿದ್ದ ಸಂಬಳ ಹಾಗೂ ಉಳಿಕೆಯ ಹಣವನ್ನೆಲ್ಲ ಆರೋಪಿಗಳು ಹೇಳಿದ್ದ ಖಾತೆಗೆ ಶಿಕ್ಷಕಿ ಜಮೆ ಮಾಡಿದ್ದರು. ಜೊತೆಗೆ, ಚಿನ್ನ ಹಾಗೂ ಮನೆಯ ದಾಖಲೆಗಳನ್ನು ಅಡವಿಟ್ಟು ಉಳಿದ ಹಣ ಹೊಂದಿಸಿ ಆರೋಪಿಗಳಿಗೆ ನೀಡಿದ್ದರು.'

'ಸಹೋದ್ಯೋಗಿಗಳು, ಸ್ನೇಹಿತರು, ಕುಟುಂಬಸ್ಥರು ಹಾಗೂ ಇತರರ ಬಳಿಯೂ ತನ್ನ ಟಿಕೆಟ್ ಬುಕ್ಕಿಂಗ್ ಏಜೆನ್ಸಿ ಲಾಭದ ಬಗ್ಗೆ ಹೇಳಿದ್ದರು. ಅವರಿಂದಲೇ ತಲಾ ₹ 5 ಲಕ್ಷದಿಂದ ₹ 15 ಲಕ್ಷದವರೆಗೂ ಪಡೆದು ಆರೋಪಿಗಳಿಗೆ ಕೊಟ್ಟಿದ್ದರು. ಆದರೆ, ಆರೋಪಿಗಳು ಯಾವುದೇ ಹಣ ವಾಪಸು ಕೊಟ್ಟಿಲ್ಲ. ಇದರಿಂದ ಬೇಸತ್ತು ಶಿಕ್ಷಕಿ ಠಾಣೆ ಮೆಟ್ಟಿಲೇರಿದಿದ್ದಾರೆ. ಹಣ ನೀಡಿದ್ದ ಆಪ್ತರು, ವಾಪಸು ನೀಡುವಂತೆ ಮಹಿಳೆಗೆ ಒತ್ತಾಯಿಸುತ್ತಿದ್ದಾರೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಪಾರ್ಟ್‌ಟೈಂ ಕೆಲಸ, ಇತರೆ ಹಣಕಾಸಿನ ವ್ಯವಹಾರಗಳಲ್ಲಿ ತೊಡಗಲು ಶಿಕ್ಷಕರಿಗೆ ಅವಕಾಶವಿಲ್ಲ. ತಪ್ಪಿತಸ್ಥ ಶಿಕ್ಷಕರ ವಿರುದ್ಧ ಕಾನೂನು ಕ್ರಮ ಜರುಗಿಸಲಾಗುವುದು
ಸೋಮಶೇಖರಗೌಡ, ಸಿಂಧನೂರು ಕ್ಷೇತ್ರ ಶಿಕ್ಷಣಾಧಿಕಾರಿ

₹ 2.77 ಕೋಟಿ ವಂಚನೆ ಪ್ರಕರಣದ ತನಿಖೆ ಪ್ರಗತಿಯಲ್ಲಿದೆ. ಸೈಬರ್ ತಜ್ಞರು ಹಾಗೂ ಸಿಐಡಿ ಪರಿಣಿತರ ಅಗತ್ಯವಿದ್ದರೆ ಸಲಹೆ ಪಡೆಯಲಾಗುವುದು
ಬಿ. ನಿಖಿಲ್, ರಾಯಚೂರು ಎಸ್ಪಿ

ಆರೋಪಿಗಳನ್ನು ಮತ್ತಷ್ಟು ನಂಬಿದ್ದ ಶಿಕ್ಷಕಿ, ಟಿಕೆಟ್ ಬುಕ್ಕಿಂಗ್ ಮುಂದುವರಿಸಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

₹ 14 ಲಕ್ಷವಿದ್ದ ಖಾತೆಗಳ ವಹಿವಾಟು ಸ್ಥಗಿತ: ರಾಯಚೂರು ಸೆನ್ ಪೊಲೀಸರು, ಆರೋಪಿಗಳ 7 ಖಾತೆಯಲ್ಲಿದ್ದ ₹ 14 ಲಕ್ಷ ಹಣದ ವಹಿವಾಟು ಸ್ಥಗಿತಗೊಳಿಸಿದ್ದಾರೆ. ಆರೋಪಿಗಳ ಉಳಿದ ಖಾತೆಗಳು ಖಾಲಿಯಾಗಿದ್ದು, ಅವುಗಳ ಹಣ ವರ್ಗಾವಣೆ ಮಾಹಿತಿ ಕಲೆಹಾಕುತ್ತಿದ್ದಾರೆ.

ಕಾನೂನು ಬಾಹಿರ ಚಟುವಟಿಕೆ: 310 ಮಂದಿ ಬಂಧನ

ಬೆಂಗಳೂರು: 'ಡ್ರಗ್ಸ್ ಸಾಗಣೆ ಹಾಗೂ ಮಾರಾಟ, ಜೂಜಾಟ, ಮಟ್ಕಾ ಸೇರಿ ವಿವಿಧ ಕಾನೂನು ಬಾಹಿರ ಚಟುವಟಿಕೆಯಲ್ಲಿ ತೊಡಗಿದ್ದವರ ವಿರುದ್ಧ ಜನವರಿಯಲ್ಲಿ 140 ಪ್ರಕರಣ ದಾಖಲಿಸಿಕೊಳ್ಳಲಾಗಿದ್ದು, 310 ಆರೋಪಿಗಳನ್ನು ಬಂಧಿಸಲಾಗಿದೆ' ಎಂದು ಪೊಲೀಸ್ ಕಮಿಷನರ್ ಬಿ. ದಯಾನಂದ್ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. 'ನ್ಯಾಯಾಲಯಗಳಲ್ಲಿ ಜನವರಿಯಲ್ಲಿ 1,308 ಪ್ರಕರಣಗಳ ವಿಚಾರಣೆ ಮುಗಿದು, 762 ಪ್ರಕರಣಗಳಲ್ಲಿ ಆರೋಪಿಗಳಿಗೆ ಶಿಕ್ಷೆ ಆಗಿದೆ' ಎಂದರು.



ನಟಿ ಹೇಮಾ ಚೌಧರಿ ಅವರ ನಿವಾಸಕ್ಕೆ ಭೇಟಿ ನೀಡಿ, ಆರೋಗ್ಯ ವಿಚಾರಿಸಿದ ನಟ ಜೈದ್ ಖಾನ್ ಅವರು ವೈಯಕ್ತಿಕವಾಗಿ ₹5 ಲಕ್ಷ ನೆರವಿನ ಚೆಕ್ ನೀಡಿದರು. ವಿಧಾನ ಪರಿಷತ್ ಮಾಜಿ ಸದಸ್ಯ ಸರೋವರ್ ಶ್ರೀನಿವಾಸ್ ಉಪಸ್ಥಿತರಿದ್ದರು.

ಪತ್ನಿ ಕೊಲೆ: 'ಮೌಲ್ವಿ' ಆಗಿದ್ದ ಸುಬ್ರಮಣಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪತ್ನಿ ಸುಧಾ ಅವರನ್ನು ಬೆಂಕಿ ಹಚ್ಚಿ ಕೊಂದು ತಲೆಮರೆಸಿಕೊಂಡಿದ್ದ ಆರೋಪಿ ಪತಿ ಸುಬ್ರಮಣಿ ಅಲಿಯಾಸ್ ಮೌಲ್ವಿ ಹುಸೇನ್ ಸಿಕಂದರ್ ಬಾಷಾ, 31 ವರ್ಷಗಳ ಬಳಿಕ ಹೆಬ್ಬಾಳ ಪೊಲೀಸರ ಕೈಗೆ ಸಿಕ್ಕಿಬಿದ್ದಿದ್ದಾರೆ.

'ಹೆಬ್ಬಾಳ ನಿವಾಸಿ ಸುಬ್ರಮಣಿ, ಪತ್ನಿ ಸುಧಾ ಅವರನ್ನು 1993ರಲ್ಲಿ ಕೊಲೆ ಮಾಡಿ ತಲೆಮರೆಸಿಕೊಂಡಿದ್ದ. ಚಿಕ್ಕಮಗಳೂರಿನ ಮಸೀದಿಯೊಂದರಲ್ಲಿ ಮೌಲ್ವಿಯಾಗಿದ್ದ ಈತನನ್ನು ಇತ್ತೀಚೆಗೆ ಬಂಧಿಸಿ, ನಗರಕ್ಕೆ ಕರೆತರಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಸೀಮೆ ಎಣ್ಣೆ ಸುರಿದು ಬೆಂಕಿ ಹಚ್ಚಿದ್ದ: 'ಸುಬ್ರಮಣಿ ಹಾಗೂ ಸುಧಾ ದಂಪತಿ ನಡುವೆ ಆಗಾಗ ಜಗಳ ನಡೆಯುತ್ತಿತ್ತು. ಕೊಲೆ ಮಾಡಲು ತೀರ್ಮಾನಿಸಿದ್ದ ಸುಬ್ರಮಣಿ, ಸುಧಾ ಅವರ ಮೈ ಮೇಲೆ ಸೀಮೆ ಎಣ್ಣೆ ಸುರಿದು ಬೆಂಕಿ ಹಚ್ಚಿದ್ದ. ತೀವ್ರ ಗಾಯಗೊಂಡು ಸುಧಾ ಮೃತಪಟ್ಟಿದ್ದರು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಕೊಲೆ ಪ್ರಕರಣ ದಾಖಲಿಸಿ ಆರೋಪಿ ಸುಬ್ರಮಣಿಯನ್ನು ಬಂಧಿಸಲಾಗಿತ್ತು. ಕೆಲದಿನದ ನಂತರ ಈತ, ಜಾಮೀನು ಮೇಲೆ ಹೊರಗೆ ಬಂದಿದ್ದ. ನ್ಯಾಯಾಲಯದ ವಿಚಾರಣೆಗೆ ಗೈರಾಗಿದ್ದ. ಈತನ ಬಂಧನಕ್ಕಾಗಿ ಜಾಮೀನು ರಹಿತ ವಾರಂಟ್ ಸಹ ಜಾರಿಯಾಗಿದ್ದವು' ಎಂದು ಹೇಳಿವೆ.

ಕೇರಳಕ್ಕೆ ಸ್ಥಳಾಂತರ, ಮುಸ್ಲಿಂ ಹೆಸರು: 'ಬೆಂಗಳೂರು ತೊರೆದು ಕೇರಳಕ್ಕೆ ಹೋಗಿದ್ದ ಸುಬ್ರಮಣಿ, ಅಲ್ಲಿಯೇ ಸಣ್ಣ–ಪುಟ್ಟ ಕೆಲಸ ಮಾಡಿಕೊಂಡಿದ್ದ. ಪೊಲೀಸರು ತನ್ನನ್ನು ಬಂಧಿಸಬಹುದೆಂಬ ಭೀತಿ ಆರೋಪಿಗಿತ್ತು. ಹೀಗಾಗಿ, ಸುಬ್ರಮಣಿ ತನ್ನ ಹೆಸರನ್ನು ಹುಸೇನ್ ಸಿಕಂದರ್ ಬಾಷಾ ಎಂಬುದಾಗಿ ಬದಲಾಯಿಸಿಕೊಂಡಿದ್ದ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ತಾನೊಬ್ಬ ಮುಸ್ಲಿಂ ಎಂಬುದಾಗಿ ಹೇಳಿ ಸ್ಥಳೀಯರ ಜೊತೆ ಒಡನಾಟ ಬೆಳೆಸಿದ್ದ. ಮುಸ್ಲಿಂ ಧಾರ್ಮಿಕ ಆಚರಣೆ ಬಗ್ಗೆ ತಿಳಿದುಕೊಂಡು, ಪಾಲಿಸುತ್ತಿದ್ದ. ಈತ ಹಿಂದೂ ಎಂಬ ಬಗ್ಗೆ ಯಾರಿಗೂ ಅನುಮಾನ ಬಂದಿರಲಿಲ್ಲ' ಎಂದು ಮೂಲಗಳು ಹೇಳಿವೆ.

ಚಿಕ್ಕಮಗಳೂರು ಮಸೀದಿಯಲ್ಲಿ ವಾಸ: 'ಕೇರಳದಿಂದ ಚಿಕ್ಕಮಗಳೂರಿಗೆ ಬಂದಿದ್ದ ಈತ, ಮಸೀದಿಯೊಂದರಲ್ಲಿ ಮೌಲ್ವಿಯಾಗಿದ್ದ. ಮಸೀದಿ ನಿರ್ವಹಣೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದ. ಈತನ ಇರುವಿಕೆ ಬಗ್ಗೆ ಖಚಿತ ಮಾಹಿತಿ ಲಭ್ಯವಾಗಿತ್ತು. ಚಿಕ್ಕಮಗಳೂರಿಗೆ ಹೋಗಿದ್ದ ವಿಶೇಷ ತಂಡ, ಹಲವು ದಿನಗಳವರೆಗೆ ಆರೋಪಿ ಮೇಲೆ ನಿಗಾ ವಹಿಸಿತ್ತು' ಎಂದು ಮೂಲಗಳು ಹೇಳಿವೆ.

'ಮೌಲ್ವಿ ಆಗಿರುವ ವ್ಯಕ್ತಿಯೇ ಸುಬ್ರಮಣಿ ಎಂಬುದಕ್ಕೆ ಕೆಲ ಸುಳಿವುಗಳು ಸಿಕ್ಕಿದ್ದವು. ಸ್ಥಳೀಯ ಪೊಲೀಸರ ನೆರವಿನಿಂದ ಆರೋಪಿಯನ್ನು ಬಂಧಿಸಿ ನಗರಕ್ಕೆ ಕರೆತಂದು ನ್ಯಾಯಾಲಯಕ್ಕೆ ಹಾಜರುಪಡಿಸಲಾಯಿತು' ಎಂದು ಮೂಲಗಳು ತಿಳಿಸಿವೆ.

ಮದ್ಯ ಮಾರಾಟ ನಿಷೇಧ 48 ಗಂಟೆ ಬೇಕೆ: ಹೈಕೋರ್ಟ್

ಬೆಂಗಳೂರು: 'ಇದೇ 16ರಂದು ನಡೆಯಲಿರುವ ವಿಧಾನ ಪರಿಷತ್ತಿನ ಬೆಂಗಳೂರು ಶಿಕ್ಷಕರ ಕ್ಷೇತ್ರದ ಉಪ ಚುನಾವಣೆಯ ಮತದಾನದ ಮುನ್ನ 48 ಗಂಟೆಗಳ ಅವಧಿಯಲ್ಲಿ ಮದ್ಯ ಮಾರಾಟಕ್ಕೆ ನಿಷೇಧ ಹೇರಿರುವ ಜಿಲ್ಲಾಧಿಕಾರಿ ಕ್ರಮ ಮೇಲ್ನೋಟಕ್ಕೆ ಅಷ್ಟೊಂದು ಸೂಕ್ತವಾಗಿಲ್ಲ' ಎಂದು ಹೈಕೋರ್ಟ್ ಮೌಖಿಕವಾಗಿ ನುಡಿದಿದೆ.

ಈ ಸಂಬಂಧ ಬೆಂಗಳೂರು ನಗರ ಜಿಲ್ಲಾಧಿಕಾರಿ ಇದೇ 1ರಂದು ಹೊರಡಿಸಿರುವ ಆದೇಶವನ್ನು ಪ್ರಶ್ನಿಸಿ ಬೃಹತ್ ಬೆಂಗಳೂರು ಹೋಟೆಲ್‌ಗಳ ಸಂಘಟನೆಯ ಕಾರ್ಯದರ್ಶಿ ವೀರೇಂದ್ರ ಎನ್.ಕಾಮತ್ ಸೇರಿದಂತೆ ಒಟ್ಟು ನಾಲ್ವರು ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಸ್.ಆರ್. ಕೃಷ್ಣಕುಮಾರ್ ಮಂಗಳವಾರ ವಿಚಾರಣೆ ನಡೆಸಿದರು.

ಅರ್ಜಿದಾರರ ಪರ ಹಾಜರಾಗಿದ್ದ ಹಿರಿಯ ವಕೀಲ ಎಂ.ಅರುಣ್ ಶ್ಯಾಮ್, 'ಈ ಉಪ ಚುನಾವಣೆ ಸಾರ್ವತ್ರಿಕ ಚುನಾವಣೆಯಲ್ಲ. ಇದರಲ್ಲಿ 16 ಸಾವಿರ ಮತದಾರರು ಮತ ಚಲಾಯಿಸಲು ಅರ್ಹತೆ ಹೊಂದಿದ್ದಾರೆ. ಹೀಗಾಗಿ, 48 ಗಂಟೆಗಳು ಮದ್ಯ ಮಾರಾಟ ನಿಷೇಧಿಸಿದರೆ ವರ್ತಕರು, ಉದ್ದಿಮೆದಾರರು ಸಾಕಷ್ಟು ತೊಂದರೆ ಅನುಭವಿಸಲಿದ್ದಾರೆ' ಎಂದು ವಿವರಿಸಿದರು.

'ಪರಿಷತ್ತಿನ ಚುನಾವಣೆಯಲ್ಲಿ ಇಂತಹ ನಿಷೇಧದ ಅವಧಿಯನ್ನು ಬಾಂಬೆ ಹೈಕೋರ್ಟ್ ಒಂದು ದಿನಕ್ಕೆ ಸೀಮಿತಗೊಳಿಸಿರುವ ಪೂರ್ವನಿದರ್ಶನದ ತೀರ್ಪಿದೆ. ಈ ಪ್ರಕರಣದಲ್ಲೂ ಮತದಾನದ ದಿನ ಮಾತ್ರವೇ ನಿಷೇಧ ಅನ್ವಯಿಸಲು ನಿರ್ದೇಶಿಸಬೇಕು. ಎಂದಿನಂತೆ ಉಳಿದ ಅವಧಿಯಲ್ಲಿ ಚಿಲ್ಲರೆ, ಸಗಟು ವ್ಯಾಪಾರ, ಹೋಟೆಲ್, ಬಾರ್ ಅಂಡ್ ರೆಸ್ಟೋರೆಂಟ್‌ಗಳನ್ನು ತೆರೆಯಲು ಅನುಮತಿಸುವಂತೆ ಪ್ರತಿವಾದಿಗಳಿಗೆ ನಿರ್ದೇಶಿಸಬೇಕು' ಎಂದು ಕೋರಿದರು. ಇದಕ್ಕೆ ಪ್ರತಿಕ್ರಿಯಿಸಿದ ಪೀಠ, 'ಈ ಕುರಿತಂತೆ ಕಾನೂನು ಏನು ಹೇಳುತ್ತದೆ ಎಂಬುದನ್ನು ವಿವರಿಸಿ' ಎಂದು ಸರ್ಕಾರದ ಪರ ವಕೀಲೆ ಸಾವಿತ್ರಮ್ಮ ಅವರಿಗೆ ಸೂಚಿಸಿ ವಿಚಾರಣೆಯನ್ನು ಇದೇ 14ಕ್ಕೆ ಮುಂದೂಡಿತು.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560 020.

ನಂ:ಬೆಂಅಪ್ರಾ/ನಯೋಸ/CLU–192/2575/2023–24 ದಿನಾಂಕ:13.02.2024

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14–A ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ವಲಯದಿಂದ ವಾಣಿಜ್ಯ ಉಪಯೋಗಕ್ಕಾಗಿ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಸಂಬಂಧ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿನಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ–ಗುಂ	ಪರಿಷ್ಕೃತ ಮಹಾ ಯೋಜನೆ 2015ರ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಮಾಸ್ಟರ್ ಗ್ರಂಧಿ ವಿಶ್ವನಾಥ್ ಧ್ರುವಕುಮಾರ್‌ರವರ ಪರವಾಗಿ ಗ್ರಂಧಿ ಬುಚ್ಚಿ ಸನ್ಯಾಸಿ ರಾಜು ಮತ್ತು ಗ್ರಂಧಿ ಬುಚ್ಚಿ ಸನ್ಯಾಸಿ ರಾಜು ರವರ ಪರವಾಗಿ SPA ದಾರರಾದ ಸಿಲ್ಲ ರಾಜೇಶ್, ನಂ.07, ಭವಾನಿ ಕೃಪಾ, 'ಡಿ' ಮೈನ್, ಈಸ್ಟ್ ಎಂಡ್ ರಸ್ತೆ, ಜಯನಗರ, ಬೆಂಗಳೂರು–560 069	ಯಲಹಂಕ	ಯಲಹಂಕ	ನಾಗದಾಸನಹಳ್ಳಿ	45/5, 45/6, 45/8, 45/10, 46/1, 46/2, 46/3 ಮತ್ತು 46/4	ಒಟ್ಟು 8 ಎಕರೆ 24 ಗುಂಟೆ	ವ್ಯವಸಾಯ ವಲಯ	ವಾಣಿಜ್ಯ ಉಪಯೋಗ

ಷರಾ: ಅರ್ಜಿದಾರರು ಪಶ್ನಿತ ಜಮೀನನ್ನು ವಾಣಿಜ್ಯ ಉಪಯೋಗಕ್ಕಾಗಿ ಅಭಿವೃದ್ಧಿಪಡಿಸಿದರೆ ಸದರಿ ಜಮೀನಿನಲ್ಲಿ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ. ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ಯೋಜನಾ ಬದ್ಧವಾದ ವಿನ್ಯಾಸ ರಚನೆಯಿಂದ ಉತ್ತಮ ರಸ್ತೆಗಳು, ನಾಗರಿಕ ಸೌಲಭ್ಯದ ಜಾಗಗಳು ಉದ್ಯಾನವನಗಳು ಸಾರ್ವಜನಿಕ ಉಪಯೋಗಕ್ಕೆ ಲಭ್ಯವಾಗುತ್ತದೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ, ಸದರಿ ಪ್ರದೇಶವನ್ನು 'ವ್ಯವಸಾಯ' ವಲಯದಿಂದ 'ವಾಣಿಜ್ಯ' ಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಮಾಡಲು ಕೋರಿರುತ್ತಾರೆ.

ಸಹಿ/– ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು

के आई ओ सी एल लिमिटेड
KIOCL LIMITED

KUDREMUKH

(ಭಾರತ ಸರ್ಕಾರದ ಒಂದು ಉದ್ಯಮ)
CIN - L13100KA1976GOI002974
ದೂ & ಫ್ಯಾಕ್ಸ್ ನಂ 080 - 25531525, ಇಮೇಲ್ : cs@kioclltd.in,
ವೆಬ್‌ಸೈಟ್ : www.kioclltd.in

ಡಿಸೆಂಬರ್ 31, 2023ಕ್ಕೆ ಕೊನೆಗೊಂಡ ತ್ರೈ ಮಾಸಿಕ ಹಾಗೂ ಒಂಬತ್ತು ತಿಂಗಳುಗಳ ಲೆಕ್ಕ ಪರಿಶೋಧನೆ ಮಾಡದ ಹಣಕಾಸು ಫಲಿತಾಂಶಗಳು.

(EPS ಹೊರತುಪಡಿಸಿ ಲಕ್ಷಗಳಲ್ಲಿ ₹)

ಕ್ರ.ಸಂ.	ವಿವರಗಳು	ಅಂತ್ಯಗೊಂಡ ತ್ರೈಮಾಸಿಕ			ಅಂತ್ಯ ಒಂಬತ್ತು ತಿಂಗಳುಗಳ	
		31.12.2023 (ಆಡಿಟ್ ಮಾಡದ)	30.09.2023 (ಆಡಿಟ್ ಮಾಡದ)	31.12.2022 (ಆಡಿಟ್ ಮಾಡದ)	31.12.2023 (ಆಡಿಟ್ ಮಾಡದ)	31.12.2022 (ಆಡಿಟ್ ಮಾಡದ)
	1	2	3	4	5	6
1	ಕಾರ್ಯಾಚರಣೆಯಿಂದ ಒಟ್ಟು ಆದಾಯ	54,948	43,124	28,789	1,48,216	80,868
2	ಅವಧಿಗಾಗಿ ನಿವ್ವಳ ಲಾಭ /(ನಷ್ಟ) (ತೆರಿಗೆಗಿಂತ ಮುಂಚೆ, ಅಸಾಧಾರಣ ಮತ್ತು /ಅಥವಾ ಅಸಾಧಾರಣ ವಸ್ತುಗಳು)	3,696	(1,792)	(3,388)	(4,264)	(18,037)
3	ಅವಧಿಗೆ ನಿವ್ವಳ ಲಾಭ/(ನಷ್ಟ) (ತೆರಿಗೆ ಮೊದಲು, ಅಸಾಧಾರಣ ಮತ್ತು /ಅಥವಾ ಅಸಾಧಾರಣ ವಸ್ತುಗಳ ನಂತರ)	3,696	(1,792)	(3,388)	(4,264)	(18,037)
4	ಅವಧಿಗೆ ನಿವ್ವಳ ಲಾಭ/(ನಷ್ಟ) (ತೆರಿಗೆ ನಂತರ, ಅಸಾಧಾರಣ ಮತ್ತು/ ಅಥವಾ ಅಸಾಧಾರಣ ವಸ್ತುಗಳ ನಂತರ)	3,903	(2,139)	(3,388)	(4,041)	(17,988)
5	ಅವಧಿಗೆ ಒಟ್ಟು ಸಮಗ್ರ ಆದಾಯ {(ಅವಧಿಗೆ ಸರಿಹೊಂದುವ ಲಾಭ / (ನಷ್ಟ) (ತೆರಿಗೆಯ ನಂತರ) ಮತ್ತು ಇತರ ಸಮಗ್ರ ಆದಾಯ (ತೆರಿಗೆಯ ನಂತರ)}	3,526	(2,139)	(3,388)	(4,418)	(17,988)
6	ಈಕ್ವಿಟಿ ಷೇರ್ ಕ್ಯಾಪಿಟಲ್	60,775	60,775	60,775	60,775	60,775
7	ಹಿಂದಿನ ವರ್ಷದ ಆಡಿಟ್ ಮಾಡಲಾದ ಬ್ಯಾಲೆನ್ಸ್ ಶೀಟ್ಸ್‌ನಲ್ಲಿ ತೋರಿಸಿರುವಂತೆ ಮೀಸಲುಗಳು (ಮರುಮೌಲ್ಯಮಾಪನ ಮೀಸಲು ಹೊರತುಪಡಿಸಿ)	-	-	-	-	-
8	ಪ್ರತಿ ಷೇರ್‌ಗೆ ಗಳಿಕೆಗಳು (ಪ್ರತಿಯೊಂದಕ್ಕೆ 10 /) (ಮುಂದುವರಿದ ಮತ್ತು ಮುಂದುವರಿಸಲಾಗದ ಕಾರ್ಯಾಚರಣೆಗಳು) ಬೇಸಿಕ್ ಮತ್ತು ಡೈಲ್ಯೂಟ್ ಮಾಡಲಾದ	0.64	(0.35)	(0.56)	(0.66)	(2.96)
					ವಾರ್ಷಿಕಗೊಳಿಸಲಾಗಿಲ್ಲ	

ಗಮನಿಸಿ :
1 ಮೇಲಿನವು SEBI (ಪಟ್ಟಿ ಮಾಡುವ ಹೊಣೆಗಾರಿಕೆಗಳು ಮತ್ತು ಬಹಿರಂಗಪಡಿಸುವಿಕೆಯ ಅಗತ್ಯತೆಗಳು) ನಿಯಮಗಳು 2015 ರ ನಿಯಮ 33ರ ಅಡಿಯಲ್ಲಿ ಸ್ಟಾಕ್ ಎಕ್ಸ್‌ಚೇಂಜ್‌ಗಳಿಗೆ ಸಲ್ಲಿಸಲಾದ ವಿವರವಾದ ಲೆಕ್ಕ ಪರಿಶೋಧನೆ ಮಾಡದ ಹಣಕಾಸು ಫಲಿತಾಂಶಗಳ ಸಾರವಾಗಿದೆ. ಡಿಸೆಂಬರ್ 31, 2023 ರಂದು ಕೊನೆಗೊಂಡ ತ್ರೈಮಾಸಿಕ ಮತ್ತು **ಅಂತ್ಯ ಒಂಬತ್ತು ತಿಂಗಳುಗಳ** ಹಣಕಾಸು ಫಲಿತಾಂಶಗಳ ಸಂಪೂರ್ಣ ಸ್ವರೂಪ ಸ್ಟಾಕ್ ಎಕ್ಸ್‌ಚೇಂಜ್(ಗಳು) ವೆಬ್‌ಸೈಟ್ www.nseindia.com, www.bseindia.com, www.msei.in ಮತ್ತು ಕಂಪನಿ ವೆಬ್‌ಸೈಟ್ www.kioclltd.in ನಲ್ಲಿ ಲಭ್ಯವಿದೆ.
2 ಕಂಪನಿಯ ಮೇಲಿನ ಫಲಿತಾಂಶಗಳನ್ನು ಲೆಕ್ಕಪರಿಶೋಧನಾ ಸಮಿತಿಯು ಪರಿಶೀಲಿಸಿದೆ ಮತ್ತು 13.02.2024 ರಂದು ನಡೆದ ಅವರ ಸಭೆಯಲ್ಲಿ ನಿರ್ದೇಶಕರ ಮಂಡಳಿಯಿಂದ ಅನುಮೋದಿಸಲಾಗಿದೆ.

ಮಂಡಳಿಯಿಂದ ಆದೇಶ
KIOCL ಲಿಮಿಟೆಡ್
ಸಹಿ/-
(ಟಿ. ಸಮಿನಾಧನ್)
ಅಧ್ಯಕ್ಷ–ಕಮ್–ವ್ಯವಸ್ಥಾಪಕ ನಿರ್ದೇಶಕ
DIN 08291153

ಸ್ಥಳ : ಬೆಂಗಳೂರು
ದಿನಾಂಕ : 13.02.2024

ಸಾರ್ವಜನಿಕ ಸೂಚನೆ

ಮೆ|| ಸೌದೇಲ ಕನ್‌ಸ್ಟ್ರಕ್ಷನ್ಸ್ ಪ್ರೈವೇಟ್ ಲಿಮಿಟೆಡ್, ಈ ಮೂಲಕ ಸಾರ್ವಜನಿಕರ ಗಮನಕ್ಕೆ ತರುವುದೇನೆಂದರೆ, ಕರ್ನಾಟಕ ರಾಜ್ಯ ಪರಿಸರ ಪ್ರಭಾವ ಮೌಲ್ಯಮಾಪನ ಪ್ರಾಧಿಕಾರವು (ಭಾರತ ಸರ್ಕಾರದ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯದಿಂದ ಸ್ಥಾಪಿಸಲ್ಪಟ್ಟಿದೆ) ಸರ್ವೇ ನಂ. 321/2B(P), 321/2C(P), 322/1, 323/1(P), 323/3, 323/4, 323/5(P), 323/6, 323/7, 325/1(P), 325/2, 327, 328/1, 328/2(P), 328/3, 328/4, 330, 331, 332/2 ಬೇಗೂರು ಗ್ರಾಮ ಮತ್ತು ಸರ್ವೇ ನಂ. 19(P) of ಹುಳಿಮಾವು ಗ್ರಾಮ, ಬೇಗೂರು ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು, ಉದ್ದೇಶಿತ ವಸತಿ ಸಾಲು ಮನೆಗಳ ನಿರ್ಮಾಣಕ್ಕಾಗಿ ಪರಿಸರ ಅನುಮತಿಯನ್ನು ನೀಡಿದೆ. EC Identification No. EC23B038KA197219, ಫೈಲ್ ನಂ. SEIAA 67 CON 2023, ದಿನಾಂಕ: 29/11/2023, ಅನುಮತಿ ಪತ್ರದ ಪ್ರತಿಯನ್ನು ಪರಿವೇಶ್ ಪೋರ್ಟಲ್ http://environmentclearance.nic.in ವೆಬ್ಸೈಟ್ ನಲ್ಲಿ ಕಾಣಬಹುದು.

ಮೆ|| ಸೌದೇಲ ಕನ್‌ಸ್ಟ್ರಕ್ಷನ್ಸ್ ಪ್ರೈವೇಟ್ ಲಿಮಿಟೆಡ್,
ವಿಳಾಸ: 7ನೇ ಮಹಡಿ, SKAV 909 ಲ್ಯಾವೆಲ್ಲೆ, ಲ್ಯಾವೆಲ್ಲೆ ರಸ್ತೆ, ರಿಚಮಂಡ್ ಸರ್ಕಲ್, ಬೆಂಗಳೂರು–560001.

ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ & ಜೀವನೋಪಾಯ ಇಲಾಖೆ
ಜಿಲ್ಲಾ ಕೌಶಲ್ಯಾಭಿವೃದ್ಧಿ ಕಛೇರಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ.

ಸಂಖ್ಯೆ : ಜಿ.ಕೌ.ಕ./ಬೆಂ.ಗ್ರಾ./ಹೋ.ಗು./ಟೆಂಡರ್–2/23–24 ದಿನಾಂಕ : 13–02–2024

ಅಲ್ಪಾವಧಿ ಟೆಂಡರ್ ಪ್ರಕಟಣೆ

ಜಿಲ್ಲಾ ಕೌಶಲ್ಯಾಭಿವೃದ್ಧಿ ಕಛೇರಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಈ ಕಛೇರಿಗೆ ಹೊರಗುತ್ತಿಗೆ ಆಧಾರದಲ್ಲಿ ಇಬ್ಬರು ಬೆರಳಚ್ಚುಗಾರರು ಹಾಗೂ ಇಬ್ಬರು ಗ್ರೂಪ್–ಡಿ ಸಿಬ್ಬಂದಿಗಳ ಸೇವೆಯನ್ನು ಹೊರಗುತ್ತಿಗೆ ಆಧಾರದಲ್ಲಿ ಒಂದು ವರ್ಷದ ಅವಧಿಗೆ ಪಡೆಯುವ ಸಂಬಂಧ ಆಸಕ್ತ ಮಾನವ ಸಂಪನ್ಮೂಲ ಹೊರಗುತ್ತಿಗೆ ಏಜೆನ್ಸಿಗಳಿಂದ ದ್ವಿ–ಲಕೋಟೆ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿರುತ್ತದೆ. ಆಸಕ್ತ ಟೆಂಡರ್‌ದಾರರು https://kppp.karnataka.gov.in ವೆಬ್‌ಸೈಟ್ ಮೂಲಕ ಟೆಂಡರ್‌ಗಳನ್ನು ದಿನಾಂಕ : 27–02–2024 ರ ಸಂಜೆ 5.30 ಗಂಟೆಯೊಳಗಾಗಿ ಸಲ್ಲಿಸಲು ತಿಳಿಸಲಾಗಿದೆ. ಟೆಂಡರ್‌ನ ವೇಳಾಪಟ್ಟಿ ಹಾಗೂ ಹೆಚ್ಚಿನ ವಿವರಗಳನ್ನು ಟೆಂಡರ್ ದಸ್ತಾವೇಜಿನಲ್ಲಿ ನೀಡಲಾಗಿದೆ. **Tender Reference No. : DSDEL/2023-24/SE0012** ಇಲ್ಲಿಂದ ಪಡೆಯಬಹುದಾಗಿದೆ.

ಸಹಿ/–ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿ,
ಬೆಂಗಳೂರು ಗ್ರಾಮಾಂತರ ಜಿಲ್ಲೆ.

ವಾಸಾಸಂಇ/ಉನಿಕ/ಬೆಂಗ್ರಾಜಿ/ಮಣಿಪಾಲ್/3559/2023–24

PUBLIC NOTICE

Notice is hereby given to the general public that Mrs. D. A. Thejeshwari, wife of Mr. K. M. Srinivasa Murthy, presently residing at No. 5/25, 10th Main, 13th Cross, Jayanagara 1st Block, Near Ashok Pillar, Bengaluru North, Bengaluru- 560 001 being the owner of immovable property morefully described in the '**Schedule**' hereto and hereinafter referred to as '**Schedule Property**' has executed an Agreement for Sale in favour of our client ('**Client**').

It is informed that our Client is intending to complete the sale transaction in connection with the Schedule Property. If any person/s other than the Owner, asserting any right, title, charge, lien, claim/s or any interest whatsoever in respect of the Schedule Property are hereby called upon to submit to the undersigned, their claim/s, if any, over the Schedule Property or their objections, if any, to the aforementioned sale transaction. The said claim/s or objections must be in writing, together with documentary proof of such claim/s or objections, so as to reach us at the address given below within a period of **15** (**Fifteen**) days from the date of publication of this Notice. If no such claim/s or objections are received within the period said 15 (Fifteen) days, it shall be deemed that no one else other than the Owner has/ have any right, title, interest or claim/s in respect of the Schedule Property. Further, claims or alleged interests, if any, which are not received within the said 15 (Fifteen) days period shall be deemed to have been consciously waived and disregarded for all intents and purposes and shall thereafter not be binding on our Client and our Client would be at liberty to proceed with the said sale transaction in connection with the Schedule Property.

SCHEDULE
(Description of the Schedule Property)

All that piece and parcel of immovable property being converted for non-agricultural residential purpose bearing Survey No. 129/1C, measuring 04 Acres 32 Guntas (excluding 07 Guntas of 'B' kharab land), situated at Hoodi Village, K. R. Puram Hobli, Bengaluru East Taluk and Bengaluru Urban District and bounded on the:
East by : Property bearing Survey No. 129/B;
West by : Property bearing Survey No. 128;
North by : Village boundary of Sadaramangala Village; and
South by : Properties bearing Survey Nos. 128 & 129/1.

Sd/-
Mr. Srinivas B.R. & Ms. Brijita Prakash, Partners
DSK Legal
Prestige Loka, No. 201, 2nd Floor, No. 7/1 & 7/7, Brunton Road, Craig Park Layout, Bengaluru – 560025, Tel: 080-69548770.

Date : 14-02-2024
Place : Bengaluru

ಗುಜರಾತ್ ಪೆಟ್ರೋಸಿಂಥಿಸ್ ಲಿಮಿಟೆಡ್

ನೋಂದಾಯಿತ ಕಚೇರಿ: ನಂ.24, 2ನೇ ಮುಖ್ಯರಸ್ತೆ, 1ನೇ ಹಂತ, ದೊಡ್ಡನೆಕ್ಕುಂಡಿ ಕೈಗಾರಿಕಾ ಪ್ರದೇಶ, ಮಹದೇವಪುರ ಅಂಚೆ, ಬೆಂಗಳೂರು - 560 048. CIN : L23209KA1977PLC043357
E-mail : info@gpl.in, secretarial@gujaratpetrosynthese.com Website: www.gpl.in

ಡಿಸೆಂಬರ್ 31, 2023 ರ ತ್ರೈಮಾಸಿಕ ಮತ್ತು ಒಂಬತ್ತು ತಿಂಗಳ ಅವಧಿಗೆ ಅಂತ್ಯಗೊಂಡ ಅಪರಿಶೋಧಿತ ಆರ್ಥಿಕ ಫಲಿತಾಂಶಗಳ ಸ್ಟೇಟ್‌ಮೆಂಟ್

(ರೂ. ಸಾವಿರಗಳಲ್ಲಿ)

ಕ್ರ. ಸಂ.	ವಿವರಗಳು	ಡಿಸೆಂಬರ್ 2023 ರ ತ್ರೈಮಾಸಿಕಕ್ಕೆ ಅಂತ್ಯಗೊಂಡ	ಡಿಸೆಂಬರ್ 2023 ರ ಒಂಬತ್ತು ತಿಂಗಳ ಅವಧಿಗೆ ಅಂತ್ಯಗೊಂಡ	ಡಿಸೆಂಬರ್ 2022 ರ ತ್ರೈಮಾಸಿಕಕ್ಕೆ ಅಂತ್ಯಗೊಂಡ
1	ನಿರ್ವಹಣೆಯಿಂದ ಬಂದ ಒಟ್ಟು ವರಮಾನ	40,266	128,067	63,169
2	ನಿವ್ವಳ ಲಾಭ/ (ನಷ್ಟ) ಅವಧಿಗೆ (ತೆರಿಗೆಯ ಮುಂಚೆ, ವಿನಾಯಿತಿ ಪಡೆದ/ಮತ್ತು ವಿಶೇಷ ವಸ್ತುಗಳು)	2,142	12,151	7,682
3	ನಿವ್ವಳ ಲಾಭ/ (ನಷ್ಟ) ತೆರಿಗೆಯ ಅವಧಿಯ ಮುಂಚೆ (ವಿನಾಯಿತಿ ಪಡೆದ ನಂತರ/ಮತ್ತು ವಿಶೇಷ ವಸ್ತುಗಳು)	2,142	12,151	6,441
4	ನಿವ್ವಳ ಲಾಭ / (ನಷ್ಟ) ತೆರಿಗೆಯ ಅವಧಿಯ ನಂತರ (ವಿನಾಯಿತಿ ಪಡೆದ ನಂತರ/ಮತ್ತು ವಿಶೇಷ ವಸ್ತುಗಳು)	6,947	15,241	2,479
5	ಸಂಪೂರ್ಣ ಸಮಗ್ರ ಅವಧಿಯ ಆದಾಯ [ಒಳಗೊಂಡಿರುವ ಲಾಭ/(ನಷ್ಟ) ಅವಧಿಗೆ(ತೆರಿಗೆಯನಂತರ) ಹಾಗೂ ಇತರೆ ಸಮಗ್ರ ಆದಾಯ (ತೆರಿಗೆಯನಂತರ)	6,947	15,241	2,479
6	ಈಕ್ವಿಟಿ ಷೇರುಬಂಡವಾಳ (ಮುಖಬೆಲೆ ರೂ.10 ಪ್ರತಿಷೇರಿಗೆ)	5,969	5,969	5,969
7	ಮೀಸಲು (ಪುನರುಜ್ಜೀವನ ಮೀಸಲು ಹೊರತುಪಡಿಸಿ) ಹಿಂದಿನ ವರ್ಷದ ಲೆಕ್ಕ ಪರಿಶೋಧನೆಯ ಆಯವ್ಯಯ ಪಟ್ಟಿಯಲ್ಲಿ ತೋರಿಸಿರುವಂತೆ			4,08,330
8	ಪ್ರತಿ ಷೇರಿನಗಳಿಕೆ (ಪ್ರತಿ ರೂ.10ಕ್ಕೆ) (ಕಾರ್ಯಾಚರಣೆಗಳನ್ನು ಮುಂದುವರಿಸುವುದಕ್ಕಾಗಿ ಹಾಗೂ ಸ್ಥಗಿತಗೊಳಸುವುದಕ್ಕಾಗಿ) 1. ಮೂಲಭೂತ: 2. ಡೈಲ್ಯೂಟೆಡ್:	1.16	2.55	0.42

ಸೂಚನೆಗಳು:
ಎ). ಈ ಮೇಲಿನವು 31ನೇ ಡಿಸೆಂಬರ್ 2023ರ ತ್ರೈಮಾಸಿಕ ಹಾಗೂ ಒಂಬತ್ತು ತಿಂಗಳ ಅವಧಿಗೆ ಅಂತ್ಯಗೊಂಡ ಆರ್ಥಿಕ ಫಲಿತಾಂಶಗಳ ಸಂಕ್ಷಿಪ್ತ ರೂಪವಾಗಿರುತ್ತದೆ ಹಾಗೂ ಫೆಬ್ರುವರಿ 13, 2024 ರಂದು ಲೆಕ್ಕ ಪರಿಶೋಧನಾ ಸಮಿತಿಯಿಂದ ಈ ಮೇಲ್ಕಂಡ ಫಲಿತಾಂಶಗಳು ಪುನಾರಾವಲೋಕನಗೊಂಡಿದ್ದು, ಕಂಪನಿಯ ನಿರ್ದೇಶಕರ ಮಂಡಳಿಯ ಸಭೆಯಲ್ಲಿ ಪರಿಗಣಿಸಿ, ದಾಖಲಿಸಿ, 2015ರ ಸೆಬಿಯ ನಿಯಂತ್ರಣಗಳ(ಲಿಸ್ಟಿಂಗ್ ಮತ್ತು ಇತರೆ ಘೋಷಣೆಗಳ ಅವಶ್ಯಕತೆಗಳು) 33ನೇಯ ನಿಯಂತ್ರಣದಡಿ ಸ್ಟಾಕ್‌ಎಕ್ಸ್‌ಚೇಂಜ್‌ನಲ್ಲಿ ಸಲ್ಲಿಸಲಾಗಿದೆ. ಕಂಪನಿಯ ಶಾಸನಬದ್ಧ ಲೆಕ್ಕಪರಿಶೋಧಕರು ಮೇಲಿನ ಫಲಿತಾಂಶಗಳ ಸೀಮಿತ ಪರಿಶೀಲನೆಯನ್ನು ನಡೆಸಿದ್ದಾರೆ. ಈ ಆರ್ಥಿಕ ಫಲಿತಾಂಶಗಳ ಪೂರ್ಣ ನಮೂನೆಯು ಬಿಎಸ್‌ಇ ಲಿಮಿಟೆಡ್‌ನ ವೆಬ್‌ಸೈಟ್ www.bseindia.com ಮತ್ತು ಕಂಪನಿಯ ವೆಬ್‌ಸೈಟ್ www.gpl.in ನಲ್ಲೂ ಲಭ್ಯವಿದೆ. ಬಿ). ಮುಂದೂಡಲ್ಪಟ್ಟ ತೆರಿಗೆ ಸೇರಿದಂತೆ ತೆರಿಗೆಯನ್ನು ತ್ರೈಮಾಸಿಕ ಫಲಿತಾಂಶಗಳ ಆಧಾರದ ಮೇಲೆ ಲೆಕ್ಕ ಹಾಕಲಾಗುತ್ತದೆ ಮತ್ತು ವ್ಯತ್ಯಾಸವಿದ್ದರೆ, ವಾರ್ಷಿಕ ತೆರಿಗೆ/ಮುಂದೂಡಲ್ಪಟ್ಟ ತೆರಿಗೆಗೆ ಕೊನೆಯ ತ್ರೈಮಾಸಿಕದಲ್ಲಿ ಸರಿಹೊಂದಿಸಲಾಗುತ್ತದೆ. ಸಿ). ಕಂಪನಿಯು ಒಂದು ಸೆಗ್ಮೆಂಟ್‌ನಲ್ಲಿ ಮಾತ್ರ ಕಾರ್ಯ ನಿರ್ವಹಿಸುತ್ತದೆ. ಡಿ). ಅಗತ್ಯವಿದ್ದಲ್ಲಿ ಹೋಲಿಕೆ ಮಾಡಲು, ಹಿಂದಿನ ತ್ರೈಮಾಸಿಕ / ಅವಧಿಯ ಅಂಕಿ ಅಂಶಗಳನ್ನು ಮರು ಸಂಗ್ರಹಿಸಲಾಗಿದೆ/ ಮರು ಜೋಡಿಸಲಾಗಿದೆ.

ಗುಜರಾತ್ ಪೆಟ್ರೋಸಿಥಿಂಸ್ ಲಿಮಿಟೆಡ್‌ನ ಪರವಾಗಿ
ಸಹಿ/– **ಉರ್ಮಿ. ಎನ್. ಪ್ರಸಾದ್**
ಜಂಟಿ ವ್ಯವಸ್ಥಾಪಕ ನಿರ್ದೇಶಕರು ಡಿ.ಐ.ಎನ್: 00319482

ಸ್ಥಳ : ಬೆಂಗಳೂರು
ದಿನಾಂಕ : 13/02/2024

SANSERA ideas@work
SANSERA ENGINEERING LIMITED

CIN: L34103KA1981PLC004542
Registered Address: Plant-7, No.143/A, Jigani Link Road, Bommasandra Industrial Area, Bengaluru - 560105
Phone: 080 27839081/82/83; **Fax:** 080 27839309; **Email:** rajesh.modi@sansera.in; **Website:** www.sansera.in

CONSOLIDATED UNAUDITED FINANCIAL RESULTS FOR THE QUARTER AND NINE MONTHS ENDED 31 DECEMBER 2023

(Rs. in Million except EPS)

Sl. No.	Particulars	Quarter ended		Nine months ended		Year Ended
		31-12-2023 (Unaudited)	31-12-2022 (Unaudited)	31-12-2023 (Unaudited)	31-12-2022 (Unaudited)	31-03-2023 (Audited)
1	Total Income from Operations	7,126.38	5,596.38	20,655.87	17,274.47	23,460.44
2	Net Profit/(Loss) for the period (before Tax, Exceptional and/or Extraordinary items)	666.21	440.78	1,912.98	1,546.29	2,032.32
3	Net Profit/(Loss) for the period before Tax (after Exceptional and/or Extraordinary items)	666.21	440.78	1,912.98	1,546.29	2,032.32
4	Net Profit/(Loss) for the period after Tax (after Exceptional and/or Extraordinary items)	483.73	312.65	1,410.84	1,129.22	1,483.42
5	Total Comprehensive Income for the period [comprising Profit/(Loss) for the period (after tax) and Other Comprehensive Income (after tax)]	484.23	326.90	1,412.78	1,102.81	1,463.81
6	Equity Share Capital	107.17	105.80	107.17	105.80	105.86
7	Reserves (excluding Revaluation Reserve) as shown in the Audited Balance Sheet of the previous year	-	-	-	-	11,573.48
8	Earnings per share (of Rs. 2/- each)					
	1. Basic:	8.99	5.90	26.24	21.10	27.74
	2. Diluted:	8.89	5.80	25.89	20.64	27.17

Note:
a. The above is an extract of the detailed format of unaudited quarterly and nine months financial results for period ended 31 December 2023 filed with the stock exchanges under Regulation 33 of the SEBI (Listing Obligations & Disclosure Requirements) Regulations, 2015. The full format of the unaudited quarterly and nine months financial results for period ended 31 December 2023 are available on the websites of the stock exchange(s) i.e., www.bseindia.com / www.nseindia.com and the Company i.e., www.sansera.in.
b. Standalone Unaudited financial information of the Company pursuant to regulation 47(1)(b) of SEBI (LODR) Regulations, 2015

(Rs. in Million)

Particulars	Quarter ended		Nine months ended		Year Ended
	31-12-2023 (Unaudited)	31-12-2022 (Unaudited)	31-12-2023 (Unaudited)	31-12-2022 (Unaudited)	31-03-2023 (Audited)
Total Income from Operations	6,436.76	4,942.45	18,623.08	15,493.17	20,991.69
Profit before Tax	679.11	447.12	1,882.12	1,525.40	2,026.31
Profit after Tax	501.67	324.35	1,397.89	1,129.13	1,502.00

For & on behalf of the Board of Directors
Sd/-
S. Sekhar Vasan
Chairman and Managing Director
DIN: 00361245

Date: 12 February 2024
Place: Bangalore

Adfactors 588

ದಲಿತ ಉದ್ದಿಮೆದಾರರ ನಿವೇಶನ ಹಿಂಪಡೆಯುವ ಪ್ರಯತ್ನ: ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ವತಿಯಿಂದ 700ಕ್ಕೂ ಹೆಚ್ಚು ದಲಿತ ಉದ್ದಿಮೆದಾರರಿಗೆ ನೀಡಿರುವ ಕೈಗಾರಿಕಾ ನಿವೇಶನ ಅಥವಾ ಮಳಿಗೆಗಳನ್ನು ಹಿಂಪಡೆಯುವ ಪ್ರಕ್ರಿಯೆ ನಡೆಯುತ್ತಿದೆ’ ಎಂದು ಕರ್ನಾಟಕ ದಲಿತ ಉದ್ದಿಮೆದಾರರ ಸಂಘ ಆರೋಪಿಸಿದೆ.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ಪ್ರಧಾನ ಕಾರ್ಯದರ್ಶಿ ಸಿ.ಜಿ. ಶ್ರೀನಿವಾಸನ್, ‘2018ರಲ್ಲಿ ದಲಿತರಿಗೆ ಕೈಗಾರಿಕಾ ನಿವೇಶನ ನೀಡುವ ಸಬ್ಸಿಡಿ ಪ್ರಮಾಣವನ್ನು ಶೇ 50 ಮತ್ತು ಶೇ 75ರಷ್ಟು ಹೆಚ್ಚಿಸಲಾಗಿತ್ತು. ನಂತರವೇ ಪರಿಶಿಷ್ಟ ಜಾತಿ ಮತ್ತು ಪಂಗಡದವರು ಹೆಚ್ಚಿನ ಸಂಖ್ಯೆಯಲ್ಲಿ ನಿವೇಶನಗಳನ್ನು ಪಡೆದಿದ್ದರು. ಮೂರು ವರ್ಷದೊಳಗೆ ಈ ನಿವೇಶನದಲ್ಲಿ ಯೋಜನೆ ಅನುಷ್ಠಾನಗೊಳಿಸಬೇಕೆಂದು ಕೆಐಎಡಿಬಿ ನಿಯಮವಿದೆ. ಆದರೆ, ಕೋವಿಡ್ ಕಾರಣದಿಂದ ಉದ್ದಿಮೆದಾರರು ಇಲ್ಲಿ ಯಾವುದೇ ಯೋಜನೆಗಳು ಪ್ರಾರಂಭಿಸಲು ಸಾಧ್ಯವಾಗಲಿಲ್ಲ. ಅಂತಹ ಉದ್ದಿಮೆದಾರರಿಗೆ ಕಾಲವಕಾಶ ನೀಡಬೇಕು’ ಎಂದು ಆಗ್ರಹಿಸಿದರು.

‘2009ರಿಂದ ಜಾರಿಯಲ್ಲಿರುವ ನಿಯಮದಂತೆ ಪರಿಶಿಷ್ಟ ಜಾತಿ ಮತ್ತು ಪಂಗಡದ ಉದ್ದಿಮೆದಾರರಿಗೆ ಶೇ 22.65 ಹಾಗೂ 2014ರ ನಿಯಮದಂತೆ ಶೇ 25ರಷ್ಟು ಕೈಗಾರಿಕಾ ಪ್ರದೇಶದಲ್ಲಿ ಭೂಮಿ ಹಂಚಿಕೆ ಮಾಡುವ ಸರ್ಕಾರದ ನೀತಿಯನ್ನು ಕೆಐಎಡಿಬಿ ಉಲ್ಲಂಘಿಸಿದೆ. ಇದುವರೆಗೆ ನಿಯಮಬಾಹಿರವಾಗಿ ಒಟ್ಟು 1034 ಎಕರೆ ಭೂಮಿಯನ್ನು ಬೇರೆಯವರಿಗೆ ಹಂಚಿಕೆ ಮಾಡಲಾಗಿದೆ. ಹಿಂದಿನ ಮುಖ್ಯಮಂತ್ರಿಯಾಗಿದ್ದ ಬಸವರಾಜ ಬೊಮ್ಮಾಯಿ ಅವರು ಸಭೆ ನಡೆಸಿ ಲ್ಯಾಂಡ್ ಆಡಿಟಂಗ್ ಮಾಡಿಸಬೇಕು. ಕೈಗಾರಿಕಾ ಪ್ರದೇಶಗಳಲ್ಲಿ ಲಭ್ಯವಿರುವ ನಿವೇಶನಗಳನ್ನು ಮೀಸಲಾತಿ ಪ್ರಮಾಣಕ್ಕೆ ಕಡಿಮೆಯಾಗದಂತೆ ಹಂಚಿಕೆ ಮಾಡಬೇಕೆಂದು ಸೂಚಿಸಿದ್ದರೂ ಪಾಲನೆಯಾಗಿಲ್ಲ’ ಎಂದು ದೂರಿದರು.

‘ಇತ್ತೀಚೆಗೆ ಹಂಚಿಕೆಗೆ ಲಭ್ಯವಿರುವ ಒಟ್ಟು ಜಮೀನನ್ನು ಇಂಡಸ್ಟ್ರಿಯಲ್ ಬಲ್ಕ್ ಅಲಾಟ್‌ಮೆಂಟ್, ಕಮರ್ಷಿಯಲ್ ಮತ್ತು ರೆಸಿಡೆನ್ಸಿಯಲ್ ಅಮ್ಯುನಿಟಿ ಎಂದು ಮರು ನಾಮಕರಣ ಮಾಡಲಾಗಿದೆ. ಅಂತಹ ಜಮೀನಿನಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಮೀಸಲಾತಿ ಸೌಲಭ್ಯ ನೀಡದೇ ವಂಚಿಸಲಾಗುತ್ತಿದೆ. ದೊಡ್ಡ ಕಂಪನಿಗಳಿಗೆ ನೂರಾರು ಎಕರೆ ಜಮೀನು ಬಲ್ಕ್ ಅಲಾಟ್‌ಮೆಂಟ್ ಮಾಡುವ ಪ್ರಕ್ರಿಯೆ ಕೆಐಎಡಿಬಿಯಲ್ಲಿ ಚಾಲ್ತಿಯಲ್ಲಿದೆ’ ಎಂದು ಹೇಳಿದರು.

ಸರ್ಕಾರ ಕೆಐಎಡಿಬಿ ಪಾವತಿಸಬೇಕಿರುವ ₹806 ಕೋಟಿ ಬಾಕಿ ಉಳಿಸಿಕೊಂಡಿದೆ. ಆದ್ದರಿಂದ, ಈ ಯೋಜನೆ ಮುಂದುವರಿಸಬೇಕಾದರೆ ಮುಂದಿನ ಬಜೆಟ್‌ನಲ್ಲಿ ₹600 ಕೋಟಿ ಅನುದಾನ ಒದಗಿಸಬೇಕು’ ಎಂದು ಒತ್ತಾಯಿಸಿದರು.


ಮಗಳ ಜತೆ ಐಸ್ ಕ್ರೀಂ ಸವಿದ ನಾರಾಯಣ ಮೂರ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇನ್ಫೊಸಿಸ್ ಸಂಸ್ಥಾಪಕ ನಾರಾಯಣ ಮೂರ್ತಿ ಅವರು ಜಯನಗರದ ಮಳಿಗೆಯೊಂದರಲ್ಲಿ ಬ್ರಿಟನ್‌ನ ಪ್ರಥಮ ಮಹಿಳೆಯೂ ಆಗಿರುವ ಮಗಳು ಅಕ್ಷತಾ ಮೂರ್ತಿ ಜತೆಗೆ ಐಸ್ ಕ್ರೀಂ ಸವಿದಿದ್ದಾರೆ. ಇದು ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದ್ದು, ಅವರಿಬ್ಬರ ಸರಳತೆಗೆ ಮೆಚ್ಚುಗೆ ವ್ಯಕ್ತವಾಗಿದೆ.

ಬ್ರಿಟನ್ ಪ್ರಧಾನಿ ರಿಷಿ ಸುನಕ್ ಅವರ ಪತ್ನಿಯಾಗಿರುವ ಅಕ್ಷತಾ, ಕೆಲ ದಿನಗಳ ಹಿಂದೆ ಬೆಂಗಳೂರಿಗೆ ಬಂದಿದ್ದಾರೆ. ಅವರು ಫೆ.10ರಂದು ಸೇಂಟ್ ಜೋಸೆಫ್ಸ್ ಕಾಮರ್ಸ್ ಕಾಲೇಜಿನಲ್ಲಿ ಸಪ್ನ ಬುಕ್ ಆಯೋಜಿಸಿದ್ದ ‘ಆನ್ ಅನ್‌ಕಾಮನ್ ಲವ್’ ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಚಿತ್ರಾ ಬ್ಯಾನರ್ಜಿ ದಿವಾಕರುಣಿ ಅವರು ಈ ಪುಸ್ತಕದ ಲೇಖಕರಾಗಿದ್ದು, ನಾರಾಯಣ ಮೂರ್ತಿ ಮತ್ತು ಸುಧಾ ಮೂರ್ತಿ ಅವರ ಕುರಿತ ಪುಸ್ತಕ ಇದಾಗಿದೆ. ಇದರಿಂದಾಗಿ



ಅಕ್ಷತಾ ಜತೆಗೆ ನಾರಾಯಣ ಮೂರ್ತಿ ಐಸ್‌ಕ್ರೀಂ ಸವಿದರು

ಮಕ್ಕಳು ಹಾಗೂ ಪಾಲಕರ ಜತೆಗೆ ಅಕ್ಷತಾ ಭಾಗವಹಿಸಿದ್ದರು.

ನಾರಾಯಣ ಮೂರ್ತಿ ಅವರ ಜತೆಗೆ ಅಕ್ಷತಾ ಅವರು ಜಯನಗರದ ‘ಕಾರ್ನರ್ ಹೌಸ್’ ಮಳಿಗೆಯಲ್ಲಿ ಸೋಮವಾರ ಐಸ್ ಕ್ರೀಂ ಸವಿದಿದ್ದಾರೆ. ಅವರ ಫೋಟೋವನ್ನು ಹಲವರು ‘ಎಕ್ಸ್’ನಲ್ಲಿ ಹಂಚಿಕೊಂಡಿದ್ದಾರೆ.

‘ಲೋಕೋಪಯೋಗಿ ಇಲಾಖೆ ಬಿಲ್ ಪಾವತಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೋಕೋಪಯೋಗಿ ಇಲಾಖೆಯಲ್ಲಿನ 1,054 ಸಣ್ಣ ಗುತ್ತಿಗೆದಾರರಿಗೆ ₹800 ಕೋಟಿ ಬಿಲ್ ಪಾವತಿಸಿದಂತೆ ಇತರೆ ಇಲಾಖೆಗಳಲ್ಲಿನ ಬಾಕಿ ಇರುವ ಬಿಲ್‌ಗಳನ್ನು ಕೂಡಲೇ ಬಿಡುಗಡೆಗೊಳಿಸಬೇಕೆಂದು ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಡಿ. ಕೆಂಪಣ್ಣ ಆಗ್ರಹಿಸಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಜಿಲ್ಲಾ ಮುಖ್ಯರಸ್ತೆಗಳು ಹಾಗೂ ರಾಜ್ಯ ಹೆದ್ದಾರಿಗಳ ನಿರ್ವಹಣೆ ಮತ್ತು ಸುಧಾರಣೆ ಕಾಮಗಾರಿ ಕೈಗೊಂಡಿದ್ದ 1,945 ಗುತ್ತಿಗೆದಾರರಿಗೆ ಮೂರು ವರ್ಷಗಳಿಂದ ಬಿಲ್‌ಗಳ ಪಾವತಿ ಬಾಕಿ ಇತ್ತು. ಲೋಕೋಪಯೋಗಿ ಇಲಾಖೆಯಲ್ಲಿ ಅಪೆಂಡಿಕ್ಸ್–ಇ ಅಡಿಯಲ್ಲಿ ಕಾಮಗಾರಿಗಳ ಕೈಗೊಂಡಿದ್ದ ಸಣ್ಣ ಗುತ್ತಿಗೆದಾರರಿಗೆ ಏಕ ಕಾಲಕ್ಕೆ ₹800 ಕೋಟಿಯನ್ನು ಯಾವುದೇ ಲಂಚ ಪಡೆಯದೇ ಬಿಡುಗಡೆಗೊಳಿಸಲಾಗಿದೆ’ ಎಂದು ಹೇಳಿದರು.

‘ಬಿಬಿಎಂಪಿ, ಜಲ ಸಂಪನ್ಮೂಲ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ವಸತಿ, ಸಣ್ಣ ನೀರಾವರಿ ಇಲಾಖೆಗಳಲ್ಲಿ ಬಾಕಿ ಇರುವ ಬಿಲ್‌ಗಳನ್ನು ಮುಂದಿನ ದಿನಗಳಲ್ಲಿ ಬಿಡುಗಡೆ ಮಾಡುವ ಭರವಸೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ನೀಡಿದ್ದಾರೆ’ ಎಂದು ಡಿ. ಕೆಂಪಣ್ಣ ತಿಳಿಸಿದರು.

ಫುಟ್‌ಬಾಲ್ ಆಟಗಾರ ಸಾವು: ಲಾರಿ ಚಾಲಕ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆ.ಆರ್.ಪುರ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ಅಪಘಾತವನ್ನುಂಟು ಮಾಡಿ ರಾಜ್ಯಮಟ್ಟದ ಫುಟ್‌ಬಾಲ್ ಆಟಗಾರ ಕೆ. ಮೊನೀಶ್ (27) ಸಾವಿಗೆ ಕಾರಣವಾಗಿದ್ದ ಆರೋಪದಡಿ ಮಂಜುನಾಥ್ (29) ಅವರನ್ನು ಪೊಲೀಸರು ಬಂಧಿಸಿದ್ದಾರೆ.

‘ವಿಜಯಪುರದ ಮಂಜುನಾಥ್, ಲಾರಿ ಚಾಲಕ. ಅಪಘಾತದ ಬಳಿಕ ತಲೆಮರೆಸಿಕೊಂಡಿದ್ದ ಈತನನ್ನು ಇತ್ತೀಚೆಗೆ ಸೆರೆ ಹಿಡಿಯಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಸ್ಥಳೀಯ ನಿವಾಸಿಯಾದ ಕೆ. ಮೊನೀಶ್, ಜ.21ರಂದು ತಡರಾತ್ರಿ ರಾಮಮೂರ್ತಿ ನಗರ ಮೇಲ್ಸೇತುವೆ ಬಳಿ ಬೈಕ್‌ನಲ್ಲಿ ಹೊರಟಿದ್ದರು. ಇದೇ ಮಾರ್ಗವಾಗಿ ತೆರಳುತ್ತಿದ್ದ ಮಂಜುನಾಥ್, ಅತೀ ವೇಗದಲ್ಲಿ ನಿರ್ಲಕ್ಷ್ಯದಿಂದ ಲಾರಿ ಚಲಾಯಿಸಿದ್ದರು. ಇದರಿಂದಾಗಿ ಲಾರಿ, ಬೈಕ್‌ಗೆ ಡಿಕ್ಕಿ ಹೊಡೆದಿತ್ತು’ ಎಂದರು.

‘ಅಪಘಾತದ ಬಳಿಕ ಮಂಜುನಾಥ್ ಸ್ಥಳದಿಂದ ಪರಾರಿಯಾಗಿದ್ದ. ತೀವ್ರ ಗಾಯಗೊಂಡಿದ್ದ ಮೊನೀಶ್ ಅವರನ್ನು ಸಮೀಪದ ಆಸ್ಪತ್ರೆಗೆ ಕರೆದೊಯ್ಯಲಾಗಿತ್ತು. ಅಲ್ಲಿಯೇ ಅವರು ಮೃತಪಟ್ಟಿದ್ದರು. ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಗಳನ್ನು ಆಧರಿಸಿ ಆರೋಪಿಯನ್ನು ವಿಜಯಪುರದಲ್ಲಿ ಬಂಧಿಸಿ ನಗರಕ್ಕೆ ಕರೆತರಲಾಯಿತು’ ಎಂದು ಪೊಲೀಸರು ಹೇಳಿದರು.



ನಂಜುಂಡಸ್ವಾಮಿ ಜನ್ಮದಿನಾಚರಣೆ ಕಾರ್ಯಕ್ರಮದಲ್ಲಿ ರೈತ ಮುಖಂಡ ರಾಕೇಶ್ ಟಿಕಾಯತ್ ಕರೆ

'ದೆಹಲಿ ಮಾದರಿ ಆಂದೋಲನಕ್ಕೆ ಸನ್ನದ್ಧರಾಗಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸ್ವಾಮಿನಾಥನ್ ಆಯೋಗದ ವರದಿ ಅನುಷ್ಠಾನ ಸೇರಿ ರೈತ ರ ವಿವಿಧ ಬೇಡಿಕೆ ಈವರೆಗೂ ಈಡೇರಿಲ್ಲ. ಆದ್ದರಿಂದ ಕೃಷಿ ಕಾಯ್ದೆಗಳ ರದ್ಧತಿಗಾಗಿ ಈ ಹಿಂದೆ ನವದೆಹಲಿಯಲ್ಲಿ ನಡೆಸಿದ ಆಂದೋಲನದ ಮಾದರಿಯ ಹೋರಾಟ ಮತ್ತೆ ಅಗತ್ಯವಿದ್ದು, ರೈತರು ಸನ್ನದ್ಧರಾಗಬೇಕು' ಎಂದು ರೈತ ಮುಖಂಡ ರಾಕೇಶ್ ಟಿಕಾಯತ್ ತಿಳಿಸಿದರು.

ಕರ್ನಾಟಕ ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆ ಜಂಟಿಯಾಗಿ ನಗರದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಪ್ರೊ.ಎಂ.ಡಿ. ನಂಜುಂಡಸ್ವಾಮಿ ಅವರ 88ನೇ ಜನ್ಮದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ, ಮಾತನಾಡಿದರು.



ಕಾರ್ಯಕ್ರಮದಲ್ಲಿ ರವಿವರ್ಮ ಕುಮಾರ್, ರೈತ ಮುಖಂಡರಾದ ಯುದ್ಧವೀರ ಸಿಂಗ್, ಚುಕ್ಕಿ ನಂಜುಂಡಸ್ವಾಮಿ, ಅನಸೂಯಮ್ಮ, ರಾಕೇಶ್ ಟಿಕಾಯತ್ ಹಾಗೂ ಕೆ.ಟಿ. ಗಂಗಾಧರ್ ಅವರು ಪ್ರೊ.ಎಂ.ಡಿ. ನಂಜುಂಡಸ್ವಾಮಿ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು —ಪ್ರಜಾವಾಣಿ ಚಿತ್ರ

'ರೈತರ ಪರಿಸ್ಥಿತಿ ಶೋಚನೀಯವಾಗಿದೆ. ದಕ್ಷಿಣ ಭಾರತದಲ್ಲಿ ತೆಂಗು ಬೆಳೆಗಾರರು, ಶ್ರೀನಗರದಲ್ಲಿ ಸೇಬು ಬೆಳೆಗಾರರು ಸೇರಿ ದೇಶದ ವಿವಿಧ ಪ್ರಾಂತ್ಯಗಳಲ್ಲಿನ ರೈತರು ಬೆಳೆಗೆ ಸೂಕ್ತ ಬೆಲೆ ದೊರೆಯದೆ ಸಮಸ್ಯೆ ಎದುರಿಸುತ್ತಿದ್ದಾರೆ. ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ಖಾತರಿಪಡಿಸಲು ಕಾನೂನು ರೂಪಿಸುವಿಕೆ ಸೇರಿ ವಿವಿಧ ಬೇಡಿಕೆಗಳ ಈಡೇರಿಕೆಗೆ ಹೋರಾಟ ನಡೆಸಬೇಕಾಗಿದೆ. 2020ರಲ್ಲಿ ರೈತ ವಿರೋಧಿ ಕೃಷಿ ಕಾಯ್ದೆಗಳನ್ನು ಹಿಂಪಡೆಯುವಂತೆ ನವದೆಹಲಿಯಲ್ಲಿ ಆಂದೋಲನ ನಡೆಸಲಾಗಿತ್ತು. ಹೋರಾಟಕ್ಕೆ ಮಣಿದ ಕೇಂದ್ರ ಸರ್ಕಾರ ಆ ಕಾಯ್ದೆಗಳನ್ನು ವಾಪಸ್ ಪಡೆಯಿತು. ಅದೇ ರೀತಿ, ಆಂದೋಲನ ಮತ್ತೆ ಮಾಡಬೇಕಾಗಿದೆ' ಎಂದು ಹೇಳಿದರು.

'ಹಸಿರು ಶಾಲುಗಳು ರೈತರನ್ನು ಪ್ರತಿನಿಧಿಸುತ್ತಿವೆ. ಇದನ್ನು ರೈತರ ಶಾಲಾಗಿ ಪ್ರಸಿದ್ಧಿಗೊಳಿಸಿರುವಲ್ಲಿ ಕರ್ನಾಟಕದ ದೊಡ್ಡ ಕೊಡುಗೆಯಿದೆ. ಹಿಂದಿ ಭಾಷೆ ಬರದಿದ್ದರೂ ಎಂ.ಡಿ. ನಂಜುಂಡಸ್ವಾಮಿ ಅವರು ಉತ್ತರ ಹಾಗೂ ದಕ್ಷಿಣ ಭಾರತದ ರೈತರನ್ನು ಉತ್ತಮವಾಗಿ ಸಂಘಟಿಸುತ್ತಿದ್ದರು. ಈಗಲೂ ಅವರ ಆಶಯದಂತೆ ಸಂಘಟನೆ ಹಾಗೂ ಹೋರಾಟಗಳನ್ನು ನಡೆಸಲಾಗುತ್ತಿದೆ' ಎಂದು ತಿಳಿಸಿದರು.

ವಕೀಲ ರವಿವರ್ಮ ಕುಮಾರ್, 'ಜಾಗತಿಕ ಮಾರುಕಟ್ಟೆ ರೈತರ ಬದುಕು ಹಾಗೂ ಬೆಳೆಯನ್ನು ಕಬಳಿಸಲು ತಯಾರಾಗಿ ನಿಂತಿದೆ. ರೈತರು ಈ ಮೊದಲಿನ ಉತ್ಸಾಹ, ಸಂಘಟನೆ ಹಾಗೂ ಜಾಗೃತಿಯ ಕೊರತೆ ಎದುರಿಸುತ್ತಿದ್ದಾರೆ. ಸರ್ಕಾರಗಳೂ ರೈತರ ಹೋರಾಟಗಳಿಗೆ ಮಣಿಯುತ್ತಿಲ್ಲ. ವಿವಿಧ ಬೇಡಿಕೆಗಳ ಈಡೇರಿಕೆಗೆ ಪ್ರತಿಭಟಿಸಲು ನವದೆಹಲಿಗೆ ತೆರಳುತ್ತಿರುವ ರೈತರನ್ನು ಬಂಧಿಸಲಾಗುತ್ತಿದೆ. ಇನ್ನೊಂದೆಡೆ ರಾಜ್ಯದ 220 ತಾಲ್ಲೂಕುಗಳು ಬರಪೀಡಿತವೆಂದು ಘೋಷಿಸಿದ್ದರೂ ಬರ ಪರಿಹಾರ ಕೇಂದ್ರದಿಂದ ಬರುತ್ತಿಲ್ಲ. ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ ಖಾಲಿ ಕೈಯಲ್ಲಿ ರಾಜ್ಯಕ್ಕೆ ಬಂದು, ತೆರಳಿದ್ದಾರೆ. ರೈತ ವಿರೋಧಿ ಕ್ರಮಗಳನ್ನು ಖಂಡಿಸಿ ಇದೇ 16ಕ್ಕೆ ಹಮ್ಮಿಕೊಂಡಿರುವ ಭಾರತ್ ಬಂದ್‌ಗೆ ಬೆಂಬಲ ನೀಡಬೇಕಿದೆ' ಎಂದು ಹೇಳಿದರು.

ಇದೇ ವೇಳೆ ಪ್ರೊ.ಎಂ.ಡಿ. ನಂಜುಂಡಸ್ವಾಮಿ ಅವರ ಚಿಂತನೆ ಬಗೆಗಿನ 'ಬಾರುಕೋಲು' ಪುಸ್ತಕ ಬಿಡುಗಡೆ ಮಾಡಲಾಯಿತು. ಬಳಿಕ 'ಪ್ರೊ.ಎಂ.ಡಿ. ಎನ್. ನಾ ಕಂಡಂತೆ' ಎಂಬ ವಿಷಯದ ಮೇಲೆ ಸಂವಾದ ನಡೆಯಿತು.

ಜೆಇಇ ಫಲಿತಾಂಶ: ರಿಷಿ ಉತ್ತಮ ಸಾಧನೆ

ಪ್ರಜಾವಾಣಿ ವಾರ್ತೆ



ರಿಷಿ ಶೇಖರ್

ಬೆಂಗಳೂರು: ರಾಷ್ಟ್ರೀಯ ಪರೀಕ್ಷಾ ಸಂಸ್ಥೆ ನಡೆಸುವ ಜಂಟಿ ಪ್ರವೇಶ ಪರೀಕ್ಷೆಯ (ಜೆಇಇ-ಮುಖ್ಯ) ಫಲಿತಾಂಶ ಪ್ರಕಟವಾಗಿದ್ದು, ಆಕಾಶ್ ಬೈಜುಸ್‌ನ ವಿದ್ಯಾರ್ಥಿ ರಿಷಿ ಶೇಖರ್ ಶುಕ್ಲಾ ಅವರು 100 ಪರ್ಸೆಂಟೈಲ್ (300ಕ್ಕೆ 300 ಅಂಕ) ಗಳಿಸುವ ಅತ್ಯುತ್ತಮ ಸಾಧನೆ ಮಾಡಿದ್ದಾರೆ.

'ತರಗತಿಯಲ್ಲಿ ಉಪನ್ಯಾಸಕರು ಮಾಡುವ ಬೋಧನೆಯನ್ನು ಗಮನವಿಟ್ಟು ಆಲಿಸಬೇಕು. ಬಳಿಕ ಮನೆಯಲ್ಲಿ ಸಮಸ್ಯಾತ್ಮಕ ಪ್ರಶ್ನೆಗಳನ್ನು ಬಿಡಿಸುವ ಅಭ್ಯಾಸ ಮಾಡಬೇಕು. ಪ್ರಶ್ನೆಗಳ ಬಗ್ಗೆ ಯಾವುದೇ ಅನುಮಾನ ಎದುರಾದರೆ ಉಪನ್ಯಾಸಕರ ಬಳಿ ಚರ್ಚಿಸಿ ಬಗೆಹರಿಸಿಕೊಳ್ಳಬೇಕು. ಆಗಷ್ಟೇ ಯಶಸ್ಸುಗಳಿಸಲು ಸಾಧ್ಯ' ಎಂದು ತನ್ನ ಸಾಧನೆಯ ಹಿಂದಿನ ಗುಟ್ಟನ್ನು ಹಂಚಿಕೊಂಡಿದ್ದಾರೆ.

'ನನ್ನ ಸಾಧನೆಯಲ್ಲಿ ಆಕಾಶ್ ಬೈಜುಸ್ ಉಪನ್ಯಾಸಕರ ಕೊಡುಗೆ ದೊಡ್ಡದಿದೆ. ಅಗತ್ಯ ಸಂಪನ್ಮೂಲ ಒದಗಿಸುವ ಜೊತೆಗೆ, ಪರೀಕ್ಷಾ ತಯಾರಿಗೆ ನನ್ನಲ್ಲಿ ಆತ್ಮವಿಶ್ವಾಸ ತುಂಬಿದ್ದಾರೆ. ಅಲ್ಲದೇ, ಪೋಷಕರ ಸಹಕಾರ ಕೂಡ ಉತ್ತಮ ಅಂಕಗಳನ್ನು ಗಳಿಸಲು ನೆರವಾಯಿತು' ಎಂದು ಹೇಳಿದ್ದಾರೆ.

'ದಿನಕ್ಕೆ 7ರಿಂದ 8 ತಾಸು ಒಳ್ಳೆಯ ನಿದ್ರೆ ಮಾಡಬೇಕು. ಆಗಷ್ಟೇ ನಮ್ಮ ಮೆದುಳು ಮತ್ತು ಮನಸ್ಸು ಸರಿಯಾಗಿ ಕೆಲಸ ನಿರ್ವಹಿಸುತ್ತದೆ. ಇದು ಅಧ್ಯಯನಕ್ಕೆ ಸಹಕಾರಿಯಾಗುತ್ತದೆ' ಎಂದು ಹೇಳಿದ್ದಾರೆ.

ಉದ್ಯಮಿಯಾಗುವ ಕನಸು: ಅಮೋಘ್



ಬೆಂಗಳೂರು: ರಾಷ್ಟ್ರೀಯ ಪರೀಕ್ಷಾ ಸಂಸ್ಥೆ ನಡೆಸುವ ಜಂಟಿ ಪ್ರವೇಶ ಪರೀಕ್ಷೆಯ (ಜೆಇಇ-ಮುಖ್ಯ) ಫಲಿತಾಂಶ ಮಂಗಳವಾರ ಪ್ರಕಟವಾಗಿದ್ದು, ಬೆಂಗಳೂರಿನ ಅಮೋಘ್ ಅಗರ್‌ವಾಲ್ ರಾಜ್ಯಕ್ಕೆ ಮೊದಲ ಸ್ಥಾನ ಪಡೆದಿದ್ದಾರೆ.

ಎಚ್‌ಎಸ್‌ಆರ್ ಲೇಔಟ್‌ನ ನಯರಾನ-ಕೋ-ಕಾವೇರಿ ಭವನ ಕಾಲೇಜಿನ ವಿದ್ಯಾರ್ಥಿಯಾದ ಅಮೋಘ್ ಅಗರ್‌ವಾಲ್ 100 ಪರ್ಸೆಂಟೈಲ್ ಗಳಿಸುವ ಮೂಲಕ ಅಖಿಲ ಭಾರತ ಮಟ್ಟದಲ್ಲಿ 11ನೇ ರ್‍ಯಾಂಕ್ ಗಳಿಸಿದ್ದಾರೆ.

'ಐಐಟಿ ಸೇರುವ ಗುರಿ ಹೊಂದಿದ್ದು, ಪ್ರಸ್ತುತ ಜೆಇಇ ಅಡ್ವಾನ್ಸ್‌ಗೆ ಸಿದ್ಧತೆ ನಡೆಸಿದ್ದೇನೆ. ಅಣಕು ಪರೀಕ್ಷೆಗಳ ಮೇಲೆ ಹೆಚ್ಚು ಗಮನ ಹರಿಸಿದ್ದು ಸ್ಪರ್ಧಾತ್ಮಕ ಪರೀಕ್ಷೆ ಎದುರಿಸಲು ಸಹಕಾರಿಯಾಯಿತು. ಭವಿಷ್ಯದಲ್ಲಿ ಉದ್ಯಮಿಯಾಗುವ ಕನಸಿದೆ' ಎಂದು ಅಮೋಘ್ ಪ್ರತಿಕ್ರಿಯಿಸಿದರು.

ಬೆಂಗಳೂರು ಆಕಾಶ್ ಬೈಜುಸ್‌ನ 18 ವಿದ್ಯಾರ್ಥಿಗಳು 99ಕ್ಕಿಂತ ಹೆಚ್ಚಿನ ಪರ್ಸೆಂಟೈಲ್ ಹಾಗೂ ನಾಲ್ಕು ವಿದ್ಯಾರ್ಥಿಗಳು 98ಕ್ಕಿಂತ ಹೆಚ್ಚಿನ ಪರ್ಸೆಂಟೈಲ್ ಗಳಿಸಿದ್ದಾರೆ.

₹1.45 ಕೋಟಿಯ ಹುಕ್ಕಾ ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ವಿಶೇಷ ಕಾರ್ಯಾಚರಣೆ ನಡೆಸಿರುವ ಸಿಸಿಬಿ ಪೊಲೀಸರು, ₹1.45 ಕೋಟಿ ಮೌಲ್ಯದ ಹುಕ್ಕಾ ಉತ್ಪನ್ನಗಳನ್ನು ಜಪ್ತಿ ಮಾಡಿದ್ದಾರೆ.

'ಚಾಮರಾಜಪೇಟೆ, ರಾಮಮೂರ್ತಿ ನಗರ ಹಾಗೂ ಮಹದೇವಪುರ ಠಾಣೆ ವ್ಯಾಪ್ತಿಯಲ್ಲಿ ಮಳಿಗೆಗಳಲ್ಲಿ ಹುಕ್ಕಾ ಉತ್ಪನ್ನಗಳನ್ನು ಅಕ್ರಮವಾಗಿ ಸಂಗ್ರಹಿಸಲಾಗಿತ್ತು. ದಾಳಿ ಮಾಡಿ ಉತ್ಪನ್ನಗಳನ್ನು ಜಪ್ತಿ ಮಾಡಲಾಗಿದ್ದು, 9 ಆರೋಪಿಗಳನ್ನು ಬಂಧಿಸಲಾಗಿದೆ' ಎಂದು ಪೊಲೀಸ್ ಕಮಿಷನರ್ ಬಿ. ದಯಾನಂದ್ ತಿಳಿಸಿದರು.

ಮೈಸೂರಿನ ಮುರಳೀಧರ್ (59), ಇ. ಅಂಥೋನಿ (59), ಬೆಂಗಳೂರಿನ ಸಂಪಂಗಿರಾಮನಗರದ ವಿಶ್ವನಾಥ್ ಪ್ರತಾಪ್ ಸಿಂಗ್ (26), ಭರತ್ (29), ಆಂಧ್ರಪ್ರದೇಶದ ಅನಂತಪುರದ ಕಂಡಿಬೇಡಳ ಮಧು (36), ಹರಿಕೃಷ್ಣ (35), ಚಿರಕೂರಿ ರಮೇಶ್ (30), ದಿವಾಕರ್ ಚೌಧರಿ (30), ಮಹದೇವಪುರ ಮಧು (38) ಬಂಧಿತರು.

ತಿಂಗಳಿಗೆ ₹ 25 ಕೋಟಿ: 'ಆರೋಪಿ ಮುರಳೀಧರ್ ಚಾಮರಾಜಪೇಟೆಯಲ್ಲಿ ಹುಕ್ಕಾ ಉತ್ಪನ್ನಗಳ ಮಾರಾಟ ಮಳಿಗೆ ಇಟ್ಟುಕೊಂಡಿದ್ದ. ಈತನೇ ಬೆಂಗಳೂರಿಗೆ ಪ್ರಮುಖ ವಿತರಕನಾಗಿದ್ದ. ಇವರೆಲ್ಲರೂ ಸೇರಿ ತಿಂಗಳಿಗೆ ₹ 25 ಕೋಟಿ ವಹಿವಾಟು ನಡೆಸುತ್ತಿದ್ದ ಬಗ್ಗೆ ಮಾಹಿತಿ ಇದೆ' ಎಂದು ಪೊಲೀಸರು ಹೇಳಿದರು.

'ಅಫ್ಜಲ್ ಬ್ರ್ಯಾಂಡ್‌ನ ಮೊಲಾಸಿಸ್, ತಂಬಾಕು ಅಂಶವಿದ್ದ ದಿಲ್‌ಬಾಗ್, ಜೆಡ್ ಎಲ್-01, ಆ್ಯಕ್ಷನ್- 7, ಬಾದ್ ಷಾ, ಮಹಾರಾಯಲ್ 717 ಹಾಗೂ ಇತರೆ ಉತ್ಪನ್ನಗಳನ್ನು ಆರೋಪಿಗಳು ಮಾರುತ್ತಿದ್ದರು. ತಮ್ಮ ಬಳಿ ಉತ್ಪನ್ನ ಖರೀದಿಸುತ್ತಿದ್ದ ವ್ಯಾಪಾರಿಗಳಿಗೆ, ಉಡುಗೊರೆ ನೀಡುತ್ತಿದ್ದರು' ಎಂದು ಪೊಲೀಸರು ಮಾಹಿತಿ ನೀಡಿದರು.

ನವಜಾತ ಶಿಶುಗಳ ಆಂಬುಲೆನ್ಸ್ ಸೇವೆಗೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನವಜಾತ ಶಿಶುಗಳಿಗೆ ತುರ್ತು ಆರೋಗ್ಯ ಸೇವೆ ಒದಗಿಸಲು ನಾಲ್ಕು ಆಂಬುಲೆನ್ಸ್‌ಗಳು ಹಾಗೂ ಕಣ್ಣಿನ ಆರೈಕೆ ಸೇವೆಗೆ ಎಂಟು ಜಿಲ್ಲಾ ಸಂಚಾರಿ ನೇತ್ರ ಚಿಕಿತ್ಸಾ ಘಟಕಗಳಿಗೆ ನಗರದಲ್ಲಿ ಮಂಗಳವಾರ ಚಾಲನೆ ದೊರೆಯಿತು.

ಆರೋಗ್ಯ ಇಲಾಖೆ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಸಚಿವ ದಿನೇಶ್ ಗುಂಡೂರಾವ್ ಈ ಸೇವೆಗಳನ್ನು ಲೋಕಾರ್ಪಣೆ ಮಾಡಿ, ಮಾತನಾಡಿದರು.

'ನವಜಾತ ಶಿಶುಗಳ ಮರಣ ಪ್ರಮಾಣ ದರವನ್ನು ಒಂದಂಕಿಗೆ ಇಳಿಸುವ ಗುರಿ ಹಾಕಿಕೊಳ್ಳಲಾಗಿದೆ. ಅವಧಿಪೂರ್ವ ಜನಿಸಿದ ಶಿಶುಗಳು ಮತ್ತು ಗಂಭೀರ ಅನಾರೋಗ್ಯ ಸಮಸ್ಯೆಗಳಿಗೆ ಒಳಗಾಗಿರುವ ಶಿಶುಗಳಿಗೆ ಹೆಚ್ಚಿನ ಚಿಕಿತ್ಸೆ ಅಗತ್ಯ. ಅಂತಹವರನ್ನು ಕರೆದೊಯ್ಯಲು ಸುಧಾರಿತ ಸೌಲಭ್ಯಗಳನ್ನು ಒಳಗೊಂಡ ಈ ಆಂಬುಲೆನ್ಸ್‌ಗಳು ಸಹಕಾರಿಯಾಗಲಿವೆ. ವೆಂಟಿಲೇಟರ್ ಸೇರಿ ಅತ್ಯಾಧುನಿಕ ವೈದ್ಯಕೀಯ ಉಪಕರಣಗಳು ಇರಲಿವೆ. ನವಜಾತ ಶಿಶುಗಳನ್ನು ಆಂಬುಲೆನ್ಸ್‌ನಲ್ಲಿ ಆರೈಕೆ ಮಾಡಲು ಪರಿಣತಿ ಹೊಂದಿರುವ ಶುಶ್ರೂಷಕರೂ ಇರುತ್ತಾರೆ. ರಾಜ್ಯದ ನಾಲ್ಕು ವಿಭಾಗಗಳ ಪ್ರಮುಖ ಆಸ್ಪತ್ರೆಗಳಿಗೆ ನವಜಾತಾ ಶಿಶುಗಳ ಆಂಬುಲೆನ್ಸ್‌ಗಳನ್ನು ವಿತರಿಸಲಾಗುತ್ತಿದ್ದು, ಮುಂದಿನ ದಿನಗಳಲ್ಲಿ ರಾಜ್ಯದಾದ್ಯಂತ ಈ ಆಂಬುಲೆನ್ಸ್ ಸೇವೆ ವಿಸ್ತರಿಸಲಾಗುವುದು' ಎಂದು ಹೇಳಿದರು.



ನವಜಾತ ಶಿಶುಗಳ ಚಿಕಿತ್ಸೆಗೆ ಚಾಲನೆ ನೀಡಲಾದ ಆಂಬುಲೆನ್ಸ್‌ಗಳಲ್ಲಿನ ವ್ಯವಸ್ಥೆಯನ್ನು ದಿನೇಶ್ ಗುಂಡೂರಾವ್ ಪರಿಶೀಲಿಸಿದರು. ಆರೋಗ್ಯ ಇಲಾಖೆ ಆಯುಕ್ತ ಡಿ. ರಂದೀಪ್ ಹಾಗೂ ಅಧಿಕಾರಿಗಳು ಪಾಲ್ಗೊಂಡಿದ್ದರು

'ಬೆಂಗಳೂರಿನ ವಾಣಿವಿಲಾಸ ಆಸ್ಪತ್ರೆ, ಮೈಸೂರಿನ ಚಲುವಾಂಬ ಆಸ್ಪತ್ರೆ, ರಾಯಚೂರಿನ ರಾಯಚೂರು ವೈದ್ಯಕೀಯ ವಿಜ್ಞಾನ ಸಂಸ್ಥೆ, ಹುಬ್ಬಳ್ಳಿಯ ಕರ್ನಾಟಕ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ಈ ಆಂಬುಲೆನ್ಸ್‌ಗಳನ್ನ ನಿಗದಿಪಡಿಸಲಾಗಿದೆ' ಎಂದು ತಿಳಿಸಿದರು.

ಕಣ್ಣಿನ ಆರೈಕೆ ಸೇವೆ: 'ರಾಷ್ಟ್ರೀಯ ಅಂಧತ್ವ ಮತ್ತು ದೃಷ್ಟಿಹೀನತೆಯ ನಿಯಂತ್ರಣ ಕಾರ್ಯಕ್ರಮದಡಿ ಜಿಲ್ಲಾ ಸಂಚಾರಿ ನೇತ್ರ ಚಿಕಿತ್ಸಾ ಘಟಕ ಪ್ರಾರಂಭಿಸಲಾಗಿದ್ದು, ಆರೋಗ್ಯ ಸೇವೆಗಳು ಲಭ್ಯವಿಲ್ಲದ ಗ್ರಾಮೀಣ ಹಾಗೂ ಗುಡ್ಡಗಾಡು ಜನರಿಗೆ ಕಣ್ಣಿನ ಆರೈಕೆ ಸೇವೆಗಳನ್ನು ತಲುಪಿಸಲು ನೆರವಾಗಲಿವೆ. ಕಣ್ಣಿನ ಪ್ರಾಥಮಿಕ ತಪಾಸಣೆಗೆ ಅಗತ್ಯವಾದ ಉಪಕರಣಗಳನ್ನು ಒಳಗೊಂಡಿರುವ ಈ ವಾಹನದಲ್ಲಿ, ತಲಾ ಒಬ್ಬರು ನೇತ್ರ ತಜ್ಞರು, ಪ್ಯಾರಾ ಮೆಡಿಕಲ್ ನೇತ್ರ ಸಹಾಯಕರು, ಬಿಎಚ್‌ಇಒ ಹಾಗೂ ಶುಶ್ರೂಷಕರು ಇರುತ್ತಾರೆ. ಪ್ರತಿ ವಾಹನವು 15 ರೋಗಿಗಳನ್ನು ಸಮೀಪದ ಆರೋಗ್ಯ ಕೇಂದ್ರಗಳಿಗೆ ಕರೆದೊಯ್ಯುವ ಸಾಮರ್ಥ್ಯವನ್ನು ಹೊಂದಿದೆ' ಎಂದು ದಿನೇಶ್ ಗುಂಡೂರಾವ್ ಹೇಳಿದರು.

'ಸಂಚಾರಿ ನೇತ್ರ ಚಿಕಿತ್ಸಾ ಘಟಕದ ಕಾರ್ಯಚಾರಣೆಯ ಮೂಲಕ ಜಿಲ್ಲಾ ಆಸ್ಪತ್ರೆಗಳಲ್ಲಿ ಕಣ್ಣಿನ ಆರೈಕೆ ಸೇವಗಳನ್ನು ಹೆಚ್ಚಿಸಲಾಗುತ್ತದೆ. ಕಣ್ಣಿನ ಪೊರೆ, ಗ್ಲಾಕೋಮಾ, ಕಾರ್ನಿಯ ಅಸ್ಪಷ್ಟತೆ ಮುಂತಾದ ಸಮಸ್ಯೆಗಳ ತಪಾಸಣೆ ನಡೆಸಲಾಗುತ್ತದೆ. ಶಾಲೆಗಳಿಗೆ ತೆರಳಿ, ವಿದ್ಯಾರ್ಥಿಗಳ ಹಾಗೂ ಶಿಕ್ಷಕರ ಕಣ್ಣಿನ ತಪಾಸಣೆಗೆ ಈ ವಾಹನಗಳು ನೆರವಾಗಲಿವೆ' ಎಂದು ಅವರು ಹೇಳಿದರು.

ನಿಧನ ವಾರ್ತೆ

ಮುದ್ದೇಗೌಡ ಕೆ.ಬಿ.



ಬೆಂಗಳೂರು: ನಗರದ ಗಾಂಧಿಬಜಾರ್‌ನ ಪತ್ರಿಕಾ ವಿತರಕ ಮುದ್ದೇಗೌಡ ಕೆ.ಬಿ. (64) ಅವರು ಮಂಗಳವಾರ ನಿಧನರಾದರು.

ಮೃತರಿಗೆ ಪತ್ನಿ, ಇಬ್ಬರು ಪುತ್ರಿಯರಿದ್ದಾರೆ.

ತುಮಕೂರು ಜಿಲ್ಲೆಯ ಕುಣಿಗಲ್ ತಾಲ್ಲೂಕಿನ ಹುಲಿಯೂರುದುರ್ಗ ಸಮೀಪದ ಕೊಡವತ್ತಿ ಗ್ರಾಮದಲ್ಲಿ ಮಂಗಳವಾರ ಅಂತ್ಯಕ್ರಿಯೆ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.



ವಿಧಾನಸಭೆಯಲ್ಲಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿಕೆ

‘ಪಿಆರ್‌ಆರ್ ಆಗಲಿದೆ ಎಕನಾಮಿಕ್ ಕಾರಿಡಾರ್’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರಿನ ಪೆರಿಫೆರಲ್ ರಿಂಗ್ ರಸ್ತೆಯನ್ನು ‘ಎಕನಾಮಿಕ್ ಕಾರಿಡಾರ್’ ಮಾದರಿಯಲ್ಲಿ ಮಾರ್ಪಾಡು ಮಾಡಿ, ಯೋಜನೆಯನ್ನು ಕಾರ್ಯಗತ ಮಾಡಲಾಗುವುದು ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

ವಿಧಾನಸಭೆಯಲ್ಲಿ ಬಿಜೆಪಿಯ ಶೈಲೇಂದ್ರ ಬೆಲ್ದಾಳೆ ಅವರ ಗಮನ ಸೆಳೆಯುವ ಸೂಚನೆಗೆ ಉತ್ತರಿಸಿದ ಶಿವಕುಮಾರ್, ಯೋಜನೆ ಸಂಬಂಧ ಫೆ. 29 ಟೆಂಡರ್ ಸಲ್ಲಿಕೆಗೆ ಕೊನೆಯ ದಿನವಾಗಿದೆ ಎಂದು ಅವರು ತಿಳಿಸಿದರು.

‘ಈ ಯೋಜನೆ ಕಾರ್ಯಗತ ಮಾಡಲು ನಿರ್ಧರಿಸಿ 15 ವರ್ಷಗಳಾಗಿವೆ. ಈ ಹಿಂದಿನ ಸರ್ಕಾರಗಳು ಏನೂ ಮಾಡಿಲ್ಲ ಎಂದು ಹೇಳುವುದಿಲ್ಲ. ಯೋಜನೆ ಆರಂಭಿಸಲು ಪ್ರಯತ್ನಪಟ್ಟಿದ್ದವು. ಆದರೆ, ಟೆಂಡರ್‌ನಲ್ಲಿ ಬಿಡ್ ಮಾಡಲು ಯಾರೂ ಮುಂದೆ ಬಾರದ ಕಾರಣ ಅವು ವಿಫಲವಾದವು. ಹೀಗಾಗಿ ಈಗ ಈ ಯೋಜನೆಗೆ ಹೊಸ ರೂಪ ನೀಡಿ ಪಿಪಿಪಿ ಮಾದರಿಯಲ್ಲಿ ಕಾರ್ಯಗತಗೊಳಿಸಲಾಗುತ್ತಿದೆ’ ಎಂದು ಅವರು ಹೇಳಿದರು.

ಈ ಯೋಜನೆಗೆ 2,596 ಎಕರೆ ಜಮೀನು ಬೇಕಾಗಿದೆ. ಇದರಲ್ಲಿ 220 ಎಕರೆ ಮಾತ್ರ ಸರ್ಕಾರಿ ಜಮೀನು, ಉಳಿದದ್ದು ಖಾಸಗಿ ಜಮೀನು ಎಂದು ತಿಳಿಸಿದರು.

‘ಈ ಜಮೀನಿಗೆ ಪರಿಹಾರ ನೀಡುವ ಬಗ್ಗೆ ನ್ಯಾಯಾಲಯದ ಆದೇಶ ಇದ್ದರೂ, ಈ ವಿಚಾರವನ್ನು ಸಚಿವ ಸಂಪುಟದಲ್ಲಿ ಚರ್ಚೆ ಮಾಡಿ ರೈತರಿಗೆ ಸಹಾಯ ಮಾಡಲು ನಿರ್ಧರಿಸಿದ್ದೇವೆ. ಯೋಜನೆ ಜಾರಿ ಮಾಡುತ್ತೇವೆಯೇ ಹೊರತು ಈ ಜಾಗವನ್ನು ಡಿನೋಟಿಫೈ ಮಾಡುವುದಿಲ್ಲ. ಯೋಜನೆಗೆ ₹24 ಸಾವಿರ ಕೋಟಿ ಬೇಕಾಗಬಹುದು’ ಎಂದೂ ಅವರು ಹೇಳಿದರು.

‘ಬೆಂಗಳೂರಿಗೆ ನೀರು: ಪ್ರತ್ಯೇಕ ವ್ಯವಸ್ಥೆ ಅಗತ್ಯ’

ಬೆಂಗಳೂರು: ‘ಪ್ರತಿ ವರ್ಷವೂ ಬೆಂಗಳೂರು ನಗರದ ಜನಸಂಖ್ಯೆ 10 ಲಕ್ಷದಷ್ಟು ಹೆಚ್ಚಳವಾಗುತ್ತಿದೆ. ನಗರಕ್ಕೆ ನೀರು ಪೂರೈಸುವುದಕ್ಕೆ ಪ್ರತ್ಯೇಕವಾದ ವ್ಯವಸ್ಥೆ ಮಾಡಬೇಕಾದ ಅಗತ್ಯವಿದೆ’ ಎಂದು ಜಲ ಸಂಪನ್ಮೂಲ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಬಿಜೆಪಿಯ ಸಿ.ಕೆ. ರಾಮಮೂರ್ತಿ ಅವರ ಪ್ರಶ್ನೆಗೆ ವಿಧಾನಸಭೆಯಲ್ಲಿ ಮಂಗಳವಾರ ಉತ್ತರಿಸಿದ ಅವರು, ‘ಬೆಂಗಳೂರು ನಗರಕ್ಕೆ ಹೆಚ್ಚುವರಿಯಾಗಿ 6.5 ಟಿಎಂಸಿ ಅಡಿ ನೀರು ಅಗತ್ಯವಿದೆ ಎಂದು ಅಂದಾಜು ಮಾಡಲಾಗಿದೆ. ಕೃಷಿ ಬಳಕೆಯಲ್ಲಿ ಉಳಿತಾಯವಾಗುವ 1.5 ಟಿಎಂಸಿ ಅಡಿ ನೀರನ್ನು ಈ ಉದ್ದೇಶಕ್ಕೆ ಬಳಸಲು ಯೋಚಿಸಲಾಗಿದೆ’ ಎಂದರು.

ಭವಿಷ್ಯದ ದಿನಗಳಲ್ಲಿ ರಾಜಧಾನಿಗೆ ನೀರು ಪೂರೈಸುವುದು ದೊಡ್ಡ ಸವಾಲಾಗಲಿದೆ. ಅದನ್ನು ಎದುರಿಸಲು ಸಿದ್ಧತೆ ಆರಂಭಿಸಬೇಕಿದೆ ಎಂದರು.

‘ಜಯನಗರ ವಿಧಾನಸಭಾ ಕ್ಷೇತ್ರದಲ್ಲಿ 13 ಕೊಳೆಗೇರಿಗಳಿದ್ದು ಅಲ್ಲಿಗೆ ಕಾವೇರಿ ನೀರು ಪೂರೈಕೆಯಾಗುತ್ತಿಲ್ಲ. ರಾಗಿಗುಡ್ಡದ 2,500 ಫ್ಲ್ಯಾಟ್ ಮತ್ತು ರಾಜೇಶ್ವರಿ ಕೊಳೆಗೇರಿ ಪ್ರದೇಶದ 400 ಫ್ಲ್ಯಾಟ್‌ಗಳಿಗೆ ನೀರು ಪೂರೈಸುತ್ತಿಲ್ಲ. ಬೆಂಗಳೂರು ಜಲ ಮಂಡಳಿಗೆ ಶುಲ್ಕ ಪಾವತಿಸದೇ ಇರುವುದರಿಂದ ಸಮಸ್ಯೆಯಾಗಿದೆ. ಅಲ್ಲಿಗೆ ಕಾವೇರಿ ನೀರು ಪೂರೈಕೆಗೆ ತಕ್ಷಣ ವ್ಯವಸ್ಥೆ ಮಾಡಬೇಕು’ ಎಂದು ರಾಮಮೂರ್ತಿ ಆಗ್ರಹಿಸಿದರು.

ಎಲ್ಲ ಕೊಳೆಗೇರಿ ನಿವಾಸಿಗಳಿಗೆ ತಿಂಗಳಿಗೆ 10,000 ಲೀಟರ್ ನೀರನ್ನು ಉಚಿತವಾಗಿ 2027ರಿಂದಲೇ ಪೂರೈಸಲಾಗುತ್ತಿದೆ. 2013ರಿಂದ ಜಲ ಮಂಡಳಿಯು ನೀರಿನ ದರ ಏರಿಕೆ ಮಾಡಿಲ್ಲ. ಈಗ ಕೊಳೆಗೇರಿ ಅಭಿವೃದ್ಧಿ ಮಂಡಳಿಯು ಶುಲ್ಕ ಪಾವತಿಸಿದರೆ 2,900 ಫ್ಲ್ಯಾಟ್‌ಗಳಿಗೆ ನೀರಿನ ಸಂಪರ್ಕ ಕಲ್ಪಿಸಲಾಗುವುದು ಎಂದು ಸಚಿವರು ಭರವಸೆ ನೀಡಿದರು.

‘ಮೇಕೆದಾಟು ಯೋಜನೆಗೆ ಸಹಕರಿಸಿ’: ‘ಬೆಂಗಳೂರಿನ ನೀರಿನ ಸಮಸ್ಯೆಗೆ ಮೇಕೆದಾಟು ಯೋಜನೆಯೇ ಪರಿಹಾರ. ಈ ಯೋಜನೆ ಅನುಷ್ಠಾನಕ್ಕೆ ದೊಡ್ಡ ಮಟ್ಟದ ಹೋರಾಟ ನಡೆಸುತ್ತಿದ್ದೇವೆ. ನೀವೆಲ್ಲರೂ ಸಹಕಾರ ನೀಡಿ’ ಎಂದು ವಿರೋಧ ಪಕ್ಷಗಳ ಸದಸ್ಯರಿಗೆ ಮನವಿ ಮಾಡಿದರು.

ಅಪಾರ್ಟ್‌ಮೆಂಟ್ ನಿವಾಸಿಗಳ ಸಂಘಕ್ಕೇ ಮಾಲೀಕತ್ವ: ಕಾನೂನು

ಬೆಂಗಳೂರಿನಲ್ಲಿ ಅಪಾರ್ಟ್‌ಮೆಂಟ್ ನಿವಾಸಿಗಳ ಅಸೋಸಿಯೇಷನ್‌ನವರೇ ಆ ಜಾಗದ ಮಾಲೀಕರಾಗುವಂತೆ ಕಾನೂನು ರೂಪಿಸುವುದಾಗಿ ಬೆಂಗಳೂರು ಅಭಿವೃದ್ಧಿ ಸಚಿವರೂ ಆಗಿರುವ ಡಿ.ಕೆ.ಶಿವಕುಮಾರ್ ಭರವಸೆ ನೀಡಿದರು.

ಬಿಜೆಪಿಯ ರವಿಸುಬ್ರಹ್ಮಣ್ಯ ಅವರ ಗಮನ ಸೆಳೆಯುವ ಸೂಚನೆಯಡಿ ವಿಷಯ ಪ್ರಸ್ತಾಪಿಸಿ, ಅಪಾರ್ಟ್‌ಮೆಂಟ್ ನಿರ್ಮಾಣದ ಜಾಗ ಜಮೀನಿನ ಮಾಲೀಕನ ಹೆಸರಿನಲ್ಲೇ ಇರುವುದರಿಂದ ಅನೇಕರು ಆ ಜಾಗದ ಮೇಲೆ ಸಾಲ ಪಡೆಯುತ್ತಿದ್ದಾರೆ. ಮುಂದೆ ಆ ಕಟ್ಟಡದ ಆಯಸ್ಸು ಮುಗಿದ ಮೇಲೆ, ಅಲ್ಲಿ ಮರು ನಿರ್ಮಾಣದ ವೇಳೆ ಅಲ್ಲಿ ವಾಸವಿರುವ ನಿವಾಸಿಗಳಿಗೆ ಯಾವುದೇ ಹಕ್ಕಿರುವುದಿಲ್ಲ. ಇದಕ್ಕಾಗಿ ಪ್ರತ್ಯೇಕ ಕಾನೂನು ತರಬೇಕು ಎಂದು ಹೇಳಿದರು.

ಇದಕ್ಕೆ ಉತ್ತರಿಸಿದ ಶಿವಕುಮಾರ್, ಅಕ್ರಮವಾಗಿ ಅಪಾರ್ಟ್‌ಮೆಂಟ್‌ಗಳನ್ನು ನಿರ್ಮಿಸುತ್ತಿರುವವರಿಂದ ಸಮಸ್ಯೆ ಆಗುತ್ತಿದೆ ಎಂದರು.

‘ಬಹುತೇಕ ಡೆವಲಪರ್‌ಗಳು ಆ ರೀತಿ ಮಾಡಲು ಹೋಗುವುದಿಲ್ಲ. ನನ್ನದೇ ಸಂಸ್ಥೆಗಳಲ್ಲಿ ಕಟ್ಟಡ ನಿರ್ಮಾಣವಾಗಿದೆ. ಕಟ್ಟಡ ನಿರ್ಮಾಣದ ನಂತರ ಜಮೀನಿನ ದಾಖಲೆಗಳನ್ನು ಅಲ್ಲಿನ ನಿವಾಸಿಗಳ ಅಸೋಸಿಯೇಷನ್‌ಗೆ ಹಸ್ತಾಂತರ ಮಾಡುತ್ತಾರೆ. ಅಕ್ರಮವಾಗಿ ನಿರ್ಮಾಣ ಮಾಡುವವರು ಈ ರೀತಿಯ ಕೆಲಸ ಮಾಡುತ್ತಿದ್ದಾರೆ. 2016 ರ ನಂತರ ರೇರಾ ಬಂದಿದೆ. ಬೆಂಗಳೂರಿನಲ್ಲಿ ನಾವು ಆಸ್ತಿಗಳ ಸಮೀಕ್ಷೆ ನಡೆಸುತ್ತಿದ್ದೇವೆ’ ಎಂದು ಹೇಳಿದರು.



ವಿಧಾನ ಮಂಡಲದಲ್ಲಿ

‘ವಿರೋಧ ಪಕ್ಷದವರು ಬಡವರ ವಿರೋಧಿಗಳು’

ಬೆಂಗಳೂರು: ‘ರಾಜ್ಯದಲ್ಲಿ ವಿರೋಧ ಪಕ್ಷದವರು ಬಡವರ ವಿರೋಧಿಗಳು. ಈ ಕಾರಣಕ್ಕಾಗಿಯೇ ಅವರು ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರವು ಬಡವರ ಪರವಾಗಿ ಮಾಡಿರುವ ಕೆಲಸಗಳನ್ನು ಒಪ್ಪಿಕೊಳ್ಳುತ್ತಿಲ್ಲ’ ಎಂದು ಕಾಂಗ್ರೆಸ್‌ನ ಪಿ.ಎಂ. ನರೇಂದ್ರಸ್ವಾಮಿ ವಿಧಾನಸಭೆಯಲ್ಲಿ ಮಂಗಳವಾರ ವಾಗ್ದಾಳಿ ನಡೆಸಿದರು.

ವಿಧಾನಮಂಡಲದ ಜಂಟಿ ಅಧಿವೇಶನ ಉದ್ದೇಶಿಸಿ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಸೋಮವಾರ ಮಾಡಿದ ಭಾಷಣಕ್ಕೆ ವಂದನೆ ಸಲ್ಲಿಸುವ ನಿರ್ಣಯವನ್ನು ಸದನದಲ್ಲಿ ಮಂಡಿಸಿ ಮಾತನಾಡಿದ ಅವರು, ‘ನಮ್ಮ ಸರ್ಕಾರದ ಯೋಜನೆಗಳನ್ನು ವಿರೋಧ ಪಕ್ಷಗಳು ಶ್ಲಾಘಿಸಬೇಕಿತ್ತು. ಆದರೆ, ಅವು ಉಳ್ಳವರ ಪರವಾಗಿರುವುದರಿಂದ ವಿರೋಧಿಸುತ್ತಿವೆ’ ಎಂದರು.

‘ಭವಿಷ್ಯದತ್ತ ದೃಷ್ಟಿ ನೆಟ್ಟು ಕೆಲಸ ಮಾಡುತ್ತಿರುವ ಸರ್ಕಾರ ನಮ್ಮದು. ನಿಮ್ಮದು ಸುಳ್ಳಿನ ಆಡಳಿತವಾದರೆ ನಮ್ಮದು ಭರವಸೆ ಅನುಷ್ಠಾನದ ಮಾದರಿ. ಜನರು ಎಲ್ಲವನ್ನೂ ನೋಡಿದ್ದಾರೆ’ ಎಂದು ವಿರೋಧ ಪಕ್ಷಗಳ ಸದಸ್ಯರನ್ನು ಟೀಕಿಸಿದರು.

ಪ್ರಧಾನಿ ನರೇಂದ್ರ ಮೋದಿಯವರೇ ಕಾಂಗ್ರೆಸ್ ಪಕ್ಷದ ಗ್ಯಾರಂಟಿ ಭರವಸೆಗಳನ್ನು ಟೀಕಿಸಿದ್ದರು. ಈಗ ಅವರೇ ಗ್ಯಾರಂಟಿ ಹೆಸರಿನಲ್ಲಿ ಭರವಸೆಗಳನ್ನು ನೀಡುತ್ತಿದ್ದಾರೆ. ಬಿಜೆಪಿ ನೇತೃತ್ವದ ಸರ್ಕಾರ ಇದ್ದಾಗ ರಾಜ್ಯದಲ್ಲಿ ಮಧ್ಯವರ್ತಿಗಳ ಹಾವಳಿ ಜಾಸ್ತಿ ಇತ್ತು. ಆದರೆ, ಕಾಂಗ್ರೆಸ್ ನೇತೃತ್ವದ ಸರ್ಕಾರ ಮಧ್ಯವರ್ತಿಗಳನ್ನು ಹೊರಗಟ್ಟಿ ಕೆಲಸ ಮಾಡುತ್ತಿದೆ ಎಂದರು.

ತೆರಿಗೆ ಪಾಲಿನ ಹಂಚಿಕೆಯಲ್ಲಿ ಕರ್ನಾಟಕಕ್ಕೆ ಅನ್ಯಾಯವಾಗಿದೆ. ಅದನ್ನು ರಾಜ್ಯಪಾಲರು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ರಾಜ್ಯಕ್ಕೆ ನ್ಯಾಯ ಪಡೆಯುವುದಕ್ಕೆ ಬಿಜೆಪಿ, ಜೆಡಿಎಸ್ ಪಕ್ಷಗಳ ಸದಸ್ಯರು ಕೈಜೋಡಿಸಬೇಕು ಎಂದು ಮನವಿ ಮಾಡಿದರು.

ಸುದ್ದಿ 2 ನಿಮಿಷ

‘ಮೈಸೂರು ಲ್ಯಾಂಪ್ಸ್ ಕಂಪನಿ ಖಾಸಗಿ ಷೇರು ಖರೀದಿಗೆ ಕ್ರಮ’

ಬೆಂಗಳೂರು: ‘ಸರ್ಕಾರಿ ಸ್ವಾಮ್ಯದ ಮೈಸೂರು ಲ್ಯಾಂಪ್ಸ್ ಕಂಪನಿಯಲ್ಲಿ ಶೇ 5.6ರಷ್ಟು ಷೇರುಗಳು ಖಾಸಗಿಯವರ ಒಡೆತನದಲ್ಲಿದೆ. ಆ ಷೇರುಗಳನ್ನು ಸರ್ಕಾರವೇ ಖರೀದಿಸಿ ಶೇ 100ರಷ್ಟು ಸರ್ಕಾರಿ ಸಂಸ್ಥೆಯಾಗಿ ಮಾಡುವ ಪ್ರಯತ್ನ ನಡೆದಿದೆ’ ಎಂದು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಜೆಡಿಎಸ್‌ನ ಎಸ್.ಎಲ್. ಬೋಜೇಗೌಡ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ‘ಮೈಸೂರು ಲ್ಯಾಂಪ್ಸ್ ಕಂಪನಿಯನ್ನು ಪೂರ್ಣ ಪ್ರಮಾಣದಲ್ಲಿ ಸರ್ಕಾರಿ ಸಂಸ್ಥೆಯಾಗಿ ಮಾಡಿದ ನಂತರ, ಅದರ ಆಸ್ತಿಗಳನ್ನು ಸಾರ್ವಜನಿಕ ಉದ್ದೇಶಗಳಿಗೆ ಹೇಗೆ ಬಳಸಿಕೊಳ್ಳಬೇಕು ಎಂಬ ಬಗ್ಗೆ ತೀರ್ಮಾನಿಸಲಾಗುವುದು. ಅದರ ಆಸ್ತಿ ಖಾಸಗಿ ವ್ಯಕ್ತಿಗಳ, ಸಂಸ್ಥೆಗಳ ಪಾಲಾಗಲು ಬಿಡುವುದಿಲ್ಲ’ ಎಂದು ಸ್ಪಷ್ಟಪಡಿಸಿದರು.

‘ಸದ್ಯ ಈ ಕಂಪನಿಯಲ್ಲಿ ಸರ್ಕಾರದ ಷೇರು ಶೇ 91.07ರಷ್ಟಿದೆ. ಸರ್ಕಾರಿ ಸ್ವಾಮ್ಯದ ಎನ್‌ಜಿಇಎಫ್ ಸಂಸ್ಥೆ ಶೇ 3.33ರಷ್ಟು ಷೇರು ಬಂಡವಾಳ ಹೊಂದಿದೆ. ಉಳಿದ ಶೇ 5.6ರಷ್ಟು ಷೇರು ಬಂಡವಾಳ ಸಾರ್ವಜನಿಕರದ್ದು’ ಎಂದರು.

‘ಮೈಸೂರು ಲ್ಯಾಂಪ್ಸ್ ಮತ್ತು ಎನ್‌ಜಿಇಎಫ್ ಸಂಸ್ಥೆಗೆ ಸೇರಿದ ಜಾಗಗಳಲ್ಲಿ ಸಾರ್ವಜನಿಕ ಉದ್ದೇಶದ ವಿನೂತನ ಯೋಜನೆಗಳನ್ನು ಅನುಷ್ಠಾನಗೊಳಿಸಲು 2021ರಲ್ಲಿ ಪಬ್ಲಿಕ್ ಚಾರಿಟಬಲ್ ಟ್ರಸ್ಟ್ ಸ್ಥಾಪಿಸಲಾಗಿತ್ತು. ಈ ಟ್ರಸ್ಟ್‌ಗೆ ಮುಖ್ಯ ಕಾರ್ಯದರ್ಶಿ ಅಧ್ಯಕ್ಷ. ಅಲ್ಲದೆ, ಸರ್ಕಾರದ ಕಡೆಯಿಂದ ಏಳು ಮತ್ತು ಸಾರ್ವಜನಿಕ ವಲಯದಿಂದ ಐದು ಟ್ರಸ್ಟಿಗಳನ್ನು ನೇಮಿಸಲು ಅವಕಾಶವಿದೆ. ಈ ಟ್ರಸ್ಟ್‌ಗೆ ಸರ್ಕಾರದ ಕಡೆಯಿಂದ ಈವರೆಗೆ ಯಾವುದೇ ಚಟುವಟಿಕೆ ಕೈಗೊಳ್ಳಲು ಸೂಚನೆ ನೀಡಿಲ್ಲ’ ಎಂದರು.



ಬೇರೆಡೆ ಕಟ್ಟಡ ನಿರ್ಮಿಸಲು ನಿವೇಶನ ಹುಡುಕಾಟ

ಬೆಂಗಳೂರು: ಕಬ್ಬನ್ ಉದ್ಯಾನದಲ್ಲಿ ಹತ್ತು ಅಂತಸ್ತಿನ ಕಟ್ಟಡ ನಿರ್ಮಿಸಲು ಮುಂದಾಗಿದ್ದ ರಾಜ್ಯ ಸರ್ಕಾರದ ನಿರ್ಧಾರಕ್ಕೆ ಪರಿಸರ ಪ್ರೇಮಿಗಳು, ಸಾರ್ವಜನಿಕರು ವಿರೋಧ ವ್ಯಕ್ತಪಡಿಸಿ ಪ್ರತಿಭಟನೆ ನಡೆಸಿದ್ದ ಪರಿಣಾಮ ಲೋಕೋಪಯೋಗಿ ಇಲಾಖೆ ಬೇರೆ ಕಡೆಗೆ ಕಟ್ಟಡ ನಿರ್ಮಿಸಿಲು ನಿವೇಶನ ಹುಡುಕುತ್ತಿದೆ.

‘ಸಿಟಿ ಸಿವಿಲ್ ನ್ಯಾಯಾಲಯದ ಸಮೀಪದಲ್ಲಿರುವ ಸೆಂಟ್ರಲ್ ಕಾಲೇಜಿನ ಆವರಣದಲ್ಲಿರುವ ಖಾಲಿ ಜಾಗವು ಕಟ್ಟಡವನ್ನು ನಿರ್ಮಿಸಲು ಸೂಕ್ತವಾಗಿದೆ. ಉನ್ನತ ಶಿಕ್ಷಣ ಇಲಾಖೆಯ ಅಧಿಕಾರಿಗಳು ಅನುಮೋದನೆ ನೀಡಿದರೆ ಕಟ್ಟಡವನ್ನು ಇಲ್ಲಿಯೇ ನಿರ್ಮಿಸಬಹುದು’ ಎಂದು ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳು ತಿಳಿಸಿದರು.

ಕಬ್ಬನ್ ಉದ್ಯಾನದಲ್ಲಿ ಅಗತ್ಯವಿದ್ದಾಗ ಕಟ್ಟಡಗಳನ್ನು ನಿರ್ಮಿಸಬಹುದು. ಆದರೆ, ಯಾವುದೇ ರೀತಿಯ ಮರಗಳನ್ನು ಕತ್ತರಿಸುವಂತಿಲ್ಲ ಎಂದು 2019ರಲ್ಲಿ ಹೈಕೋರ್ಟ್ ಆದೇಶ ನೀಡಿತ್ತು. ಆದ್ದರಿಂದ, ರಾಜ್ಯ ಸರ್ಕಾರ ಉದ್ಯಾನದಲ್ಲಿ ಹೊಸ ಕಟ್ಟಡ ನಿರ್ಮಿಸಲು ಮುಂದಾಗಿತ್ತು. ನಗರದ ಪ್ರಮುಖ ಶ್ವಾಸಕೋಶವಾಗಿರುವ ಉದ್ಯಾನದಲ್ಲಿ ಯಾವುದೇ ರೀತಿಯ ಕಟ್ಟಡಗಳನ್ನು ನಿರ್ಮಿಸಬಾರದು ಎಂದು ವಾಯುವಿಹಾರಿಗಳು, ಪರಿಸರವಾದಿಗಳು, ಸಂಘ–ಸಂಸ್ಥೆಗಳು ಪ್ರತಿಭಟನೆ ನಡೆಸಿದ್ದರು. ತೋಟಗಾರಿಕೆ ಇಲಾಖೆ ಕಟ್ಟಡ ನಿರ್ಮಾಣ ಕಾಮಗಾರಿಯನ್ನು ಕೈಬಿಟ್ಟು, ಬೇರೆ ಜಾಗದಲ್ಲಿ ಕಟ್ಟಡ ನಿರ್ಮಿಸಲು ಚಿಂತನೆ ನಡೆಸಿದೆ.

ವಕೀಲರ ವಿರುದ್ಧ ಕ್ರಿಮಿನಲ್ ನ್ಯಾಯಾಂಗ ನಿಂದನೆ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋರ್ಟ್ ಕಲಾಪದ ವೇಳೆ ಸಂಯಮ ಮೀರಿ ವರ್ತಿಸಿ ಫೈಲುಗಳನ್ನು ಎಸೆದು, ನ್ಯಾಯಮೂರ್ತಿಗಳಿಗೆ ತಿರುಗಿ ಏರು ದನಿಯಲ್ಲಿ ಉತ್ತರಿಸಿ ದುರ್ನಡತೆ ತೋರಿದ ಆರೋಪಕ್ಕೆ ಸಂಬಂಧಿಸಿದಂತೆ ಹೈಕೋರ್ಟ್ ವಕೀಲ ಎಂ.ವೀರಭದ್ರಯ್ಯ ವಿರುದ್ಧ ಸ್ವಯಂ ಪ್ರೇರಿತ ಕ್ರಿಮಿನಲ್ ನ್ಯಾಯಾಂಗ ನಿಂದನೆ ಪ್ರಕರಣ ದಾಖಲಿಸಲು ಹೈಕೋರ್ಟ್ ಆದೇಶಿಸಿದೆ.

‘ಭಾರತ್ ಎಲೆಕ್ಟ್ರಾನಿಕ್ಸ್ ನೌಕರರ ಏಕತಾ ವೇದಿಕೆ’ಯ ಮಾಜಿ ಪ್ರಧಾನ ಕಾರ್ಯದರ್ಶಿ ಮತ್ತು ‘ಬಿಇಎಲ್ ನೌಕರರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕಲ್ಯಾಣ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ’ಯೂ ಆದ ಬಿಇಎಲ್ ಕಾರ್ಖಾನೆ ನೌಕರ, ಕೆ.ಅಣ್ಣಾದೊರೆ ಸಲ್ಲಿಸಿದ್ದ ರಿಟ್ ಅರ್ಜಿ ನ್ಯಾಯಮೂರ್ತಿ ಕೆ.ಎಸ್. ಹೇಮಲೇಖಾ ಅವರಿದ್ದ ಏಕಸದಸ್ಯ ನ್ಯಾಯಪೀಠದ ಮುಂದೆ ವಿಚಾರಣೆಗೆ ನಿಗದಿಯಾಗಿತ್ತು.

ನ್ಯಾಯಪೀಠವು ಅರ್ಜಿಯನ್ನು ತಿರಸ್ಕರಿಸಿದ ಕಾರಣ ಅರ್ಜಿದಾರರ ಪರ ವಕೀಲ ಎಂ.ವೀರಭದ್ರಯ್ಯ ದುರ್ನಡತೆ ತೋರಿದ್ದಾರೆ ಎಂದು ಆರೋಪಿಸಲಾಗಿದೆ. ‘ನ್ಯಾಯಮೂರ್ತಿಗಳ ವಿರುದ್ಧ ಆಕ್ಷೇಪಾರ್ಹ ಮಾತುಗಳನ್ನು ಆಡಿ ಕಡತಗಳನ್ನು ಎಸೆದು ಆಕ್ರೋಶ ವ್ಯಕ್ತಪಡಿಸಿದ್ದಾರೆ. ನ್ಯಾಯಾಲಯದ ಸಾಮಾನ್ಯ ಪ್ರಕ್ರಿಯೆ ಮತ್ತು ಕಾರ್ಯ ವಿಧಾನದಲ್ಲಿ ಹಸ್ತಕ್ಷೇಪ ಮಾಡುವ ಮೂಲಕ ನ್ಯಾಯಾಲಯದ ಘನತೆಗೆ ಧಕ್ಕೆ ಉಂಟು ಮಾಡಿದ್ದಾರೆ’ ಎಂಬ ಆರೋಪದಡಿ ಕ್ರಿಮಿನಲ್ ನ್ಯಾಯಾಂಗ ನಿಂದನೆ ಪ್ರಕರಣ ದಾಖಲಿಸಲು ನ್ಯಾಯಪೀಠ ಹೈಕೋರ್ಟ್ ನ್ಯಾಯಾಂಗ ರಿಜಿಸ್ಟ್ರಾರ್ ಅವರಿಗೆ ನಿರ್ದೇಶಿಸಿದೆ.

ಬಿಲ್ಕಿಸ್ ಬಾನು ಪ್ರಕರಣ: ‘ಸುಪ್ರೀಂ’ ಮೊರೆ ಹೋದ ಗುಜರಾತ್ ಸರ್ಕಾರ

ನವದೆಹಲಿ (ಪಿಟಿಐ): ಬಿಲ್ಕಿಸ್ ಬಾನು ಪ್ರಕರಣದಲ್ಲಿ 11 ಮಂದಿ ಅಪರಾಧಿಗಳಿಗೆ ನೀಡಲಾಗಿದ್ದ ಕ್ಷಮಾದಾನವನ್ನು ರದ್ದುಗೊಳಿಸಿದ ತೀರ್ಪನ್ನು ಮರುಪರಿಶೀಲಿಸುವಂತೆ ಕೋರಿ ಗುಜರಾತ್ ಸರ್ಕಾರ, ಸುಪ್ರೀಂ ಕೋರ್ಟ್ ಮೊರೆಹೋಗಿದೆ.

ಬಿಲ್ಕಿಸ್ ಬಾನು ಅವರ ಮೇಲೆ ಸಾಮೂಹಿಕ ಅತ್ಯಾಚಾರ ನಡೆಸಿ, ಅವರ ಕುಟುಂಬದ ಏಳು ಮಂದಿಯನ್ನು ಹತ್ಯೆಗೈದ ಪ್ರಕರಣದ ಅಪರಾಧಿಗಳಿಗೆ ಕ್ಷಮಾದಾನ ನೀಡಿದ್ದ ಗುಜರಾತ್ ಸರ್ಕಾರದ ಕ್ರಮವನ್ನು ಸುಪ್ರೀಂ ಕೋರ್ಟ್ ರದ್ದುಪಡಿಸಿತ್ತು. ಎಲ್ಲ 11 ಅಪರಾಧಿಗಳು ಮತ್ತೆ ಜೈಲು ಸೇರಿದ್ದರು.

₹85 ಕೋಟಿ ಮೌಲ್ಯದ ಆಸ್ತಿ ವಶ

ಕೋತಿಹೊಸಹಳ್ಳಿಯಲ್ಲಿ ದಿಢೀರ್ ಕಾರ್ಯಾಚರಣೆ, ಒತ್ತುವರಿ ತೆರವು

ಪ್ರಜಾವಾಣಿ ವಾರ್ತೆ

ಯಲಹಂಕ: ಬ್ಯಾಟರಾಯನಪುರದ ಕೊಡಿಗೇಹಳ್ಳಿ ಮುಖ್ಯರಸ್ತೆಯ ಕೋತಿಹೊಸಹಳ್ಳಿಯಲ್ಲಿ ಒತ್ತುವರಿಯಾಗಿದ್ದ ಸುಮಾರು ₹85 ಕೋಟಿ ಮೌಲ್ಯದ ಆಸ್ತಿಯನ್ನು ಬಿಬಿಎಂಪಿ ಮಂಗಳವಾರ ವಶಪಡಿಸಿಕೊಂಡಿತು.

ಕೋತಿಹೊಸಹಳ್ಳಿ ಗ್ರಾಮದ ಸರ್ವೆ ನಂ. 52ರಲ್ಲಿ ಕೆಲವು ವ್ಯಕ್ತಿಗಳು ವಾಸದ ಮನೆಗಳು ಹಾಗೂ ಶೆಡ್‌ಗಳನ್ನು ನಿರ್ಮಿಸಿಕೊಂಡು ವಾಣಿಜ್ಯ ಚಟುವಟಿಕೆಗಳನ್ನು ನಡೆಸುತ್ತಿದ್ದರು. ಯಲಹಂಕ ತಹಶೀಲ್ದಾರ್ ಅನಿಲ್‌ಕುಮಾರ್ ಅರೋಲಿಕರ್ ಮತ್ತು ಬಿಬಿಎಂಪಿ ಯಲಹಂಕ ವಲಯದ ಜಂಟಿ ಆಯುಕ್ತ ಮೊಹಮದ್ ನಯೀಮ್ ಮೋಮಿನ್ ನೇತೃತ್ವದಲ್ಲಿ ಅಧಿಕಾರಿಗಳು, ಪೊಲೀಸ್ ಇಲಾಖೆಯ ಸಿಬ್ಬಂದಿಯ ಸಹಯೋಗದೊಂದಿಗೆ ಮಂಗಳವಾರ ಬೆಳಗ್ಗೆ 5.30ರ ಸಮಯದಲ್ಲಿ ದಿಢೀರ್ ಕಾರ್ಯಾಚರಣೆ ನಡೆಸಿದರು.

4 ಜೆಸಿಬಿ, 6 ಟಿಪ್ಪರ್‌ಗಳು, 140 ಪೊಲೀಸ್ ಸಿಬ್ಬಂದಿ, 70 ಜನ ಕಾರ್ಮಿಕರು ಮತ್ತು ಗ್ಯಾಂಗ್‌ಮನ್‌ಗಳ ಸಹಾಯದೊಂದಿಗೆ ಸುಮಾರು 2.755 ಎಕರೆ (1.2 ಲಕ್ಷ ಚದರಡಿ) ಭೂಮಿಯನ್ನು ಪಾಲಿಕೆ ವಶಕ್ಕೆ ಪಡೆಯಲಾಯಿತು.

ಒತ್ತುವರಿದಾರರು ಮತ್ತು ಪೊಲೀಸರ ನಡುವೆ ಮಾತಿನ ಚಕಮಕಿ ನಡೆದು, ಸ್ಥಳದಲ್ಲಿ ಕೆಲಕಾಲ ಪ್ರಕ್ಷುಬ್ಧ ವಾತಾವರಣ ನಿರ್ಮಾಣವಾಗಿತ್ತು.



ಕೋತಿಹೊಸಹಳ್ಳಿಯಲ್ಲಿ ಒತ್ತುವರಿ ಮಾಡಿಕೊಂಡಿದ್ದ ಆಸ್ತಿಯನ್ನು ಬಿಬಿಎಂಪಿ ಸಿಬ್ಬಂದಿ ಕಾರ್ಯಾಚರಣೆ ನಡೆಸಿ ವಶಕ್ಕೆ ಪಡೆದುಕೊಂಡರು

ಸ್ಥಳೀಯ ನಿವಾಸಿ ಪಿ.ಗೋಪಾಲಸ್ವಾಮಿ ಮಾತನಾಡಿ, ‘ಸರ್ವೆ ನಂ.7, 17, 15/1, 15/2 ಹಾಗೂ 51ರ ಸರ್ಕಾರಿ ಉದ್ಯಾನಕ್ಕೆ ಮೀಸಲಾಗಿರುವ ಜಾಗದಲ್ಲಿ ಬಲಾಢ್ಯರು ಅಕ್ರಮವಾಗಿ ವಾಣಿಜ್ಯ ಮಳಿಗೆಗಳು, ಬೃಹತ್ ಕಟ್ಟಡಗಳನ್ನು ನಿರ್ಮಿಸಲಾಗಿದೆ. ಆ ಜಾಗವನ್ನು ವಶಕ್ಕೆ ಪಡೆಯಬೇಕೆಂದು ನ್ಯಾಯಾಲಯ ಸೂಚಿಸಿದ್ದರೂ ಕ್ರಮ ಕೈಗೊಂಡಿಲ್ಲ’ ಎಂದು ದೂರಿದರು.

ಸಚಿವರಿಗೆ ಮನವಿ: ಕಂದಾಯ ಸಚಿವ ಕೃಷ್ಣಬೈರೇಗೌಡ ಅವರನ್ನು ಭೇಟಿ ಮಾಡಿದ ದಲಿತ ಮುಖಂಡರು, ‘ಸರ್ಕಾರಿ ಉದ್ಯಾನಗಳಿಗೆ ಸೇರಿದ ಜಾಗ ಒತ್ತುವರಿಯಾಗಿದ್ದು, ಅದನ್ನು ವಶಕ್ಕೆ ಪಡೆಯಬೇಕು’ ಎಂದು ಮನವಿ ಮಾಡಿದರು.

ಕೃಷ್ಣಬೈರೇಗೌಡ, ‘ಕಳೆದ ಐದು ವರ್ಷಗಳಿಂದ ಅಕ್ರಮಗಳು ನಡೆದು, ಸರ್ಕಾರಿ ಜಾಗಗಳೆಲ್ಲ ಕೈತಪ್ಪಿ ಹೋಗುತ್ತಿವೆ. ಯಾವುದನ್ನು ಕೈಬಿಡಿ ಅಥವಾ ತೆಗೆದುಕೊಳ್ಳಿ ಎಂದು ಹೇಳಿಲ್ಲ. ಒಂದು ಕಡೆಯಿಂದ ಆರಂಭಿಸಿ, ಸಮಗ್ರವಾಗಿ ಪರಿಶೀಲನೆ ನಡೆಸಿ, ಯಾವುದೇ ಮುಲಾಜಿಲ್ಲದೆ ಅಕ್ರಮವಾಗಿ ಒತ್ತುವರಿಯಾಗಿರುವ ಜಮೀನುಗಳನ್ನು ಸರ್ಕಾರದ ವಶಕ್ಕೆ ಪಡೆಯಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದ್ದೇನೆ’ ಎಂದರು.

‘ಸರ್ಕಾರಿ ಉದ್ಯಾನಗಳ ಜಾಗದ ಒತ್ತುವರಿಯಾಗಿರುವ ಬಗ್ಗೆ ಸ್ಥಳೀಯರು ದೂರಿದ್ದು, ಈ ಬಗ್ಗೆ ಸಮಗ್ರವಾಗಿ ಪರಿಶೀಲಿಸಿ, ಸರ್ಕಾರಕ್ಕೆ ವರದಿ ನೀಡಲಾಗುವುದು’ ಎಂದು ಜಂಟಿ ಆಯುಕ್ತ ಮೊಹಮದ್ ನಯೀಮ್ ಮೋಮಿನ್ ತಿಳಿಸಿದರು.

ಅಂತರರಾಷ್ಟ್ರೀಯ ಸಮ್ಮೇಳನ 16ರಿಂದ

ಬೆಂಗಳೂರು: ಬೆಂಗಳೂರು ನಗರ ವಿಶ್ವವಿದ್ಯಾಲಯ ಹಾಗೂ ಯುನೈಟೆಡ್ ಕಿಂಗ್‌ಡಮ್ ದೇಶದ ಬರ್ಮಿಂಗ್‌ಹ್ಯಾಮ್ ನಗರ ವಿಶ್ವವಿದ್ಯಾಲಯದ ಸಹಯೋಗದಲ್ಲಿ ಇದೇ 16 ಮತ್ತು 17ರಂದು ‘ಡ್ವೆಲ್ ಟ್ರಾನ್ಸಿಷನ್ ಆಫ್ ಜಿರೋ ಕಾರ್ಬನ್ ಆ್ಯಂಡ್ ಡಿಜಿಟಲ್ ಟ್ರಾನ್ಸ್‌ಫಾರ್ಮೇಷನ್’ ಕುರಿತು ಎರಡು ದಿನಗಳ ಅಂತರ ರಾಷ್ಟ್ರೀಯ ಸಮ್ಮೇಳನವು ಜ್ಞಾನಜ್ಯೋತಿ ಸಭಾಂಗಣದಲ್ಲಿ ನಡೆಯಲಿದೆ.

ಮಂಗಳವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಬೆಂಗಳೂರು ವಿಶ್ವವಿದ್ಯಾಲಯ ಕುಲಪತಿ ಲಿಂಗರಾಜ ಗಾಂಧಿ, ‘ಎರಡು ದಿನಗಳ ನಡೆಯುವ ಈ ಸಮ್ಮೇಳನದಲ್ಲಿ ದೇಶ–ವಿದೇಶಗಳ ಶಿಕ್ಷಣ ತಜ್ಞರು, ಉದ್ಯಮ ಪ್ರತಿನಿಧಿಗಳು, ವಿಜ್ಞಾನಿಗಳು, ತಂತ್ರಜ್ಞರು, ಸ್ವಯಂ ಸೇವಾ ಸಂಸ್ಥೆಗಳ 550ಕ್ಕೂ ಹೆಚ್ಚು ಪ್ರತಿನಿಧಿಗಳು ನೋಂದಾಯಿಸಿಕೊಂಡಿದ್ದಾರೆ’ ಎಂದಿದ್ದಾರೆ.

‘ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ ಅವರು ಸಮ್ಮೇಳನ ಉದ್ಘಾಟಿಸಲಿದ್ದಾರೆ. ಹೀರೋ ಸೈಕಲ್ ಉದ್ಯಮದ ವ್ಯವಸ್ಥಾಪಕ ನಿರ್ದೇಶಕ ಎಸ್.ಕೆ. ರಾಯ್ ಆಶಯ ಭಾಷಣ ಮಾಡಲಿದ್ದಾರೆ. ಹೀರೊ ಸೈಕಲ್ ಉದ್ಯಮದ ಕಾರ್ಯನಿರ್ವಾಹಕ ನಿರ್ದೇಶಕ ಪ್ರೇಮ್ ಕುಮಾರ್, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಕಾರ್ಯನಿರ್ವಾಹಕ ನಿರ್ದೇಶಕ ಕೆ.ಜಿ. ಚಂದ್ರಶೇಖರ್ ಭಾಗವಹಿಸಲಿದ್ದಾರೆ’ ಎಂದು ಹೇಳಿದರು.

ಉದ್ಯಾನದಲ್ಲಿ ಕಾರ್ಯಕರ್ತೆಯರ ವಾಸ್ತವ್ಯ: ಬ್ಯಾಗ್‌ಗಳೇ ತಲೆದಿಂಬು



ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಮಂಗಳವಾರ ರಾತ್ರಿ ಗುಂಪು ಗುಂಪಾಗಿ ಮಲಗಿದ್ದ ಆಶಾ ಕಾರ್ಯಕರ್ತೆಯರು –ಪ್ರಜಾವಾಣಿ ಚಿತ್ರ/ ಎಂ.ಎಸ್. ಮಂಜುನಾಥ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿವಿಧ ಬೇಡಿಕೆ ಈಡೇರಿಕೆಗಾಗಿ ಅಹೋರಾತ್ರಿ ಹೋರಾಟ ಆರಂಭಿಸಿರುವ ಆಶಾ ಕಾರ್ಯಕರ್ತೆಯರು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿಯೇ ರಾತ್ರಿ ವಾಸ್ತವ್ಯ ಹೂಡಿದ್ದರು. ತಮ್ಮ ಬ್ಯಾಗ್‌ಗಳನ್ನೇ ತಲೆದಿಂಬು ಮಾಡಿಕೊಂಡು ನಿದ್ದೆಗೆ ಜಾರಿದರು.

ಹೋರಾಟಕ್ಕೆ ಅನುಕೂಲವಾಗಲೆಂದು ಪೆಂಡಾಲ್ ನಿರ್ಮಿಸಲಾಗಿದೆ. ಆದರೆ, ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕರ್ತೆಯರು ಹೋರಾಟದಲ್ಲಿ ಪಾಲ್ಗೊಂಡಿದ್ದಾರೆ. ಪೆಂಡಾಲ್ ಒಳಗೆ ಹಾಗೂ ಹೊರಗೆ ಗುಂಪು ಗುಂಪಾಗಿ ಕಾರ್ಯಕರ್ತೆಯರು ಮಲಗಿದ್ದ ದೃಶ್ಯಗಳು ಮಂಗಳವಾರ ರಾತ್ರಿ ಕಂಡುಬಂದವು.

ಕಲಬುರ್ಗಿ, ಬೆಳಗಾವಿ, ಯಾದಗಿರಿ, ಕೊಪ್ಪಳ, ಧಾರವಾಡ, ಹಾವೇರಿ, ದಾವಣಗೆರೆ, ಬಳ್ಳಾರಿ, ವಿಜಯಪುರ ಸೇರಿದಂತೆ ವಿವಿಧ ಜಿಲ್ಲೆಗಳಿಂದ ಬಂದಿರುವ ಕಾರ್ಯಕರ್ತೆಯರಿಗೆ ಉದ್ಯಾನದ ಆವರಣವೇ ಮನೆಯಂತಾಯಿತು. ಕಾರ್ಯಕರ್ತೆಯರು, ಗುಂಪು ಗುಂಪಾಗಿ ಊಟ ಮಾಡುತ್ತಿದ್ದ ದೃಶ್ಯಗಳು ಕಾಣಿಸಿದವು.

ಸೌಕರ್ಯ ಕಲ್ಪಿಸುವವರು ಯಾರು: ಪ್ರತಿಭಟನಾ ಸ್ಥಳದಲ್ಲಿ ಮೂಲ ಸೌಕರ್ಯ ಇಲ್ಲದಿದ್ದಕ್ಕೆ ಕಾರ್ಯಕರ್ತೆಯರು ಆಕ್ರೋಶ ವ್ಯಕ್ತಪಡಿಸಿದರು. ಶೌಚಾಲಯ ಹಾಗೂ ಸ್ನಾನ ಗೃಹಗಳ ಸಮಸ್ಯೆ ಹೆಚ್ಚಿದೆ ಎಂದು ಆರೋಪಿಸಿದರು.

ಈ ಬಗ್ಗೆ ಪ್ರತಿಕ್ರಿಯಿಸಿದ ಪೊಲೀಸರು, ‘ಪ್ರತಿಭಟನೆಗೆ ಅನುಮತಿ ನೀಡುವುದು ನಮ್ಮ ಕರ್ತವ್ಯ. ಆದರೆ, ಸೌಕರ್ಯ ಕಲ್ಪಿಸುವುದು ಹೇಗೆ? ಅದಕ್ಕೆ ಹಣ ಎಲ್ಲಿಂದ ತರಬೇಕು. ಸಂಬಂಧಪಟ್ಟ ಪ್ರಾಧಿಕಾರಕ್ಕೆ ಹೇಳಿದರೆ, ನಮಗೆ ಸಂಬಂಧವಿಲ್ಲದಂತೆ ವರ್ತಿಸುತ್ತಿದ್ದಾರೆ. ಪ್ರತಿಭಟನಕಾರರ ಗೋಳು ನಮಗೂ ನೋಡಲು ಆಗುತ್ತಿಲ್ಲ. ಸ್ಥಳೀಯ ಬಿಬಿಎಂಪಿ ಯವರು ಸೌಕರ್ಯ ಕಲ್ಪಿಸಲು ಗಮನ ಹರಿಸಬೇಕು. ಈ ಬಗ್ಗೆ ಅವರಿಗೂ ಹಲವು ಬಾರಿ ಪತ್ರ ಬರೆಲಾಗಿದೆ’ ಎಂದರು.

ಸಚಿವ ಭೇಟಿ: ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿದ್ದ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ಕಾರ್ಯಕರ್ತೆಯರಿಂದ ಮನವಿ ಸ್ವೀಕರಿಸಿದರು. ‘ಪ್ರತಿ ತಿಂಗಳು ₹ 5 ಸಾವಿರ ಬದಲು ₹ 7 ಸಾವಿರ ಗೌರವ ಧನವನ್ನು ನೇರ ವರ್ಗಾವಣೆಗೆ ಕ್ರಮ ಕೈಗೊಳ್ಳುತ್ತೇವೆ. ಹೋರಾಟ ಕೈಬಿಡಿ’ ಎಂದು ಸಚಿವರು ಕೋರಿದರು. ಅದಕ್ಕೆ ಕಾರ್ಯಕರ್ತೆಯರು ಒಪ್ಪಲಿಲ್ಲ. ಹೋರಾಟ ಮುಂದುವರಿದಿದೆ.

ರಾಗಿ, ಜೋಳ ವಿತರಿಸಲು ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಅನ್ನಭಾಗ್ಯ ಯೋಜನೆಯಲ್ಲಿ ಅಕ್ಕಿಗೆ ಪರ್ಯಾಯವಾಗಿ ನಗದು ನೀಡುವ ಬದಲು ರಾಗಿ, ಜೋಳ ವಿತರಿಸಬೇಕು’ ಎಂದು ‘ಆಹಾರದ ಹಕ್ಕಿಗಾಗಿ ಆಂದೋಲನ’ ಮತ್ತು ‘ನಮ್ಮೂರ ಭೂಮಿ ನಮಗಿರಲಿ ಅನ್ಯರಿಗಲ್ಲ’ ಆಂದೋಲನದ ಸದಸ್ಯರು ಸರ್ಕಾರಕ್ಕೆ ಮನವಿ ಸಲ್ಲಿಸಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ, ಆಹಾರ ಇಲಾಖೆ ಸಚಿವ ಕೆ.ಎಚ್. ಮುನಿಯಪ್ಪ, ಕೃಷಿ ಸಚಿವ ಚಲುವರಾಯಸ್ವಾಮಿ ಅವರಿಗೆ ಮನವಿ ಪತ್ರ ಸಲ್ಲಿಸಲಾಗಿದೆ. ರಾಗಿ, ಜೋಳ ನೀಡಲು ಅಗತ್ಯವಿರುವ ಹಣವನ್ನು ಬಜೆಟ್‌ನಲ್ಲಿ ಒದಗಿಸಬೇಕು ಎಂದು ಆಗ್ರಹಿಸಿದ್ದಾರೆ.

‘5 ಕೆ.ಜಿ ಅಕ್ಕಿಯ ಬದಲು ₹170 ನಗದನ್ನು ನೀಡುವುದು ಬೇಡ. ಪ್ರದೇಶಕ್ಕನುಗುಣವಾಗಿ ರಾಗಿ ಅಥವಾ ಜೋಳ ನೀಡಲಿ. ಇವುಗಳಿಗೆ ಬೆಂಬಲ ಬೆಲೆ ಘೋಷಿಸಿ ಸರ್ಕಾರ ಕೂಡಲೇ ಖರೀದಿಸಬೇಕು. ಇದಕ್ಕಾಗಿ ಅಗತ್ಯವಿರುವ ಹೆಚ್ಚುವರಿ ಮೊತ್ತವನ್ನು ಅನುದಾನವಾಗಿ ಪ್ರಸ್ತುತ ಆಯವ್ಯಯದಲ್ಲಿ ಘೋಷಿಸಬೇಕು’ ಎಂದು ಮನವಿ ಮಾಡಿದ್ದಾರೆ.

ಆಂದೋಲನದ ಸದಸ್ಯರಾದ ನೀಲಯ್ಯ, ಶಾರದಾ ಗೋಪಾಲ್, ಕೆ.ಪಿ.ಸುರೇಶ್, ವಿ.ಗಾಯತ್ರಿ, ವತ್ಸಲಾ ಆನೇಕಲ್, ಎಸ್. ನವೀನ್, ಆಂಜನೇಯ ರೆಡ್ಡಿ, ದ್ವಿಜಿ ಗುರು, ವಿಶಾಲಕ್ಷಿ ಶರ್ಮ, ಝಾನ್ಸಿ ಲಕ್ಷ್ಮಿ ರಾಣಿ, ಜ್ಯೋತಿ ರಾಜ್, ಪದ್ಮರಾಜು, ಎಂ.ಆರ್.ರಕ್ಷಿತ್, ಕೆ. ಮಂಜುನಾಥ್, ಕೆ. ಕೊಟ್ರೇಶ್, ಫಣೀಶ್, ರಮೇಶ್ ಚೀಮಾಚನಹಳ್ಳಿ, ಸುವರ್ಣ ಕುತಾಳೆ ಅವರು ಮನವಿ ಪತ್ರಕ್ಕೆ ಸಹಿ ಹಾಕಿದ್ದಾರೆ.



ಶ್ರೀಮಾತಾ ಚಾರಿಟಬಲ್ ಟ್ರಸ್ಟ್ , ಹುಳಿಯಾರು ಹಾಗೂ ಸೆಂಟರ್ ಸ್ಟೇಜ್ ಬೆಂಗಳೂರು ವತಿಯಿಂದ ನಗರದಲ್ಲಿ ಮಂಗಳವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ನರೇಶ್ ಡಿಂಗ್ರಿ ಅವರಿಗೆ ‘ಸೆಂಟರ್ ಸ್ಟೇಜ್– ಕಪ್ಪಣ್ಣ ಯುವ ಪ್ರಶಸ್ತಿ 2024’ ಹಾಗೂ ಜೀವನ್‌ರಾಂ ಸುಳ್ಯ ಅವರಿಗೆ ‘ಸೆಂಟರ್ ಸ್ಟೇಜ್–ಕಪ್ಪಣ್ಣ ಪ್ರಶಸ್ತಿ 2024’ ಪ್ರದಾನ ಮಾಡಲಾಯಿತು. ಸೆಂಟರ್ ಸ್ಟೇಜ್ ಅಧ್ಯಕ್ಷ ಟಿ.ಎಸ್. ನಾಗಾಭರಣ, ನಿವೃತ್ತ ಐಎಎಸ್ ಅಧಿಕಾರಿ ಚಿರಂಜೀವಿ ಸಿಂಘ್, ಸಾಹಿತಿ ಹಂ.ಪ. ನಾಗರಾಜಯ್ಯ, ಸೆಂಟರ್ ಸ್ಟೇಜ್ ಕಾರ್ಯದರ್ಶಿ ಬಿ.ಎಸ್. ವಿದ್ಯಾರಣ್ಯ, ಸೆಂಟರ್ ಸ್ಟೇಜ್ ಉಪಾಧ್ಯಕ್ಷ ಬಿ. ಸುರೇಶ, ರಂಗಕರ್ಮಿ ಶ್ರೀನಿವಾಸ ಜಿ. ಕಪ್ಪಣ್ಣ ಹಾಗೂ ಗಂಗಾಧರ್ ಹಾಜರಿದ್ದರು –ಪ್ರಜಾವಾಣಿ ಚಿತ್ರ

ನಗರದಲ್ಲಿ ಇಂದು

5ನೇ ವಾರ್ಷಿಕ ಸ್ಮರಣಾಂಜಲಿ ಕಾರ್ಯಕ್ರಮ: ಅತಿಥಿಗಳು: ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್, ಆಯೋಜನೆ: ಕೇಂದ್ರೀಯ ಅರಸೇನಾ ಪಡೆಗಳ ಮಾಜಿ ಯೋಧರ ಕ್ಷೇಮಾಭಿವೃದ್ಧಿ ಸಂಘ, ಸ್ಥಳ: ಗ್ರೂಪ್ ಸೆಂಟರ್, ಸಿ.ಆರ್.ಪಿ.ಎಫ್. ಕ್ಯಾಂಪಸ್, ಯಲಹಂಕ, ಬೆಳಿಗ್ಗೆ 8.30

ಘಟಿಕೋತ್ಸವ: ಅತಿಥಿಗಳು: ಥಾವರಚಂದ್ ಗೆಹಲೋತ್, ಪಿ. ಬಾಲರಾಮ್, ಕೆ.ಸಿ. ರಾಮಮೂರ್ತಿ, ಸಬಿತಾ ರಾಮಮೂರ್ತಿ, ಆಯೋಜನೆ ಮತ್ತು ಸ್ಥಳ: ಸಿಎಂಆರ್ ವಿಶ್ವವಿದ್ಯಾಲಯ, ಐಟಿಪಿಎಲ್ ರಸ್ತೆ, ಬೆಳಿಗ್ಗೆ 10.30

ಮೊದಲನೇ ದೇಸಿ ಕಲಾವಿದರ ಸಮ್ಮೇಳನ–2024, ಸಾಂಸ್ಕೃತಿಕ ಕಾರ್ಯಕ್ರಮಗಳು: ಉದ್ಘಾಟನೆ: ಶಿವರಾಜ ತಂಗಡಗಿ, ಉಪಸ್ಥಿತಿ: ಕೃಷ್ಣ ಬೈರೇಗೌಡ, ಸಮ್ಮೇಳನದ ಅಧ್ಯಕ್ಷತೆ: ಎಸ್.ಜಿ. ಸಿದ್ಧರಾಮಯ್ಯ, ಪ್ರಾಸ್ತಾವಿಕ ನುಡಿ: ಅಪ್ಪಗೆರೆ ತಿಮ್ಮರಾಜು, ಅತಿಥಿಗಳು: ವಿಜಯೇಂದ್ರ, ಎಚ್. ಮಹದೇವಯ್ಯ, ಶಿವಾನಂದ ಎಂ. ಬಿಂಗಿ, ಮಂಜುನಾಥ್, ಆಯೋಜನೆ: ಆರಂಭ ಟ್ರಸ್ಟ್, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಬೆಳಿಗ್ಗೆ 11



ಜಯಂತ್ ಕಾಯ್ಕಿಣಿ

ಜಯಂತ್ ಕಾಯ್ಕಿಣಿ ಅವರ ‘ಹೌ ಟು ಟೆಲ್ ಎ ಮುಂಬೈ ಸ್ಟೋರಿ’ ಪುಸ್ತಕದ ಕುರಿತು ಸಂವಾದ: ಜಯಂತ್ ಕಾಯ್ಕಿಣಿ, ಇಂದಿರಾ ಚಂದ್ರಶೇಖರ್, ತೇಜಸ್ವಿನಿ ನಿರಂಜನ್, ವನಮಾಲ ವಿಶ್ವನಾಥ, ಸ್ಥಳ: ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ (ಬಿಐಸಿ), ದೊಮ್ಮಲೂರು, ಸಂಜೆ 6.30

ಸಾರಿಗೆ ನಿಗಮಗಳ ಕಾರ್ಮಿಕ ಸಂಘಟನೆಗಳ ರಾಜ್ಯ ಸಮಾವೇಶ: ಆಯೋಜನೆ: ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಗಳ ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿ, ಸ್ಥಳ: ಗುಂಡೂರಾವ್ ಸಭಾಂಗಣ, ಶಿರೂರು ಪಾರ್ಕ್ ರಸ್ತೆ, ಶೇಷಾದ್ರಿಪುರ, ಮಧ್ಯಾಹ್ನ 2

ಮಾಸದ ಮಾತು: ‘ಪ್ರಾಚೀನ ಕನ್ನಡ ಸಾಹಿತ್ಯದ ಹಿರಿಮೆ’ ಕುರಿತು ಉಪನ್ಯಾಸ: ಕೆ.ಆರ್. ಗಣೇಶ, ಅತಿಥಿ: ಬಿ.ಎನ್. ಶಿವಲಿಂಗ, ಆಯೋಜನೆ ಮತ್ತು ಸ್ಥಳ: ಎಚ್‌ಎಎಲ್ ಕೇಂದ್ರೀಯ ಕನ್ನಡ ಸಂಘದ ಬಿ. ವಿಜಯಕುಮಾರ್ ಸಭಾಂಗಣ, ಎಚ್‌ಎಎಲ್, ವಿಮಾನಪುರ, ಮಧ್ಯಾಹ್ನ 3.30

ಇನ್‌ಸ್ಟಿಟ್ಯೂಟ್ ಡೇ ಸಮಾರಂಭ: **ಅತಿಥಿಗಳು:** ರಿಷಿಕೇಶ ಟಿ. ಕೃಷ್ಣನ್, ಡಾ.ಸಿ. ಆರ್. ಚಂದ್ರಶೇಖರ್, ಎಸ್. ರಾಜೇಂದ್ರ ಕುಮಾರ್, ಅಧ್ಯಕ್ಷತೆ: ಡಾ. ಪ್ರತಿಮಾ ಮೂರ್ತಿ, ಆಯೋಜನೆ ಮತ್ತು ಸ್ಥಳ: ನಿಮ್ಹಾನ್ಸ್, ಮಧ್ಯಾಹ್ನ 3.30

ಪಂಡಿತ್ ಓ.ಆರ್. ರಾಮಣ್ಣ, ಪುಟ್ಟಮ್ಮ ದತ್ತಿ ಉಪನ್ಯಾಸ: ‘ಕುಮಾರವ್ಯಾಸ ಭಾರತದ ವಿರಾಟಪರ್ವ’ ಕುರಿತು ಉಪನ್ಯಾಸ: ಸುಜಾತ ಲಕ್ಷ್ಮೀಪುರ, ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಆಯೋಜನೆ ಮತ್ತು ಸ್ಥಳ: ಬಿ.ಎಂ.ಶ್ರೀ ಪ್ರತಿಷ್ಠಾನದ ಎಂ.ವಿ.ಸೀ. ಸಭಾಂಗಣ, ಬಿ.ಎಂ.ಶ್ರೀ ಕಲಾಭವನ, ಎನ್.ಆರ್. ಕಾಲೊನಿ, ಸಂಜೆ 5



ಪ್ರೊ.ಎಸ್.ಜಿ. ಸಿದ್ಧರಾಮಯ್ಯ

ಉಜ್ಜಿನಿ ರುದ್ರಪ್ಪ ಅವರ ‘ಪ್ರೀತಿಯನ್ನು ಹಂಬಲಿಸಿ’ ಪುಸ್ತಕ ಬಿಡುಗಡೆ: ಎನ್. ಸಂತೋಷ್ ಹೆಗ್ಡೆ, ಅಧ್ಯಕ್ಷತೆ: ಎಸ್.ಜಿ. ಸಿದ್ಧರಾಮಯ್ಯ, ಅತಿಥಿಗಳು: ಕುಂ. ವೀರಭದ್ರಪ್ಪ, ಬಿ.ಎಚ್.ಎಂ. ದಾರುಕೇಶ, ಡಾ. ವಸುಂಧರಾ ಭೂಪತಿ, ಪುಸ್ತಕದ ಕುರಿತು: ಎಲ್.ಎನ್. ಮುಕುಂದರಾಜ್, ಚೇತನ ಕುಮಾರ್, ಆಯೋಜನೆ: ಉರು ಪ್ರಕಾಶನ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಳಿಗ್ಗೆ 10

‘ಹನುಮದ್ವಿಲಾಸ’ ಕುರಿತು ಪ್ರವಚನ: ಪ್ರಶಾಂತ ಭಾರ್ಗವಾಚಾರ್ಯ, ಆಯೋಜನೆ: ತಿರುಮಲ ತಿರುಪತಿ ದೇವಸ್ಥಾನಗಳು ಹಿಂದೂಧರ್ಮ ಪ್ರಚಾರ ಪರಿಷತ್, ಸ್ಥಳ: ವೀರಾಂಜನೇಯಸ್ವಾಮಿ ದೇವಸ್ಥಾನ, ಸರಸ್ವತಿನಗರ, ಸಂಜೆ 6

ನಾದಜ್ಯೋತಿ ಸಂಗೀತ ಸಂಭ್ರಮ–2024: ವಜ್ರ ಮಹೋತ್ಸವ ಸಂಭ್ರಮದ ಉದ್ಘಾಟನೆ: ಅಶೋಕ ಹಾರನಹಳ್ಳಿ, ಅತಿಥಿಗಳು: ರೇವತಿ ಕಾಮತ್, ಎನ್. ದಕ್ಷಿಣಮೂರ್ತಿ, ಗಾಯನ: ರಂಜನಿ ವಾಸುಕಿ, ಪಿಟೀಲು: ವಿಶ್ವಜಿತ್ ಮಾತ್ತೂರ್, ಮೃದಂಗ: ಕೆ.ಕೆ. ಹರಿನಾರಾಯಣ್, ಘಟ: ಎನ್.ಎಸ್. ಕೃಷ್ಣಪ್ರಸಾದ್, ಆಯೋಜನೆ: ನಾದಜ್ಯೋತಿ ಸಂಗೀತ ಸಭಾ ಟ್ರಸ್ಟ್, ಸ್ಥಳ: ಶ್ರೀರಾಮ ಮಂದಿರ, ಮಲ್ಲೇಶ್ವರ, ಸಂಜೆ 6.30

ಮಧ್ವ ನವರಾತ್ರಿ ಪ್ರವಚನ ಮಾಲಿಕೆ: ‘ದ್ವಾದಶ ಸ್ತೋತ್ರಗಳು’ ಕುರಿತು ಪ್ರವಚನ: ವಿನಾಯಕ ನಾಮಣ್ಣ, ಆಯೋಜನೆ ಮತ್ತು ಸ್ಥಳ: ರಾಘವೇಂದ್ರ ಸ್ವಾಮಿ ಮಠ, ಸುಧೀಂದ್ರನಗರ, ಸಂಜೆ 6.30

ಪ್ರವಚನ ವಾಹಿನಿ: ‘ಭಗವದ್ಗೀತೆ’ ಕುರಿತು ಉಪನ್ಯಾಸ: ಗೋಪಾಲ್ ಅಯ್ಯಂಗಾರ್, ಆಯೋಜನೆ ಮತ್ತು ಸ್ಥಳ: ರಾಗಿಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್, ಜಯನಗರ, ಸಂಜೆ 6.30



ಕರ್ನಾಟಕ ಸರ್ಕಾರ...
ಗ್ಯಾರಂಟಿ ಸರ್ಕಾರ...

ಸಮಾಜ ಕಲ್ಯಾಣ ಇಲಾಖೆ
ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮ ನಿಯಮಿತ

ಸಂತ ಸೇವಾಲಾಲ್ 285ನೇ ಜಯಂತಿ ಕಾರ್ಯಕ್ರಮ



ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು




ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು



13, 14, 15 ಫೆಬ್ರವರಿ 2024 ಮಧ್ಯಾಹ್ನ 2.00 ಗಂಟೆಗೆ

ಶ್ರೀ ಶ್ರೀ ಶ್ರೀ ರಾಮ್‌ರಾವ್ ಮಹಾರಾಜ ಮಹಾವೇದಿಕೆ
ಭಾಯಾಗಡ್-ಸೂರಗೊಂಡನಕೊಪ್ಪ,
ನ್ಯಾಮತಿ ತಾಲ್ಲೂಕು, ದಾವಣಗೆರೆ ಜಿಲ್ಲೆ



ಡಾ. ಹೆಚ್.ಸಿ. ಮಹದೇವಪ್ಪ, ಮಾನ್ಯ ಸಮಾಜ ಕಲ್ಯಾಣ ಸಚಿವರು ಸಭೆಯೊಂದನ್ನುದ್ದೇಶಿಸಿ ಮಾತನಾಡುತ್ತಿರುವುದು.

ಸರ್ವರಿಗೂ ಸುಸ್ವಾಗತ




DIGITAL TRAFFIC & VEHICLE PARKING MANAGEMENT SYSTEM-2024
Parking Location in google Lens Scan To QR Code

ನುಡಿದಂತೆ ನಡೆದಿದ್ದೇವೆ...

ಶಕ್ತಿ — ಮಹಿಳೆಯರಿಗೆ ಬಸ್ ಪ್ರಯಾಣ ಉಚಿತ
ಗೃಹ ಜ್ಯೋತಿ — ಪ್ರತಿ ಮನೆಗೆ 200 ಯೂನಿಟ್‌ವರೆಗೆ ವಿದ್ಯುತ್ ಉಚಿತ
ಅನ್ನಭಾಗ್ಯ — ಬಡವರಿಗೆ ಪ್ರತಿ ತಿಂಗಳು 10 kg 5 ಕೆಜಿ ಆಹಾರಧಾನ್ಯ ಬದಲಿಗೆ ರೂ. 170
ಗೃಹಲಕ್ಷ್ಮಿ — ಪ್ರತಿ ಮನೆಯೊಡತಿಗೆ ಪ್ರತಿ ತಿಂಗಳು ₹2000
ಯುವನಿಧಿ — ಪ್ರತಿ ತಿಂಗಳು ನಿರುದ್ಯೋಗ ಭತ್ಯೆ ₹3000 | ₹1500

ನಮ್ಮ ವೈವಿಧ್ಯಮಯ ಸಂಸ್ಕೃತಿ ಮತ್ತು ಪರಂಪರೆಯನ್ನು ಗೌರವಿಸುವುದು ಮತ್ತು ಕಾಪಾಡುವುದು ಪ್ರತಿಯೊಬ್ಬ ಭಾರತೀಯರ ಸಂವಿಧಾನಬದ್ಧ ಮೂಲಭೂತ ಕರ್ತವ್ಯ.

ವಿಶೇಷ ಸೂಚನೆ: ಕಾರ್ಯಕ್ರಮಕ್ಕೆ ಆಗಮಿಸುವಾಗ ಕಡ್ಡಾಯವಾಗಿ ಮಾಸ್ಕ್ ಧರಿಸಿ ಹಾಗೂ ಕೋವಿಡ್ ಬಗ್ಗೆ ಮುನ್ನೆಚ್ಚರಿಕೆ ವಹಿಸಿ.



ಐದೇ ನಿಮಿಷದಲ್ಲಿ ಬ್ಯಾಟರಿ ಚಾರ್ಜ್‌!



ನೇಸರ ಕಾಡನಕುಪ್ಪೆ

ವಿದ್ಯುತ್ ಚಾಲಿತ ವಾಹನಗಳ ಚಾಲಕರಿಗೆ ವಾಹನದ ಒಟ್ಟಾರೆ ರೇಂಜ್ ಎಷ್ಟು ಎಂಬುದೇ ಯಕ್ಷಪ್ರಶ್ನೆಯಾಗಿರುತ್ತದೆ. ಅಧಿಕ ದೂರ ಕ್ರಮಿಸಬಲ್ಲ ಶಕ್ತಿವಾಹನಕ್ಕೆ ಇದೆಯೇ ಇಲ್ಲವೇ ಎಂಬುದರ ಮೇಲೆ ಅದರ ಖರೀದಿ ನಿರ್ಧಾರವಾಗುತ್ತದೆ. ಅಂತೆಯೇ, ವಾಹನದ ಬ್ಯಾಟರಿಯ ಚಾರ್ಜಿಂಗ್ ವೇಗವೆಷ್ಟು ಎಂಬುದೂ ದೊಡ್ಡ ಪ್ರಶ್ನೆಯೇ. ಬೇಗನೇ ಚಾರ್ಜ್ ಆಗುವುದು ಚಾರ್ಜರ್‌ನ ಸಾಮರ್ಥ್ಯದ ಮೇಲೂ ಅವಲಂಬಿತವಾಗಿರುತ್ತದೆ. ಇವೆಲ್ಲದಕ್ಕೂ ಪರಿಹಾರ ಎಂಬಂತೆ ಅಮೆರಿಕದ ಕಾರ್ನೆಲ್ ವಿಶ್ವವಿದ್ಯಾಲಯದ ಎಂಜಿನಿಯರುಗಳು ಕೇವಲ 5 ನಿಮಿಷದಲ್ಲಿ ಪೂರ್ಣ ಚಾರ್ಜ್ ಆಗಬಲ್ಲ ಲಿಥಿಯಂ ಅಯಾನ್ ಬ್ಯಾಟರಿಯನ್ನು ಸಂಶೋಧಿಸಿದ್ದಾರೆ.

ಈ ಸಂಶೋಧನೆ ವಿದ್ಯುತ್ ಚಾಲಿತ ವಾಹನಗಳ ಪಾಲಿಗೆ ದೊಡ್ಡ ಸುದ್ದಿಯಾಗಿದೆ. ಏಕೆಂದರೆ ಕಾರ್, ಬೈಕ್, ಸ್ಕೂಟರ್ ಇತ್ಯಾದಿ ವಾಹನಗಳು ಹೆಚ್ಚು ದೂರ ಕ್ರಮಿಸಬಲ್ಲವು ಎಂಬ ಪ್ರಲೋಬನೆಯನ್ನು ಒಡ್ಡಿ ವಾಹನದ ಬೆಲೆಯನ್ನು ಹೆಚ್ಚಿಸುವ ಅಥವಾ ಕಡಿಮೆ ಮಾಡುವ ತಂತ್ರವನ್ನು ಕಂಪೆನಿಗಳು ಮಾಡುತ್ತವೆ. ಈ ಹೊಸ ಸಂಶೋಧನೆಯಿಂದ ಬ್ಯಾಟರಿಯ ಅಥವಾ ವಾಹನದ ರೇಂಜ್ ಎಷ್ಟು ಎಂಬ ಸಾಮರ್ಥ್ಯದ ಪ್ರಶ್ನೆಯೇ ಇಲ್ಲದಂತಾಗುತ್ತದೆ. ಏಕೆಂದರೆ, ಬ್ಯಾಟರಿ ಖಾಲಿಯಾಗುತ್ತಿರುವಂತೆ ಕೇವಲ 5 ನಿಮಿಷದಲ್ಲಿ ಬ್ಯಾಟರಿ ಚಾರ್ಜ್ ಆಗುವಾಗ, ಅದು ಅತಿ ಹೆಚ್ಚು ದೂರ ಕ್ರಮಿಸುವ ಸಂಗ್ರಹಣ ಸಾಮರ್ಥ್ಯ ಹೊಂದಿರಬೇಕು ಎಂಬುದು ಮುಖ್ಯವಾಗುವುದೇ ಇಲ್ಲ ಎಂಬುದು ವಾಹನತಜ್ಞರ ಹಾಗೂ ಚಾಲಕರ ಅಭಿಪ್ರಾಯವಾಗಿದೆ.

‘ಟೆಸ್ಲಾ’, ‘ಮರ್ಸಿಡೆಸ್ ಬೆನ್ಸ್’ ಇತ್ಯಾದಿ ಪ್ರೀಮಿಯಂ ಕಾರು ಕಂಪೆನಿಗಳು ಒಂದು ಬಾರಿ ಚಾರ್ಜ್ ಮಾಡಿದರೆ 800 ಕಿಲೋಮೀಟರ್‌ವರೆಗೂ ರೇಂಜ್ ನೀಡಬಲ್ಲ ವಾಹನಗಳನ್ನು ಮಾರುತ್ತಿವೆ. ಕಿಯಾ, ಟಾಟಾ ಮೋಟಾರ್ಸ್‌ನಂತಹ ಮಧ್ಯಮ ಗುಣಮಟ್ಟದ ವಾಹನಗಳೂ ದೊಡ್ಡ ರೇಂಜ್ ಬಗ್ಗೆ ಮಾತನಾಡುತ್ತಿವೆ. ಇನ್ನು ಮುಂದೆ ಈ ಮಾನದಂಡವು ಬದಲಾಗಿ, ಹೆಚ್ಚು ರೇಂಜ್ ಅನ್ನುವುದಕ್ಕಿಂತ ಅತಿ ಕಡಿಮೆ ಸಮಯದಲ್ಲಿ ಮರು ಚಾರ್ಜ್ ಆಗುವ ಬ್ಯಾಟರಿ ಸಿಗಲಿದೆ ಎನ್ನುವ ಚರ್ಚೆ ಶುರುವಾಗಿದೆ.

ಏನಿದು ತಂತ್ರಜ್ಞಾನ?


ಲಿಥಿಯಂ ಅಯಾನ್ ಸಾಮಾನ್ಯವಾಗಿ ಬ್ಯಾಟರಿಯಲ್ಲಿ ಬಳಕೆಯಾಗುವ ರಾಸಾಯನಿಕ. ಅತಿ ಬೇಗನೇ ವಿದ್ಯುತ್ ಅನ್ನು ಮರು ಸಂಗ್ರಹಿಸಿಕೊಳ್ಳುವ ಶಕ್ತಿ ಈ ರಾಸಾಯನಿಕಕ್ಕೆ ಇದೆ. ಲಿಥಿಯಂ ಲೋಹ ಇದಕ್ಕೆ ಮೂಲ. ನಿಕ್ಕಲ್ ಕ್ಯಾಡ್ಮಿಯಂ ಹಾಗೂ ನಿಕ್ಕಲ್ ಮೆಟಲ್ ಹೈಡ್ರೇಟ್ ಬ್ಯಾಟರಿಗಳನ್ನು ಇದಕ್ಕೂ ಮುನ್ನ ಬಳಸಲಾಗುತ್ತಿತ್ತು. ಇವುಗಳ ಸಾಮರ್ಥ್ಯ ಕಡಿಮೆ ಎಂಬ ಕಾರಣದಿಂದ ಅವನ್ನು ಕೈಬಿಡಲಾಗಿದೆ. ಈಗಲೂ ಗಡಿಯಾರ, ರಿಮೋಟ್ ಕಂಟ್ರೋಲರ್ ಇತ್ಯಾದಿ ಉಪಕರಣಗಳಲ್ಲಿ ಬಳಸುವ ಬ್ಯಾಟರಿಗಳಲ್ಲಿ ನಿಕ್ಕಲ್ ಕ್ಯಾಡ್ಮಿಯಂ ಹಾಗೂ ನಿಕ್ಕಲ್ ಮೆಟಲ್ ಹೈಡ್ರೇಟ್ ಬ್ಯಾಟರಿಗಳನ್ನು ಬಳಸಲಾಗುತ್ತದೆ.

ಇದೀಗ ಲಿಥಿಯಂ ಅಯಾನ್ ಬ್ಯಾಟರಿಗಳ ಚಾರ್ಜಿಂಗ್ ಅವಧಿಯನ್ನು ಕಡಿಮೆ ಮಾಡುವ ಸಲುವಾಗಿ ಹೊಸದೊಂದು ಲೋಹವನ್ನು ಬೆರೆಸುವ ಪ್ರಯೋಗವನ್ನು ಮಾಡಲಾಗಿದೆ. ಇಂಡಿಯಂ ಲೋಹ ಈ ಸಂಶೋಧನೆಯ ಹಿಂದೆ ಇರುವ ಪ್ರಮುಖ ಪಾತ್ರಧಾರಿಯಾಗಿದೆ. ಇಂಡಿಯಂ ಲೋಹವನ್ನು ಹಾಗೂ ಅದರಿಂದ ಸಿಗುವ ರಾಸಾಯನಿಕವನ್ನು ಹಾಲಿ, ಕಂಪ್ಯೂಟರ್, ಟಿ.ವಿ ಪರದೆಗಳು, ಸೋಲಾರ್ ಫಲಕಗಳಲ್ಲಿ ಬಳಸಲಾಗುತ್ತಿವೆ. ಈ ಲೋಹದ ವಿದ್ಯುತ್ಕಾಂತೀಯ ಶಕ್ತಿ ಹೆಚ್ಚು. ಅಂದರೆ, ಅತಿ ವೇಗವಾಗಿ, ಹಾಗೂ ಅಷ್ಟೇ ನಿಖರವಾಗಿ ವಿದ್ಯುತ್ ಅನ್ನು ಇದು ತನ್ನ ಮೂಲಕ ಹರಿಯುಂತೆ ಮಾಡಬಲ್ಲದು. ಹಾಗಾಗಿಯೇ, ಎಲ್‌ಸಿಡಿ ಅಥವಾ ಎಲ್‌ಇಡಿ ಪರದೆಗಳಲ್ಲಿ ಸ್ಪಷ್ಟವಾದ ಬೆಳಕು, ನಿಖರತೆ ಇರುತ್ತದೆ.

ಇದನ್ನು ಗಮನಿಸಿದ ಕಾರ್ನೆಲ್ ವಿಶ್ವವಿದ್ಯಾಲಯದ ಕಾರ್ನೆಲ್ ಎಂಜಿನಿಯರಿಂಗ್ ಕಾಲೇಜಿನ ಡೀನ್ ಹಾಗೂ ಪ್ರಾಧ್ಯಾಪಕರಾದ ಲಿಂಡೆನ್ ಆರ್ಚರ್ ಅವರ ತಂಡವು ಇಂಡಿಯಂ ಬಳಸಿಕೊಂಡು ಲಿಥಿಯಂ ಅಯಾನ್ ಬ್ಯಾಟರಿಗಳ ಜೊತೆಗೆ ಪ್ರಯೋಗಿಸಿದ್ದಾರೆ. ‘ಇಂಡಿಯಂ ಹಾಗೂ ಲಿಥಿಯಂ ಮಿಶ್ರಣದಿಂದ ನಾವು ಕಂಡುಕೊಂಡಿದ್ದು ಅತಿ ವೇಗದ ವಿದ್ಯುತ್ ಮರು ಸಂಗ್ರಹಣ ಸಾಮರ್ಥ್ಯ. ಒಂದು ಸ್ಪೋರ್ಟ್ ಯುಟಿಲಿಟಿ ವೆಹಿಕಲ್ (ಎಸ್‌ಯುವಿ) ನಲ್ಲಿ ಇರುವ ಬ್ಯಾಟರಿಯು ಕೇವಲ 5 ನಿಮಿಷದ ಒಳಗೆ ಸಂಪೂರ್ಣವಾಗಿ ಚಾರ್ಜ್ ಆಯಿತು. ಇದಕ್ಕಿಂತಲೂ ಅಚ್ಚರಿಯ ವಿಚಾರವೆಂದರೆ, ಈ ಬ್ಯಾಟರಿಯ ವಿದ್ಯುತ್ ಹೊರ ಬಿಡುವ ಸಾಮರ್ಥ್ಯ. ತುಂಬಾ ನಿಧಾನವಾಗಿ, ಸಮತೋಲಿತವಾಗಿ ವಿದ್ಯುತ್ ಈ ಬ್ಯಾಟರಿಯಿಂದ ಹೊರಬರುತ್ತದೆ. ಅಂದರೆ, ಬ್ಯಾಟರಿಯ ಒಟ್ಟು ಜೀವ ಹೆಚ್ಚಾಗುತ್ತದೆ’ ಎಂಬುದನ್ನು ನಾವು ಕಂಡುಕೊಂಡಿದ್ದೇವೆ ಎಂದು ಲಿಂಡೆನ್ ಆರ್ಚರ್ ಹೇಳಿದ್ದಾರೆ.


‘ಹಾಗಾಗಿ, ವಾಹನ ಎಷ್ಟು ದೂರ ಕ್ರಮಿಸಬಲ್ಲದು ಎಂಬುದು ದೊಡ್ಡ ಸವಾಲಾಗಿ ಭವಿಷ್ಯದಲ್ಲಿ ಉಳಿಯಲಾರದು. ಎಷ್ಟೇ ಕಡಿಮೆ ಸಂಗ್ರಹಣ ಸಾಮರ್ಥ್ಯ ಇರುವ ವಾಹನವೂ ಕನಿಷ್ಠ 100 ಕಿಲೋಮೀಟರ್ ಕ್ರಮಿಸಬಲ್ಲದು. ಒಂದು ಟೀ ಅಥವಾ ಕಾಫಿ ಕುಡಿಯಲು ಕನಿಷ್ಠವೆಂದರೂ 10 ನಿಮಿಷ ಬೇಕೇ ಬೇಕು. ಅಷ್ಟರಲ್ಲಿ ಬ್ಯಾಟರಿ ಪೂರ್ಣ ಚಾರ್ಜ್ ಆದರೆ, ಚಿಂತೆಯ ಮಾತೇ ಬರುವುದಿಲ್ಲವಲ್ಲ. ಅಲ್ಲದೇ, ವಿದ್ಯುತ್ ಚಾರ್ಜಿಂಗ್ ಕೇಂದ್ರಗಳಲ್ಲಿ ಈಗ ಮೂಲಸೌಕರ್ಯದ ಕೊರತೆ ಇದೆ. ಒಂದೇ ಒಂದು ಚಾರ್ಜರ್ ಇದ್ದರೆ, ಸಾಲಿನಲ್ಲಿ ಗಂಟೆಗಟ್ಟಲೇ ಕಾಯಬೇಕಾದ ಅನಿವಾರ್ಯತೆ ಇದೆ. ಈ ತಂತ್ರಜ್ಞಾನ ಜಾರಿಯಾದರೆ, 5 ನಿಮಿಷಕ್ಕೆ ಒಂದರಂತೆ ವಾಹನಗಳು ಚಾರ್ಜ್ ಆಗಿ ಜಾಗ ಖಾಲಿಮಾಡುತ್ತವೆ. ಇದು ಸಮಸ್ಯೆಗೆ ಪರಿಹಾರ ಅಲ್ಲವೇ?’ ಎಂದು ಆರ್ಚರ್ ಪ್ರಶ್ನಿಸಿದ್ದಾರೆ.

ಅಲ್ಲದೇ, ಟೊಯೊಟಾ, ಮರ್ಸಿಡೆಸ್ ಬೆನ್ಸ್ ಮುಂತಾದ ಕಂಪೆನಿಗಳು ಇದೀಗ ಜಲಜನಕ ಚಾಲಿತ ವಾಹನಗಳನ್ನು ಅಭಿವೃದ್ಧಿಪಡಿಸುತ್ತಿವೆ. ಈ ವಾಹನಗಳಿಗೂ ಬ್ಯಾಟರಿ ಬೇಕೇ ಬೇಕು. ಕಾರಿನಲ್ಲಿರುವ ಜಲಜನಕ ಬಳಕೆಯಾಗಿ ಅದು ಬ್ಯಾಟರಿಗೆ ವರ್ಗಾವಣೆಯಾಗುವ ತಂತ್ರಜ್ಞಾನವದು. ನಮ್ಮ ಬ್ಯಾಟರಿಯು ಅತಿ ಬೇಗನೇ ಸ್ಪಂದಿಸುವ ಗುಣ ಹೊಂದಿರುವ ಕಾರಣ, ಭವಿಷ್ಯದಲ್ಲಿ ಈ ಬಗೆಯ ಬ್ಯಾಟರಿಗಳು ಸ್ಥಾನ ಪಡೆಯಲಿವೆ ಎಂದು ಆರ್ಚರ್ ವಿಶ್ವಾಸವನ್ನು ವ್ಯಕ್ತಪಡಿಸಿದ್ದಾರೆ.



ನೀವು ಮನುಷ್ಯರೇ?

ಗಣೇಶ್ ಭಟ್ ನೆಲಮಾವ್



ಮನುಷ್ಯನನ್ನು ಮನುಷ್ಯ ಎಂದು ಕರೆಯಬಹುದಾದದ್ದು ಯಾವಾಗ? ಈ ಪ್ರಶ್ನೆಗೆ, ಆಲೋಚನಾಶಕ್ತಿ, ಸ್ವಯಂಪ್ರಜ್ಞೆ, ಭಾವನೆಗಳು ಇತ್ಯಾದಿ ಗುಣಗಳನ್ನು ತೋರಿದಾಗ ಎಂದು ಹೇಳಬಹುದು. ಆದರೆ ಇಪ್ಪತ್ತೊಂದನೇ ಶತಮಾನಕ್ಕೆ ತಕ್ಕಂತೆ ಉತ್ತರಿಸುವುದಾದರೆ, ‘ಟ್ರಾಫಿಕ್ ಲೈಟು, ಬಸ್ಸು-ಕಾರುಗಳಿರುವ ಚಿತ್ರಗಳ ಮೇಲೆ ಸರಿಯಾಗಿ ಕ್ಲಿಕ್ಕಿಸಿದಾಗ’ ಎನ್ನಬೇಕಾಗುತ್ತದೆ!

ನೀವು ಅಂತರ್ಜಾಲದಲ್ಲಿ ಯಾವುದಾದರೂ ಸೇವೆಯನ್ನು ಬಳಸುತ್ತಿರುವಾಗ ಕೆಲವೊಮ್ಮೆ ಹೀಗೊಂದು ಪರೀಕ್ಷೆ ನಿಮಗೆದುರಾಗಿರುತ್ತದೆ. ಒಂದಷ್ಟು ತಿರುಚಿದ, ಗೋಜಲುಗೋಜಲಾದ ಅಕ್ಷರಗಳನ್ನು ಕೊಟ್ಟು, ಆ ಅಕ್ಷರಗಳನ್ನು ಗುರುತಿಸುವಂತೆ ಕೇಳಲಾಗುತ್ತದೆ. ಅಥವಾ ಸಣ್ಣ ಸಣ್ಣ ಚೌಕಗಳಿಂದಾದ ಒಂದು ಚಿತ್ರವನ್ನು ತೋರಿಸಿ ಯಾವುದೋ ನಿರ್ದಿಷ್ಟ ವಸ್ತುವಿರುವ ಚೌಕಗಳನ್ನು ಆಯ್ಕೆ ಮಾಡುವಂತೆ ಕೇಳಲಾಗುತ್ತದೆ. ಇಂಥ ಪರೀಕ್ಷೆಗಳ ಹೆಸರೇ ‘ಕ್ಯಾಪ್ಚಾ’ (CAPTCHA). ಇದು, ‘Completely Automated Public Turing test to tell Computers and Humans Apart ’ ಎಂಬುದರ ಹ್ರಸ್ವರೂಪ. ಈ ಮಾರುದ್ದದ ಹೆಸರಿನ ಸರಳ ಅರ್ಥವೆಂದರೆ, ‘ಮನುಷ್ಯ ಮತ್ತು ಯಂತ್ರಗಳನ್ನು ಗುರುತಿಸಲು ನಡೆಸುವ ಪರೀಕ್ಷೆ’ ಎಂದು. ಆಧುನಿಕ ಕಂಪ್ಯೂಟರ್ ವಿಜ್ಞಾನದ ಪಿತಾಮಹ ಅಲನ್ ಟ್ಯೂರಿಂಗ್, ಆಲೋಚನಾಶಕ್ತಿಯಲ್ಲಿ ಯಂತ್ರಗಳು ಮನುಷ್ಯನನ್ನು ಸರಿಗಟ್ಟುವ ಸಂದರ್ಭ ಬಂದಾಗ ಯಂತ್ರಗಳು ಮತ್ತು ಮನುಷ್ಯರನ್ನು ಗುರುತಿಸುವುದು ಹೇಗೆ ಎಂಬ ಪ್ರಶ್ನೆಯನ್ನು ತನಗೆ ತಾನೇ ಹಾಕಿಕೊಂಡು, ಸುಮಾರು 70 ವರ್ಷಗಳ ಹಿಂದೆಯೇ ಕೆಲವು ನಿರ್ದೇಶನಗಳನ್ನು ನೀಡಿದ್ದ. ಆ ನಿರ್ದೇಶನಗಳನ್ನು ಆಧಾರವಾಗಿಟ್ಟುಕೊಂಡು ಕೆಲವು ಪರೀಕ್ಷೆಗಳನ್ನು ಸಿದ್ಧಪಡಿಸಲಾಯಿತು. ಅಂತಹ ಪರೀಕ್ಷೆಗಳನ್ನು ‘ಟ್ಯೂರಿಂಗ್ ಪರೀಕ್ಷೆ’ ಎಂದು ಕರೆಯುತ್ತೇವೆ. ಕ್ಯಾಪ್ಚಾ ಅಂತಹುದೇ ಟ್ಯೂರಿಂಗ್ ಪರೀಕ್ಷೆಗಳಲ್ಲೊಂದು.



ಈ ಕ್ಯಾಪ್ಚಾ ಒಡ್ಡುವ ಪ್ರಶ್ನೆಗಳಿಗೆ ‘ಏಕೆ ಉತ್ತರಿಸಬೇಕು?’, ‘ಅದರ ಅವಶ್ಯಕತೆ ಏನು?’ – ಎಂಬ ಪ್ರಶ್ನೆಗಳು ನಿಮಗೆ ಅವನ್ನು ಎದುರಿಸುವಾಗೆಲ್ಲ ಬಂದಿರಬಹುದು. ಕ್ಯಾಪ್ಚಾದ ಮೂಲ ಉದ್ದೇಶ ಸುರಕ್ಷತೆ. ಮನುಷ್ಯರ ಸೋಗಿನಲ್ಲಿ ಬರುವ ಸಾಫ್ಟ್‌ವೇರ್‌ಗಳನ್ನು ಗುರುತಿಸಿ ತಡೆಯುವುದೇ ಈ ಕ್ಯಾಪ್ಚಾದ ಕೆಲಸ. ವೆಬ್‌ಸೈಟ್‌ಗಳನ್ನು ನಾವು ಸಾಮಾನ್ಯವಾಗಿ ಬಳಸುವುದು ಯಾವುದಾದರೂ ಸೇವೆ ಅಥವಾ ಮಾಹಿತಿಯನ್ನು ಪಡೆಯಲು. ಹಲವು ಬಾರೀ ಹ್ಯಾಕರ್‌ಗಳು ಅಥವಾ ಇನ್ನಾವುದೋ ರೀತಿಯ ಕಿಡಿಗೇಡಿಗಳು ವೆಬ್‌ಸೈಟ್‌ಗಳಿಗೆ ಲಗ್ಗೆ ಇಡಲೆಂದು ಸಾಫ್ಟ್‌ವೇರ್‌ಗಳನ್ನು ತಯಾರಿಸುತ್ತಾರೆ. ಇವುಗಳಿಗೆ ‘ಬಾಟ್’ (bot) ಎಂದು ಹೆಸರು. ಈ ಬಾಟ್‌ಗಳು ಒಂದು ನಿರ್ದಿಷ್ಟ ಕೆಲಸವನ್ನು ಸ್ವಯಂಚಾಲಿತವಾಗಿ ಮಾಡಬಲ್ಲವು. ಇವನ್ನು ಬಳಸಿ ಆನ್‌ಲೈನ್ ಟಿಕೆಟ್ ಬುಕ್ ಮಾಡುವುದು, ಇ-ಮೇಲ್ ವಿಳಾಸವನ್ನು ಸೃಷ್ಟಿಸುವುದು, ಸೋಶಿಯಲ್ ಮೀಡಿಯಾ ಅಕೌಂಟನ್ನು ರಚಿಸುವುದು ಮುಂತಾಗಿ ಹಲವು ಕೆಲಸಗಳನ್ನು ಮಾಡಬಹುದು. ಮನುಷ್ಯರಿಗೆ ಹೋಲಿಸಿದರೆ ಇವುಗಳು ಕೆಲಸ ಮಾಡುವ ವೇಗ ಮತ್ತು ಪ್ರಮಾಣ ಅತ್ಯಂತ ಹೆಚ್ಚಿರುತ್ತದೆ. ಇದರಿಂದಾಗಿ ಈ ಬಾಟ್‌ಗಳು ಗುರಿಯಾಗಿಸಿದ ವೆಬ್‌ಸೈಟ್‌ಗಳು ಸಾಮಾನ್ಯ ಜನರಿಗೆ ಬಳಕೆಗೆ ಸಿಗದಂತೆ ಹೋಗಬಹುದು. ಆನ್‌ಲೈನ್ ವೇದಿಕೆಗಳಲ್ಲಿ ನಿಷ್ಪ್ರಯೋಜಕ ಮಾಹಿತಿಯನ್ನು ಅಥವಾ ಕುತಂತ್ರಾಂಶ ಒಂದರ ಕೊಂಡಿಯನ್ನು ಸೇರಿಸಿಬಿಡಬಹುದು. ಕಾರ್ಯಕ್ರಮವೊಂದರ ಟಿಕೇಟುಗಳನ್ನೆಲ್ಲ ಖರೀದಿಸಿ ಹೆಚ್ಚಿನ ಬೆಲೆಗೆ ಮಾರಬಹುದು. ಇಂತಹ ಕೆಲಸಗಳನ್ನೆಲ್ಲ ತಡೆಯುವ ಕಾವಲುಗಾರನಾಗಿ ಕ್ಯಾಪ್ಚಾ ನಿಲ್ಲುತ್ತದೆ. ಈ ಬಾಟ್‌ಗಳಿಗೆ ತಿರುಚಲ್ಪಟ್ಟ ಅಕ್ಷರಗಳನ್ನು ಓದುವುದು, ಚಿತ್ರಗಳಲ್ಲಿರುವ ಕಾರು, ಟ್ರಾಫಿಕ್ ಲೈಟ್ ಮುಂತಾದ ವಸ್ತುಗಳನ್ನು ಗುರುತಿಸುವುದು ಕಷ್ಟದ ಕೆಲಸ. ನಮಗೆ ಅತ್ಯಂತ ಸರಳವಾದ ಈ ಕೆಲಸಗಳು ಯಂತ್ರಗಳ ಪಾಲಿಗೆ ಅತಿ ಸಂಕೀರ್ಣವಾದಂತಹ ಸಮಸ್ಯೆಗಳಾಗುತ್ತವೆ, ಮತ್ತು ಬಾಟ್‌ಗಳ ಕುಕೃತ್ಯಕ್ಕೆ ಕಡಿವಾಣ ಬೀಳುತ್ತದೆ.

ಆದರೆ ತಂತ್ರಜ್ಞಾನವೂ ನಿಂತ ನೀರೇನಲ್ಲವಲ್ಲ. ಸಮಯ ಕಳೆದಂತೆ ಯಂತ್ರಗಳು ಕೂಡ ಈ ಕ್ಯಾಪ್ಚಾಗಳನ್ನು ಪರಿಹರಿಸುವಲ್ಲಿ ದಕ್ಷತೆಗಳಿಸತೊಡಗಿದವು. ಅಲ್ಲದೆ ಜನರಿಗೂ ಈ ಕ್ಯಾಪ್ಚಾಗಳನ್ನು ಪರಿಹರಿಸುತ್ತಾ ಕೂರುವುದು ಕಿರಿಕಿರಿಯ ವಿಷಯವಾಯಿತು. ಇದಕ್ಕೆ ಪರಿಹಾರವಾಗಿ ಗೂಗಲ್ ‘ No CAPTCHA’ ಎಂಬ ಹೊಸ ತಂತ್ರವನ್ನು ಕಂಡುಕೊಂಡಿದೆ. ಈ ತಂತ್ರವನ್ನು ಬಳಸುವ ವೆಬ್‌ಸೈಟ್‌ಗಳಲ್ಲಿ ತಿರುಚಿದ ಅಕ್ಷರಗಳು ಅಥವಾ ವಿವಿಧ ವಸ್ತುಗಳ ಚಿತ್ರಗಳು ಇರುವುದಿಲ್ಲ. ಪರದೆಯ ಮೇಲೆ ನಾವು ಮೌಸ್‌ನ ಪಾಯಿಂಟರನ್ನು ಹೇಗೆ ಓಡಾಡಿಸುತ್ತೇವೆ, ಅಂತರ್ಜಾಲದಲ್ಲಿ ನಾವು ಹುಡುಕಿದ ವಿಷಯಗಳು, ತೆರೆದ ವೆಬ್‌ಸೈಟ್‌ಗಳು ಮುಂತಾದ ಮಾಹಿತಿಯನ್ನು ವಿಶ್ಲೇಷಿಸಿ ಗೂಗಲ್ ನಮ್ಮ ಮಾನವತ್ವವನ್ನು ಪತ್ತೆ ಮಾಡುತ್ತದೆ. ಏಕೆಂದರೆ ಬ್ರೌಸರ್ ಹಿಸ್ಟರಿಯಲ್ಲಿ ನಾವು ಬಿಡುವ ಹೆಜ್ಜೆ ಗುರುತುಗಳಿಂದ ನಮ್ಮ ಕಿರು ವ್ಯಕ್ತಿತ್ವವನ್ನೇ ರೂಪಿಸಲು ಗೂಗಲ್‌ಗೆ ಸಾಧ್ಯವಾಗುತ್ತದೆ. ಆದರೆ ಬಾಟ್‌ಗಳು ಇಂತಹ ಹೆಜ್ಜೆ ಗುರುತುಗಳನ್ನು ಬಿಡಲಾರವು. ಹೀಗಾಗಿ, ಒಂದು ದೃಷ್ಟಿಯಲ್ಲಿ ನಾವು ಮಾಡುವ ಕ್ಲಿಕ್ಕುಗಳಿಂದಲೇ ನಮ್ಮ ಮಾನವತ್ವ ಸಾಬೀತಾಗುತ್ತದೆ. ವಿಜ್ಞಾನಿ-ತತ್ವಜ್ಞಾನಿ ರೆನೇ ದೆಕಾರ್ತೆ ಈಗ ಇದ್ದಿದ್ದರೆ ‘I click therefore I am’ ಎನ್ನುತ್ತಿದ್ದನೋ ಏನೋ!

ಇಷ್ಟಾದರೂ ಈ ಪರಿಹಾರ ಅಂತಿಮವೆಂದೇನೂ ಅಲ್ಲ. ತಂತ್ರಜ್ಞಾನ ಮುಂದುವರಿದಂತೆ ಈ ತಂತ್ರವನ್ನೂ ಎದುರಿಸುವ ಸಾಮರ್ಥ್ಯವನ್ನು ಯಂತ್ರಗಳು ಗಳಿಸಬಹುದು. ಮನುಷ್ಯ ಮತ್ತು ಯಂತ್ರಗಳನ್ನು ಬೇರ್ಪಡಿಸುವ ಗೆರೆಯು ತೆಳುವಾಗುತ್ತಿರುವ ಈ ಕಾಲದಲ್ಲಿ ಇದೊಂದು ಮುಗಿಯದ ಓಟ. ಇಲ್ಲಿ ಓಟವನ್ನು ಗೆಲ್ಲುವುದು ಸಾಧ್ಯವಿಲ್ಲದಿರಬಹುದು; ಆದರೆ ಪ್ರತಿಸ್ಪರ್ಧಿಗಿಂತ ಸದಾ ಎರಡು ಹೆಜ್ಜೆ ಮುಂದೆ ಇರಬೇಕಾದುದು ಅನಿವಾರ್ಯ.

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ವಿಜ್ಞಾನ

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೋತ್ತರ

37) ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ

1) 1817ರಲ್ಲಿ ಜರ್ಮನಿಯ ರಸಾಯನ ತಜ್ಞರಾದ ....ಒಂದೇ ರೀತಿಯ ಗುಣಗಳನ್ನು ಹೊಂದಿರುವ ಧಾತುಗಳನ್ನು ವರ್ಗೀಕರಿಸಲು ಪ್ರಯತ್ನಿಸಿದರು
ಎ) ವೋಲ್ಫ್‌ಗ್ಯಾಂಗ್ ಡೋಬರೈನರ್
ಬಿ) ಡಿಮಿಟ್ರಿ ಇವಾನೋವಿಚ್ ಮೆಂಡಲೀವ್
ಸಿ) ಗ್ರೆಗರ್ ಜೋಹಾನ್ ಮೆಂಡಲೀವ್
ಡಿ) ಮೇಲಿನ ಯಾವುದೂ ಅಲ್ಲ
ಉತ್ತರ:- (ಎ) ವೋಲ್ಫ್‌ಗ್ಯಾಂಗ್ ಡೋಬರೈನರ್

2) ‘ಧಾತುಗಳ ಗುಣಗಳು ಅವುಗಳ ಪರಮಾಣು ಸಂಖ್ಯೆಯ ಆವರ್ತನೀಯ ಪುನರಾವರ್ತನೆಗಳು’ ಇದು.............. ನಿಯಮವಾಗಿದೆ.
ಎ) ಪ್ರಾಚೀನ ಆವರ್ತಕ ನಿಯಮ
ಬಿ) ಆಧುನಿಕ ಆವರ್ತಕ ನಿಯಮ
ಸಿ) ಅಲಿಂಗ ಸಂತಾನೋತ್ಪತ್ತಿಯ ನಿಯಮ
ಡಿ) ಮೇಲಿನ ಯಾವುದೂ ಅಲ್ಲ
ಉತ್ತರ:- (ಬಿ) ಆಧುನಿಕ ಆವರ್ತಕ ನಿಯಮ

3) ಈ ಕೆಳಗಿನವುಗಳಲ್ಲಿ ಯಾವುದು ಮನುಷ್ಯರಲ್ಲಿ ಹೆಣ್ಣು ಸಂತಾನೋತ್ಪತ್ತಿ ವ್ಯೂಹದ ಭಾಗವಲ್ಲ
ಎ) ಅಂಡಾಶಯ ಬಿ) ಗರ್ಭಕೋಶ
ಸಿ) ವೀರ್ಯನಾಳ ಡಿ) ಅಂಡನಾಳ
ಉತ್ತರ:- (ಸಿ) ವೀರ್ಯನಾಳ

4) ಕೆಳಗಿನ ಯಾರು ತಳಿಶಾಸ್ತ್ರದ ಪಿತಾಮಹ?
ಎ) ಡಾರ್ವಿನ್ ಬಿ) ಮೆಂಡಲ್
ಸಿ) ಮೆಂಡಲಿವ್ ಡಿ) ಬೇಟ್ಸನ್
ಉತ್ತರ:- (ಬಿ) ಮೆಂಡಲ್

5) ಸ್ನೇಲ್‌ನ ನಿಯಮಕ್ಕೆ (Snell Law)ಸಂಬಂಧಿಸಿದ್ದು ....
ಎ) ಬೆಳಕಿನ ಪ್ರತಿಫಲನ ಬಿ) ಬೆಳಕಿನ ವಕ್ರೀಭವನ
ಸಿ) ಬೆಳಕಿನ ಪ್ರಸರಣೆ ಡಿ) ಬೆಳಕಿನ ಕೋರಿಕೆ
ಉತ್ತರ:- (ಬಿ) ಬೆಳಕಿನ ವಕ್ರೀಭವನ

ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ

38) ವಿಭವಾಂತರದ ಅಂತಾರಾಷ್ಟ್ರೀಯ ಏಕಮಾನ ಯಾವುದು? ವಿಭವಾಂತರವನ್ನು ಅಳೆಯಲು ಬಳಸುವ ಸಾಧನವನ್ನು ಹೆಸರಿಸಿ.
(ಜೂನ್ 2019)
ಉತ್ತರ:- * ವಿಭವಾಂತರದ ಅಂತಾರಾಷ್ಟ್ರೀಯ ಏಕಮಾನ :- ವೋಲ್ಟ್
* ವಿಭವಾಂತರವನ್ನು ಅಳೆಯಲು ಬಳಸುವ ಸಾಧನ:- ವೋಲ್ಟ್ ಮೀಟರ್

39) ಪ್ಲಾಸ್ಟರ್ ಆಫ್ ಪ್ಯಾರಿಸ್ ಯಾವುದಾದರೂ ಎರಡು ಉಪಯೋಗಗಳನ್ನು ಬರೆಯಿರಿ.
ಉತ್ತರ:- ಆಟಿಕೆಗಳ ತಯಾರಿಕೆ, ಅಲಂಕಾರಿಕೆ ವಸ್ತುಗಳಲ್ಲಿ ನುಣುಪಾದ ಮೇಲ್ಮೈ ನಿರ್ಮಿಸಲು, ಮುರಿದು ಮೂಳೆಗಳಿಗೆ ಸರಿಯಾದ ಸ್ಥಳದಲ್ಲಿ ಆಧಾರವಾಗಿ ಲೇಪನ ಮಾಡಲು ವೈದ್ಯರು ಬಳಸುತ್ತಾರೆ.

41) ಮೆಂಡಲಿವ್ ಅವರು ತಮ್ಮ ಆವರ್ತಕ ಕೋಷ್ಟಕದ ರಚನೆಗೆ ಉಪಯೋಗಿಸಿರುವ ಮಾನದಂಡಗಳು ಯಾವುವು?
ಉತ್ತರ :- ಧಾತುಗಳನ್ನು ಅವುಗಳ ಪರಮಾಣುರಾಶಿ, ಮೂಲಭೂತ ಗುಣಗಳು ಮತ್ತು ಒಂದೇ ರೀತಿಯ ರಾಸಾಯನಿಕ ಲಕ್ಷಣಗಳ ಆಧಾರದ ಮೇಲೆ ಧಾತುಗಳನ್ನು ಜೋಡಣೆ ಮಾಡಿದರು
* ಧಾತುಗಳ ಪರಮಾಣು ರಾಶಿಗಳು ಮತ್ತು ಅವುಗಳ ಭೌತ ಮತ್ತು ರಾಸಾಯನಿಕ ಗುಣಗಳ ನಡುವಣ ಸಂಬಂಧವನ್ನು ಪರಿಶೀಲಿಸಿದರು
* ರಾಸಾಯನಿಕ ಗುಣಗಳಲ್ಲಿ ಮೆಂಡಲೀವ್ ಅವರು ಹೈಡ್ರೋಜನ್ ಮತ್ತು ಆಕ್ಸಿಜನ್ ಧಾತುಗಳು ಉಂಟುಮಾಡುವ ಸಂಯುಕ್ತಗಳ ಮೇಲೆ ತಮ್ಮ ಗಮನವನ್ನು ಕೇಂದ್ರೀಕರಿಸಿದರು.
* ಹೈಡ್ರೋಜನ್ ಮತ್ತು ಆಕ್ಸಿಜನ್‌ಗಳು ಅತಿಹೆಚ್ಚು ಕ್ರಿಯಾಪಟುತ್ವವುಳ್ಳ ಮತ್ತು ಬಹುತೇಕ ಧಾತುಗಳೊಂದಿಗೆ ಸಂಯುಕ್ತಗಳೊಂದಿಗೆ ಸಂಯುಕ್ತಗಳನ್ನು ಉಂಟು ಮಾಡುತ್ತಿರುವುದರಿಂದ ಅವರು ಅವುಗಳನ್ನು ಆಯ್ಕೆ ಮಾಡಿಕೊಂಡು
* ಧಾತುವೊಂದು ಉಂಟು ಮಾಡುವ ಹೈಡ್ರೇಡ್‌ಗಳು ಮತ್ತು ಆಕ್ಸೈಡ್‌ಗಳ ಸೂತ್ರಗಳನ್ನು ಆಧರಿಸಿ ಧಾತುವಿನ ವರ್ಗೀಕರಣದಲ್ಲಿ ಇದನ್ನು ಒಂದು ಮೂಲಭೂತ ಗುಣವೆಂದು ಪರಿಗಣಿಸಿದರು.

42) ಮಿಶ್ರ ಲೋಹದ ಬಗ್ಗೆ ಬರೆಯಿರಿ ಪುಟ– 57
ಉತ್ತರ:- ಮಿಶ್ರಲೋಹವು ಎರಡು ಅಥವಾ ಹೆಚ್ಚು ಲೋಹ ಅಥವಾ ಲೋಹ–ಅಲೋಹಗಳ ಸಮರೂಪದ ಮಿಶ್ರಣವಾಗಿದೆ. ಇದನ್ನು ಮೊದಲು ಪ್ರಾಥಮಿಕ ಲೋಹವನ್ನು ಕರಗಿಸಿ ನಂತರ ನಿರ್ದಿಷ್ಟ ಅನುಪಾತದಲ್ಲಿ ಬೇರೆ ಧಾತುಗಳನ್ನು ವಿಲೀನಗೊಳಿಸಿ ತಯಾರಿಸಲಾಗುತ್ತದೆ.

ಮಿಶ್ರ ಲೋಹಗೊಳಿಸುವಿಕೆಯು ಲೋಹದ ಗುಣಗಳನ್ನು ಹೆಚ್ಚಿಸಬಲ್ಲ ಒಂದು ಉತ್ತಮ ವಿಧಾನವಾಗಿದೆ. ಇದರಿಂದ ನಮಗೆ ಬೇಕಾದ ಗುಣಗಳನ್ನು ಪಡೆಯಬಹುದು. ಉದಾಹರಣೆಗೆ, ಕಬ್ಬಿಣವು ಅತ್ಯಂತ ವ್ಯಾಪಕವಾಗಿ ಬಳಸುವ ಲೋಹ. ಆದರೆ ಇದನ್ನು ಶುದ್ಧ ರೂಪದಲ್ಲಿ ಎಂದಿಗೂ ಉಪಯೋಗಿಸಲು ಸಾಧ್ಯವಿಲ್ಲ. ಕಾರಣ ಶುದ್ಧ ಕಬ್ಬಿಣವು ತುಂಬಾ ಮೃದುವಾಗಿರುತ್ತದೆ ಮತ್ತು ಉಷ್ಣತೆ ನೀಡಿದಾಗ ಸುಲಭವಾಗಿ ಹಿಗ್ಗುತ್ತದೆ. ಆದರೆ ಇದಕ್ಕೆ ಸ್ವಲ್ಪ ಕಾರ್ಬನ್ ಅನ್ನು (0.05%) ಸೇರಿಸಿದರೆ ಗಟ್ಟಿ ಮತ್ತು ಬಲಯುತವಾಗುತ್ತದೆ. ಕಬ್ಬಿಣಕ್ಕೆ ನಿಕ್ಕಲ್ ಮತ್ತು ಕ್ರೋಮಿಯಂ ಅನ್ನು ಸೇರಿಸಿದರೆ ಕಲೆರಹಿತ ಉಕ್ಕನ್ನು ಪಡೆಯಬಹುದು. ಇದು ಗಟ್ಟಿಯಾಗಿರುತ್ತದೆ ಮತ್ತು ತುಕ್ಕು ಹಿಡಿಯುವುದಿಲ್ಲ. ಹಾಗೆಯೇ ಕಬ್ಬಿಣವನ್ನು ಬೇರೆ ವಸ್ತುಗಳ ಜೊತೆ ಮಿಶ್ರಗೊಳಿಸಿದರೆ ಅದರ ಗುಣದಲ್ಲಿ ಬದಲಾವಣೆಯಾಗುತ್ತದೆ. ವಾಸ್ತವವಾಗಿ, ಕೆಲವು ವಸ್ತುಗಳ ಮಿಶ್ರಣದಿಂದ ಯಾವುದೇ ಲೋಹದ ಗುಣಗಳನ್ನು ಬದಲಾಯಿಸಬಹುದು. ಸೇರಿಸುವ ವಸ್ತುವು ಲೋಹ ಅಥವಾ ಅಲೋಹವಾಗಿರಬಹುದು.

43) ಅಂಡವು ಫಲಿತಗೊಳ್ಳದಿದ್ದರೆ ಏನಾಗುತ್ತದೆ?
ಉತ್ತರ:- ಒಂದು ವೇಳೆ ಅಂಡವು ಫಲಿತಗೊಳ್ಳದಿದ್ದರೆ, ಅದು ಒಂದು ದಿನದವರೆಗೆ ಬದುಕಿರುತ್ತದೆ. ಅಂಡಾಶಯವು ಪ್ರತಿ ತಿಂಗಳೂ ಒಂದು ಅಂಡವನ್ನು ಬಿಡುಗಡೆಗೊಳಿಸುವುದರಿಂದ ಗರ್ಭಕೋಶವೂ ಫಲಿತ ಅಂಡವನ್ನು ಬರಮಾಡಿಕೊಳ್ಳಲು ಪ್ರತಿ ತಿಂಗಳು ತನ್ನನ್ನು ತಾನೇ ಸಜ್ಜುಗೊಳಿಸಿಕೊಳ್ಳುತ್ತದೆ. ಹೀಗೆ ಅದರ ಒಳಸ್ತರಿಯು ದಪ್ಪವಾಗಿ ಸ್ಪಂಜಿನಂತಾಗುತ್ತದೆ. ಒಂದು ವೇಳೆ ಅಂಡವು ಫಲಿತಗೊಂಡರೆ ಅದರ ಪೋಷಣೆಗಾಗಿ ಇದು ಅಗತ್ಯವಾಗುತ್ತದೆ. ಅಂಡವು ಫಲಿತಗೊಳ್ಳದಿದ್ದರೆ ಈ ಒಳಸ್ತರಿಯ ಅಗತ್ಯವಿರುವುದಿಲ್ಲ. ಆದ್ದರಿಂದ ಈ ಒಳಸ್ತರಿಯು ನಿಧಾನವಾಗಿ ಬಿರುಕು ಬಿಟ್ಟು ರಕ್ತ ಮತ್ತು ಲೋಳೆಯ ರೂಪದಲ್ಲಿ ಯೋನಿಯಿಂದ ಹೊರಬರುತ್ತದೆ. ಈ ಚಕ್ರವು ಸರಿ ಸುಮಾರು ಪ್ರತಿ ತಿಂಗಳೂ ನಡೆಯುತ್ತದೆ ಮತ್ತು ಇದನ್ನು ಋತುಚಕ್ರ (menstruation) ಎನ್ನುವರು. ಸಾಮಾನ್ಯವಾಗಿ ಇದು ಎರಡರಿಂದ ಎಂಟು ದಿನಗಳವರೆಗೆ ಮುಂದುವರೆಯುತ್ತದೆ.

(ಮುಂದುವರಿಯುವುದು..........)

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

II PUC PHYSICS

PHYSICS :

REVISION : MODEL QUESTIONS

I. Answer the following:

16. What is magnetic susceptibility? For which material is it low and positive?

Ans:- Magnetic susceptibility is defined as the ratio of magnetization and the magnetic intensity i.e., $\chi = \frac{M}{H}$

It is a measure of how a magnetic material responds to an external magnetic field. The magnetic susceptibility is low and positive for paramagnetic materials like: Sodium chloride, silicon, bismuth etc.

17. Mention any two advantages of eddy currents in practical applications.

Ans:- Eddy currents are used in -
1) Magnetic braking in trains
2) electromagnetic damping
3) Induction furnace
4) Electric power meters

18. Who predicted the existence of electromagnetic waves? Give the wavelength range of electromagnetic spectrum.

Ans:-Maxwell predicted the existence of electromagnetic waves.

The wavelength range of electromagnetic spectrum is of the order of 10^{-4} m - 10^{7} m

14. What are meant by ‘electric dipole’ and ‘electric dipole moment’?

Ans:- A pair of two equal and opposite charges separated by certain distance is called an electric dipole.

Electric dipole moment of an electric dipole is defined as the product of the magnitude of either charge of the electric dipole and the dipole length.

15. Explain ‘Malu’s law’ for polaroids

Ans:- Malus law is given by $I = I_o \cos^2\theta$

Where I_0 is the intensity of polarized light coming out of Ist Polaroid and incidenting on II[nd] Polaroid.

‘θ’ is the angle between the pass-axis of the IInd Polaroid makes with that of Ist Polaroid.

16 Two capacitors of capacitance 3 μF and 6μF are connected in series. Calculate their effective capacitance

Ans:- To calculate the effective capacitance of two capacitors of capacitance 3 μF and 6μF are connected in series.

We know that the two capacitors C_1 and C_2 are connected in series then effective capacitance is given by –

$$\frac{1}{C} = \frac{1}{C_1} + \frac{1}{C_2} \Rightarrow C = \frac{C_1C_2}{C_1 + C_2}$$

Given, $C_1 = 3\ \mu F$ and $C_2 = 6\ \mu F$

$$\therefore C = \frac{C_1C_2}{C_1 + C_2} = \frac{3 \times 2}{3 + 2} = \frac{6}{5} = 1.2\mu\ F$$

17. Write any two types of electron emission.


Ans:- Depending upon the sources of external energy, electron emission is classified into four groups. They are - 1) Thermionic emission 2) Photoelectric emission 3) Field emission 4) Secondary emission.

18. Why there is need for modulation?

Ans:- Need for modulation is -
1) To reduce the size of the antenna/aerial.
2) To reduce the effective power radiated by antenna.
3) To avoid mixing up of signals from different transmitters.
4) To propagate low frequency signals cannot be propagated to long distances.

19. Derive the expression for potential energy of a system of two charges in the absence of the external electric field.

Ans:-



Consider the charge q_1 and q_2 are initially at infinity. First, the charge q_1 is brought from infinity to the point A and no work is done for this. This is because there is no electric field to oppose this charge. Consider another point B at a distance ‘r’ from A. Electric potential at B due to q_1 is given by

$$V_1 = \frac{1}{4\pi\varepsilon_0}\frac{q_1}{r}$$

Next the charge q_2 is brought from infinity to the point B. When the charge q_2 is moved, the electric field due to q_1 opposes it. Hence work has to be done. Work done in bringing the charge q_2 from infinity to the point B is given by –

$$w = V_1 \times q_2 \left[\therefore V = \frac{w}{q_0} \Rightarrow w = q_0 V\right]$$

$$w = \frac{1}{4\pi\varepsilon_0}\frac{q_1}{r} \times q_2$$

This work done is stored in the charges as potential energy and is given by -

$$PE = \frac{1}{4\pi\varepsilon_0}\frac{q_1 q_2}{r}$$

20. Write three uses of cyclotron.

Ans:- The three uses of cyclotron are -
1) To accelerate the charged particles to high energies.
2) It is used to bombard the atomic nuclei with high energy particles to study the nuclear reactions.
3) It is used to synthesize new materials.
4) It is used to produce radioactive material for medical diagnosis and treatment.

(Contd......)

ಸೋಮನಾಥ್‌ಗೆ 'ವಿಜ್ಞಾತಂ' ಪ್ರಶಸ್ತಿ

ಪ್ರಜಾವಾಣಿ ವಾರ್ತೆ



ಎಸ್‌ ಸೋಮನಾಥ್

ನಾಗಮಂಗಲ (ಮಂಡ್ಯ ಜಿಲ್ಲೆ): ತಾಲ್ಲೂಕಿನ ಆದಿಚುಂಚನಗಿರಿ ಮಠದಿಂದ ಕೊಡಮಾಡುವ 2024ನೇ ಸಾಲಿನ 'ವಿಜ್ಞಾತಂ' ರಾಷ್ಟ್ರೀಯ ಪ್ರಶಸ್ತಿಗೆ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ (ಇಸ್ರೊ) ಅಧ್ಯಕ್ಷ ಎಸ್‌.ಸೋಮನಾಥ್ ಆಯ್ಕೆಯಾಗಿದ್ದಾರೆ.

ಪ್ರಶಸ್ತಿಯು ₹5 ಲಕ್ಷ ನಗದು ಹಾಗೂ ಸ್ಮರಣಿಕೆ ಒಳಗೊಂಡಿದೆ. ಫೆ.20ರಂದು ನಡೆಯುವ ಸಮಾರಂಭದಲ್ಲಿ ಮಠದ ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿ ಪ್ರಶಸ್ತಿ ಪ್ರದಾನ ಮಾಡುವರು.

ಫೆ.19 ಹಾಗೂ 20ರಂದು ಜ್ಞಾನ-ವಿಜ್ಞಾನ-ತಂತ್ರಜ್ಞಾನ ಮೇಳ ಹಾಗೂ ನಿರ್ಮಲಾನಂದನಾಥ ಸ್ವಾಮೀಜಿ ಅವರ 11ನೇ ವಾರ್ಷಿಕ ಪಟ್ಟಾಭಿಷೇಕ ಮಹೋತ್ಸವ ನಡೆಯಲಿದೆ. ಫೆ.19ರಂದು ವಸ್ತುಪ್ರದರ್ಶನ ಹಾಗೂ ವಿಶೇಷ ಉಪನ್ಯಾಸ ಆಯೋಜಿಸಲಾಗಿದ್ದು, ಹೃದ್ರೋಗ ತಜ್ಞ ಡಾ.ಸಿ.ಎನ್‌.ಮಂಜುನಾಥ್, ಐಐಎಸ್‌ಸಿಯ ಕೆ.ಜೆ.ವಿನೋಯ್ ಉದ್ಘಾಟಿಸುವರು. ಮುಖ್ಯ ಅತಿಥಿಗಳಾಗಿ ಉನ್ನತ ಶಿಕ್ಷಣ ಸಚಿವ ಎಂ.ಸಿ.ಸುಧಾಕರ್, ಜೆಡಿಎಸ್ ನಾಯಕರಾದ ಸಿ.ಎಸ್‌.ಪುಟ್ಟರಾಜು, ಕೆ.ಸುರೇಶ್‌ಗೌಡ ಪಾಲ್ಗೊಳ್ಳುವರು.

ಫೆ.20ರಂದು ಪಟ್ಟಾಭಿಷೇಕ ಮಹೋತ್ಸವ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದ್ದು, ಹರಿಯಾಣ ರೋಹ್ತಕ್‌ನ ಬಾಬಾ ಮಸ್ತ್‌ನಾಥ ವಿಶ್ವವಿದ್ಯಾಲಯದ ಕುಲಪತಿ ಹಾಗೂ ರಾಜಸ್ಥಾನದ ತಿಜಾರ ಕ್ಷೇತ್ರದ ಶಾಸಕ ಮಹಾಂತ ಬಾಲಕನಾಥ ಯೋಗಿ, ಗುಜರಾತ್, ರಾಜ್‌ಕೋಟ್‌ನ ಆರ್ಶ್ ವಿದ್ಯಾಮಂದಿರದ ಸ್ವಾಮಿ ಪರಮಾತ್ಮಾನಂದ ಸರಸ್ವತಿ ಸಾನ್ನಿಧ್ಯ ವಹಿಸಲಿದ್ದಾರೆ.

ಕನ್ನಡ ವಿ.ವಿ: ಮತ್ತೆ ವಿದ್ಯುತ್ ಕಡಿತ?

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): 'ಹಂಪಿ ಕನ್ನಡ ವಿಶ್ವವಿದ್ಯಾಲಯದ ₹1.05 ಕೋಟಿ ವಿದ್ಯುತ್ ಬಿಲ್ ಬಾಕಿಯಿದೆ. ತಕ್ಷಣ ಪಾವತಿಸದಿದ್ದಲ್ಲಿ ವಿದ್ಯುತ್ ಪೂರೈಕೆ ಕಡಿತ ಮಾಡಲಾಗುವುದು' ಎಂದು ಜೆಸ್ಕಾಂ ಮಂಗಳವಾರ ನೋಟಿಸ್ ನೀಡಿದೆ.

'ಡಿಸೆಂಬರ್ ಕೊನೆ ವಾರದಲ್ಲೂ ಜೆಸ್ಕಾಂ ಇಂಥದ್ದೇ ನೋಟಿಸ್ ನೀಡಿತ್ತು. ಕುಲಸಚಿವರ ಕೈಗೆ ನೋಟಿಸ್ ತಲುಪಿದ ಮಾರನೇ ದಿನವೇ (ಡಿ.29) ಇಡೀ ದಿನ ವಿಶ್ವವಿದ್ಯಾಲಯ ಆವರಣದಲ್ಲಿ ವಿದ್ಯುತ್ ಪೂರೈಕೆ ಕಡಿತಗೊಳಿಸಲಾಗಿತ್ತು. ಫೆಬ್ರುವರಿಯಲ್ಲಿ ಅನುದಾನ ಬರುವ ನಿರೀಕ್ಷೆಯಿದ್ದು, ಘಟಿಕೋತ್ಸವವೂ ಇದೆ ಎಂದು ಹೇಳಿದ್ದಕ್ಕೆ ವಿದ್ಯುತ್ ಸಂಪರ್ಕ ಕಲ್ಪಿಸಿದ್ದರು. ಸರ್ಕಾರದಿಂದ ಇನ್ನೂ ಅನುದಾನ ಲಭ್ಯವಾಗಿಲ್ಲ. ಸರ್ಕಾರ ಮತ್ತು ಜೆಸ್ಕಾಂಗೆ ಮನವರಿಕೆ ಮಾಡಲು ಪ್ರಯತ್ನಿಸುತ್ತೇವೆ' ಎಂದು ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಡಿ.ವಿ.ಪರಮಶಿವಮೂರ್ತಿ 'ಪ್ರಜಾವಾಣಿ'ಗೆ ತಿಳಿಸಿದರು.

'ಕಳೆದ ವರ್ಷದ ಫೆಬ್ರುವರಿಯಲ್ಲೂ ₹1.05 ಕೋಟಿ ವಿದ್ಯುತ್ ಬಿಲ್ ಬಾಕಿ ಇತ್ತು. ಆಗಲೂ ವಿದ್ಯುತ್ ಕಡಿತವಾಗಿತ್ತು. ಆಗ ₹30 ಲಕ್ಷ ಹೊಂದಿಸಿ ಸ್ವಲ್ಪ ಬಿಲ್ ಪಾವತಿಸಲಾಗಿತ್ತು. ಸದ್ಯ ಪ್ರತಿ ತಿಂಗಳು ₹3.50 ಲಕ್ಷ ವಿದ್ಯುತ್ ಬಿಲ್ ಬರುತ್ತಿದ್ದು, ಬಾಕಿ ಮೊತ್ತ ಹೆಚ್ಚುತ್ತಲೇ ಇದೆ. 20 ದಿನದ ಹಿಂದೆ ವಿ.ವಿಗೆ ಬಂದಿದ್ದ ಜಿಲ್ಲಾ ಉಸ್ತುವಾರಿ ಸಚಿವ ಜಮೀರ್ ಅಹ್ಮದ್ ಖಾನ್ ಅವರು ವಾರದೊಳಗೆ ₹4 ಕೋಟಿ ಅನುದಾನ ಕೊಡಿಸುವುದಾಗಿ ಹೇಳಿದ್ದರು' ಎಂದರು.

ಚಪ್ಪಲಿಯಿಂದ ಯುವತಿಗೆ ಥಳಿತ

ವಿಜಯಪುರ: ವ್ಯಕ್ತಿಯೊಬ್ಬ ಯುವತಿಗೆ ಚಪ್ಪಲಿಯಿಂದ ಹೊಡೆದ ಘಟನೆ ನಾಗಠಾಣ ಗ್ರಾಮದಲ್ಲಿ ಸೋಮವಾರ ನಡೆದಿದೆ.

'ನಾಗಠಾಣದ ತರಬೇತಿ ಕೇಂದ್ರದ ಕಚೇರಿಯ ಉದ್ಯೋಗಿಯಾದ ಮುಸ್ಲಿಂ ಯುವತಿಗೆ ಶ್ರೀಶೈಲ ಮಸಳಿ ಎಂಬ ಆರೋಪಿ ಚುಡಾಯಿಸಿದ. ಸಿಟ್ಟಿಗೆದ್ದು ಆಕೆ ಚಪ್ಪಲಿ ತೋರಿಸಿದ್ದರಿಂದ ಆತ ಕುಪಿತಗೊಂಡ. ಆಕೆಯನ್ನು ಕಚೇರಿಯ ಹೊರಗಡೆ ಎಳೆದುತಂದು ಚಪ್ಪಲಿಯಿಂದ ಹೊಡೆದು, ಕಾಲಿನಿಂದ ಒದ್ದ. ನಂತರ ಸಾರ್ವಜನಿಕರು ಮಧ್ಯಪ್ರವೇಶಿಸಿ ಪರಿಸ್ಥಿತಿ ನಿಭಾಯಿಸಿದರು. ಆರೋಪಿ ಪರಾರಿಯಾಗಿದ್ದು, ಪತ್ತೆಗೆ ಕಾರ್ಯಾಚರಣೆ ನಡೆದಿದೆ' ಎಂದು ವಿಜಯಪುರ ಗ್ರಾಮೀಣ ಠಾಣೆಯ ಪೊಲೀಸರು ತಿಳಿಸಿದ್ದಾರೆ.

ಕಾವೇರಿ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯಪಾಲಕ ಅಭಿಯಂತರರವರ ಕಛೇರಿ, ಮೇಕೆದಾಟು ಯೋಜನಾ ವಿಭಾಗ, ಹಾರೋಬೆಲೆ – 562 126 ಇ–ಮೇಲ್ : eemekedatu@gmail.com

ಟೆಂಡರ್ ಪ್ರಕಟಣೆ ಸಂಖ್ಯೆ : 01/2023–24 ದಿನಾಂಕ : 12–02–2024

ಟೆಂಡರ್ ಪ್ರಕಟಣೆ

ಕಾವೇರಿ ನೀರಾವರಿ ನಿಗಮ ನಿಯಮಿತದ ಅಡಿಯಲ್ಲಿ ಅರ್ಹ ಗುತ್ತಿಗೆದಾರರಿಂದ https://kppp.karnataka.gov.in ಮುಖಾಂತರ 4701 ಲೆಕ್ಕ ಶೀರ್ಷಿಕೆಯಡಿ ಮರಗಳ ಎಣಿಕೆಯ ಕಾಮಗಾರಿಗಳ ಟೆಂಡರ್ ಆಹ್ವಾನಿಸಲಾಗಿರುತ್ತದೆ.

ಕಾಮಗಾರಿಗಳ ಟೆಂಡರ್ ಸಲ್ಲಿಸಲು ಕಡೆಯ ದಿನಾಂಕ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ, ಆರ್ಥಿಕ ಬಿಡ್ ತೆರೆಯುವ ದಿನಾಂಕ, ಪೂರ್ವಭಾವಿ ಸಭೆ ನಡೆಯುವ ದಿನಾಂಕ ಹಾಗೂ ಇ.ಎಂ.ಡಿ. ಮುಂತಾದ ಇತರೆ ಮಾಹಿತಿಗಳನ್ನು https://kppp.karnataka.gov.in ಯಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿರುತ್ತದೆ.

ಸಹಿ/– ಕಾರ್ಯಪಾಲಕ ಅಭಿಯಂತರರು,
ಮೇಕೆದಾಟು ಯೋಜನಾ ವಿಭಾಗ, ಹಾರೋಬೆಲೆ,
ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ.

ಡಿಐಪಿಆರ್/ರಾಮನಗರ/455/ಮಣಿಪಾಲ್/2023–24

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಮುಖ್ಯ ಅಭಿಯಂತರರ ಕಚೇರಿ (ತ್ಯಾಜ್ಯ ನೀರು ನಿರ್ವಹಣೆ) ಪಶ್ಚಿಮ
6ನೇ ಮಹಡಿ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು–560 009.

ಸಂಖ್ಯೆ:ಬೆಂಜಮಂ/ಮುಅ(ತ್ಯಾನೀನಿ)ಪಶ್ಚಿಮ/ಅಮುಅ(ತ್ಯಾನೀನಿ–ಯೋ–ಪಶ್ಚಿಮ)/ಯೋ/ಉಮುಅ/(ತ್ಯಾನೀನಿ–ಪೂ&ಪ)/ತಾಂಅ–2/874/2023–2024 ದಿನಾಂಕ: 13.02.2024

ಟೆಂಡರ್‌ಗಾಗಿ ಆಹ್ವಾನ (ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಬೆಂಗಳೂರು ಜಲಮಂಡಳಿಯು ಅರ್ಹ ಗುತ್ತಿಗೆದಾರರಿಂದ ಟರ್ನ್ ಕೀ ಗುತ್ತಿಗೆ ಆಧಾರದಲ್ಲಿ 2 ವರ್ಷ ಕಾಮಗಾರಿ ಗುತ್ತಿಗೆ ಕಾರ್ಯಾಚರಣೆ ಮತ್ತು ನಿರ್ವಹಣೆ ಒಳಗೊಂಡಂತೆ (5+2) ಏಳು ವರ್ಷಗಳ ಅವಧಿಗೆ ಕಾರ್ಯಾಚರಣೆ ಮತ್ತು ನಿರ್ವಹಣೆಯೊಂದಿಗೆ ರಾಜಾ ಕೆನಾಲ್ (ಫೇಸ್–1)ಲ್ಲಿ ಹಾಲಿ ಇರುವ 40ಎಂಎಲ್‌ಡಿ ಸಾಮರ್ಥ್ಯದ ಎಸ್‌ಟಿಪಿಯನ್ನು ಬಿಎನ್‌ಆರ್ ರಿಮೂವೆಬಲ್ ಮತ್ತು ವಿಸ್ತರಿಸಲಾದ ಏರಿಯೇಷನ್ ತಂತ್ರಜ್ಞಾನದೊಂದಿಗೆ ವಿನ್ಯಾಸ ಮತ್ತು ಉನ್ನತೀಕರಣ ಕಾಮಗಾರಿಗಾಗಿ ದ್ವಿ–ಲಕೋಟೆ ಪದ್ಧತಿಯಲ್ಲಿ ಟೆಂಡರ್ ಆಹ್ವಾನಿಸಲಾಗಿದೆ.

ಟೆಂಡರ್‌ಗಿಟ್ಟ ಮೊತ್ತ ರೂ.5735.45/– ಲಕ್ಷಗಳು, ಇಎಂಡಿ: ರೂ.67.68/– ಲಕ್ಷಗಳು ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ **29.02.2024 ರಂದು ಮಧ್ಯಾಹ್ನ 03.00 ಗಂಟೆಯವರೆಗೆ** ಮತ್ತು ತಾಂತ್ರಿಕ ಟೆಂಡರ್‌ಗಳನ್ನು ತೆರೆಯುವ **ದಿನಾಂಕ 01.03.2024 ಮಧ್ಯಾಹ್ನ 03:30 ಗಂಟೆಗೆ.** ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತಾದ ಮಾಹಿತಿಯನ್ನು ವೆಬ್‌ಸೈಟ್ **https://kppp.karnataka.gov.in** ಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಕೆಳಸಹಿದಾರರ ಕಚೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.

ಸಹಿ/–
ಮುಖ್ಯ ಅಭಿಯಂತರರು (ತ್ಯಾನೀನಿ–ಪಶ್ಚಿಮ)

DIPR/CP/KAVITA/3567/2023-24

ನಗರಸಭಾ ಕಾರ್ಯಾಲಯ, ಮಂಡ್ಯ

CITY MUNICIPAL COUNCIL MANDYA-571401
ದೂ.ಸಂ:08232–226749 ಫ್ಯಾಕ್ಸ್:–08232–221617
ಟಾಲ್ ಫ್ರೀ ನಂ:1800–4253795
Website: www.mandyacity.mrc.gov.in
Email: itstaff_ulb_mandya@yahoo.co.in

ನಂ:ನಸಮಂ/ಆಶಾ/ಸ.ಕಾ.ಅ(ಪ)/14 & 15ನೇ ಹ ಆ.ಶಿ.ವ್ರೀ ಬಾ/ಸಿ.ಆರ್.31/2023–24 ದಿನಾಂಕ:09–02–2024

ಮರು ಟೆಂಡರ್ ಪ್ರಕಟಣೆ (2ನೇ ಕರೆ)

(ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಮೂಲಕ ಮಾತ್ರ)

ಮಂಡ್ಯ ನಗರಸಭೆಯ ಘನತ್ಯಾಜ್ಯ ವಸ್ತು ವಿಲೇವಾರಿಗಾಗಿ 14ನೇ ಹಣಕಾಸು ಆಯೋಗದ ಅನುದಾನದಲ್ಲಿ ಮರು ಹೊಂದಾಣಿಕೆ ಮಾಡಿ ಬಿಡುಗಡೆ ಮಾಡಿರುವ ಅನುದಾದಲ್ಲಿ ಅಂದಾಜು ಮೊತ್ತ ರೂ. 11,00,000–00 ಗಳಿಗೆ 10 ಹೆಚ್ ಪಿ ಸಾಮರ್ಥ್ಯದ ಶ್ರೆಡ್ಡರ್ ಯಂತ್ರವನ್ನು ಖರೀದಿಸಲು ಟೆಂಡರ್‌ನ್ನು (ಇಂಡೆಂಟ್ ನಂಬರ್: DMA/2023-24/IND0199/CALL-2) ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದ್ದು, ನೊಂದಾಯಿತ ಅರ್ಹ ಸರಬರಾಜು/ಏಜೆನ್ಸಿದಾರರು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿದೆ. ಹೆಚ್ಚಿನ ವಿವರಗಳು/ಷರತ್ತುಗಳಿಗಾಗಿ ಕಛೇರಿಯ ವೆಬ್‌ಸೈಟ್ (www.mandyacity.mrc.gov.in) ವಿಳಾಸದಲ್ಲಿ ಹಾಗೂ ಕಛೇರಿಯ ದೂರವಾಣಿ ಸಂಖ್ಯೆ:08232–226749ಗೆ ಕರೆಮಾಡಿ ಅಥವಾ ಕಛೇರಿಯ ಆರೋಗ್ಯ ಶಾಖೆಯಿಂದ ಮಾಹಿತಿಯನ್ನು ಪಡೆಯಬಹುದಾಗಿದೆ. ಟೆಂಡರ್ ಬಗ್ಗೆ ಮಾಹಿತಿಯನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ವೆಬ್‌ಸೈಟ್ **https://kppp.karnataka.gov.in** ನ್ನು ನೋಡಿ **ದಿನಾಂಕ 27.02.2024 ಸಂಜೆ 5:00 ಗಂಟೆಯೊಳಗಾಗಿ** ಟೆಂಡರ್‌ನ್ನು ಸದರಿ ಪೋರ್ಟಲ್ ಮುಖಾಂತರ ಅಪ್‌ಲೋಡ್ ಮಾಡಬಹುದಾಗಿರುತ್ತದೆ. ಟೆಂಡರ್‌ಗಳನ್ನು **ದಿನಾಂಕ: 28.02.2024 ಸಂಜೆ 5:00 ಗಂಟೆಗೆ** ತೆರೆಯಲಾಗುವುದು.

ಸಹಿ/–ಪೌರಾಯುಕ್ತರು. ನಗರಸಭೆ, ಮಂಡ್ಯ

ವಾಸಾಸಂಇ/ಸನಿ–ಮಂ/ಕೆಎಸ್‌ಎಂಸಿ&ಎ/525/2023–24

ಲೋಕೋಪಯೋಗಿ ಇಲಾಖೆ

ಕಾರ್ಯಪಾಲಕ ಇಂಜಿನಿಯರ್,
ಲೋಕೋಪಯೋಗಿ ಇಲಾಖೆ, ಬೆಂಗಳೂರು ವಿಭಾಗ,
2ನೇ ಮಹಡಿ, ಲೋ.ಇ.ಪೂರಕ ಕಟ್ಟಡ, ಕೆ.ಆರ್.ವೃತ್ತ, ಬೆಂಗಳೂರು–01
ದೂರವಾಣಿ: 080–22133370, e-Mail: eepwdbngdn@yahoo.com
E-Portal: https://kppp.karnataka.gov.in/#/portal/portal-home
ಸಂಖ್ಯೆ: 20/2023–24 ದಿನಾಂಕ: 12.02.2024

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಬೆಂಗಳೂರು ವಿಭಾಗ, ಬೆಂಗಳೂರು ರವರು ಕರ್ನಾಟಕ ರಾಜ್ಯಪಾಲರ ಪರವಾಗಿ ಕೆ.ಟಿ.ಪಿ.ಪಿ. 2000 ರನ್ವಯ ಮತ್ತು ಸ್ಟಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನಿಯಮದಂತೆ ಕರ್ನಾಟಕ ಸರ್ಕಾರದ ಕೆ.ಪಿ.ಪಿ. ಪೋರ್ಟಲ್ ಮೂಲಕ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಣಿ ಮಾಡಿದ ಅರ್ಹ ಟೆಂಡರ್‌ದಾರರಿಂದ ಒಂದು ಲಕೋಟೆ ಪದ್ಧತಿಯಲ್ಲಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಬೆಂಗಳೂರು ವಿಭಾಗ ವ್ಯಾಪ್ತಿಯಲ್ಲಿನ **ನಂ.2 ಉತ್ತರ ಉಪವಿಭಾಗಕ್ಕೆ** ಸಂಬಂಧಿಸಿದಂತೆ 03 ಸಂಖ್ಯೆಯ (ರೂ. 20.00 **ಲಕ್ಷಗಳಿಂದ** ರೂ. 50.00 ಲಕ್ಷಗಳು) ಕಾಮಗಾರಿಗಳಿಗೆ ಟೆಂಡರ್ ಪ್ರಕಟಣೆಯನ್ನು ಹೊರಡಿಸಿದ್ದು, ಕಾಮಗಾರಿಯ ವಿವರಗಳನ್ನು ಮೇಲ್ಕಂಡ ಕಛೇರಿಯ ವಿಳಾಸದಲ್ಲಿ ಪಡೆಯಬಹುದಾಗಿರುತ್ತದೆ. ಟೆಂಡರ್ ಪ್ರಕ್ರಿಯೆಗೆ ಈ ಕೆಳಕಂಡಂತೆ ದಿನಾಂಕಗಳನ್ನು ನಿಗದಿಪಡಿಸಲಾಗಿದೆ.

ಕಾಮಗಾರಿಗಳ ಇ.ಎಂ.ಡಿ ಮೊತ್ತವನ್ನು ಮತ್ತು ಟೆಂಡರ್ ಪ್ರೋಸಿಸಿಂಗ್ ಶುಲ್ಕವನ್ನು ಇ–ಪೋರ್ಟಲ್‌ನಲ್ಲಿ ಸೂಚಿಸಲಾಗಿದೆ.

(1) ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಸರ್ಕಾರದ ಕೆ.ಪಿ.ಪಿ ಪೋರ್ಟಲ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಲು ನಿಗದಿಪಡಿಸಿರುವ ದಿನಾಂಕ: **13.02.2024** ರಿಂದ (2) ಟೆಂಡರ್‌ಗಳನ್ನು ಆನ್‌ಲೈನ್ ನಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕ: **20.02.2024 ಸಂಜೆ 4.00** ಗಂಟೆಯವರೆಗೆ. (3) ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ತೆರೆಯುವ ದಿನಾಂಕ **21.02.2024** ಸಂಜೆ **4.30** ಗಂಟೆಗೆ ಅಥವಾ ಮುಂದೆ ತಿಳಿಸಬಹುದಾದ ದಿನಾಂಕ ಮತ್ತು ಸಮಯ. **ಹೆಚ್ಚಿನ ವಿವರಗಳಿಗಾಗಿ ಈ ಕಛೇರಿಯನ್ನು ಸಂಪರ್ಕಿಸುವುದು.**

ಸಹಿ/– ಕಾರ್ಯಪಾಲಕ ಅಭಿಯಂತರರು

ವಾಸಾಸಂಇ/ಉನಿ–ಸಿ.ಪಿ/3547/ಕೆಎಸ್‌ಎಂಸಿಎ/2023–24

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ಕಾರ್ಯಪಾಲಕ ಅಭಿಯಂತರರು, ಸಣ್ಣ ನೀರಾವರಿ ವಿಭಾಗ, ಹಾಸನ

ಐ.ಎಫ್.ಟಿ.ಸಂಖ್ಯೆ: 09/2023–24
ದಿನಾಂಕ: 12.02.2024

ಹಾಸನ ಸಣ್ಣ ನೀರಾವರಿ ವಿಭಾಗ ವ್ಯಾಪ್ತಿಯ ಕಾಮಗಾರಿಗೆ ಕೆಡಬ್ಲ್ಯೂ–1,2 ಮತ್ತು 3 ರ ಪ್ರಕಾರ ಅರ್ಹ ಗುತ್ತಿಗೆದಾರರಿಂದ ಐಟಂ ರೇಟ್ ದರದಲ್ಲಿ ಕೆ.ಪಿ.ಪಿ.ಪಿ–ಪ್ರಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ನಲ್ಲಿ ಹಾಸನ ಹಾಗೂ ಚಿಕ್ಕಮಗಳೂರು ಜಿಲ್ಲೆಯ ಕಾಮಗಾರಿಗೆ ಎರಡು ಲಕೋಟೆ ಪದ್ಧತಿಯಲ್ಲಿ ಅಲ್ಪಾವಧಿ ಟೆಂಡರ್ ಕರೆಯಲಾಗಿದೆ. ಅಂದಾಜು ಕನಿಷ್ಠ ಮೊತ್ತ ರೂ.9.00 ಲಕ್ಷಗಳು ಮತ್ತು ಗರಿಷ್ಠ ಮೊತ್ತ ರೂ.100.00 ಲಕ್ಷಗಳು. ಟೆಂಡರ್ ಸಲ್ಲಿಸುವ ಕಡೆಯ ದಿ: 19–02–2024 ಸಮಯ 17.00 ಗಂಟೆಯವರೆಗೆ. ಹೆಚ್ಚಿನ ವಿವರಗಳಿಗಾಗಿ ಇ–ಪ್ರಾಕ್ ಪೋರ್ಟಲ್ ಹಾಗೂ ಕಛೇರಿ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದು.

ಸಹಿ/–ಕಾರ್ಯಪಾಲಕ ಅಭಿಯಂತರರು, ಸಣ್ಣ ನೀರಾವರಿ ವಿಭಾಗ, ಹಾಸನ.

ವಾಸಾಸಂಇ/ಹಿಸನಿ/ಹಾಸನ/772/ಕೆಎಸ್‌ಎಂಸಿಎ/773/2023–24

ಕರ್ನಾಟಕ ಸರ್ಕಾರ
ಜಿಲ್ಲಾಧಿಕಾರಿಗಳ ಕಾರ್ಯಾಲಯ, ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ–577501

ನಂ. ಬರ ನಿರ್ವಹಣೆ:ಕು.ನೀ/ಸಿಆರ್:2/2023–24 ದಿನಾಂಕ: 13.02.2024

ಅಲ್ಪಾವಧಿ ಟೆಂಡರ್ ಪ್ರಕಟಣೆ–2ನೇ ಕರೆ

2023–24ನೇ ಸಾಲಿಗೆ ಚಿತ್ರದುರ್ಗ ಜಿಲ್ಲೆಯ ಬರಪೀಡಿತ ಎಂದು ಘೋಷಿಸಿರುವ ಆರು ತಾಲ್ಲೂಕುಗಳ ವ್ಯಾಪ್ತಿಯಲ್ಲಿ ಮುಂದಿನ ದಿನಗಳಲ್ಲಿ ಕುಡಿಯುವ ನೀರಿನ್ನು ಟ್ಯಾಂಕರ್ ಮೂಲಕ ಶುದ್ಧ ಕುಡಿಯುವ ನೀರನ್ನು ಅವಶ್ಯಕತೆ ಮತ್ತು ಬೇಡಿಕೆಗೆ ಅನುಗುಣವಾಗಿ ಪೂರೈಕೆ ಮಾಡಲು ತಾಲ್ಲೂಕುವಾರು ಅಲ್ಪಾವಧಿ ಇ–ಟೆಂಡರ್ ಪ್ರಕಟಣೆಯನ್ನು ಈ ಕೆಳಕಂಡಂತೆ ಹೊರಡಿಸಲಾಗಿರುತ್ತದೆ.

ತಾಲ್ಲೂಕು	ಇಂಡೆಂಟ್ ಸಂಖ್ಯೆ	ಟೆಂಡರ್ ಅಂದಾಜು ಮೌಲ್ಯ (ರೂ. ಲಕ್ಷಗಳಲ್ಲಿ)	ಇ.ಎಂ.ಡಿ ಮೊತ್ತ (ರೂ.ಗಳಲ್ಲಿ)
ಚಿತ್ರದುರ್ಗ	RD/2023-24/SE0152/Call-2	71.28	1,42,600
ಚಳ್ಳಕೆರೆ	RD/2023-24/SE0156/Call-2	51.84	1,03,700
ಹಿರಿಯೂರು	RD/2023-24/SE0153/Call-2	92.34	1,84,700
ಹೊಸದುರ್ಗ	RD/2023-24/SE0154/Call-2	58.32	1,16,600
ಹೊಳಲ್ಕೆರೆ	RD/2023-24/SE0155/Call-2	85.86	1,71,700
ಮೊಳಕಾಲ್ಮೂರು	RD/2023-24/SE0157/Call-2	108.54	2,17,100

1) ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ: 20.02.2024 ರ ಸಂಜೆ 4.00 ಗಂಟೆ 2) ಪ್ರೀಬಿಡ್ಡಿಂಗ್ ನಡೆಯುವ ದಿನಾಂಕ:–16.02.2024 ಮತ್ತು ಸ್ಥಳ: ಜಿಲ್ಲಾಧಿಕಾರಿಗಳ ಕಚೇರಿ, ಚಿತ್ರದುರ್ಗ ಜಿಲ್ಲೆ. ಹೆಚ್ಚಿನ ಮಾಹಿತಿಗಾಗಿ ಕರ್ನಾಟಕ ಸರ್ಕಾರದ ಇ–ಪೋರ್ಟಲ್‌ನ ಜಾಲತಾಣ https://kppp.karnataka.gov.in/ ರಲ್ಲಿ ನೋಡಬಹುದಾಗಿದೆ.

ಸಹಿ/– ಜಿಲ್ಲಾಧಿಕಾರಿಗಳ ಪರವಾಗಿ ಚಿತ್ರದುರ್ಗ ಜಿಲ್ಲೆ.

DIPR/CTA/KSMCA/569/2023-24

ಕರ್ನಾಟಕ ಗೃಹ ಮಂಡಳಿ

Karnataka Housing Board Building Communities
ಗೃಹ ಆಯುಕ್ತರವರ ಕಛೇರಿ, ಕರ್ನಾಟಕ ಗೃಹ ಮಂಡಳಿ, ಕಾವೇರಿ ಭವನ, ಬೆಂಗಳೂರು–560 009.

ಸಂಖ್ಯೆ: ಕಗೃಮಂ/ಕಾ.ಅ/ಹಂಚಿಕೆ–5/ಬೇ.ಸ.ಪ್ರ/2023–24 ದಿನಾಂಕ: 13–02–2024

ಬೇಡಿಕೆ ಸಮೀಕ್ಷೆ ಕಾಲಾವಕಾಶ ವಿಸ್ತರಣೆಗಾಗಿ ಸಾರ್ವಜನಿಕ ಪ್ರಕಟಣೆ

ಕರ್ನಾಟಕ ಗೃಹ ಮಂಡಳಿ ವತಿಯಿಂದ **ಬೆಂಗಳೂರು ಗ್ರಾಮಾಂತರ ಜಿಲ್ಲೆ, ಹೊಸಕೋಟೆ ತಾಲ್ಲೂಕು, ನಂದಗುಡಿ ಹೋಬಳಿ, ಗಂಗಾಪುರ, ಕೋಳಾರ, ಚನ್ನೇನಹಳ್ಳಿ, ಮಾರಸಂಡಹಳ್ಳಿ, ಗುಡ್ಡದಚನ್ನೇನಹಳ್ಳಿ ಹಾಗೂ ಕೋಲಾರ ಜಿಲ್ಲೆ, ಕೋಲಾರ ತಾಲ್ಲೂಕು, ನರಸಾಪುರ ಹೋಬಳಿ ಚಾಕರಸನಹಳ್ಳಿ ಗ್ರಾಮಗಳಲ್ಲಿನ ಸರ್ವೆ ನಂ.4/1 ಮತ್ತು ಇತರೆ ಜಮೀನುಗಳಲ್ಲಿ 111 ಎಕರೆ 17 ಗುಂಟೆ ಜಮೀನುಗಳಲ್ಲಿ ಎಲ್ಲಾ ಮೂಲಭೂತ ಸೌಲಭ್ಯಗಳನ್ನೊಳಗೊಂಡ ವಸತಿ ಯೋಜನೆಯನ್ನು ಶೇ. 50:50 ಅನುಪಾತದ ಪಾಲುದಾರಿಕೆ ಅಡಿಯಲ್ಲಿ ಹಮ್ಮಿಕೊಳ್ಳಲು ಉದ್ದೇಶಿಸಲಾಗಿದ್ದು,** ಸದರಿ ವಸತಿ ಯೋಜನೆಯಲ್ಲಿ ವಿವಿಧ ವರ್ಗದ ನಿವೇಶನ ಹೊಂದಲು ಬಯಸುವ ಸಾರ್ವಜನಿಕರಿಂದ ಬೇಡಿಕೆ ಸಮೀಕ್ಷೆಗಾಗಿ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಿ **ದಿನಾಂಕ: 09–01–2024ರ** ವಿಜಯವಾಣಿ ಮತ್ತು ಪ್ರಜಾವಾಣಿ ದಿನಪತ್ರಿಕೆಯಲ್ಲಿ ಪ್ರಕಟಣೆ ನೀಡಲಾಗಿತ್ತು. ಸದರಿ ಪ್ರಕಟಣೆಯಲ್ಲಿ **ಎಲ್ಲಾ ವರ್ಗದ ನಿವೇಶನಗಳಿಗೆ ಮಂಡಳಿಯ ತಾತ್ಕಾಲಿಕ ಬೆಲೆ ಪ್ರತಿ ಚದರ ಅಡಿಗೆ ರೂ.2000/– ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿತ್ತು. ಇ.ಡಬ್ಲ್ಯುಎಸ್ ವರ್ಗದ ನಿವೇಶನಗಳಿಗೆ ಮಾತ್ರ ಮಂಡಳಿಯ ತಾತ್ಕಾಲಿಕ ಬೆಲೆ ಪ್ರತಿ ಚದರ ಅಡಿಗೆ ರೂ.1000/– ಎಂದು ಓದಿಕೊಳ್ಳುವುದು** ಮತ್ತು ಎಲ್ಲಾ ವರ್ಗದ ನಿವೇಶನಗಳಿಗೆ ಅರ್ಜಿ ಸಲ್ಲಿಸುವ ಆಸಕ್ತ ಸಾರ್ವಜನಿಕರು ಮಂಡಳಿಯ ವೆಬ್‌ಸೈಟ್ ಮುಖಾಂತರ e-payment ಮೂಲಕ ಮಾತ್ರ ಆರಂಭಿಕ ಠೇವಣಿ ಹಣವನ್ನು ಪಾವತಿ ಮಾಡತಕ್ಕದ್ದು. **ಸಾರ್ವಜನಿಕರ ಹಿತದೃಷ್ಟಿಯಿಂದ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕವನ್ನು 29–02–2024 ರವರೆಗೆ ವಿಸ್ತರಿಸಲಾಗಿದೆ.** ಉಳಿದಂತೆ ಷರತ್ತು ಮತ್ತು ನಿಬಂಧನೆಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ. **ಹೆಚ್ಚಿನ ಮಾಹಿತಿಗಾಗಿ ಅಂತರಜಾಲ https://www.khb.karnataka. gov.in** ಅನ್ನು ಸಂಪರ್ಕಿಸುವುದು.

ಸಹಿ/– ಗೃಹ ಆಯುಕ್ತರು,
ಕರ್ನಾಟಕ ಗೃಹ ಮಂಡಳಿ, ಬೆಂಗಳೂರು

DIPR/CP/AAPL/RO3553/23-24

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರವರ ಕಚೇರಿ, ಕೆಂಗೇರಿ ವಿಭಾಗ, ಆರ್‌ಆರ್‌ನಗರ ವಲಯ, ಬಿಬಿಎಂಪಿ ಕಚೇರಿ ಕಟ್ಟಡ, ಸಿಎ ನಂ.3, 1ನೇ ಮುಖ್ಯ ರಸ್ತೆ ಹೊರ ವರ್ತುಲ ರಸ್ತೆ ಕೊಮ್ಮಘಟ್ಟ ರಸ್ತೆ ಕೆಂಗೇರಿ ಉಪನಗರ, ಬೆಂಗಳೂರು–60.

ಸಂಖ್ಯೆ:ಕಾಪಾಅ/ಕೆಂಗೇರಿ/ಟೆಂಡರ್/21/2023–24 ದಿನಾಂಕ: 12–02–2024

ಟೆಂಡರ್‌ಗಳ ಆಹ್ವಾನ ಪ್ರಕಟಣೆ (ಐಎಫ್‌ಟಿ)

(ಕೆಪಿಪಿಪಿ ಪೋರ್ಟಲ್ ಮೂಲಕ ಮಾತ್ರ) (ದ್ವಿ ಲಕೋಟೆ ಪದ್ಧತಿ) ಕರೆ–1

ಕಾರ್ಯಪಾಲಕ ಅಭಿಯಂತರರು, ಕೆಂಗೇರಿ ವಿಭಾಗ, ಆರ್.ಆರ್. ನಗರ ವಲಯ, ಬೃಬೆಂಮ ಪಾಲಿಕೆ ಬೆಂಗಳೂರು ರವರು ಅರ್ಹ ಗುತ್ತಿಗೆದಾರರಿಂದ ಕೆಳಗೆ ವಿವರಿಸಿರುವ ನಿರ್ಮಾಣ ಕಾಮಗಾರಿಗಳಿಗೆ ಟೆಂಡರ್‌ನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕೆಲಸದ ಹೆಸರು	ಕಾಮಗಾರಿ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇಎಂಡಿ ಮೊತ್ತ (ರೂ. ಲಕ್ಷಗಳಲ್ಲಿ)
1)	ವಾರ್ಡ್ ನಂ.26, 27, 28, 29, 30, 31 ಮತ್ತು 33ರ 110 ಗ್ರಾಮ ವ್ಯಾಪ್ತಿಯಲ್ಲಿ ಕೊಳವೆ ಬಾವಿಗಳನ್ನು ಕೊರೆಯುವುದು ಹಾಗೂ ಕಾರ್ಯಾರಂಭಗೊಳಿಸುವುದು ಮತ್ತು ಟ್ಯಾಂಕರ್‌ಗಳ ಮುಖಾಂತರ ನೀರು ಸರಬರಾಜು ಮಾಡುವುದು (ಪ್ಯಾಕೇಜ್–1) 4 ಕಾಮಗಾರಿಗಳು.	334.93	5.05 (1.00 ಲಕ್ಷ ಆನ್‌ಲೈನ್ ಮುಖಾಂತರ ಮತ್ತು ಬಾಕಿ ಮೊತ್ತ ಬಿಜಿ/ಎಫ್‌ಡಿಆರ್ ಮುಖಾಂತರ)

ಟೆಂಡರ್‌ನ ಕಾರ್ಯಸೂಚಿ: 1) ಟೆಂಡರ್ ದಾಖಲೆಯನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಿಂದ ಡೌನ್‌ಲೋಡ್ ಮಾಡುವ **ದಿನಾಂಕ: 14–02–2024 ರಂದು ಸಂಜೆ 4:00 ಗಂಟೆಯ ನಂತರ.** 2) ಪೂರ್ವ ಬಿಡ್ ಮೀಟಿಂಗ್ **ದಿನಾಂಕ: 17–02–2024 ರಂದು ಸಂಜೆ 3:00 ಗಂಟೆಗೆ ಮುಖ್ಯ ಅಭಿಯಂತರರ ಕಛೇರಿ, ಐಡಿಯಲ್ ಹೋಮ್ಸ್, ಆರ್.ಆರ್. ನಗರ ವಲಯ, ಬೆಂಗಳೂರು–98 ಇಲ್ಲಿ ನಡೆಸಲಾಗುವುದು.** 3) ಟೆಂಡರ್‌ಗಳನ್ನು ಆನ್‌ಲೈನ್ ಮೂಲಕ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಸಲ್ಲಿಸುವ **ಕೊನೆಯ ದಿನಾಂಕ: 21–02–2024 ರಂದು ಸಂಜೆ 4:00 ಗಂಟೆಯವರೆಗೆ.** 4) ಬಿಡ್‌ಗಳನ್ನು ತೆರೆಯುವ **ದಿನಾಂಕ: 22–02–2024 ರಂದು ಸಂಜೆ 4:00 ಗಂಟೆಗೆ.** 5) ಈ ಟೆಂಡರ್ ಅಧಿಸೂಚನೆಯನ್ನು ಬೃಬೆಂಮಪಾಲಿಕೆಯ ವೆಬ್‌ಸೈಟ್: **www.bbmp.gov.in** ನಲ್ಲಿಯೂ ನೋಡಬಹುದು. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಅಥವಾ **https://kppp.karnataka.gov.in** ಇಲ್ಲಿಗೆ ಲಾಗಿನ್‌ಮಾಡಿ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಕೆಂಗೇರಿ ವಿಭಾಗ, ಬೃಬೆಂಮಪಾ.

ಪಟ್ಟಣ ಪಂಚಾಯತ ಕಾರ್ಯಾಲಯ, ಯಕ್ಸಂಬಾ

ತಾ :ಚಿಕ್ಕೋಡಿ ಜಿ : ಬೆಳಗಾವಿ

ಕ್ರಸಂ:ಪ.ಪಂ.ಯ/ಟೆಂಡರ/15ನೇ ಹ.ಆ–3/2023–24 ದಿನಾಂಕ: –02–2024

ಟೆಂಡರ ಪ್ರಕಟಣೆ (ಇ–ಪ್ರೋಕ್ಯುರಮೆಂಟ್ ಮುಖಾಂತರ)

ಯಕ್ಸಂಬಾ ಪಟ್ಟಣ ಪಂಚಾಯತ ವ್ಯಾಪ್ತಿಯಲ್ಲಿ ಸನ್ 2023–24 ನೇ ಸಾಲಿನ 15 ನೇ ಹಣಕಾಸು ಮತ್ತು Non Million Plus City ಆಯೋಗದಡಿ ಈ ಕೆಳಗೆ ವಿವರಿಸಿದ ಕಾಮಗಾರಿಗಳಿಗೆ ಲೋಕೋಪಯೋಗಿ/ಪಂಚಾಯತರಾಜ ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟ ಅರ್ಹ ಸಿವ್ಹಿಲ್ ಗುತ್ತಿಗೆದಾರರಿಂದ ಕೆಡಬ್ಲ್ಯೂ–1, ಕೆಡಬ್ಲ್ಯೂ–2 ರ ಪ್ರಕಾರ ಟೆಂಡರನ್ನು ಆಹ್ವಾನಿಸಲಾಗಿದೆ. ಕಾಮಗಾರಿಗಳ ಅಂದಾಜು ಮೊತ್ತ ರೂ. 10.90 ರಿಂದ 60.20 ಲಕ್ಷವರೆಗೆ ಇರುತ್ತವೆ. ಭರ್ತಿ ಮಾಡಿದ ಟೆಂಡರಗಳನ್ನು ಅಪ್‌ಲೋಡ್ ಮಾಡುವ ಕೊನೆಯ ದಿನಾಂಕ: 21/02/2024 ಸಾಯಂಕಾಲ 4.0 ಘಂಟೆಯವರೆಗೆ. ತಾಂತ್ರಿಕ ಟೆಂಡರಗಳನ್ನು ತೆರೆಯುವ ದಿನಾಂಕ:23/02/2024 ರಂದು ಮದ್ಯಾಹ್ನ 11.00 ನಂತರ ತೆರೆಯಲಾಗುವುದು. ಆರ್ಥಿಕ ಟೆಂಡರಗಳನ್ನು ತೆರೆಯುವ ದಿನಾಂಕ:26/02/2024 ರಂದು ಮದ್ಯಾಹ್ನ 11.00 ನಂತರ ತೆರೆಯಲಾಗುವುದು

ಹೆಚ್ಚಿನ ಮಾಹಿತಿ ಕುರಿತು ಇ–ಪ್ರೊಕ್ಯುರಮೆಂಟ್ ವೆಬ್‌ಸೈಟ್ https://kppp.karnataka.gov.in ಲಾಗಿನ್ ಆಗಿ, ಕಚೇರಿ ವೆಬಸೈಟ್ www.exambatown.mrc.gov.in ನಲ್ಲಿ ಅಥವಾ ಪಟ್ಟಣ ಪಂಚಾಯತ ಕಾರ್ಯಾಲಯವನ್ನು ಸಂಪರ್ಕಿಸಿ ಪಡೆಯಬಹುದಾಗಿದೆ.

ಸಹಿ/– ಮುಖ್ಯಾಧಿಕಾರಿ ಪಟ್ಟಣ ಪಂಚಾಯತ ಯಕ್ಸಂಬಾ
ಸಹಿ/– ಆಡಳಿತಾಧಿಕಾರಿಗಳು ಪಟ್ಟಣ ಪಂಚಾಯತ ಯಕ್ಸಂಬಾ

DIPR/BGM/RO-NO-1114/KSMCA/2023-24

ಕರ್ನಾಟಕ ಸರಕಾರ
ಸಹಾಯಕ ನಿರ್ದೇಶಕರು (ಗ್ರೇಡ–2) ಸಮಾಜ ಕಲ್ಯಾಣ ಇಲಾಖೆ ಬ್ಯಾಡಗಿ

ಇಲಾಖೆ ಕಾರ್ಯಕ್ರಮಗಳ ಅನುಷ್ಠಾನ ಕಾರ್ಯಕ್ಕಾಗಿ ಸಹಾಯಕ ನಿರ್ದೇಶಕರು (ಗ್ರೇಡ–2) ಸಮಾಜ ಕಲ್ಯಾಣ ಇಲಾಖೆ ಬ್ಯಾಡಗಿ ಕಛೇರಿಗೆ ಬಾಡಿಗೆ ಆಧಾರದ ಮೇಲೆ ವಾಹನ ಪಡೆಯುವ ಬಗ್ಗೆ.

ಟೆಂ ಸಂಖ್ಯೆ:ಉನಸಕಇ:ಎಸ್–1:ಕಛೇರಿ ವಾಹನ:2023–24 ದಿ: 12–02–2024

ಅಲ್ಪಾವಧಿ ಟೆಂಡರ್ ಪ್ರಕಟಣೆ

(1) ಟೆಂಡರ್ ಪ್ರಕಟಣೆ ದಿನಾಂಕ : **12–02–2024.** (2) ಟೆಂಡರ್‌ಗೆ ಇಟ್ಟ ಮೊತ್ತ ಅಂದಾಜು ಮೊತ್ತ ರೂ : **4.20** ಲಕ್ಷ (3) ಟೆಂಡರ ಫಾರಂ ಬೆಲೆ : **Rs- 250/-** (4) ಟೆಂಡರ್ ಫಾರಂಗಳು (ತಾಂತ್ರೀಕ & ಆರ್ಥಿಕ ಲಕೋಟೆ ಇರುವ) ಸಲ್ಲಿಸಲು ಕೊನೆಯ ದಿನಾಂಕ : **26.02.2024** ಸಾಯಂಕಾಲ 04.00 ಘಂಟೆ (5) ತಾಂತ್ರಿಕ ಲಕೋಟೆ ತೆರೆಯುವ ವೇಳೆ ಮತ್ತು ದಿನಾಂಕ : **27.02.2024** ಮಧ್ಯಾಹ್ನ 03.00 ಘಂಟೆಯೊಳಗೆ (ಸಾಧ್ಯವಾದಲ್ಲಿ ಮಾತ್ರ ಬದಲಾವಣೆಗೆ ಒಳಪಟ್ಟಿರುತ್ತದೆ.) (6) ಆರ್ಥಿಕ ಲಕೋಟೆಯನ್ನು ತೆರೆಯುವ ಸ್ಥಳ ವೇಳೆ ಮತ್ತು ದಿನಾಂಕ : **27.02.2024** ಸಂಜೆ 04.00 ಘಂಟೆ (ಸಾಧ್ಯವಾದಲ್ಲಿ ಮಾತ್ರ ಬದಲಾವಣೆಗೆ ಒಳಪಟ್ಟಿರುತ್ತದೆ.) (7) ಟೆಂಡರನೊಂದಿಗೆ ಪಾವತಿಸಬೇಕಾದ ಇ.ಎಂ.ಡಿ ಮೊತ್ತ ರೂ. **7,500/–** (8) ಹೆಚ್ಚಿನ ಮಾಹಿತಿಗಾಗಿ ವ್ಯವಹರಿಸಬೇಕಾದ ಅಧಿಕಾರಿ ಹಾಗೂ ವಿಳಾಸ, ದೂರವಾಣಿ ಸಂಖ್ಯೆ : ಸಹಾಯಕ ನಿರ್ದೇಶಕರ ಕಛೇರಿ (ಗ್ರೇಡ–2) ಸಮಾಜ ಕಲ್ಯಾಣ ಇಲಾಖೆ ಗುಡ್ಡದ ಮಲ್ಲೇಶ್ವರ ರಸ್ತೆ, ಅಗ್ನಿಶಾಮಕ ಠಾಣೆ ಹತ್ತಿರ, ಬ್ಯಾಡಗಿ ಕಛೇರಿ ವೇಳೆಯಲ್ಲಿ ಸಂಪರ್ಕಿಸುವದು. ಫೋನ್ 9480843148 / 08375200593

ಸಹಿ/– ಸಹಾಯಕ ನಿರ್ದೇಶಕರು(ಗ್ರೇಡ್–2)
ಸಮಾಜ ಕಲ್ಯಾಣ ಇಲಾಖೆ, ಬ್ಯಾಡಗಿ

ವಾಸಾಸಂಇ/ಹಾವೇರಿ/ಕೆ.ಎಸ್.ಎಂ.ಸಿ.ಎ/458/2023–24

ಕರ್ನಾಟಕ ಅರಣ್ಯ ಇಲಾಖೆ

ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಬೆಂಗಳೂರು ನಗರ ವಿಭಾಗ, ಅರಣ್ಯ ಭವನದ ಪಕ್ಕದ ಕಟ್ಟಡ, 18ನೇ ಅಡ್ಡರಸ್ತೆ. ಮಲ್ಲೇಶ್ವರಂ, ಬೆಂಗಳೂರು–560 003
ಇ–ಮೇಲ್ : dcfurban82@yahoo.co.in

ಸಂಖ್ಯೆ:ಎ2/ಬಿಯುಡಿ/ಕಾಮಗಾರಿ/ಸಿಆರ್–117/2023–24 ದಿನಾಂಕ: 12.02.2024

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ (ಕರೆ–2)

2023–24ನೇ ಸಾಲಿನಲ್ಲಿ ಬೆಂಗಳೂರು ನಗರ ಅರಣ್ಯ ವಿಭಾಗದ, ಆನೇಕಲ್ ವಲಯ ವ್ಯಾಪ್ತಿಯಲ್ಲಿ ಉಪ ವಲಯ ಅರಣ್ಯಾಧಿಕಾರಿಗಳ ವಸತಿ ಕಟ್ಟಡ ನಿರ್ಮಾಣ ಕಾಮಗಾರಿಗಳನ್ನು ಕೈಗೊಳ್ಳಲು ಎರಡನೆಯ ಬಾರಿಗೆ ಇ–ಟೆಂಡರ್ ಪ್ರಕಟಣೆ ಬಗ್ಗೆ.

* * * *

2023–24ನೇ ಸಾಲಿನಲ್ಲಿ 147-Land & Buildings ಯೋಜನೆಯಡಿ ಆನೇಕಲ್ ವಲಯ ವ್ಯಾಪ್ತಿಯಲ್ಲಿ ಉಪ ವಲಯ ಅರಣ್ಯಾಧಿಕಾರಿಗಳ ವಸತಿ ಕಟ್ಟಡ ನಿರ್ಮಾಣ ಕಾಮಗಾರಿಗಳನ್ನು ಕೈಗೊಳ್ಳುವ ಸಂಬಂಧ ಕೆ.ಪಿ.ಪಿ.ಪಿ. ಪೋರ್ಟಲ್ ಮುಖಾಂತರ ಇ–ಟೆಂಡರ್‌ಗಳನ್ನು ದಿನಾಂಕ: 20.02.2024 ರಂದು (https://kppp.karnataka.gov.in) ಮುಖಾಂತರ ಇ–ಟೆಂಡರ್‌ಗಳನ್ನು ನಿಗಧಿ ಪಡಿಸಲಾಗಿದ್ದು, ಇದರ ಸಂಬಂಧ ಕೆ.ಪಿ.ಪಿ.ಪಿ ಪೋರ್ಟಲ್‌ನಲ್ಲಿ ತಾಂತ್ರಿಕ ಮತ್ತು ಆರ್ಥಿಕ ಬಿಡ್‌ಗಳನ್ನು ಸಲ್ಲಿಸಲು **ದಿನಾಂಕ: 20.02.2024ರಂದು (ಅಪರಾಹ್ನ 5.00 ಗಂಟೆವರೆಗೆ),** ಅಂತಿಮ ದಿನಾಂಕವಾಗಿದೆ. **ದಿನಾಂಕ: 21.02.2024ರ ಅಪರಾಹ್ನ 5.00 ಗಂಟೆಗೆ** ತಾಂತ್ರಿಕ ಬಿಡ್‌ಗಳನ್ನು ತೆರೆಯಲಾಗುವುದು. ತಾಂತ್ರಿಕ ಬಿಡ್‌ಗಳಲ್ಲಿನ ಷರತ್ತುಗಳು ಯಶಸ್ವಿಯಾಗಿದ್ದರೆ **ದಿನಾಂಕ: 22.02.2024ರ ಅಪರಾಹ್ನ 5.00 ಗಂಟೆಗೆ** ಆರ್ಥಿಕ ಬಿಡ್‌ಗಳನ್ನು ತೆರೆಯಲಾಗುವುದು. ಪ್ರತ್ಯೇಕ ಕೆಲಸಗಳ ವಿವರಗಳನ್ನು ಕರ್ನಾಟಕ ಸರ್ಕಾರದ ಇ–ಆಡಳಿತ ಕೇಂದ್ರ ಅಥವಾ ವೆಬ್‌ಸೈಟ್ (https://kppp.karnataka.gov.in) ನಲ್ಲಿ ಮಾಹಿತಿಗಳನ್ನು ಪಡೆಯಬಹುದು.

ಸಹಿ/–
ಉಪ ಅರಣ್ಯ ಸಂರಕ್ಷಣಾಧಿಕಾರಿ,
ಬೆಂಗಳೂರು ನಗರ ವಿಭಾಗ, ಬೆಂಗಳೂರು.

ವಾಸಾಸಂಇ/ವಾಪ್ರ/ಜಿಎ/3544/2023–24

ಲೋಕೋಪಯೋಗಿ ಇಲಾಖೆ. ತುಮಕೂರು

ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ,
ಲೋಕೋಪಯೋಗಿ ಇಲಾಖೆ, ತುಮಕೂರು.
ಕ್ರ.ಸಂ:ಕಾಇಂ:ಲೋಇವಿ:ತುಮ:ಸಇಂ–2:ಟೆಂಡರ್24/2023–24
ದಿನಾಂಕ: 07.02.2024

ಟೆಂಡರ್ ಪ್ರಕಟಣೆ ಸಂ.24/2023–24 ದಿನಾಂಕ: 07.02.2024

ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ: 24/2023–24:ದಿನಾಂಕ 07–01–2024 ರಂದು ತುಮಕೂರು ವಿಭಾಗದ ವ್ಯಾಪ್ತಿಯಲ್ಲಿ 5054– ಅಪೆಂಡಿಕ್ಸ್–ಇ ಲೆಕ್ಕ ಶೀರ್ಷಿಕೆ ಅಡಿಯಲ್ಲಿ 02 ಕಾಮಗಾರಿಗಳಿಗೆ ಕೆಪಿಪಿಪಿ ಪೋರ್ಟಲ್ ಮೂಲಕ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಟೆಂಡರಿಗಿಟ್ಟ ಗರಿಷ್ಟ ಮೊತ್ತ ರೂ: 84.53 ಲಕ್ಷಗಳು, ಟೆಂಡರಿಗಿಟ್ಟ ಕನಿಷ್ಟ ಮೊತ್ತ ರೂ.84.25 ಲಕ್ಷಗಳು, ಇ.ಎಂ.ಡಿ ಗರಿಷ್ಟ ಮೊತ್ತ ರೂ.1,69,100/– & ಇ.ಎಂ.ಡಿ ಕನಿಷ್ಟ ಮೊತ್ತ ರೂ.1,68,500/– ಅರ್ಹ ಗುತ್ತಿಗೆದಾರರು: 3ನೇ ದರ್ಜೆ ಮೇಲ್ಪಟ್ಟು, ಕಾಲಾವಧಿ: 04 ತಿಂಗಳು, ಸಂಬಂಧಿಸಿದ ವಿಚಾರಣೆ ಮತ್ತು ಸ್ಪಷ್ಟೀಕರಣಗಳಿಗೆ ಕೊನೆ ದಿನಾಂಕ ಮತ್ತು ವೇಳೆ: 21–02–2024 ರ 16–00 ಗಂಟೆಗೆ, ಕೆಪಿಪಿಪಿ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ದಿನಾಂಕ 08–02–2024 ರಿಂದ 22–02–2024ರ 16–00 ಗಂಟೆಯವರೆಗೆ ಪಡೆಯಬಹುದಾಗಿದೆ. ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ವೇಳೆ: 22–02–2024 ರ ಸಂಜೆ 16–00 ಗಂಟೆವರೆಗೆ, ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ವೇಳೆ: 23–02–2024 ರ ಸಂಜೆ 16.30 ಗಂಟೆಗೆ, ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ವೇಳೆ: 26–02–2024 ರ ಬೆಳಗ್ಗೆ 11–00 ಗಂಟೆಗೆ, ಹೆಚ್ಚಿನ ವಿವರಗಳನ್ನು ಸದರಿ ಕಚೇರಿಯಿಂದ ಕಚೇರಿ ವೇಳೆಯಲ್ಲಿ ಪಡೆಯಬಹುದಾಗಿದೆ ಹಾಗೂ ವೆಬ್‌ಸೈಟ್ ಸಂ: www.kppp.karnataka.gov.in ರಲ್ಲಿ ಪಡೆಯಬಹುದಾಗಿದೆ.

ಸೂಚನೆ: ಆರ್ಥಿಕ ವಹಿವಾಟಿನ ಪತ್ರದಲ್ಲಿ ಯು.ಡಿ.ಐ ಸಂಖ್ಯೆಯನ್ನು ನಮೂದಿಸಿಲ್ಲದಿರುವ ಆರ್ಥಿಕ ವಹಿವಾಟನ್ನು ಪರಿಗಣಿಸುವುದಿಲ್ಲ.

ಸಹಿ/–ಕಾರ್ಯಪಾಲಕ ಇಂಜಿನಿಯರ್,
ಲೋಕೋಪಯೋಗಿ ಇಲಾಖೆ ವಿಭಾಗ, ತುಮಕೂರು.

DIPR/TUM/528/KSMCA/2023-24

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಜಲಭವನ, ನಂ. 6, 1ನೇ ಘಟ್ಟ, 1ನೇ ಹಂತ, ಬಿಟಿಎಂ ಲೇಔಟ್, ಬನ್ನೇರುಘಟ್ಟ ಮುಖ್ಯ ರಸ್ತೆ, ಬೆಂಗಳೂರು – 560 029. ದೂ: 080–41106504 – 18
ಇ–ಮೇಲ್: cekwbbng@gmail.com ವೆಬ್‌ಸೈಟ್: https://kuwsdb.karnataka.gov.in

ಅಲ್ಪಾವಧಿ ಟೆಂಡರ್ ಪ್ರಕಟಣೆ

(ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

IFT ಸಂಖ್ಯೆ: KUWSDB/2023-24/WS/WORK_INDENT158

ಕಾಮಗಾರಿಯ ಹೆಸರು: **"ಚನ್ನಪಟ್ಟಣ ನಗರಕ್ಕೆ 2ನೇ ಹಂತದ ಒಳಚರಂಡಿ ಯೋಜನೆ ಕಲ್ಪಿಸುವ ಕಾಮಗಾರಿ, 3 ವರ್ಷಗಳ ಕಾರ್ಯಾಚರಣೆ ಮತ್ತು ನಿರ್ವಹಣೆ ಒಳಗೊಂಡಂತೆ (1 ವರ್ಷದ ಡಿ.ಎಲ್.ಪಿ ಸೇರಿದಂತೆ) ವಿನ್ಯಾಸ, ನಿರ್ಮಾಣ, ಕಾರ್ಯಾಚರಣೆ ಮತ್ತು ವರ್ಗಾವಣೆ (DBOT) ಮಾದರಿಯಲ್ಲಿ ಸಹ ಭಾಗಿತ್ವದೊಂದಿಗೆ (ಜೆ.ವಿ)" ರೂ.99.60 ಕೋಟಿಗಳ ಮೊತ್ತದ ಕಾಮಗಾರಿ.**

ಹೆಚ್ಚಿನ ವಿವರಗಳಿಗೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್ https://kppp.karnataka.gov.in ಸಂಪರ್ಕಿಸುವುದು.

ಸಹಿ/– ಮುಖ್ಯ ಅಭಿಯಂತರರು
ಕನನೀಸ ಮತ್ತು ಒಚ ಮಂಡಳಿ, ಬೆಂಗಳೂರು

ವಾ.ಸಾ.ಸಂ.ಇ/3552/ಆಕಾರ್/2023–24

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜನಿಯರರ ಕಛೇರಿ, ಗ್ರಾ.ಕು.ನೀ&ನೈ ವಿಭಾಗ, ಮಂಡ್ಯ

ಸಂ:ಕಾ.ಇಂ:ಗ್ರಾ.ಕು.ನೀ&ನೈ:ವಿ.ಮಂ:ISA23–24:2023–24:2273
ದಿನಾಂಕ:09–02–2024.

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ:11/2023–24

ಮಂಡ್ಯ ಜಿಲ್ಲಾ ವ್ಯಾಪ್ತಿಯಲ್ಲಿ ಜಲ ಜೀವನ್ ಮಿಷನ್ ಯೋಜನೆಯಡಿ IEC & HRD ಚಟುವಟಿಕೆಗಳನ್ನು ಅನುಷ್ಠಾನಗೊಳಿಸಲು "ಅನುಷ್ಠಾನ ಸಂಪನ್ಮೂಲ ಸಂಸ್ಥೆಗಳನ್ನು (ISA)" ಎಂಪ್ಯಾನೆಲ್‌ಮೆಂಟ್ ಮಾಡುವ ಸಲುವಾಗಿ ಅರ್ಹ ಸಂಸ್ಥೆಗಳಿಂದ ದ್ವಿ–ಲಕೋಟೆ ಪದ್ಧತಿಯಲ್ಲಿ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಟೆಂಡರ್‌ಗಿಟ್ಟ ಮೊತ್ತ **ರೂ 138.58 ಲಕ್ಷಗಳು.** ಭರ್ತಿಮಾಡಿದ ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ:20.02.2024 ಸಂಜೆ 5:00 ಗಂಟೆಯವರೆಗೆ,** ಪೂರ್ವಭಾವಿ ಸಭೆ **ದಿನಾಂಕ:16.02.2024 ಸಮಯ:ಬೆಳಿಗ್ಗೆ 11:00ಗಂಟೆಗೆ** (ಸ್ಥಳ:ಕಾ.ಇಂರವರ ಕಛೇರಿ, ಗ್ರಾ.ಕು.ನೀ&ನೈ ವಿಭಾಗ, ಮಂಡ್ಯ) ತಾಂತ್ರಿಕ ಬಿಡ್ ತೆರೆಯುವ **ದಿನಾಂಕ:21.02.2024 ಸಮಯ:ಸಂಜೆ 05:05 ಗಂಟೆಗೆ,** ಆರ್ಥಿಕ ಬಿಡ್ ತೆರೆಯುವ **ದಿನಾಂಕ:26.02.2024 ಸಮಯ:ಬೆಳಿಗ್ಗೆ 11:00 ಗಂಟೆಗೆ,** ಹಾಗೂ ಹೆಚ್ಚಿನ ವಿವರಗಳಿಗಾಗಿ **https://kppp.karnataka.gov.in** ವೆಬ್‌ಸೈಟ್‌ನಲ್ಲಿ ಅಥವಾ ಕಛೇರಿಯ ಕೆಲಸದ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದು. ದೂರವಾಣಿ ಸಂಖ್ಯೆ: 08232–222363.

ಸಹಿ/–ಕಾರ್ಯಪಾಲಕ ಇಂಜಿನಿಯರರು,
ಗ್ರಾ.ಕು.ನೀ&ನೈ ವಿಭಾಗ,
ಮಂಡ್ಯ.

ವಾಸಾಸಂಇ/ಸನಿ–ಮಂ/ಕೆಎಸ್‌ಎಂಸಿ&ಎ/531/2023–24

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಛೇರಿ, ರಮೂಸೌ–ಯಲಹಂಕ ವಿಭಾಗ,
3ನೇ ಮಹಡಿ, ಮಿನಿ ವಿಧಾನ ಸೌಧ, ಯಲಹಂಕ, ಬೆಂಗಳೂರು – 560064.

ಸಂಖ್ಯೆ: ಕಾಅ/ರಮೂಸೌ/ಯಲಹಂಕ/ಟೆಂಡರ್/05/2023–24 ದಿನಾಂಕ: 13.02.2024

ಅಲ್ಪಾವಧಿ ಟೆಂಡರ್ ಪ್ರಕಟಣೆ

ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ) (ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ **https://kppp.karnataka.gov.in** ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ರಸ್ತೆ ಮೂಲ ಸೌಕರ್ಯ – ಯಲಹಂಕ ವಿಭಾಗ ಇವರು ಮುಖ್ಯ ಆಯುಕ್ತರು, ಬೃಬೆಂಮಪಾ, ಬೆಂಗಳೂರು ಇವರ ಪರವಾಗಿ ಬೆಂಗಳೂರು ಮಹಾನಗರ ಪಾಲಿಕೆ ಅಥವಾ ಸಿಪಿಡಬ್ಲ್ಯೂಡಿ / ಕೆಪಿಡಬ್ಲ್ಯೂಡಿ / ರೈಲ್ವೇಸ್ / ಎಂಇಎಸ್ / ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದಾದರೂ ರಾಜ್ಯ ಸರ್ಕಾರದ ಸಂಸ್ಥೆಗಳಲ್ಲಿ ತತ್ಸಮನಾದ ನೋಂದಣಿ ಹೊಂದಿರುವ ಅರ್ಹ ಗುತ್ತಿಗೆದಾರರಿಂದ ಕೆಳಗಿನ ಕೋಷ್ಟಕದಲ್ಲಿ ವಿವರಿಸಲಾದ ನಿರ್ಮಾಣ ಕಾಮಗಾರಿಗಳಿಗೆ ಸ್ಟಾಂಡರ್ಡ್ ಬಿಡ್ ದಾಖಲಾತಿ ಕೆಡಬ್ಲ್ಯೂ4 ರಂತೆ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರಮ ಸಂಖ್ಯೆ	ಕೆಲಸದ ಹೆಸರು	ಟೆಂಡರಿಗಿಟ್ಟ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇಎಂಡಿ
1.	ವಾರ್ಡ್ ಸಂಖ್ಯೆ 06, ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರದಲ್ಲಿ ಮಾನ್ಯತಾ ಟೆಕ್ ಪಾರ್ಕ್ ಮುಖ್ಯ ರಸ್ತೆಯಿಂದ ಭಾರತನಗರದವರೆಗೆ ಆರ್‌ಎಂಪಿ–2015 ರ ಪ್ರಕಾರ ಸಂಪರ್ಕ ರಸ್ತೆಯನ್ನು ರಚಿಸುವುದು	247.50	ರೂ. 372000

ವೇಳಾ ಪಟ್ಟಿ: 1) ಕೆಪಿಪಿ ಪೋರ್ಟಲ್‌ನಲ್ಲಿ ಟೆಂಡರ್ ದಾಖಲಾತಿಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವುದು 14.02.2024 ರಿಂದ. 2) ವಿಚಾರಣೆಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ 21.02.2024 ರಂದು 15.00 ಗಂಟೆಯವರೆಗೆ. 3) ಬಿಡ್ ಪೂರ್ವ ಸಭೆ 22.02.2024 ರಂದು 16.00 ಗಂಟೆಗೆ. 4) ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ 27.02.2024 ರಂದು 17.00 ಗಂಟೆಯವರೆಗೆ ಅಥವಾ ಮುಂಚಿತವಾಗಿ. 5) ತಾಂತ್ರಿಕ ಬಿಡ್ ತೆರೆಯುವ ದಿನಾಂಕ 28.02.2024 ರಂದು 17.30 ಗಂಟೆಗೆ

ಸಹಿ/– ಕಾರ್ಯಪಾಲಕ ಅಭಿಯಂತರರು, ರಸ್ತೆ ಮೂಲ ಸೌಕರ್ಯ–ಯಲಹಂಕ ವಿಭಾಗ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರವರ ಕಛೇರಿ, ಆರ್.ಆರ್. ನಗರ ವಿಭಾಗ,
ಬಿಬಿಎಂಪಿ ಕಛೇರಿ ಕಟ್ಟಡ, ಬೆಂಗಳೂರು– 560 098.

ಸಂ: ಬಿಬಿಎಂಪಿ/ಆರ್‌ಆರ್‌ಎನ್‌ಡಿ/ಟೆಂಡ್/12/2023–24 ದಿನಾಂಕ:12.02.2024

ಅಲ್ಪಾವಧಿ ಟೆಂಡರ್ ಪ್ರಕಟಣೆ

(ಜಿಒಕೆ ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಆರ್‌ಆರ್ ನಗರ ವಿಭಾಗ, ಇವರು ಅರ್ಹ ಗುತ್ತಿಗೆದಾರರಿಂದ ಕೆಳಕಂಡ ಕಾಮಗಾರಿಗಾಗಿ ಟೆಂಡರನ್ನು ಆಹ್ವಾನಿಸಿದ್ದಾರೆ.

ಕ್ರ ಸಂ	ಕಾಮಗಾರಿಯ ವಿವರ	ಟೆಂಡರಿಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ)	ಇಎಂಡಿ (ರೂ.ಗಳಲ್ಲಿ)
	ಏಕ–ಲಕೋಟೆ ಪದ್ಧತಿ		
1.	ವಾರ್ಡ್ ಸಂಖ್ಯೆ 36 ಜಾಲಹಳ್ಳಿಯ ಸೇಂಟ್ ಅಂತೋನಿ ಚರ್ಚ್‌ನಿಂದ ಕೆಆರ್‌ಸಿ ಸೈಕಲ್ ಮಾರ್ಟ್ 2ನೇ ಬ್ಲಾಕ್, ಸಿದ್ದಾರ್ಥನಗರದವರೆಗೆ ಸಿಸಿ ರಸ್ತೆ ಸುಧಾರಣೆ. (ಇತರರು).	25.43	51,000/-
2.	ವಾರ್ಡ್ ಸಂಖ್ಯೆ 36 ಜಾಲಹಳ್ಳಿ ಏರ್‌ಫೋರ್ಸ್ ಕಾಂಪೌಂಡ್ ಬ್ಲಾಕ್ ಪಕ್ಕದಿಂದ 4ನೇ ಬ್ಲಾಕ್, ಸಿದ್ದಾರ್ಥ ನಗರ ವರೆಗಿನ ಸಿಸಿ ರಸ್ತೆ ಸುಧಾರಣೆ. (ಎಸ್‌ಸಿ).	42.38	42,500/-
3.	ವಾರ್ಡ್ ಸಂಖ್ಯೆ 36 ರಲ್ಲಿ ಸಮುದಾಯ ಭವನದ ಹಿಂಭಾಗದಿಂದ ಸಿದ್ದಾರ್ಥ ನಗರದ ಶ್ರೈನ್ ಇಂಜಿನಿಯರಿಂಗ್ ವೆಲ್ಡಿಂಗ್ ಶಾಪ್ ವರೆಗೆ ಸಿಸಿ ರಸ್ತೆ ಸುಧಾರಣೆ. (ಇತರೆ).	25.42	51,000/-
4.	ವಾರ್ಡ್ ಸಂಖ್ಯೆ 36 ಜಾಲಹಳ್ಳಿಯ ಸಿದ್ದಾರ್ಥ ನಗರ ಮತ್ತು ಖಾತಾನಗರಗಳಲ್ಲಿನ ಮೋರಿಗಳಿಗೆ ಸುಧಾರಣೆ. (ಎಸ್‌ಸಿ).	12.72	16000/-
5.	ವಾರ್ಡ್ ಸಂಖ್ಯೆ' 36, ಜಾಲಹಳ್ಳಿಯ ಗುರುದ್ವಾರದಿಂದ ಮಾರಿಯಮ್ಮನ ದೇವಸ್ಥಾನ, ಖಾತಾನಗರದವರೆಗೆ ಸಿಸಿ ರಸ್ತೆಯ ಸುಧಾರಣೆ. (ಇತರರು).	29.67	60000/-
6.	ವಾರ್ಡ್ ಸಂಖ್ಯೆ 3, ಜಾಲಹಳ್ಳಿಯ ಖಾತಾನಗರದಲ್ಲಿ ಚರಂಡಿಗಳ ನಿರ್ಮಾಣ. (ಎಸ್‌ಟಿ).	33.90	34000/-
	ದ್ವಿಲಕೋಟೆ ಪದ್ಧತಿ		
7.	ವಾರ್ಡ್ ಸಂಖ್ಯೆ 42 (ಹೊಸ ವಾರ್ಡ್ ಸಂಖ್ಯೆ–38)ರ ಜೈಭುವನೇಶ್ವರಿ ನಗರ, ಹಾವಾಡಿಗರ ಕಾಲೋನಿ, ಬುದ್ಧ ನಗರ, ಲಕ್ಷ್ಮೀದೇವಿ ನಗರದಲ್ಲಿ ಆರ್‌ಸಿಸಿ ಪ್ರೀಕಾಸ್ಟ್ ಡ್ರೈನ್ ಮತ್ತು ಪೇವರ್ ಬ್ಲಾಕ್‌ಗಳ ನಿರ್ಮಾಣ (ಇತರೆ).	403.20	450000/-
8.	ವಾರ್ಡ್ 69, ಲಗ್ಗೆರೆ (ಹೊಸ ವಾರ್ಡ್ ಸಂಖ್ಯೆ–38) ತ್ಯಾಗಿ ನಗರದ ಕ್ವಾರ್ಟರ್ಸ್‌ನಲ್ಲಿ ಆರ್‌ಸಿಸಿ ಪ್ರೀಕಾಸ್ಟ್ ಡ್ರೈನ್ ಮತ್ತು ಪೇವರ್ ಬ್ಲಾಕ್‌ಗಳ ನಿರ್ಮಾಣ.(ಇತರೆ)	161.29	170000/-

1) ಟೆಂಡರ್ ಡಾಕ್ಯುಮೆಂಟ್‌ಗಳನ್ನು ಕೆಪಿಪಿ ಪೋರ್ಟಲ್‌ನಿಂದ ದಿನಾಂಕ: **14.02.2024ರಿಂದ** ಡೌನ್‌ಲೊಡ್ ಮಾಡಿಕೊಳ್ಳಬಹುದು. **2)** ಪೂರ್ವಭಾವಿ ಸಭೆ ದಿನಾಂಕ : **19.02.2024ರ ಸಂಜೆ 3.30 ಗಂಟೆಗೆ. 3)** ಟೆಂಡರ್ ಡಾಕ್ಯುಮೆಂಟ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **22.02.2024ರ ಸಂಜೆ 4.00 ಗಂಟೆಯವರೆಗೆ 4)** ಟೆಂಡರ್‌ಗಳನ್ನು ತೆರೆಯುವ ದಿನಾಂಕ: **23.02.2024ರ ಸಂಜೆ 4.30 ಗಂಟೆಗೆ.** ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್: **https://kppp.karnataka.gov.in** ನಲ್ಲಿ ಲಾಗಿನ್ ಮಾಡಿ ಪಡೆಯಬಹುದು ಅಥವಾ ಕೆಳಸಹಿದಾರರ ಕಛೇರಿಯನ್ನು ಸಂಪರ್ಕಿಸಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಆರ್. ಆರ್. ನಗರ ವಿಭಾಗ.



❦ ಸುಭಾಷಿತ ❦
ಹಿರಿಯರಿಗೆ ವಂದಿಸುವುದೇ ಸಭ್ಯತೆಯ ಮೂಲಭೂತ ಅಡಿಪಾಯವಾಗಿರುತ್ತದೆ.
-ಚಾಣಕ್ಯ

ನೌಕಾಪಡೆಯ ಮಾಜಿ ಅಧಿಕಾರಿಗಳ ಬಿಡುಗಡೆ: ರಾಜತಾಂತ್ರಿಕತೆಗೆ ಸಿಕ್ಕ ಜಯ

ನೌಕಾಪಡೆಯ ಎಂಟು ಮಾಜಿ ಅಧಿಕಾರಿಗಳನ್ನು ಕತಾರ್‌ನ ಸೆರೆಮನೆಯಿಂದ ಬಿಡುಗಡೆ ಮಾಡಿರುವುದು ಸದ್ದುಗದ್ದಲವಿಲ್ಲದೆ ನಡೆಸಿದ ರಾಜತಾಂತ್ರಿಕ ಪ್ರಯತ್ನಕ್ಕೆ ಸಿಕ್ಕ ಗೆಲುವು. ಬೇಹುಗಾರಿಕೆ ನಡೆಸಿದ ಪ್ರಕರಣದಲ್ಲಿ ಇವರೆಲ್ಲರಿಗೆ ಶಿಕ್ಷೆ ವಿಧಿಸಲಾಗಿತ್ತು. ಸೆರೆಯಲ್ಲಿದ್ದವರ ಪೈಕಿ ಏಳು ಮಂದಿ ಈ ತಿಂಗಳ 12ರಂದು ಭಾರತಕ್ಕೆ ಬಂದಿದ್ದಾರೆ. ಆದರೆ, ಈ ಎಲ್ಲರೂ ಕೆಲಸ ಮಾಡುತ್ತಿದ್ದ ಕಂಪನಿಯ ವ್ಯವಸ್ಥಾಪಕ ನಿರ್ದೇಶಕರಾಗಿದ್ದ ಎಂಟನೇ ವ್ಯಕ್ತಿಯ ಬಗ್ಗೆ ಹೆಚ್ಚಿನ ವಿವರಗಳೇನೂ ಬಹಿರಂಗವಾಗಿಲ್ಲ. ಎರಡೂ ಕಡೆಯ ಉನ್ನತ ಮಟ್ಟದ ವ್ಯಕ್ತಿಗಳು ನಡೆಸಿದ ಸಂಧಾನದ ಫಲವಾಗಿ ಈ ಬಿಡುಗಡೆ ಸಾಧ್ಯವಾಗಿದೆ ಎಂಬುದರಲ್ಲಿ ಅನುಮಾನವೇನೂ ಇಲ್ಲ. ಪ್ರಧಾನಿ ನರೇಂದ್ರ ಮೋದಿ ಅವರು ಕತಾರ್‌ನ ದೊರೆ ಶೇಖ್ ತಮೀಮ್ ಬಿನ್ ಹಮ್ಮದ್ ಅಲ್ ಥಾಣಿ ಅವರನ್ನು ಅರಬ್ ಸಂಯುಕ್ತ ಸಂಸ್ಥಾನದಲ್ಲಿ ಡಿಸೆಂಬರ್‌ನಲ್ಲಿ ಭೇಟಿಯಾಗಿದ್ದು ಈ ಬಿಡುಗಡೆಯಲ್ಲಿ ಮಹತ್ವದ ಪಾತ್ರ ವಹಿಸಿದಂತಿದೆ. ಕತಾರ್‌ನ ವಿಚಾರಣಾ ನ್ಯಾಯಾಲಯವು ಭಾರತದ ನೌಕಾಪಡೆಯ ಎಂಟು ಮಾಜಿ ಅಧಿಕಾರಿಗಳಿಗೆ ಮರಣದಂಡನೆ ವಿಧಿಸಿದ ಸುದ್ದಿ ಕೆಲವು ವಾರಗಳ ಹಿಂದೆ ಪ್ರಕಟವಾದಾಗ ಸರ್ಕಾರವು 'ಆಘಾತ' ವ್ಯಕ್ತಪಡಿಸಿತ್ತು. ಆದರೆ, ನಾಯಕರಿಬ್ಬರ ಭೇಟಿಯ ಬಳಿಕ, ಮೇಲ್ಮನವಿಯ ವಿಚಾರಣೆ ನಡೆಸಿದ ನ್ಯಾಯಾಲಯವು ಮರಣದಂಡನೆಯನ್ನು ರದ್ದು ಮಾಡಿ, ವಿವಿಧ ಪ್ರಮಾಣದ ಶಿಕ್ಷೆಯನ್ನು ಅವರಿಗೆ ವಿಧಿಸಿತ್ತು. ಈ ಕುತೂಹಲಕರ ಪ್ರಕರಣದಲ್ಲಿ ಕತಾರ್ ದೇಶವು ತನ್ನ ನಿಲುವನ್ನು ಸೌಮ್ಯಗೊಳಿಸಿದ್ದರ ಮೊದಲ ಸೂಚನೆ ಅದಾಗಿತ್ತು. 2022ರ ಆಗಸ್ಟ್‌ನಲ್ಲಿ ಬಂಧನಕ್ಕೆ ಒಳಗಾದ ಬಳಿಕ ಈ ಎಂಟು ಮಂದಿ ಆಂತರಿಕ ಭದ್ರತಾ ಸಂಸ್ಥೆಯೊಂದರ ವಶದಲ್ಲಿ ಪ್ರತ್ಯೇಕವಾಗಿ ಸೆರೆಯಲ್ಲಿದ್ದರು. ಕಳೆದ ಮಾರ್ಚ್‌ನಲ್ಲಿ ವಿಚಾರಣೆ ಆರಂಭವಾಗುವ ತನಕ ಇದು ಮುಂದುವರಿದಿತ್ತು. ಭಾರತ ಸರ್ಕಾರವು ಈ ಪ್ರಕರಣದ ಆರಂಭದ ವಾರಗಳಲ್ಲಿ ತಟಸ್ಥವಾಗಿಯೇ ಇತ್ತು. ಈ ಎಲ್ಲರೂ ನೌಕಾಪಡೆಯ ಮಾಜಿ ಅಧಿಕಾರಿಗಳಾಗಿದ್ದು ತಮ್ಮ ಕೆಲಸದ ಮೂಲಕ ದ್ವಿಪಕ್ಷೀಯ ಸಂಬಂಧ ಉತ್ತಮಗೊಳ್ಳಲು ಶ್ರಮಿಸಿದ್ದರು. ಕತಾರ್ ನೌಕಾಪಡೆಯ ಸಲಕರಣೆಗಳ ನಿರ್ವಹಣೆ ಮತ್ತು ಯೋಧರ ತರಬೇತಿಯಲ್ಲಿ ಇವರು ಭಾಗಿಯಾಗಿದ್ದರು. ಹೀಗಾಗಿಯೇ ಸರ್ಕಾರದ ತಟಸ್ಥ ಧೋರಣೆಯು ದೊಡ್ಡ ಪ್ರಶ್ನೆಯಾಗಿ ಕಾಡಿತ್ತು. ವ್ಯವಸ್ಥಾಪಕ ನಿರ್ದೇಶಕ ಹುದ್ದೆಯಲ್ಲಿದ್ದ ವ್ಯಕ್ತಿಗೆ 2019ರಲ್ಲಿ 'ಪ್ರವಾಸಿ ಭಾರತ ಸಮ್ಮಾನ' ನೀಡಿ ಪುರಸ್ಕರಿಸಲಾಗಿತ್ತು. ಈ ಗೌರವಕ್ಕೆ ಪಾತ್ರರಾದ ಮೊದಲ ಮಾಜಿ ಸೇನಾಧಿಕಾರಿ ಅವರಾಗಿದ್ದರು. ಸಂಸತ್ತಿನಲ್ಲಿ ಈ ವಿಷಯ ಪ್ರಸ್ತಾಪವಾಯಿತು, ಕುಟುಂಬದ ಸದಸ್ಯರು ಮತ್ತು ನಿವೃತ್ತ ಸೈನಿಕರ ಸಂಘಟನೆಗಳವರು ಸರ್ಕಾರದ ಮೇಲೆ ಒತ್ತಡ ತರಲಾರಂಭಿಸಿದರು. ಆ ಬಳಿಕವೇ ಸರ್ಕಾರ ಈ ಪ್ರಕರಣದಲ್ಲಿ ಆಸಕ್ತಿ ತಳೆಯಿತು.



ಈ ರೀತಿಯ ಪ್ರಕರಣಗಳು ಮರುಕಳಿಸದಂತೆ ಭಾರತವು ಎಚ್ಚರ ವಹಿಸಬೇಕಾದ ಅಗತ್ಯ ಇದೆ

ವಿಚಾರಣೆಯು ಆರಂಭವಾದ ಬಳಿಕ, ಕಾನೂನು ಹೋರಾಟದ ವೆಚ್ಚವನ್ನು ಸರ್ಕಾರ ಭರಿಸಿತು. ಜೈಲಿನಲ್ಲಿದ್ದ ವ್ಯಕ್ತಿಗಳನ್ನು ಭೇಟಿಯಾಗುವುದಕ್ಕಾಗಿ ಕುಟುಂಬದ ಸದಸ್ಯರು ಅಲ್ಲಿಗೆ ಹೋಗುವುದಕ್ಕೆ ವ್ಯವಸ್ಥೆಯನ್ನೂ ಮಾಡಲಾಯಿತು. ಭಾರತವು ನೈಸರ್ಗಿಕ ಅನಿಲ ಆಮದು ಮಾಡಿಕೊಳ್ಳುತ್ತಿರುವ ಪ್ರಮುಖ ದೇಶಗಳಲ್ಲಿ ಕತಾರ್ ಕೂಡ ಒಂದು. 2028ರಿಂದ 2048ರವರೆಗೆ 20 ವರ್ಷ ನೈಸರ್ಗಿಕ ಅನಿಲ ಪೂರೈಕೆಯ ಒಪ್ಪಂದವನ್ನು ಕತಾರ್ ಜೊತೆಗೆ ಭಾರತ ಮಾಡಿಕೊಂಡಿದೆ. ಈ ಎಂಟು ಮಂದಿಯ ಬಿಡುಗಡೆಗೆ ವಾರಕ್ಕೆ ಮುಂಚೆ ಈ ಒಪ್ಪಂದಕ್ಕೆ ಸಹಿ ಆಗಿರುವುದು ಕಾಕತಾಳೀಯವೇ ಇರಬಹುದು.

ಈ ಪ್ರಕರಣಕ್ಕೆ ಸಂಬಂಧಿಸಿ ಅಸಹಜ ಎನ್ನಿಸುವ ರೀತಿಯಲ್ಲಿ ಗೋಪ್ಯತೆ ಕಾಯ್ದುಕೊಳ್ಳಲಾಗಿದೆ. ಈ ಎಂಟು ಮಂದಿಯ ಮೇಲೆ ಇದ್ದ ಆರೋಪಗಳು ಏನು ಎಂಬುದರ ಕುರಿತು ಕತಾರ್ ಆಗಲೀ ಭಾರತ ಆಗಲೀ ಏನನ್ನೂ ಹೇಳಿಲ್ಲ. ನ್ಯಾಯಾಲಯದ ತೀರ್ಪು ಕೂಡ ಬಹಿರಂಗವಾಗಲಿಲ್ಲ. ಮರಣದಂಡನೆ ವಿಧಿಸಲಾಗಿದೆ ಎಂಬ ಒಂದು ಅಂಶ ಮಾತ್ರ ಬಹಿರಂಗವಾಯಿತು. ಹಾಗಾಗಿಯೇ ಎರಡೂ ದೇಶಗಳು ಯಾರನ್ನೋ ರಕ್ಷಿಸಲು ಯತ್ನಿಸುತ್ತಿವೆಯೇ ಎಂಬ ಪ್ರಶ್ನೆ ಮೌಲಿಕವೇ ಆಗಿದೆ. ಭಾರತದ ಕುಲಭೂಷಣ್ ಜಾಧವ್ ಅವರು ಪಾಕಿಸ್ತಾನದ ಸೆರೆಯಲ್ಲಿ ನರಳುತ್ತಿದ್ದಾರೆ. ಆದರೆ, ಪಾಕಿಸ್ತಾನದಂತೆ ಅಲ್ಲದೆ, ಕತಾರ್ ಜೊತೆಗೆ ಭಾರತವು ಸ್ನೇಹಬಂಧವನ್ನು ಹೊಂದಿದೆ. ಹಾಗಾಗಿಯೇ ನಿಜಕ್ಕೂ ಗಂಭೀರವಾದ ಆರೋಪಗಳು ಇಲ್ಲದೇ ಇದ್ದರೆ ಪ್ರಕರಣವನ್ನು ಅನಗತ್ಯವಾಗಿ ಬೆಳೆಸುವುದರಲ್ಲಿ ಅರ್ಥವಿಲ್ಲ. ಕತಾರ್‌ನ 27 ಲಕ್ಷ ಜನಸಂಖ್ಯೆಯಲ್ಲಿ ಬಹುಭಾಗ ಬೇರೆ ದೇಶಗಳಿಂದ ಬಂದವರು. ಅಲ್ಲಿರುವ ಭಾರತೀಯರ ಸಂಖ್ಯೆಯೇ ಸುಮಾರು ಎಂಟು ಲಕ್ಷ. ಕೊಲ್ಲಿಯ ಇತರ ದೇಶಗಳಲ್ಲಿಯೂ ಭಾರತೀಯರು ದೊಡ್ಡ ಸಂಖ್ಯೆಯಲ್ಲಿ ಇದ್ದಾರೆ. ಈ ಎಂಟು ಮಂದಿಯ ಬಂಧನ ಮತ್ತು ವಿಧಿಸಲಾದ ಶಿಕ್ಷೆಯ ಪ್ರಮಾಣವು ಕೊಲ್ಲಿ ರಾಷ್ಟ್ರಗಳಲ್ಲಿ ಇದ್ದ ಜನರು ದಂಗಾಗುವಂತೆ ಮಾಡಿತ್ತು. ಈಗ ಎಲ್ಲವೂ ಸುಖಾಂತ್ಯವಾಗಿದೆ. ಈ ರೀತಿಯ ಪ್ರಕರಣಗಳು ಮರುಕಳಿಸದಂತೆ ಭಾರತವು ಎಚ್ಚರ ವಹಿಸಬೇಕಾದ ಅಗತ್ಯ ಇದೆ.

ಜನರ ಮರೆವೆಯ ಕುರಿತ ಅಪಾರ ನಂಬಿಕೆಯೇ ಜನಪ್ರತಿನಿಧಿಗಳ ಭ್ರಷ್ಟತೆಗೆ ಸ್ಫೂರ್ತಿ

ಮಾತು ಮರೆತವರ ಜನ ಮರೆಯುವರೇ?



ಪಡಸಾಲೆ
ರಘುನಾಥ ಚ.ಹ.

ಹಾನಾ ರಾವಿಟಿ ಕರೆಯಾರಿಕಿ ಮೈಪಿ-ಕ್ಲಾರ್ಕ್ (Hana Rawhiti Kareariki Maipi-Clarke) ನ್ಯೂಜಿಲೆಂಡ್‌ನ ಅತ್ಯಂತ ಕಿರಿಯ ಸಂಸದೆ. ಇಪ್ಪತ್ತೊಂದು ವರ್ಷದ ಈ ಯುವತಿ ಸಂಸದೆಯಾಗಿ ಪ್ರಮಾಣವಚನ ಸ್ವೀಕರಿಸುವಾಗ ಸದನದಲ್ಲಿ ಮಾಡಿದ ಭಾಷಣ ಸಹೃದಯರ ಗಮನಸೆಳೆದಿದೆ. ಮಾವೊರಿ ಬುಡಕಟ್ಟು ಸಮುದಾಯಕ್ಕೆ ಸೇರಿದ ಹಾನಾ ಅವರ ಚೊಚ್ಚಿಲ ಭಾಷಣ ಭಾವೋದ್ವೇಗ ಹಾಗೂ ಔಪಚಾರಿಕ ಮಾತುಗಳಿಗೆ ಸೀಮಿತವಾಗಿರದೆ, ಬುಡಕಟ್ಟು ಜನರ ತವಕ-ತಲ್ಲಣಗಳನ್ನು ಜನರ ಗಮನಕ್ಕೆ ತರುವ ವಿಶಿಷ್ಟ ಪ್ರಯತ್ನವೂ ಆಗಿತ್ತು. ಹಾನಾ ಹಾವಭಾವಗಳು ಮಾವೊರಿ ಸಮುದಾಯದ ಸಂಸ್ಕೃತಿ ಮತ್ತು ಭಾಷೆಯ ಪ್ರದರ್ಶನದಂತಿದ್ದವು. 'ನಿಮಗಾಗಿ ಸಾಯಲು ಸಿದ್ಧವಿದ್ದರೂ, ನಿಮ್ಮ ಸಲುವಾಗಿಯೇ ಬದುಕಲು ಬಯಸುವೆ' ಎನ್ನುವ ಸಂಸದೆಯ ಮಾತುಗಳು ನ್ಯೂಜಿಲೆಂಡ್‌ನ ಬುಡಕಟ್ಟು ಜನರಲ್ಲಿ ರೋಮಾಂಚನ ಮೂಡಿಸಿರಬೇಕು. ಸದನದಲ್ಲಿದ್ದ ಹಿರಿಯ ಸದಸ್ಯರ ಮುಖಗಳಲ್ಲಿ ಕಿರಿಯ ಸಹೋದ್ಯೋಗಿಯ ಬಗ್ಗೆ ಹೆಮ್ಮೆ ಎದ್ದುಕಾಣಿಸುತ್ತಿತ್ತು. ಕಾಳಜಿ, ಭಾವುಕತೆ ಹಾಗೂ ಬದ್ಧತೆ ಮಿಳಿತಗೊಂಡ ಹಾನಾಳ ಮಾತುಗಳು ಜನರ ಮನಸ್ಸಿನಲ್ಲಿ ದೀರ್ಘಕಾಲ ಉಳಿಯುವಂತಹವು.

ಬುಡಕಟ್ಟು ಸಂಸ್ಕೃತಿ-ಭಾಷೆ ಉಳಿಯಬೇಕು; ಜನಾಂಗೀಯ ನಿಂದನೆ ನಿಂತು ಬುಡಕಟ್ಟು ಜನಾಂಗಗಳಿಗೆ ಅವರ ಹಕ್ಕುಗಳು ದಕ್ಕಬೇಕು ಎಂದು ಹಾನಾ ಮಾತನಾಡಿದ ಕೆಲ ದಿನಗಳಲ್ಲೇ, ಭಾರತದ ಕೆಲವು ಸಂಸದರು ಮಾತು ಕಳೆದುಕೊಂಡಿರುವ ವರದಿ ಪ್ರಕಟಗೊಂಡಿದೆ. ಕಳೆದ ಐದು ವರ್ಷಗಳ ಅವಧಿಯಲ್ಲಿ ಕರ್ನಾಟಕದ ನಾಲ್ವರು ಸೇರಿದಂತೆ ಒಂಬತ್ತು ಸಂಸದರು ಸಂಸತ್‌ನಲ್ಲಿ ಬಾಯಿಯೇ ಬಿಟ್ಟಿಲ್ಲ ಎನ್ನುವುದು ವರದಿಯ ಮುಖ್ಯಾಂಶ. ಸಂಸತ್‌ನಲ್ಲಿ ಮೂಕರಾಗಿರುವ ಸದಸ್ಯರಲ್ಲಿ ಸಿನಿಮಾಗಳಲ್ಲಿ ದೊಡ್ಡ ದೊಡ್ಡ ಡೈಲಾಗ್ ಹೊಡೆಯುವ ಕಲಾವಿದರೂ ಇದ್ದಾರೆ. ಮಾತಿನ ವಿಷಯವಿರಲಿ, ಒಂದೇ ಒಂದು ಪ್ರಶ್ನೆಯನ್ನು ಪ್ರಸ್ತಾಪಿಸುವ ಪ್ರಯತ್ನವನ್ನೂ ಕೆಲವು ಸಂಸದರು ಮಾಡಿಲ್ಲ. ಈ ಮೌನ ಏನನ್ನು ಸೂಚಿಸುತ್ತದೆ?

ತಮ್ಮ ಕ್ಷೇತ್ರ ಹಾಗೂ ಮತದಾರರ ಆಶೋತ್ತರಗಳ ಬಗ್ಗೆ ಮಾತನಾಡಲು ಜನಪ್ರತಿನಿಧಿಗಳಿಗೆ ಸಂಸತ್‌ಗಿಂತಲೂ ಮಿಗಿಲಾದ ವೇದಿಕೆ ಮತ್ತೊಂದಿಲ್ಲ. ಸಂಸತ್‌ನಲ್ಲಿ ಆಡುವ ಪ್ರತಿ ಮಾತೂ ಜನರ ಆಶೋತ್ತರವನ್ನು ದೇಶದ-ಸರ್ಕಾರದ ಗಮನಕ್ಕೆ ತರುವ ಪ್ರಯತ್ನವಾಗಿರುತ್ತದೆ. ಇಂಥ ಅಪೂರ್ವ ಅವಕಾಶವನ್ನು ಬಳಸಿಕೊಳ್ಳುವಲ್ಲಿ ಜನಪ್ರತಿನಿಧಿಗಳು ಪ್ರಯತ್ನ ನಡೆಸಿಲ್ಲ ಎಂದಾದರೆ, ಪ್ರತಿನಿಧಿಸುವ ಕ್ಷೇತ್ರಕ್ಕೆ ಹಾಗೂ ಮತದಾರರಿಗೆ ಅವರು ಅನ್ಯಾಯವೆಸಗಿದ್ದಾರೆ ಎಂದೇ ಅರ್ಥ.

ಪ್ರಜಾಪ್ರತಿನಿಧಿಗಳ ಹೊಣೆಗೇಡಿತನದಲ್ಲಿ ಮತದಾರರ ಪಾತ್ರವೂ ಇದೆ. ಚುನಾವಣೆಯಲ್ಲಿ ಯೋಗ್ಯ ಅಭ್ಯರ್ಥಿ-ಯನ್ನು ಆರಿಸುವುದು ಮತದಾರರ ಕೈಯಲ್ಲೇ ಇದೆ. ತಮ್ಮ ಹಕ್ಕನ್ನು ವಿವೇಚನೆಯಿಂದ ಚಲಾಯಿಸುವುದರ ಬದಲು, ಯಾರದೋ ಮುಖ ನೋಡಿ ಮತ್ಯಾರನ್ನೋ ಆರಿಸುವ ಪ್ರವೃತ್ತಿ ಇತ್ತೀಚಿನ ಚುನಾವಣೆಗಳಲ್ಲಿ ಸಾಮಾನ್ಯ ಎನ್ನುವಂತಾಗಿದೆ. ಬೇರೆ ಯಾರಿಗೋ ಬಲ ತುಂಬಲಿಕ್ಕಾಗಿ ಅಸಮರ್ಥ ಅಭ್ಯರ್ಥಿಯನ್ನು ಚುನಾಯಿಸುವುದು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಆತ್ಮಹತ್ಯಾಘಾತುಕ ನಡವಳಿಕೆ. ಇದರ ಪರಿಣಾಮವಾಗಿ, ಆರಿಸಿಹೋದವರು ಪ್ರಜೆಗಳ ಹಿತವನ್ನು ಲೆಕ್ಕಿಸದೆ, ತಮಗೆ ಮತ ದೊರಕಿಸಿಕೊಟ್ಟ ನಾಯಕಮಣಿಯ ವರ್ಚಸ್ಸನ್ನು ಹೆಚ್ಚಿಸಲು ತಮ್ಮೆಲ್ಲ ಚಾತುರ್ಯವನ್ನು ಬಳಸತೊಡಗುತ್ತಾರೆ. ಅಧಿಕಾರದ ಕೇಂದ್ರಗಳಲ್ಲಿ ಇರುವವರಿಗೂ ತಮ್ಮ ಮಾತುಗಳಿಗೆ ಗೋಣಾಡಿಸುವ ಕೋಡಂಗಿಗಳು ಪ್ರಿಯವೇ ಹೊರತು, ಜನರ ಪರವಾಗಿ ಧ್ವನಿ ಎತ್ತುವವರಲ್ಲ.

ರಾಜಕೀಯ ವ್ಯವಸ್ಥೆಯಲ್ಲಿ ಜನಪ್ರತಿನಿಧಿಗಳು ಪಕ್ಷಗಳೊಂದಿಗೆ ಗುರುತಿಸಿಕೊಳ್ಳುವುದು ಸಹಜ. ಆದರೆ, ಜನರಿಗೆ ಬೆನ್ನುಮಾಡಿ, ಪಕ್ಷದ ನಾಮಬಲದಿಂದಲೇ ರಾಜಕಾರಣ ಮಾಡಬಹುದೆನ್ನುವ ಪ್ರವೃತ್ತಿ ವ್ಯಾಪಾರವೇ ಹೊರತು ರಾಜಕಾರಣವಲ್ಲ. ಚುನಾವಣೆಯಲ್ಲಿ ಸ್ಪರ್ಧಿಸುವ ಸ್ಥಳೀಯ ವ್ಯಕ್ತಿಯ ಗುಣಾವಗುಣಗಳಿಗಿಂತಲೂ ಆ ಅಭ್ಯರ್ಥಿ ಪ್ರತಿನಿಧಿಸುವ ಪಕ್ಷ ಹಾಗೂ ಪಕ್ಷದ ಮುಖಂಡರು ಮುಖ್ಯ ಎನ್ನುವ ಸ್ಥಿತಿ ಸದ್ಯದ ರಾಜಕಾರಣದ್ದು. ಜೀವಮಾನದಲ್ಲಿ ಒಮ್ಮೆಯೂ ಭೇಟಿಯಾಗದ ವ್ಯಕ್ತಿಯನ್ನು ಕುರುಡಾಗಿ ಆರಾಧಿಸುತ್ತ, ಸ್ಥಳೀಯ ಅದಕ್ಷ ವ್ಯಕ್ತಿಯನ್ನು ಚುನಾವಣೆಯ ಮೂಲಕ ಮೌಲ್ಯಯುತಗೊಳಿಸುವ ಪ್ರಹಸನಗಳಿಗೆ ವರ್ತಮಾನ ಸಾಕ್ಷಿಯಾಗಿದೆ. ಶಾಸನಸಭೆಗಳಲ್ಲಿ ಸರಿಯಾದ ಚರ್ಚೆಗಳು ನಡೆಯದಿರುವುದಕ್ಕೆ ಹಾಗೂ ಸರ್ಕಾರ ನಡೆಸುವವರು ಶಾಸನಸಭೆಗಳನ್ನು ದುರ್ಬಲಗೊಳಿಸಿರುವುದಕ್ಕೆ ಮತದಾರರು ತಮ್ಮ ಹಕ್ಕುಗಳನ್ನು ಸಮರ್ಪಕವಾಗಿ ಬಳಸದಿರುವುದೂ ಕಾರಣವಾಗಿದೆ.

ವಿದ್ವಜ್ಜನರ, ಜನಪರ ಕಾಳಜಿಯ ನಾಯಕರ ಅನುಭವ ಮಂಟಪಗಳಾಗಬೇಕಿದ್ದ ರಾಜ್ಯಸಭೆ ಹಾಗೂ ವಿಧಾನ ಪರಿಷತ್ತುಗಳು ಹೊಗಳುಭಟ್ಟರ ಒಡ್ಡೋಲಗಗಳಾಗಿವೆ. ಜನಪರ ಮನೋಭಾವ ಹೊಂದಿದ್ದೂ ಚುನಾವಣೆಗಳಲ್ಲಿ ಆಯ್ಕೆಯಾಗುವ ಸಾಮರ್ಥ್ಯ ಅಥವಾ ಆಸಕ್ತಿ ಇಲ್ಲದವರಿಗೆ ಸಮಾಜಸೇವೆಯ ಅವಕಾಶ ಕಲ್ಪಿಸುವುದು ಹಾಗೂ ಸಮಾಜದ ವಿವಿಧ ವರ್ಗಗಳ ಪ್ರತಿಭಾವಂತರಿಗೆ ಶಾಸನಸಭೆಗಳಲ್ಲಿ ಸ್ಥಾನ ಕಲ್ಪಿಸುವುದು ಮೇಲ್ಮನೆಗಳ ಉದ್ದೇಶವಾಗಿದೆ. ಆದರೆ, ರಾಜ್ಯಸಭೆಯೂ ಸೇರಿದಂತೆ ರಾಜ್ಯಗಳಲ್ಲಿನ ವಿಧಾನ ಪರಿಷತ್ತುಗಳಲ್ಲಿನ ಸದ್ಯದ ಸದಸ್ಯರ ಹಿನ್ನೆಲೆ ಗಮನಿಸಿದರೆ, ಅವರು ಪಕ್ಷದ ಖಜಾನೆ ತುಂಬಿಸುವ ಉದ್ಯಮಿಗಳೋ ಕುಬೇರರೋ ಆಗಿದ್ದಾರೆ; ಚುನಾವಣೆಗಳಲ್ಲಿ ನೇರವಾಗಿ ಗೆಲ್ಲಲಾಗದ ಹೌದಪ್ಪ, ಹೌದಮ್ಮಂದಿರನ್ನು ಅಧಿಕಾರದ ಮೊಗಸಾಲೆಗೆ ಹಿಂಬಾಗಿಲಿನಿಂದ ಕರೆತರುವ ಪ್ರಯತ್ನಗಳ ಉತ್ಪನ್ನಗಳಾಗಿದ್ದಾರೆ. ಕಲಾವಿದರು ಸೇರಿದಂತೆ ವಿವಿಧ ವರ್ಗಗಳಿಂದ ಮೇಲ್ಮನೆಗಳಿಗೆ ನಾಮಕರಣ ಮಾಡಲು ಕಣ್ಣು ಕಿವಿ ನಾಲಿಗೆ ಇಲ್ಲದವರನ್ನೇ ಆರಿಸಿಕೊಳ್ಳಲಾಗುತ್ತಿದೆ.




ಜನಪ್ರತಿನಿಧಿಗಳು ಶಾಸನಸಭೆಗಳಲ್ಲಿ ಮಾತನಾಡುತ್ತಿಲ್ಲ ಎಂದಮಾತ್ರಕ್ಕೆ ಅವರು ಮಾತುಬಾರದವರೋ ಅಥವಾ ಮಾತನಾಡುವ ಕಲೆ ಗೊತ್ತಿಲ್ಲದವರೋ ಎಂದರ್ಥವಲ್ಲ. ಶಾಸನಸಭೆಗಳಲ್ಲಿ ಮೂಕರಾಗಿಯೂ ಹೌದಪ್ಪಗಳಾಗಿಯೂ ಗುರುತಿಸಿಕೊಂಡಿರುವ ಕರ್ನಾಟಕದ ಪ್ರತಿನಿಧಿಗಳ ಸಾರ್ವಜನಿಕ ಜೀವನವನ್ನು ಗಮನಿಸಿದರೆ, ಈ ಪ್ರತಿನಿಧಿಗಳು ರಾಜಕೀಯ ಎದುರಾಳಿಗಳನ್ನು ಹತ್ತಿಕ್ಕುವ ಪ್ರಯತ್ನದಲ್ಲಿ ಮತ್ತೆ ಮತ್ತೆ ನಾಲಿಗೆಯಿಂದ ನಂಜು ಕಾರಿದ್ದಾರೆ. ಕೆಲವು ರಾಜಕಾರಣಿಗಳಂತೂ ಧರ್ಮರಕ್ಷಣೆಯ ಹೆಸರಿನಲ್ಲಿ, ನಾಲಿಗೆ ಮೇಲಿನ ನಿಯಂತ್ರಣವನ್ನು ಕಳೆದುಕೊಂಡು ಸಾಮಾಜಿಕ ಸೌಹಾರ್ದ ಕದಡುವ ಮಾತುಗಳನ್ನಾಡಿದ್ದಾರೆ. ದಕ್ಷಿಣ ಕನ್ನಡದ ಶಾಸಕರೊಬ್ಬರು, ಕ್ರಿಶ್ಚಿಯನ್ ಆಡಳಿತದ ಶಾಲೆಗಳನ್ನು ಹಿಂದೂ ವಿದ್ಯಾರ್ಥಿಗಳು ಬಹಿಷ್ಕರಿಸಬೇಕು ಎಂದು ಇತ್ತೀಚೆಗಷ್ಟೇ ಕರೆ ನೀಡಿದ್ದಾರೆ. ಜನರ ಬಗ್ಗೆ ಕಾಳಜಿಯಿರುವ ಯಾವುದೇ ಮನುಷ್ಯ ಇಷ್ಟು ಬೇಜವಾಬ್ದಾರಿಯಿಂದ ಮಾತನಾಡುವುದು ಸಾಧ್ಯವೇ? ಹೀಗೆ ಮಾತನಾಡುವ ಶಾಸಕನನ್ನು ಪ್ರತಿನಿಧಿಸುವ ಪಕ್ಷಕ್ಕೆ ಕಿಂಚಿತ್ ಮುಜುಗರವೂ ಆಗದಿರುವ, ಆತ್ಮಸಾಕ್ಷಿಗೆ ಅರ್ಥವೇ ಇಲ್ಲದಿರುವ ರಾಜಕೀಯ ಸಂದರ್ಭ ಇಂದಿನದಾಗಿದೆ. ಮಾತು ಆಡಬೇಕಾದ ಸ್ಥಾನದಲ್ಲಿ ಮೌನವಾಗಿರುವುದು, ಸುಮ್ಮನಿರಬೇಕಾದಲ್ಲಿ ಅಬ್ಬರಿಸಿ ಮಾತಿನ ಕಿಮ್ಮತ್ತು ಕಳೆಯುವುದರಲ್ಲಿ ರಾಜಕಾರಣಿಗಳು ಸ್ಪರ್ಧೆ ನಡೆಸುತ್ತಿರುವಂತಿದೆ.

ಚುನಾವಣೆ ಸಂದರ್ಭದಲ್ಲಿ ರಾಜಕಾರಣಿಗಳು ಜನರಿಗೆ 'ಮಾತು' ನೀಡುತ್ತಾರೆ. ಗೆದ್ದ ನಂತರ ಸಂವಿಧಾನದ ಹೆಸರಿನಲ್ಲಿ ಪ್ರಮಾಣವಚನ ಸ್ವೀಕರಿಸುತ್ತಾರೆ. ಮತದಾರರಿಗೆ ಕೊಟ್ಟ ಮಾತನ್ನು ಉಳಿಸಿಕೊಳ್ಳದಿರುವುದು ಹಾಗೂ ಸಂವಿಧಾನದ ಹೆಸರಿನಲ್ಲಿ ಸ್ವೀಕರಿಸಿದ ವಚನಕ್ಕೆ ಬದ್ಧರಾಗದಿರುವುದು ಈ ಹೊತ್ತಿನ ರಾಜಕಾರಣದ ಸಹಜ ಲಕ್ಷಣ ಎನ್ನುವಂತಾಗಿದೆ. ಆಡುವ ಮಾತಿಗೊಂದು ಧ್ವನಿ-ಮೌಲ್ಯವಿರುತ್ತದೆ ಎನ್ನುವುದನ್ನು ತಿಳಿಯದ ಅರಿವುಗೇಡಿಗಳ ಪಾಲಿಗೆ ಮಾತೆನ್ನುವುದು ಶಬ್ದಾಡಂಬರ ಹಾಗೂ ಜನರನ್ನು ಮರುಳು ಮಾಡುವ ಒಂದು ಸಲಕರಣೆಯಷ್ಟೇ.

ವಚನಭ್ರಷ್ಟತೆ ಎನ್ನುವುದು ಒಪ್ಪಿತ ಮೌಲ್ಯ ಎನ್ನುವಂತಾಗಿರುವ ರಾಜಕೀಯ ಸಂದರ್ಭದಲ್ಲಿ ಹಾನಾಳಂಥ ಸಂಸದೆ ಬದುಕಲು ತಿಳಿಯದ ಅವಿವೇಕಿಯಂತೆ ಯಾರಿಗಾದರೂ ಕಾಣಿಸಿದರೆ, ಭಾರತದ ಪ್ರಜಾಪ್ರಭುತ್ವ ಗಂಡಾಂತರ ಎದುರಿಸುತ್ತಿದೆ ಎನ್ನುವ ಆತಂಕವು ದೇಶದ್ರೋಹದಂತೆ ಭಾಸವಾದರೆ ಆಶ್ಚರ್ಯದ ಸಂಗತಿಯೇನಲ್ಲ. ಆದರೆ, ನಿಜವಾದ ದುರಂತ ಇರುವುದು ರಾಜಕಾರಣಿಗಳ ಮರೆವೆಯಲ್ಲಲ್ಲ; ವಚನಭ್ರಷ್ಟ ರಾಜಕಾರಣಿಗಳನ್ನು ಮತ್ತೆ ಮತ್ತೆ ಕ್ಷಮಿಸುವ ಜನರ ಮರೆವೆಯಲ್ಲಿ. ಲೋಕಸಭೆ ಚುನಾವಣೆ ಸನ್ನಿಹಿತವಾಗಿರುವ ಈಗಿನ ಸಂದರ್ಭವನ್ನೇ ಗಮನಿಸಿ: ಈವರೆಗೆ ಅಜ್ಞಾತವಾಸದಲ್ಲಿದ್ದ ಕೆಲವರು ನಿದ್ದೆಯಿಂದ ತಿಳಿದೆದ್ದವರಂತೆ ಮಾತು ಮಸೆಯುತ್ತ ತಮ್ಮ ಅಸ್ತಿತ್ವ ಪ್ರಕಟಪಡಿಸುತ್ತಿದ್ದಾರೆ. ಮತದಾರರ ಮರೆವೆಯ ಬಗ್ಗೆ ಇರುವ ಅಪಾರ ನಂಬಿಕೆಯೇ ರಾಜಕಾರಣಿಗಳ ಹೊಣೆಗೇಡಿತನ ಹದ್ದುಮೀರುವುದಕ್ಕೆ ಕಾರಣವಾದಂತಿದೆ.

ಚುರುಮುರಿ



ರೆಸಾರ್ಟ್ ರಾಜಕಾರಣ

• ಆನಂದ

'ಪಾಕಿಸ್ತಾನದಲ್ಲಿ ರೆಸಾರ್ಟ್‌ಗಳಿಲ್ಲವ ಬಾಸೂ?' ಎಂದ ಗೆಳೆಯ. 'ಏಕಯ್ಯಾ, ಪ್ರವಾಸ ಹೊರಟಿದ್ದೀಯೇನು?' ಎಂದು ಕೇಳಿದೆ.

'ಇಲ್ಲ ಬಾಸೂ. ರೆಸಾರ್ಟ್ ನನಗಲ್ಲ. ಇಮ್ರಾನ್, ನವಾಜ್ ಷರೀಫ್ ಮುಂತಾದವರಿಗೆ' ಎಂದಾಗ ಅವನ ತರ್ಕ ಅರ್ಥವಾಗಲಿಲ್ಲ. ಹುಬ್ಬೇರಿಸಿದೆ.

'ಅದೇ ಬಾಸೂ. ಅಲ್ಲಿ ಚುನಾವಣೆ ನಡೆದಿದೆ. ಯಾವ ಪಕ್ಷಕ್ಕೂ ಬಹುಮತ ಬಂದಿಲ್ಲ. ಎಲ್ಲರೂ ನಮ್ಮದೇ ಮೆಜಾರಿಟಿ ಅಂತಿದಾರೆ...'

'ಸರಿ. ಅದಕ್ಕೆ ರೆಸಾರ್ಟ್ ಯಾಕೆ ಬೇಕು?'

'ಏನ್ ಬಾಸೂ ಹೀಗೆ ಕೇಳ್ತಿದೀರ? ನಮ್ಮಲ್ಲಿ ಆಗುವ ಹಾಗೆ ಅಲ್ಲೂ ರೆಸಾರ್ಟ್ ರಾಜಕಾರಣ ನಡೆಯೋಲ್ಲವೆ?' ಎಂದು ಕೇಳಿದಾಗ ನನಗೆ ಅವನ ಮಾತಿನ ಅರ್ಥವಾಯಿತು.

'ನಮ್ಮಲ್ಲಿ ಪಕ್ಷಗಳು ಚುನಾವಣೇಲಿ ಗೋಲ್‌ಮಾಲ್ ನಡೆದಿದೆ ಎಂದು ಬೊಬ್ಬಿರಿಯುವಂತೆ ಅಲ್ಲೂ ದೂರುಗಳು ಕೇಳಿಬರುತ್ತಿವೆ. ಗೆದ್ದವರನ್ನು ಒಂದು ಕಡೆ ಕೂಡಿಹಾಕಲು ರೆಸಾರ್ಟ್‌ಗಳು ಬೇಡವೇ? ಅದಕ್ಕೇ ಕೇಳಿದೆ'.

'ಛೆಛೆ ನಾವು ಮಾಡಿದ್ದೇ ಅವರೂ ಮಾಡ್ತಾರೆ ಅಂತ ಹೇಗೆ ಹೇಳ್ತೀಯ?'

'ನಮ್ಮಿಂದ ಕಲಿಯುವುದು ಸುಲಭ. ಪರಿಸ್ಥಿತಿ ನೆಟ್ಟಗಿದ್ದಿದ್ದರೆ ನಮ್ಮಿಂದ ಕೆಲವು ಎಕ್ಸ್‌ಪರ್ಟ್‌ಗಳು ಈಗಾಗಲೇ ಅಲ್ಲಿಗೆ ಹೋಗಿ, ಯಾರು ಬೇಕೋ ಅವರನ್ನು, ಹೇಗೆ ಬೇಕೋ ಹಾಗೆ ನಿಭಾಯಿಸಿ ಸರ್ಕಾರ ರಚಿಸಲು ಸಹಾಯ ಮಾಡುತ್ತಿದ್ದರು. ಕರ್ನಾಟಕ, ಬಿಹಾರ ಇಲ್ಲೆಲ್ಲ ಇಂತಹ ಪರಿಣತರು ಇಲ್ವೆ?' ಎಂದಾಗ ಮುಂಬೈ ಪಂಚತಾರಾ ಹೋಟೆಲ್, ಈಗಲ್‌ಟನ್ ರೆಸಾರ್ಟ್ ಮುಂತಾದವೆಲ್ಲ ನೆನಪಿಗೆ ಬಂದವು.

'ಸೈನ್ಯದವರು ಇದಕ್ಕೆಲ್ಲ ಅವಕಾಶ ಕೊಡಲ್ಲ'.

'ಅಂದರೆ, ಗೆದ್ದ ಸಂಸದರಲ್ಲಿ ತಮಗೆ ಬೇಕಾದವರನ್ನು ಸೈನ್ಯದವರೇ ಬ್ಯಾರಕ್‌ಗಳಲ್ಲಿ ಹಿಡಿದು ಇಟ್ಟುಕೊಳ್ತಾರೇನು?'

'ಅದಿನ್ನೂ ಆದ ಹಾಗೆ ಕಾಣ್ತಿಲ್ಲ. ಆದರೆ ಅಲ್ಲಿ ಸೈನ್ಯವೇ ಚುನಾವಣಾ ಆಯೋಗ...'

'ಅದ್ಹೇಗೆ ಸಾಧ್ಯ ಬಾಸೂ?'

'ನೀನು ಕೇಳಿಲ್ಲವೇನು? ಆಲ್ ಕಂಟ್ರೀಸ್ ಹ್ಯಾವ್ ಆ್ಯನ್ ಆರ್ಮಿ, ಬಟ್ ಇನ್ ಪಾಕಿಸ್ತಾನ್ ಆರ್ಮಿ ಹ್ಯಾಸ್ ಎ ಕಂಟ್ರಿ'.

ದಿನದ ಟ್ವೀಟ್

ಎಲ್ಲಿ ಹೋಯಿತು ವಾಕ್ಚಾತುರ್ಯ?



ವಾಕ್ಚಾತುರ್ಯಕ್ಕೆ ಹೆಸರಾದ ಮತ್ತು ಜೋರು ಡೈಲಾಗ್‌ಗಳನ್ನು ಹೇಳುವುದರಲ್ಲಿ ನಿಸ್ಸೀಮರು ಎನಿಸಿಕೊಂಡಿರುವ ಭಾರತದ ಇಬ್ಬರು ಚಲನಚಿತ್ರನಟರಾದ ಸನ್ನಿ ದೇವ್ಯೋಲ್ ಮತ್ತು ಶತ್ರುಘ್ನ ಸಿನ್ಹಾ ಅವರು ಅವಧಿ ಪೂರ್ಣಗೊಳಿಸುತ್ತಿರುವ ಲೋಕಸಭೆಯಲ್ಲಿ ಒಂದೇ ಒಂದು ಮಾತನ್ನೂ ಆಡಿಲ್ಲ.

ಶೋಭನಾ ಕೆ. ನಾಯರ್, ಪತ್ರಕರ್ತೆ

ಕಿಡಿನುಡಿ



ಕನಿಷ್ಠ ಬೆಂಬಲ ಬೆಲೆಗೆ ಕಾನೂನಿನ ಬೆಂಬಲ ನೀಡಬೇಕೆಂಬ ರೈತರ ಬೇಡಿಕೆ ಅತ್ಯಂತ ಸಮಂಜಸ ಮತ್ತು ನ್ಯಾಯಯುತವಾಗಿದೆ. ರೈತರನ್ನು ಖಾಸಗಿ ನಿಯಂತ್ರಕರು ಹಾಗೂ ಖರೀದಿದಾರರ ಕೃಪಾಕಟಾಕ್ಷದಲ್ಲಿ ಇರುವಂತೆ ಮಾಡುವುದು ಸರಿಯಲ್ಲ! ಮಹಾರಾಷ್ಟ್ರದಲ್ಲಿ ಹತ್ತಿ ಮತ್ತು ಸೋಯಾಬೀನ್ ಬೆಳೆಯುವ ರೈತರು ಭಾರಿ ನಷ್ಟ ಅನುಭವಿಸುತ್ತಿದ್ದಾರೆ. ಕನಿಷ್ಠ ಬೆಂಬಲ ಬೆಲೆಗಿಂತಲೂ ಕಡಿಮೆ ಬೆಲೆಗೆ ಖಾಸಗಿ ವರ್ತಕರಿಗೆ ಅವರು ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡಬೇಕಾಗಿ ಬಂದಿದೆ...

ಪ್ರಕಾಶ್ ಅಂಬೇಡ್ಕರ್, ವಕೀಲ, ರಾಜಕಾರಣಿ

25 ವರ್ಷಗಳ ಹಿಂದೆ

ಭಾನುವಾರ, 14-2-1999

● **ಶಕ್ತಿ ಪ್ರದರ್ಶಿಸಲು ಸಭೆ, ಸಮಾವೇಶಗಳ ರಾಜಕೀಯ**

ಬೆಂಗಳೂರು, ಫೆ. 13– ರಾಜ್ಯ ವಿಧಾನಸಭಾ ಚುನಾವಣೆಗೆ ಇನ್ನೂ ಏಳೆಂಟು ತಿಂಗಳುಗಳು ಇರುವಾಗಲೇ ಎಲ್ಲಾ ಪ್ರಮುಖ ರಾಜಕೀಯ ಪಕ್ಷಗಳು ಪೂರ್ವಸಿದ್ಧತೆಯ ಮೊದಲ ಹಂತವಾಗಿ 'ರ್‍ಯಾಲಿ ರಾಜಕೀಯ' ಮಾಡುತ್ತಾ ಪಕ್ಷ ಹಾಗೂ ಜನ ಸಂಘಟನೆಯಲ್ಲಿ ತೊಡಗಿವೆ.

ಜನತಾದಳವು ಉಪಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಪಕ್ಷದ ಅಧ್ಯಕ್ಷ ಪಟ್ಟ ಕಟ್ಟಿ ಚುನಾವಣಾ ಸೇನಾಧಿಪತಿಯನ್ನಾಗಿ ನೇಮಿಸಿದ್ದು, ಅವರ ಬೆನ್ನೆಲುಬಾಗಿ ಮಾಜಿ ಪ್ರಧಾನಿ ಎಚ್‌.ಡಿ. ದೇವೇಗೌಡ, ಮುಖ್ಯಮಂತ್ರಿ ಜೆ.ಎಚ್. ಪಟೇಲ್, ಹಿರಿಯ ನಾಯಕ ಎಸ್.ಆರ್. ಬೊಮ್ಮಾಯಿ, ಸಿ.ಎಂ. ಇಬ್ರಾಹಿಂ, ಸಚಿವ ಡಿ. ಮಂಜುನಾಥ್ ಇದ್ದಾರೆ.

ಬಿಜೆಪಿಯು ಬಿ.ಎಸ್. ಯಡಿಯೂರಪ್ಪ ಅವರ ನಾಯಕತ್ವದಲ್ಲಿ ಮುನ್ನಡೆದಿದ್ದು, ಅದರ ಬೆಂಬಲಕ್ಕೆ ಪ್ರಧಾನಿ ಎ.ಬಿ. ವಾಜಪೇಯಿ, ಗೃಹ ಸಚಿವ ಎಲ್‌.ಕೆ. ಅಡ್ವಾಣಿ, ರಾಜ್ಯದವರಾದ ಸಚಿವ ಅನಂತಕುಮಾರ್ ಹಾಗೂ ವೆಂಕಯ್ಯನಾಯ್ಡು ಇದ್ದಾರೆ.

ಲೋಕಶಕ್ತಿಗೆ 'ಶಕ್ತಿ'ಯಾಗಿರುವ ಕೇಂದ್ರದ ವಾಣಿಜ್ಯ ಸಚಿವ ಹಾಗೂ ಮಾಜಿ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆಯವರ ಸಾರಥ್ಯದಲ್ಲಿ ಚುನಾವಣೆ ಎದುರಿಸಲು ನಿರ್ಧರಿಸಲಾಗಿದೆ.

50 ವರ್ಷಗಳ ಹಿಂದೆ

ಗುರುವಾರ, 14-2-1974

● **ಭೂಸುಧಾರಣೆ ತಿದ್ದುಪಡಿ ವಿಧೇಯಕದಲ್ಲಿ ಕೆಲವು ಮಾರ್ಪಾಡಿಗೆ ದೆಹಲಿ ಸಲಹೆ**

ಬೆಂಗಳೂರು, ಫೆ. 13– ಕಳೆದ ವರ್ಷದ ಮಧ್ಯಭಾಗದಲ್ಲಿ ಕರ್ನಾಟಕ ವಿಧಾನಮಂಡಲ ಅಂಗೀಕರಿಸಿದ ಭೂಸುಧಾರಣಾ ವಿಧೇಯಕದಲ್ಲಿ ಕೆಲವೊಂದು ಬದಲಾವಣೆಗಳನ್ನು ಮಾಡಬೇಕೆಂದು ಕೇಂದ್ರ ಗೃಹ ಇಲಾಖೆಯು ರಾಜ್ಯ ಸರ್ಕಾರಕ್ಕೆ ಸಲಹೆ ನೀಡಿದೆ.

12 ಸಾವಿರ ರೂಪಾಯಿಗಳ ಆದಾಯ ಮಿತಿ, ಧಾರ್ಮಿಕ ದತ್ತಿ ಸಂಸ್ಥೆಗಳಿಗೆ ಹೆಚ್ಚು ಜಮೀನು ಅವಕಾಶ, ವಿಧವೆ, ಸೈನಿಕರು ಮತ್ತಿತರ ಕೆಲವು ವರ್ಗದವರಿಗೆ ಗೇಣಿ ಅನುಕೂಲ ಇತ್ಯಾದಿ ಬಗ್ಗೆ ವಿಧೇಯಕ ವಿಧಿಸಿರುವ ನಿರ್ಬಂಧದ ಔಚಿತ್ಯದ ಬಗ್ಗೆ ಕೇಂದ್ರ ಸರ್ಕಾರ ಹೆಚ್ಚಿನ ವಿವರಗಳನ್ನು ಕೇಳಿದೆ ಎಂದು ಮುಖ್ಯಮಂತ್ರಿ ದೇವರಾಜ ಅರಸು ಅವರು ಇಂದು ಇಲ್ಲಿ ವರದಿಗಾರರಿಗೆ ತಿಳಿಸಿದರು.

● **'ಮದ್ದುಂಟೆ ಜನನ ಮರಣಕ್ಕೆ' ಕೃತಿಗೆ 2 ಸಹಸ್ರ ರೂ. ನೆರವು**

ಮಂಗಳೂರು, ಫೆ. 13– ಇಲ್ಲಿನ ಮಂಗಳ ಗಂಗೋತ್ರಿಯ ಕನ್ನಡ ಪ್ರಾಧ್ಯಾಪಕ ಗುಂಡ್ಮಿ ಚಂದ್ರಶೇಖರ ಐತಾಳ ಅವರ ಜನಪದ ಸಾಹಿತ್ಯ ಸಂಪುಟ 'ಮದ್ದುಂಟೆ ಜನನ ಮರಣಕ್ಕೆ' ಎಂಬ ಕೃತಿಗೆ ಕರ್ನಾಟಕ ಸರ್ಕಾರದ ಸಾಹಿತ್ಯ ಮತ್ತು ಸಂಸ್ಕೃತಿ ಅಭಿವೃದ್ಧಿ ಇಲಾಖೆಯಿಂದ ಎರಡು ಸಹಸ್ರ ರೂ. ಧನಸಹಾಯ ದೊರಕಿದೆಯೆಂದು ತಿಳಿದುಬಂದಿದೆ.

ಇದೇ ರೀತಿ ಇತರ 12 ಪುಸ್ತಕಗಳಿಗೆ ಸರ್ಕಾರ ಧನಸಹಾಯ ನೀಡಿರುವುದಾಗಿ ತಿಳಿದುಬಂದಿದೆ.

ಸಂಗತ

ವರ್ತಮಾನಕ್ಕೆ ಬೇಕು ಸಾಂತ್ವನದ ಮುಲಾಮು

ಎಲ್ಲರೂ ಅವರಷ್ಟಕ್ಕೆ ಧರ್ಮಮಾರ್ಗದಲ್ಲಿ ಬದುಕಿದರೆ ಸಾಕು, ಧರ್ಮ ಗೆಲ್ಲುತ್ತದೆ ಎಂಬ ಅರಿವನ್ನು ಬಿತ್ತಬೇಕಾದದ್ದು ಈ ಹೊತ್ತಿನ ಅನಿವಾರ್ಯ

● ಸತೀಶ್ ಜಿ.ಕೆ. ತೀರ್ಥಹಳ್ಳಿ

ನಮ್ಮ ಭರತಭೂಮಿಯ ವೈಶಿಷ್ಟ್ಯವೇ ಹಾಗೆ. ಹತ್ತಾರು ಮತಪಂಥಗಳು, ನೂರಾರು ಜಾತಿ, ಬುಡಕಟ್ಟುಗಳು, ಸಾವಿರಾರು ಭಾಷೆ, ಬೋಧೆಗಳಲ್ಲಿ ಹಸನುಗೊಂಡ ಸಮೃದ್ಧ ನೆಲವಿದು. ಸರ್ವಜನಾಂಗದ ಶಾಂತಿಯ ಪ್ರಜಾತಂತ್ರ ತೋಟದಲ್ಲಿ ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ವಿಭಿನ್ನ ಹಿನ್ನೆಲೆ. ಜನಮನದ ಸಾಮಾನ್ಯ ತುಡಿತಗಳಲ್ಲಿ ಭಕ್ತಿಭಾವವೂ ಒಂದು.

ಆರಾಧಿಸುವ ದೇವರು, ಆರಾಧನಾ ಕ್ರಮಗಳಲ್ಲಿ ಭಿನ್ನತೆಯಿದ್ದರೂ ಧಾರ್ಮಿಕಶ್ರದ್ಧೆಯು ಸಾಮಾಜಿಕ ನೈತಿಕತೆಗೆ ಮೂಲದ್ರವ್ಯವಾಗಿಯೂ ವೈಯಕ್ತಿಕ ನೆಲೆಯಲ್ಲಿ ಸನ್ಮಾರ್ಗದ ದಿಕ್ಸೂಚಿಯಾಗಿಯೂ ಒದಗುತ್ತಾ ಬಂದಿದ್ದಕ್ಕೆ ಇತಿಹಾಸದಲ್ಲಿ ಕುರುಹುಗಳಿವೆ. ಹಾಗಿದ್ದೂ ಮೌಲ್ಯಗಳು ಅಧಃಪತನ ಕಂಡಿರುವ ಪ್ರಸ್ತುತ ದುರಿತ ಕಾಲಘಟ್ಟದಲ್ಲಿ, ಭಕ್ತಿಭಾವ ಕೂಡ ಇತರ ಪದಾರ್ಥಗಳಂತೆ ಸ್ವಾರ್ಥಕ್ಕೋ ಲಾಭಕ್ಕೋ ಹಣ, ಅಧಿಕಾರವೆಂಬ ವಿಷದೊಟ್ಟಿಗೆ ಸೇರಿ ಕಲಬೆರಕೆಗೊಂಡಿರುವುದು ಸತ್ಯ. ಹೊಸ್ತಿಲ ಒಳಗಿರಬೇಕಾದ ವೈಯಕ್ತಿಕ ನೆಲೆಯ ಜಾತಿಮತಗಳ ಪ್ರೀತಿ, ನಂಬಿಕೆ, ಆಚರಣೆಗಳಂತೂ ಈಗ ಬೀದಿಗೆ ಬಂದು ಅಬ್ಬರಿಸುತ್ತಿರುವ ಹೊತ್ತು.

ಅಷ್ಟಕ್ಕೂ ನಮ್ಮನ್ನು ನಾವು ಕೇಳಿಕೊಳ್ಳಬೇಕಾದದ್ದು ಏನೆಂದರೆ, 'ದಯೆಯೇ ಧರ್ಮದ ಮೂಲ' ಎಂಬುದನ್ನು ಅರಿತಿದ್ದರೆ ಜಗತ್ತಿನಲ್ಲಿ ಈ ಪರಿ ಗಲಭೆ, ಹಿಂಸೆ, ಯುದ್ಧ, ರಕ್ತಪಾತ, ಸಾವುನೋವು-ಗಳೆಲ್ಲಾ ನಡೆಯುತ್ತಿದ್ದವೇ? 'ಅಶಕ್ತರಲ್ಲಿ ದೇವರನ್ನು ಕಾಣಬೇಕು' ಎಂಬ ಭಕ್ತಿವಾಣಿಯು ಅರ್ಥವಾಗಿದ್ದರೆ ಸುಡುವ ಬಡತನ, ಹಸಿವು, ಅಸುರಕ್ಷತೆಯಿಂದ ಜಗತ್ತು ಬಳಲುತ್ತಿತ್ತೇ? ಸತ್ಯ, ನಿಷ್ಠೆ, ಪ್ರಾಮಾಣಿಕತೆ ಎಲ್ಲವೂ ದೈವನಿಯಮಗಳು ಎಂದು ನಾವು ಬಗೆದಿದ್ದರೆ ಹೀಗೆಲ್ಲಾ ಸುಳ್ಳು, ಮೋಸ, ವಂಚನೆ, ಭ್ರಷ್ಟಾಚಾರ, ಅನಾಚಾರ ನಮ್ಮನ್ನು ಆಳುತ್ತಿದ್ದವೇ? ಮತ್ತೊಬ್ಬರನ್ನು ವಂಚಿಸುವುದು, ನೋಯಿಸುವುದೆಲ್ಲ ದೈವನಿಂದನೆಯೆಂದು ಅರಿತಿದ್ದರೆ ಈ ಪರಿ ದೌರ್ಜನ್ಯ, ಅತ್ಯಾಚಾರ, ಆಕ್ರಂದನ ಕೇಳಿಬರುತ್ತಿದ್ದವೇ? ಹಾಗಿದ್ದರೆ ನಮ್ಮಲ್ಲಿ ನಿಜವಾದ ದೈವಭಕ್ತಿ ಎಲ್ಲಿದೆ ಎಂದು ಯೋಚಿಸಬೇಕಿದೆ.

ನಿಜ, ನಮ್ಮ ಶ್ರದ್ಧಾಭಕ್ತಿಯಲ್ಲಿ ನೈಜತೆ, ಬದ್ಧತೆ ಇದ್ದಿದ್ದರೆ ಜಗತ್ತು ಇಷ್ಟೊಂದು ಕ್ಷೋಭೆಗೆ ಒಳಗಾಗುತ್ತಿರಲಿಲ್ಲ. ಜಗತ್ತಿನೆಲ್ಲೆಡೆ ಇರುವ ಧರ್ಮಸಾರವನ್ನು ಅರ್ಥೈಸುವಲ್ಲಿ ಸೋತ ಅನುಯಾಯಿಗಳು ಅಪಾರ್ಥಗಳನ್ನೇ ಸಮಾಜದ ಮೇಲೆ ಹೇರುತ್ತಾ ನಿಜವಾದ ಅರ್ಥದಲ್ಲಿ ಧರ್ಮವಿರೋಧಿಗಳಾಗಿರುವ ವಾಸ್ತವ ಎದುರಿಗಿದೆ.

'ಸಹನೆ ಮತ್ತು ಪ್ರೀತಿಯೇ ನನ್ನ ಧರ್ಮ' ಎಂಬ ಗಾಂಧೀಜಿಯ ಆಶಯವನ್ನು ಕಣ್ಣಿಗೊತ್ತಿಕೊಳ್ಳಬೇಕು. ನಮಗೆಲ್ಲಾ ದೈವಭಕ್ತಿ, ನಂಬಿಕೆಗಳು ಇರಬೇಕು ಮತ್ತವು ಪ್ರಾಮಾಣಿಕವಾಗಿರಬೇಕು. ಯಾಕೆಂದರೆ, ನಮ್ಮ ನಡುವಿನ ಮೋಸಗಾರರು, ಭ್ರಷ್ಟಾಚಾರಿಗಳು, ಅತ್ಯಾಚಾರಿಗಳು, ಜಾತಿವಾದಿಗಳು, ಮತಾಂಧರು, ಹಿಂಸಾವಿನೋದಿಗಳು, ಯುದ್ಧೋನ್ಮಾದಿಗಳು, ಭಯೋತ್ಪಾದಕರಲ್ಲಿ ಹೆಚ್ಚಿನವರು ಅಪಾರ ದೈವಭಕ್ತರೂ ಧರ್ಮಶ್ರದ್ಧೆಯುಳ್ಳವರಾಗಿಯೇ ಅಂತಹ ನೀಚ ಕೃತ್ಯಗಳಲ್ಲಿ ತೊಡಗಿಕೊಳ್ಳುತ್ತಿರುವುದು! ಸತ್ಯ, ನ್ಯಾಯ, ನೀತಿ, ಮಾನವೀಯತೆಯನ್ನು ನಿತ್ಯ ಕೃತಿಯಲ್ಲಿ ಬಾಳದೇ ಹೋದವರು ಅದು ಹೇಗೆ ದೈವಭಕ್ತರಾಗಿ ಉಳಿದಾರು?

ಜಾತಿಭೇದ, ವರ್ಗಸಂಘರ್ಷಗಳನ್ನು ನಿರ್ಮೂಲ ಮಾಡುವಲ್ಲಿ ಶ್ರದ್ಧಾಕೇಂದ್ರಗಳು, ಮಠಮಾನ್ಯಗಳ ಪಾಲು ದೊಡ್ಡದಿರಬೇಕಿತ್ತು. ವಿಪರ್ಯಾಸವೆಂದರೆ, ಅವೆಲ್ಲಾ ತಮ್ಮ ಆಸ್ತಿ-ಸಂಪತ್ತನ್ನು ಕ್ರೋಡೀಕರಿಸುವ, ವೃದ್ಧಿಸುವ, ರಾಜಕೀಯ ಲಾಭ ಪಡೆಯುವ, ಭ್ರಷ್ಟರನ್ನು ರಕ್ಷಿಸುತ್ತಿರುವಂತಹ ನಿದರ್ಶನಗಳೇ ಬಹಳ. ದೇವರು, ಧರ್ಮಗಳ ಹೆಸರಿನಲ್ಲಿ ಮನುಷ್ಯ ಸಂಬಂಧಗಳನ್ನು ಸೀಳಿ ಕಂದಕ ಸೃಷ್ಟಿಸುವಂತಹ ಸದ್ಯದ ಸ್ಥಿತಿ ನಿಜಕ್ಕೂ ಅಪಾಯಕಾರಿಯಾದದ್ದು.



ಹಿಂಸೆಯನ್ನು ಭೂಮಿಯಿಂದಲೇ ಓಡಿಸಬೇಕೆಂದು ಪಣ ತೊಟ್ಟವರು ಅದೆಷ್ಟೋ ಮಂದಿ ಸಂತರು, ದಾರ್ಶನಿಕರು. ಸಾಕ್ರೆಟಿಸ್‌ನಂತೆ ಕೆಲವರು ಆ ಪ್ರಯತ್ನದಲ್ಲಿ ಜೀವತ್ಯಾಗಕ್ಕೂ ಸಿದ್ಧರಾಗಿ, ಹಿಂಸೆಗೇ ಬಲಿಯಾದರು! ಲೋಕದ ಕಣಕಣವೂ ಹುಟ್ಟುವ ಪ್ರತಿ ಜೀವಚರವೂ ದೇವರ ಸೃಷ್ಟಿಯೆಂದು ನಂಬುವ ನಾವು ದೈವತ್ವವನ್ನು ಕಾಣಬೇಕಿರುವುದು ಜೀವಪರ, ಮನುಷ್ಯಪರ ಧೋರಣೆಗಳಲ್ಲಿ. ಪ್ರಕೃತಿಸಹಜ ಭಿನ್ನತೆಯನ್ನು ಸ್ವೀಕರಿಸುತ್ತಾ, ರೋಗದಂತೆ ಬಾಧಿಸುತ್ತಿರುವ ರಾಗದ್ವೇಷಗಳನ್ನು ತೊರೆಯದೇ ಹೋದರೆ ನಾಳಿನ ಜಗತ್ತು ಜೀವಕಳೆಯನ್ನು ಕಳೆದುಕೊಂಡು ಸ್ಮಶಾನದಂತೆ ಆಗುತ್ತದೆ. ಭವಿಷ್ಯದಲ್ಲಿ ಆರೋಗ್ಯಕರ ತಲೆಮಾರುಗಳು ಉಳಿಯಬೇಕೆಂದರೆ, ಬೆಳೆಯಬೇಕಾದ ಎಳೆಯ ಕುಡಿಗಳಿಗೆ ದ್ವೇಷ, ಸಂಕುಚಿತತೆಯ ಬದಲು ಒಲವು, ಜೀವದಯೆಯನ್ನು ಧಾರೆಯೆರೆಯಬೇಕಿದೆ.

ಪರಧರ್ಮ ಸಹಿಷ್ಣುಗಳಾಗದ ವಿನಾ ನಾವು ಮನುಷ್ಯರಾಗುವುದಿಲ್ಲ ಎಂಬುದನ್ನರಿತು ನಮ್ಮ ಧಾರ್ಮಿಕ, ರಾಜಕೀಯ ನಿಲುವುಗಳು ನಮ್ಮೊಳಗಿನ ಮಾನವೀಯತೆಯನ್ನೇ ಕೊಲ್ಲುವಷ್ಟು ಕ್ರೂರವಾಗದಂತೆ ಕಾಯ್ದುಕೊಳ್ಳಬೇಕು. 'ಸ್ಥಾವರಕ್ಕಳಿವುಂಟು...' ಎಂಬಂತಹ ಅರಿವಿನಲ್ಲಿ ನಮಗೆ ಮನುಷ್ಯರ ಸದ್ಗುಣ, ನಡತೆಯು ಗುಡಿ, ಚರ್ಚು, ಮಸೀದಿಗಳಿಗಿಂತಲೂ ಮುಖ್ಯವಾಗಬೇಕು. ನಿರ್ಜೀವವಾದ ಕಲ್ಲು, ಕಂಬ, ಗೋಪುರ, ಮಿನಾರು, ಶಿಲುಬೆಗಳಲ್ಲಿ ದೇವರನ್ನು ಹುಡುಕುವ ನಾವು, ದೇವರ ಜೀವಂತ ಸೃಷ್ಟಿಯಾದ ಮನುಷ್ಯರಲ್ಲಿ ದೇವರನ್ನು ಹುಡುಕುವುದು ಮತ್ತು ಸ್ವತಃ ದೇವರಾಗುವ ಅಗತ್ಯವನ್ನು ಮರೆಯಬಾರದು.

ಪ್ರಕೃತಿಯ ಆರಾಧನೆ ಶ್ರೇಷ್ಠವಾದುದು. ಸಕಲ ಜೀವಚರಗಳಿಗೆ ಲೇಸನು ಬಗೆವುದೇ ದೇವರೆಡೆಗೆ ನಮ್ಮನ್ನು ಕೊಂಡೊಯ್ಯುವ ಹಾದಿ ಎಂದು ಭಾವಿಸಿದರೆ ಈ ಜೀವಜಗತ್ತು ನಿರಾಳ.

ವಾಚಕರ ವಾಣಿ

ರಾಜ್ಯಪಾಲರ ಮಾದರಿ ನಡೆ

ಪಶ್ಚಿಮ ಬಂಗಾಳ, ಕೇರಳ, ತಮಿಳುನಾಡು ರಾಜ್ಯಗಳ ರಾಜ್ಯಪಾಲರು ದಿನಾಲೂ ಎಂಬಂತೆ ಆಯಾ ರಾಜ್ಯ ಸರ್ಕಾರಗಳೊಂದಿಗೆ ಸಂಘರ್ಷದಲ್ಲಿ ಇರುತ್ತಾರೆ. ಕೆಲವು ರಾಜ್ಯಗಳು ಇಂತಹ ರಾಜ್ಯಪಾಲರ ವಿರುದ್ಧ ಸುಪ್ರೀಂ ಕೋರ್ಟ್ ಮೆಟ್ಟಿಲು ಹತ್ತಿದ್ದೂ ಇದೆ. ಅಂತಹ ಸಂದರ್ಭಗಳಲ್ಲಿ ಸುಪ್ರೀಂ ಕೋರ್ಟ್, ತಮ್ಮ ಸಾಂವಿಧಾನಿಕ ಜವಾಬ್ದಾರಿ ಅರಿತು ಕಾರ್ಯನಿರ್ವಹಿಸುವಂತೆ ಹಿತವಚನವನ್ನೂ ನೀಡಿದೆ. ರಾಜ್ಯಪಾಲರ ಹುದ್ದೆಯು ರಾಜ್ಯ ಸರ್ಕಾರಗಳಿಗೆ ಕಿರುಕುಳ ನೀಡುವ ಸಲುವಾಗಿಯೇ ಇದೆಯೇನೋ ಅನ್ನುವಷ್ಟರ ಮಟ್ಟಿಗೆ ಕೆಲ ರಾಜ್ಯಪಾಲರ ಕಾರ್ಯವೈಖರಿ ಇರುತ್ತದೆ. ಇದಕ್ಕೆ ಕೇಂದ್ರದ ಸಮ್ಮತಿಯೂ ಇರಬಹುದು.

ಕೆಲವು ರಾಜ್ಯಪಾಲರು ವಿಧಾನಮಂಡಲವನ್ನು ಉದ್ದೇಶಿಸಿ ಮಾತನಾಡುವಾಗ, ಸರ್ಕಾರದ ಭಾಷಣವನ್ನು ಕಾಟಾಚಾರಕ್ಕೆ ಎಂಬಂತೆ ಓದುವುದು, ಕೇಂದ್ರ ಸರ್ಕಾರವನ್ನು ಟೀಕಿಸುವ ಭಾಗಗಳನ್ನು ಓದದೇ ಕೈಬಿಡುವುದು ಆಗಾಗ್ಗೆ ವರದಿಯಾಗುತ್ತವೆ. ರಾಜ್ಯ ಸರ್ಕಾರ ಸಿದ್ಧಪಡಿಸುವ ರಾಜ್ಯಪಾಲರ ಭಾಷಣವು ಸರ್ಕಾರದ ಧ್ಯೇಯ, ಧೋರಣೆಗಳನ್ನು ಬಿಂಬಿಸುತ್ತದೆ. ಅಪವಾದವೆಂಬಂತೆ, ಕರ್ನಾಟಕದ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಕೇಂದ್ರ ಸರ್ಕಾರವನ್ನು ಟೀಕಿಸುವ ಭಾಗವನ್ನೂ ಒಳಗೊಂಡು ಸೋಮವಾರ ಪೂರ್ಣ ಬಜೆಟ್ ಭಾಷಣವನ್ನು ಓದಿರುವುದು ಇತರ ರಾಜ್ಯಪಾಲರಿಗೆ ಮಾದರಿಯಾಗಿದೆ. ರಾಜ್ಯ ಸರ್ಕಾರದೊಂದಿಗೆ ಸೌಹಾರ್ದದಿಂದ ಇರುವ ಗೆಹಲೋತ್, ರಾಜ್ಯಪಾಲರ ಹುದ್ದೆಯ ಘನತೆ, ಗೌರವವನ್ನು ಅರಿತವರಾಗಿದ್ದಾರೆ. ಕೇಂದ್ರದಿಂದ ರಾಜ್ಯ ಸರ್ಕಾರಕ್ಕೆ ಬರಬೇಕಾದ ತೆರಿಗೆ ಪಾಲು, ಬರ ಪರಿಹಾರದ ಬಾಕಿ ಹಾಗೂ ಕೇಂದ್ರ ತೋರುತ್ತಿರುವ ತಾರತಮ್ಯ ಧೋರಣೆಯ ಬಗ್ಗೆ ಅವರಿಗೆ ಮನವರಿಕೆ ಆಗಿರಲಿಕ್ಕೂ ಸಾಕು. ಭಾಷಣವನ್ನು ಯಥಾವತ್ತಾಗಿ ಓದುವ ಮೂಲಕ ರಾಜ್ಯದ ಪರವಾಗಿ ನಿಂತ ಅವರಿಗೆ ಕರ್ನಾಟಕದ ಜನತೆ ಆಭಾರಿಯಾಗಿ ಇರಬೇಕು.

ವೆಂಕಟೇಶ ಮಾಚಕನೂರ, ಧಾರವಾಡ

ತುಟಿ ಬಿಚ್ಚದೆ ಸಾಧಿಸಿದ್ದಾದರೂ ಏನು?

17ನೇ ಲೋಕಸಭೆಯು 1,354 ಗಂಟೆಗಳ ಕಾಲ ಕಲಾಪ ನಡೆಸಿದ್ದು, ಈ ಅವಧಿಯಲ್ಲಿ ಒಂಬತ್ತು ಸಂಸದರು ತುಟಿ ಬಿಚ್ಚದೆ ಮೌನಕ್ಕೆ ಶರಣಾಗಿರುವುದು ಮಾಧ್ಯಮಗಳಲ್ಲಿ ವರದಿಯಾಗಿದೆ. ಚರ್ಚೆಯಲ್ಲೂ ಭಾಗವಹಿಸದ ಈ ಸಂಸದರಲ್ಲಿ ನಾಲ್ವರು ನಮ್ಮ ಕರುನಾಡಿನವರು ಎಂದು ತಿಳಿದು ಮಹದಾನಂದವಾಯಿತು! ನೀತಿ-ನಿಲುವು ಹಾಗೂ ಮಸೂದೆಗಳ ಬಗ್ಗೆ, ತಮ್ಮ ಸಂಸದೀಯ ಕ್ಷೇತ್ರದ ಆಗುಹೋಗುಗಳ ಬಗ್ಗೆ ಮಾತನಾಡದೆ ಗಾಢ ಮೌನಕ್ಕೆ ಶರಣಾಗಿರುವ ಈ ಸಂಸದರು, 'ಮಾತು ಬೆಳ್ಳಿ ಮೌನ ಬಂಗಾರ' ಎಂಬ ನುಡಿಗಟ್ಟಿನ ಕಟ್ಟಾ ಅಭಿಮಾನಿಗಳಾಗಿರಬಹುದೇ ಎಂಬ ಸಂಶಯ ಕಾಡುತ್ತಿದೆ. ಅಥವಾ 'ಮೂಕನಾಗಬೇಕು/ ಜಗದಲಿ ಜ್ವಾಕ್ಯಾಗಿರಬೇಕು' ಎಂದು ಸಾರಿದ ತತ್ವಪದಕಾರ ಕಡಕೋಳ ಮಡಿವಾಳಪ್ಪನವರ ನುಡಿಯನ್ನು ದಿಟ ಮಾಡಲು ಹೊರಟಿರುವರೇ ಎಂಬ ಜಿಜ್ಞಾಸೆ ಕಾಡುತ್ತಿದೆ. ನನ್ನದೊಂದು ಕೆಟ್ಟ ಕುತೂಹಲ. ತುಟಿ ಬಿಚ್ಚದೆ, ಮೌನಿಗಳಾಗಿದ್ದು ಈ ಸಂಸದರು ಏನನ್ನು ಸಾಧಿಸಿದರು? ಮತ ನೀಡಿ ಅವರನ್ನು ಗೆಲ್ಲಿಸಿದ ಮತದಾರರ ಮನಃಸ್ಥಿತಿಯು ಈ ವಿಷಯ ತಿಳಿದ ಬಳಿಕ ಹೇಗಾಗಿರಬಹುದು? ಇವರು ಪ್ರತಿನಿಧಿಸುವ ಸಂಸದೀಯ ಕ್ಷೇತ್ರಗಳು ಸಂಸತ್ತಿನಲ್ಲಿ ತುಟಿ ಬಿಚ್ಚುವ ಅವಶ್ಯಕತೆ ಇಲ್ಲದಷ್ಟು ಅಭಿವೃದ್ಧಿಯಾಗಿವೆ ಎಂದು ಪರಿಭಾವಿಸಿ ನಮಗೆ ನಾವೇ ಸಾಂತ್ವನ ಹೇಳಿಕೊಳ್ಳೋಣವೇ?

ವೆಂಕಟೇಶ್ ಮುದಗಲ್, ಕಲಬುರಗಿ

ಬೆಳ್ಳುಳ್ಳಿಯೋ ಬೆಳ್ಳಿಯೋ?!

ಬೆಳ್ಳುಳ್ಳಿಯ ಬೆಲೆ ಗಗನಕ್ಕೇರಿದ್ದು, ಪ್ರತಿ ಕೆ.ಜಿಗೆ ₹ 400ಕ್ಕೂ ಹೆಚ್ಚಾಗಿರುವುದು ಜನಸಾಮಾನ್ಯರಿಗೆ ಹೊರೆಯಾಗಿದೆ. ಈ ಕಾರಣದಿಂದ, 'ಬೆಳ್ಳುಳ್ಳಿ ಬಳಸಿ ತಯಾರಿಸುವ ಪದಾರ್ಥಗಳನ್ನು ತಾತ್ಕಾಲಿಕವಾಗಿ ಕೈಬಿಟ್ಟು, ಬೆಳ್ಳುಳ್ಳಿ ರಹಿತ ಆಹಾರ ಪದಾರ್ಥಗಳನ್ನು ಶೇ 10ರಷ್ಟು ರಿಯಾಯಿತಿ ದರದಲ್ಲಿ ಗ್ರಾಹಕರಿಗೆ ನೀಡಲು ಚಿಂತನೆ ನಡೆಸಿದ್ದೇವೆ' ಎಂದು ಮೈಸೂರು ಜಿಲ್ಲಾ ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣಗೌಡ ಅವರು ತಿಳಿಸಿರುವುದಾಗಿ ವರದಿಯಾಗಿದೆ. 'ಭೂಲೋಕದ ಅಮೃತ' ಎಂದು ಕರೆಯಲಾಗುವ ಬೆಳ್ಳುಳ್ಳಿ ಅತಿ ಹೆಚ್ಚು ಔಷಧೀಯ ಗುಣಗಳನ್ನು ಹೊಂದಿರುವ ತರಕಾರಿಯಾಗಿದೆ. ಹಲವಾರು ಕಾಯಿಲೆಗಳಿಗೆ ಅದು ಸಿದ್ಧೌಷಧವಾಗಿದೆ.

ದಿನನಿತ್ಯದ ಸಾರು, ಸಾಂಬಾರ್, ಪಲ್ಯ, ಚಟ್ನಿಯಂತಹವುಗಳ ತಯಾರಿಕೆಯಲ್ಲಿ ಬಳಸಲಾಗುವ ಬೆಳ್ಳುಳ್ಳಿಯ ದರ ಇದೀಗ ಇಷ್ಟೊಂದು ಏರಿರುವುದು ಬೇಸರದ ಸಂಗತಿ. ಇದರ ಬೆಲೆ ನಿಯಂತ್ರಣಕ್ಕೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ತುರ್ತು ಗಮನ ಹರಿಸಬೇಕಾಗಿದೆ.

ಕೆ.ವಿ.ವಾಸು, ಮೈಸೂರು

ಖಾಲಿ ಗೋಡೆ ಕಬಳಿಸಲು ಪೈಪೋಟಿ!

ಮುಂಬರುವ ಲೋಕಸಭಾ ಚುನಾವಣಾ ಪ್ರಚಾರದ ಭಾಗವಾಗಿ ಬಿಜೆಪಿಯು ರಾಷ್ಟ್ರದಾದ್ಯಂತ ಅನಾವರಣಗೊಳಿಸಲು ಮುಂದಾಗಿರುವ 'ಮತ್ತೊಮ್ಮೆ ಮೋದಿ ಸರ್ಕಾರ' ಎನ್ನುವ ಗೋಡೆ ಬರಹದ ಅಭಿಯಾನಕ್ಕೆ ಚುನಾವಣಾ ನೀತಿ ಸಂಹಿತೆಯ ಅಡಿ ಚುನಾವಣಾ ಆಯೋಗವು ಅನುಮತಿ ನೀಡಬಹುದೇ ಎನ್ನುವುದು ತಿಳಿಯದು. ಆದರೆ ಒಂದು ಪ್ರಮುಖ ಪಕ್ಷವು ಇಂತಹ ಅಭಿಯಾನವನ್ನು ಕೈಗೊಂಡರೆ ಅದನ್ನು ಸಮೂಹ ಸನ್ನಿಯಂತೆ ಎಲ್ಲ ಪಕ್ಷಗಳೂ ಅನುಸರಿಸುವುದರಲ್ಲಿ ಸಂದೇಹವಿಲ್ಲ.

ಮತದಾರರನ್ನು ತಲುಪುವಲ್ಲಿ ಇದು ಒಂದು ಪರಿಣಾಮಕಾರಿ ಪ್ರಚಾರ ಮಾರ್ಗವಾಗಿರುವುದರಿಂದ, ಖಾಲಿ ಗೋಡೆಗಳನ್ನು ದೊಡ್ಡ ಪ್ರಮಾಣದಲ್ಲಿ ಕಬಳಿಸುವ ದಿಸೆಯಲ್ಲಿ ಹುಚ್ಚು ಸ್ಪರ್ಧೆ ಏರ್ಪಡುವ ಮತ್ತು ಈ ವಿಷಯದಲ್ಲಿ ಘರ್ಷಣೆಗಳು ಸಂಭವಿಸುವುದನ್ನು ಅಲ್ಲಗಳೆಯಲಾಗದು. ಹಾಗೆಯೇ ಪಟ್ಟಣ ಮತ್ತು ನಗರಗಳ ಸೌಂದರ್ಯವನ್ನು ಕೆಡಿಸುವ ಈ ಗೋಡೆ ಬರಹಗಳನ್ನು ಚುನಾವಣೆಯ ನಂತರ ಸ್ವಚ್ಛಗೊಳಿಸುವವರು ಯಾರು ಎನ್ನುವ ಜನರ ಪ್ರಶ್ನೆಗೆ ರಾಜಕೀಯ ನಾಯಕರು ಉತ್ತರ ಕೊಡಬೇಕಾಗಿದೆ. ಆಯೋಗವು ಅಕಸ್ಮಾತ್ ಈ ಗೋಡೆ ಬರಹಗಳಿಗೆ ಅನುಮತಿ ನೀಡಿದರೆ, ಅದನ್ನು ಅಳಿಸುವ ಜವಾಬ್ದಾರಿಯ ಬಗೆಗೂ ಚಿಂತಿಸಬೇಕು.

ರಮಾನಂದ ಶರ್ಮಾ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.


ರೈತರು ಮತ್ತೆ ಪ್ರತಿಭಟನೆಗೆ ಇಳಿದದ್ದು ಏಕೆ?



ಕೇಂದ್ರ ಸರ್ಕಾರವು ಜಾರಿಗೆ ತಂದಿದ್ದ ಮೂರು ಕೃಷಿ ಕಾಯ್ದೆಗಳ ವಿರುದ್ಧ ರೈತರು ವರ್ಷವಿಡೀ ಪ್ರತಿಭಟನೆ ನಡೆಸಿದ್ದು ಇನ್ನೂ ಹಸಿರಾಗೇ ಇದೆ. ಇದರ ಮಧ್ಯೆ ಮತ್ತೆ ರೈತರು ಪ್ರತಿಭಟನೆಗೆ ಇಳಿದಿದ್ದಾರೆ. ಪಂಜಾಬ್, ಹರಿಯಾಣದಿಂದ ತಂಡ ತಂಡವಾಗಿ ಸಾವಿರಾರು ರೈತರು ದೆಹಲಿಯತ್ತ ಹೊರಟಿದ್ದಾರೆ. ದೇಶದ ಬೇರೆ ರಾಜ್ಯಗಳಿಂದಲೂ ರೈತರು ಅತ್ತ ಹೊರಟಿದ್ದಾರೆ. ಈ ಬಾರಿಯ ಪ್ರತಿಭಟನೆಯ ಪ್ರಮುಖ ಬೇಡಿಕೆ 'ಕನಿಷ್ಠ ಬೆಂಬಲ ಬೆಲೆ' ಅನುಷ್ಠಾನಕ್ಕೆ ಕಾಯ್ದೆಯ ಖಾತರಿ ನೀಡಿ ಎಂಬುದಾಗಿದೆ. ಅಂತಹದ್ದೊಂದು ಭರವಸೆಯನ್ನು ಕೇಂದ್ರ ಸರ್ಕಾರವು ರೈತರಿಗೆ ನೀಡಿತ್ತು. ಆದರೆ ವರ್ಷಗಳು ಕಳೆದರೂ ಅದು ಕಾರ್ಯರೂಪಕ್ಕೆ ಬಂದಿಲ್ಲ. ಈಗಿನ ಪ್ರತಿಭಟನೆಗೆ ಇದೇ ಪ್ರಮುಖ ಕಾರಣ

• ಸುಕೃತ ಎಸ್.

ಮೂರು ಕೃಷಿ ಕಾನೂನುಗಳನ್ನು ಹಿಂಪಡೆಯಿರಿ – ಇದು ಒಂದು ವರ್ಷದವರೆಗೆ ದೆಹಲಿಯಲ್ಲಿ ನೆಲೆನಿಂತು ಪ್ರತಿಭಟಿಸಿದ್ದ ರೈತರ ಪ್ರಮುಖ ಆಗ್ರಹವಾಗಿತ್ತು. ಬೆಂಬಲ ಬೆಲೆ ನಿಗದಿ, ಸ್ವಾಮಿನಾಥನ್ ಆಯೋಗದ ಶಿಫಾರಸು ಜಾರಿ ಸೇರಿದಂತೆ ಇತರ ಹಲವು ಬೇಡಿಕೆಗಳೂ ಇದ್ದವು. 2021ರ ನವೆಂಬರ್ ತಿಂಗಳೊಂದರ ಬೆಳಗಿನ ಹೊತ್ತಿನಲ್ಲಿ ದೇಶವನ್ನು ಉದ್ದೇಶಿಸಿ ಮಾತನಾಡಿದ ಪ್ರಧಾನಿ ನರೇಂದ್ರ ಮೋದಿ ಅವರು ಮೂರು ಕೃಷಿ ಕಾನೂನುಗಳನ್ನು ಹಿಂಪಡೆದುಕೊಳ್ಳುತ್ತೇವೆ ಎಂದು ಘೋಷಿಸಿದರು. ಇದೇ ವೇಳೆ ಬೆಂಬಲ ಬೆಲೆ ನಿಗದಿಯು ಹೆಚ್ಚು ಪಾರದರ್ಶಕವಾಗುವ ಕುರಿತು ಸಮಿತಿಯೊಂದನ್ನು ರಚಿಸಲಾಗುವುದು ಎಂದೂ ಭರವಸೆ ನೀಡಿದ್ದರು.



ಪ್ರಧಾನಿ ಮೋದಿ ಅವರು ಹೀಗೆ ಭರವಸೆ ನೀಡಿದ ಸುಮಾರು ಎಂಟು ತಿಂಗಳ ಬಳಿಕ ಕೇಂದ್ರ ಸರ್ಕಾರವು ಸಮಿತಿಯೊಂದನ್ನು ರಚನೆ ಮಾಡಿತು. ಕೃಷಿ ಸಚಿವಾಲಯದ ಮಾಜಿ ಕಾರ್ಯದರ್ಶಿ ಸಂಜಯ್ ಅಗರ್ವಾಲ್ ಅವರ ನೇತೃತ್ವದಲ್ಲಿ 2022ರ ಜುಲೈನಲ್ಲಿ ಸಮಿತಿಯನ್ನು ರೂಪಿಸಲಾಯಿತು. 2022ರ ಜುಲೈಯಿಂದ 2024 ಫೆಬ್ರುವರಿಯವರೆಗೆ 37 ಸಭೆಗಳನ್ನು, ಕಾರ್ಯಾಗಾರಗಳನ್ನು ಈ ಸಮಿತಿ ನಡೆಸಿದೆ ಎಂದು ಕೇಂದ್ರ ಸರ್ಕಾರ ಹೇಳಿದೆ. ಸಮಿತಿ ರಚನೆಯಾದ ಎರಡು ವರ್ಷದ ಬಳಿಕವೂ ಇಲ್ಲಿಯವರೆಗೂ ಸಮಿತಿಯು ಯಾವುದೇ ಶಿಫಾರಸನ್ನು ನೀಡಿಲ್ಲ ಅಥವಾ ಯಾವುದೇ ಮಧ್ಯಂತರ ವರದಿಯನ್ನೂ ನೀಡಿಲ್ಲ.

ಸಮಿತಿಯ ಕುರಿತು ಸಂಯುಕ್ತ ಕಿಸಾನ್ ಮೋರ್ಚಾ ಸೇರಿದಂತೆ ಪ್ರತಿಭಟನೆಯಲ್ಲಿ ಭಾಗಿಯಾಗಿದ್ದ ಹಲವು ರೈತ ಸಂಘಟನೆಗಳಿಗೂ ಒಪ್ಪಿಗೆ ಇರಲಿಲ್ಲ. 'ಮೂರು ಕೃಷಿ ಕಾನೂನುಗಳನ್ನು ಬೆಂಬಲಿಸಿದ್ದ 'ಕೃಷಿ ನಾಯಕ'ರನ್ನು ಈ ಸಮಿತಿಗೆ ಸೇರಿಸಿಕೊಳ್ಳಲಾಗಿದೆ. ಆದ್ದರಿಂದ ನಮಗೆ ಈ ಸಮಿತಿಯು ಒಪ್ಪಿಗೆ ಇಲ್ಲ' ಎಂದು ಸಂಯುಕ್ತ ಕಿಸಾನ್ ಮೋರ್ಚಾ ಹೇಳಿತ್ತು.

ಈಗ ಬೆಂಬಲ ಬೆಲೆ, ಸ್ವಾಮಿನಾಥನ್ ಆಯೋಗದ ಶಿಫಾರಸಿನ ಪ್ರಕಾರ ಬೆಂಬಲ ಬೆಲೆ ನಿಗದಿ ಸೇರಿ ಹಲವು ಬೇಡಿಕೆಗಳನ್ನು ಮುಂದಿಟ್ಟುಕೊಂಡು ರೈತರು ದೆಹಲಿಯತ್ತ ಹೊರಟಿದ್ದಾರೆ. 2020ರಲ್ಲಿ ರೈತರು ಹಾಗೆ 'ದೆಹಲಿ ಚಲೋ' ಆರಂಭಿಸಿದಾಗ, ಕೋವಿಡ್‌ನ ನೆಪವೊಡ್ಡಿ ಅವರನ್ನು ದೆಹಲಿ ಗಡಿಯಲ್ಲಿ ತಡೆದು ನಿಲ್ಲಿಸಲಾಗಿತ್ತು. ಆದರೆ ಈಗಲೂ ರೈತರನ್ನು ಅದೇ ರೀತಿ ತಡೆದು ನಿಲ್ಲಿಸಲು ಹರಿಯಾಣದ ಬಿಜೆಪಿ ಸರ್ಕಾರ ಮತ್ತು ದೆಹಲಿ ಪೊಲೀಸರು ಕ್ರಮ ತೆಗೆದುಕೊಂಡಿದ್ದಾರೆ. ಕಳೆದ ಬಾರಿಯಂತೆ ಈ ಬಾರಿಯೂ ರೈತರಿಗೆ ಕಬ್ಬಿಣದ ಮುಳ್ಳುಗಳಿರುವ ತಡೆ ಗೋಡೆಯನ್ನು ನಿರ್ಮಿಸಲಾಗಿದೆ. ರೈತರ ಮೇಲೆ ಅಶ್ರುವಾಯು ಶೆಲ್ ಸಿಡಿಸಲಾಗಿದೆ. ಹಲವರಿಗೆ ಗಾಯಗಳೂ ಆಗಿವೆ. ಪ್ರಭುತ್ವದ ಯಾವ ತಡೆಯನ್ನೂ ಲೆಕ್ಕಿಸದೆ ರೈತರು ತಮ್ಮ ಬೇಡಿಕೆ ಈಡೇರಿಕೆಗಾಗಿ ಮುನ್ನಡೆಯುತ್ತಿದ್ದಾರೆ.

ಘೋಷಿಸಿದ್ದೇ ಬೇರೆ, ರಚಿಸಿದ ಸಮಿತಿಯೇ ಬೇರೆ

ಕನಿಷ್ಠ ಬೆಂಬಲ ಬೆಲೆಗೆ ಸಂಬಂಧಿಸಿದಂತೆ ಅಧ್ಯಯನ ನಡೆಸಿ, ಶಿಫಾರಸು ನೀಡಲು ಸಮಿತಿ ರಚಿಸುತ್ತೇವೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಆಗ ಹೇಳಿದ್ದರು. ಆದರೆ ಸರ್ಕಾರವು ರಚಿಸಿದ ಸಮಿತಿಗೆ ವಹಿಸಿದ ಜವಾಬ್ದಾರಿಗಳಲ್ಲಿ ಹೆಚ್ಚಿನವು ಬೇರೆಯದ್ದೇ ಆಗಿದ್ದವು.

ಸಂಜಯ್ ಅಗರ್ವಾಲ್ ನೇತೃತ್ವದ ಸಮಿತಿಗೆ 'ಶೂನ್ಯ ವೆಚ್ಚದಲ್ಲಿ ಬೇಸಾಯ' ಹೇಗೆ ಮಾಡಬೇಕು ಎನ್ನುವುದರ ಕುರಿತು ಪ್ರಮುಖವಾಗಿ ಅಧ್ಯಯನ ನಡೆಸುವಂತೆ ಸೂಚಿಸಲಾಗಿತ್ತು. ಇದರೊಂದಿಗೆ ಹೆಚ್ಚು ಪಾರದರ್ಶಕವಾಗಿ ಹಾಗೂ ಹೆಚ್ಚು ಸೂಕ್ತವಾದ ರೀತಿಯಲ್ಲಿ ಬೆಂಬಲ ಬೆಲೆ ನಿಗದಿ ಮಾಡುವ ಕುರಿತೂ ಅಧ್ಯಯನ ಮಾಡುವಂತೆ ಹೇಳಲಾಗಿತ್ತು. ಈ ಬಗ್ಗೆ ರೈತ ಸಂಘಟನೆಗಳಿಂದ ಅಸಮಾಧಾನ ಭುಗಿಲೆದ್ದಿತ್ತು. ಸಮಿತಿಯ ಮೊದಲ ಸಭೆಗೆ ರೈತ ಸಂಘಟನೆಗಳು ಗೈರಾಗಿದ್ದವು. ಆಗ ಪ್ರತಿಭಟನೆಯಲ್ಲಿ ಭಾಗಿಯಾಗಿದ್ದ ರೈತ ಸಂಘಟನೆಗಳು ಈ ಸಮಿತಿಯ ಸಭೆಗಳಲ್ಲಿ ಈವರೆಗೂ ಭಾಗಿಯಾಗಿಲ್ಲ.

ದೇಶದ ಅಗತ್ಯಕ್ಕೆ ತಕ್ಕಂತೆ ಬೆಳೆಗಳನ್ನು ಬೆಳೆಯುವ ಕುರಿತು ಸಲಹೆ ನೀಡಲು ಕೇಳಲಾಗಿತ್ತು. ಹೀಗೆ, ಅನೇಕ ವಿಷಯಗಳಿಗೆ ಸಂಬಂಧಿಸಿ ಸಲಹೆ ನೀಡುವಂತೆ ಸಮಿತಿಗೆ ಕೇಂದ್ರ ಸರ್ಕಾರವು ಕೋರಿತ್ತು. ಆದರೆ, ಬೆಂಬಲ ಬೆಲೆ ನಿಗದಿಗೆ ಸಂಬಂಧಿಸಿ ಇದ್ದ ರೈತರ ಬೇಡಿಕೆಗೆ ಪೂರಕವಾಗಿರುವ ಯಾವ ವಿಷಯದ ಕುರಿತೂ ಸಲಹೆ ನೀಡುವಂತೆ ಸಮಿತಿಯನ್ನು ಕೇಂದ್ರ ಸರ್ಕಾರ ಕೇಳಿಲ್ಲ. ಬೆಂಬಲ ಬೆಲೆ ನಿಗದಿ ಮಾಡುವ ವ್ಯವಸ್ಥೆಯು ಹೆಚ್ಚು ಪಾರದರ್ಶಕವಾಗಿರುವಂತೆ ಯಾವ ಕ್ರಮ ಕೈಗೊಳ್ಳಬೇಕು ಎಂದಷ್ಟೇ ಸಮಿತಿಗೆ ಕೇಳಲಾಗಿತ್ತು. ಇದೇ ಕಾರಣಕ್ಕೇ ರೈತ ಸಂಘಟನೆಗಳು ಈ ಸಮಿತಿಯನ್ನು ನಿರಾಕರಿಸಿದ್ದವು.

'ನಾವು ನಿರ್ದಿಷ್ಟವಾಗಿ ಬೆಂಬಲ ಬೆಲೆ ವಿಷಯದ ಕುರಿತೇ ಚರ್ಚೆ ಮಾಡುವ ಸಮಿತಿಯನ್ನು ಬಯಸಿದ್ದೆವು. ಇದು ಬೆಂಬಲ ಬೆಲೆ ವಿಷಯಕ್ಕಿಂತ ಬೇರೆಯ ವಿಷಯಕ್ಕೆ ಹೆಚ್ಚಿನ ಮಹತ್ವ ನೀಡಿ ವರದಿ ನೀಡಲಿದೆ' ಎಂದು ರೈತ ಸಂಘಟನೆಗಳು ಹೇಳಿದ್ದವು.

ಕೇಂದ್ರವು ಸಮಿತಿಗೆ ನೀಡಿದ್ದ ಕಾರ್ಯಸೂಚಿ

- ನೈಸರ್ಗಿಕ ಕೃಷಿಗೆ ಮಾರುಕಟ್ಟೆ ವ್ಯವಸ್ಥೆಯನ್ನೂ ರೂಪಿಸುವುದು ಹಾಗೂ ಇಂಥ ಕೃಷಿ ಮಾಡುವ ಕೃಷಿಕರಿಗೆ ಪ್ರಮಾಣಪತ್ರ ನೀಡುವ ವ್ಯವಸ್ಥೆಯನ್ನು ಜಾರಿಗೆ ತರಲು ಸಲಹೆ ನೀಡಿ
- ನೈಸರ್ಗಿಕ ಕೃಷಿ ಉತ್ಪನ್ನಗಳ ಮೌಲ್ಯವನ್ನು ವರ್ಧಿಸುವ ವ್ಯವಸ್ಥೆಯನ್ನು ಅಂತರರಾಷ್ಟ್ರೀಯ ಸಹಭಾಗಿತ್ವದೊಂದಿಗೆ ಅಭಿವೃದ್ಧಿಪಡಿಸುವ ವಿಧಾನಗಳ ಕುರಿತು ಸಲಹೆ ನೀಡಿ
- ನೈಸರ್ಗಿಕ ಕೃಷಿ ಮೂಲಕ ಬೆಳೆದ ಉತ್ಪನ್ನಗಳಿಗೆ ಪ್ರಮಾಣಪತ್ರ ನೀಡಲು ಪ್ರಯೋಗಾಲಯವನ್ನು ಸ್ಥಾಪಿಸುವ ಕುರಿತು ಸಲಹೆ ನೀಡಿ
- ಬೆಂಬಲ ಬೆಲೆ ನಿಗದಿ ಮಾಡುವ ವ್ಯವಸ್ಥೆಯು ಹೆಚ್ಚು ಸೂಕ್ತವಾಗಿ ಹಾಗೂ ಹೆಚ್ಚು ಪಾರದರ್ಶಕವಾಗಿ ಇರುವಂತೆ ನೋಡಿಕೊಳ್ಳಲು ಸಲಹೆ ನೀಡಿ
- ಕೃಷಿ ವೆಚ್ಚ ಮತ್ತು ಬೆಲೆ ಆಯೋಗಕ್ಕೆ ಹೆಚ್ಚಿನ ಸ್ವಾಯತ್ತೆ ನೀಡುವುದು ಎಷ್ಟು ಕಾರ್ಯಸಾಧು ಮತ್ತು ಈ ಆಯೋಗದ ಕಾರ್ಯವಿಧಾನವನ್ನು ಇನ್ನಷ್ಟು ವೈಜ್ಞಾನಿಕಗೊಳಿಸುವುದು ಹೇಗೆ ಎಂಬುದನ್ನು ತಿಳಿಸಿ
- ಕೃಷಿ ಉತ್ಪನ್ನಗಳಿಗೆ ಮೌಲ್ಯ ಒದಗಿಸುವ, ರಫ್ತು ಅವಕಾಶಗಳನ್ನು ಹೆಚ್ಚಿಸುವ ಸಲುವಾಗಿ ಕೃಷಿ ಮಾರುಕಟ್ಟೆಯನ್ನು ಶಕ್ತಿಯುತ ಮಾಡುವುದು ಹಾಗೂ ಆಧುನಿಕಗೊಳಿಸುವುದು ಹೇಗೆ ತಿಳಿಸಿ
- ದೇಶದಲ್ಲಿ ನೈಸರ್ಗಿಕ ಕೃಷಿಯನ್ನು ಅಭಿವೃದ್ಧಿಪಡಿಸುವಲ್ಲಿ ಯಾವೆಲ್ಲಾ ಕ್ರಮಗಳನ್ನು ಕೈಗೊಳ್ಳಬೇಕು. ಜೊತೆಗೆ, ಈ ಪ್ರಕ್ರಿಯೆಯಲ್ಲಿ ರೈತ ಸಂಘಟನೆಗಳನ್ನು ಹೇಗೆ ಬಳಸಿಕೊಳ್ಳಬೇಕು, ಈ ಕೃಷಿಯ ಕುರಿತು ಸಾರ್ವಜನಿಕರಿಗೆ ತಿಳಿಸುವ ಮಾರ್ಗಗಳ ಕುರಿತೂ ಸಲಹೆ ನೀಡಿ
- ಕೃಷಿ ವಿಜ್ಞಾನ ಕೇಂದ್ರವನ್ನು ಜ್ಞಾನ ಕೇಂದ್ರವಾಗಿಸಬೇಕು. ಅಲ್ಲಿ ಹೆಚ್ಚು ಹೆಚ್ಚು ಅಧ್ಯಯನಗಳನ್ನು ನಡೆಸುವಂತಾಗಬೇಕು. ಜೊತೆಗೆ, ವಿಶ್ವವಿದ್ಯಾಲಯಗಳಲ್ಲಿ, ಶೈಕ್ಷಣಿಕ ಸಂಸ್ಥೆಗಳಲ್ಲಿ ನೈಸರ್ಗಿಕ ಕೃಷಿ ಪದ್ಧತಿಯನ್ನು ಪಠ್ಯದಲ್ಲಿ ಸೇರಿಸುವ ಕುರಿತು ಸಲಹೆ ನೀಡಿ

ಆಧಾರ: ಪಿಟಿಐ, ಲೋಕಸಭೆಗೆ ಕೃಷಿ ಸಚಿವಾಲಯ ನೀಡಿದ ಲಿಖಿತ ಉತ್ತರಗಳು, ಸಂಜಯ್ ಅಗರ್ವಾಲ್ ನೇತೃತ್ವದ ಸಮಿತಿ ರಚನೆಗೆ ಸಂಬಂಧಿಸಿದ ಕೇಂದ್ರ ಸರ್ಕಾರದ ಅಧಿಸೂಚನೆ

ಎಲ್ಲಾ ಪ್ರಶ್ನೆಗಳಿಗೂ ಸರ್ಕಾರದ್ದು ಒಂದೇ ಉತ್ತರ

- ರೈತ ಸಂಘಟನೆಯಾದ ಸಂಯುಕ್ತ ಕಿಸಾನ್ ಮೋರ್ಚಾ ಹಾಗೂ ಪಂಜಾಬ್ ಸರ್ಕಾರದ ಪ್ರತಿನಿಧಿಗಳನ್ನು ಸೇರಿಸಿಕೊಂಡು ಸಮಿತಿಯನ್ನು ರಚಿಸಿ, ರೈತರ ಬೇಡಿಕೆಯನ್ನು ಈಡೇರಿಸಲು ಕೇಂದ್ರ ಸರ್ಕಾರವು ಕಾಲಮಿತಿಯನ್ನು ಹಾಕಿಕೊಂಡಿದೆಯೇ?
- ಬೆಂಬಲ ಬೆಲೆಯನ್ನು ನೀಡಲು ಕಾನೂನು ರೂಪಿಸುವಂತೆ ರೈತರು ಬೇಡಿಕೆ ಇಟ್ಟಿದ್ದರು. ಈ ಬೇಡಿಕೆಯನ್ನು ತ್ವರಿತವಾಗಿ ಈಡೇರಿಸಲು ಕೇಂದ್ರ ಸರ್ಕಾರ ಆಸಕ್ತಿ ವಹಿಸಿದೆಯೇ. ಅದರ ಮಾಹಿತಿ ನೀಡಿ...

ಕೇಂದ್ರ ಸರ್ಕಾರವು ರಚಿಸಿದ್ದ ಸಮಿತಿಯಿಂದಾದ ಪ್ರಗತಿಯ ಬಗ್ಗೆ ಸಂಸದರು ಲೋಕಸಭೆಯಲ್ಲಿ ಕೇಳಿದ್ದ ಪ್ರಶ್ನೆಗಳಿವು. ಲೋಕಸಭೆಯಲ್ಲಿ ಕೃಷಿ ಸಚಿವಾಲಯಕ್ಕೆ ಇಂತಹ ಹತ್ತಾರು ಪ್ರಶ್ನೆಗಳನ್ನು ಈವರೆಗೆ ಕೇಳಲಾಗಿದೆ. ಆದರೆ, ಎಲ್ಲ ರೀತಿಯ ಪ್ರಶ್ನೆಗಳಿಗೂ ಕೃಷಿ ಸಚಿವಾಲಯವು ಒಂದೇ ವಾದಸರಣಿಯ ಉತ್ತರವನ್ನು ನೀಡಿದೆ. ಸಮಿತಿ ರಚಿಸಲಾಗಿದೆ. ಸಭೆಗಳು ನಿಯಮಿತವಾಗಿ ನಡೆಯುತ್ತಿವೆ. ಕೇಂದ್ರ ಸರ್ಕಾರವು ಯಾವ ಲೆಕ್ಕಾಚಾರದಲ್ಲಿ ಬೆಂಬಲ ಬೆಲೆ ನೀಡುತ್ತದೆ ಎಂದಿತ್ಯಾದಿ ಉತ್ತರವನ್ನೇ ನೀಡಿದೆ. ಈ ಉತ್ತರಗಳ ಜೊತೆಯಲ್ಲಿ ಸಮಿತಿ ರಚನೆ ಸಂಬಂಧ ಹೊರಡಿಸಲಾಗಿದ್ದ ಅಧಿಸೂಚನೆಗಳನ್ನು ಸಚಿವಾಲಯ ಲಗತ್ತಿಸಿದೆ.

ಸಿನಿ ಬಿಟ್ಸ್



ಸಂಜನಾ, ದೀಕ್ಷಿತ್, ಕಾಜಲ್

'ಕೆಟಿಎಂ' ಅಂದ್ರೆ ಕೇವಲ ಬೈಕಲ್ಲ!

'ದಿಯಾ', 'ದಸರಾ' ಸಿನಿಮಾ ಖ್ಯಾತಿಯ ದೀಕ್ಷಿತ್ ಶೆಟ್ಟಿ ಅಭಿನಯದ, ಅರುಣ್ ನಿರ್ದೇಶನದ 'ಕೆಟಿಎಂ' ಸಿನಿಮಾ ಬಿಡುಗಡೆಗೆ ಸಜ್ಜಾಗಿದೆ. ಫೆ.16ರಂದು ಸಿನಿಮಾ ತೆರೆ ಕಾಣುತ್ತಿದ್ದು, ಚಿತ್ರತಂಡ ಸುದ್ದಿಗೋಷ್ಠಿಯಲ್ಲಿ ಸಿನಿಮಾ ಕುರಿತು ಮಾಹಿತಿ ಹಂಚಿಕೊಂಡಿತು.

'ಒಳ್ಳೆಯ ಕಥೆಗೊಂದು ಅದ್ಭುತ ನಟ ಬೇಕು. ಈ ದಾರಿಯಲ್ಲಿ ನನಗೆ ದೀಕ್ಷಿತ್ ಸಿಕ್ಕರು. ನನ್ನ ಕನಸಿಗಿಂತ ಚೆನ್ನಾಗಿ ಈ ಸಿನಿಮಾ ಮೂಡಿಬಂದಿದೆ. ಪಾತ್ರಗಳನ್ನು ಬರೆಯುವುದು ಸುಲಭ. ಆದರೆ ನಾಲ್ಕು ಶೇಡ್ಸ್ ನಿಭಾಯಿಸಿ, ಪಾತ್ರಕ್ಕಾಗಿ ಎಂಟು ಕೆ.ಜಿ. ತೂಕ ಇಳಿಸಿಕೊಂಡು, ಹತ್ತು ತಿಂಗಳು ಗಡ್ಡ, ಮೀಸೆ ತೆಗೆಸಿಕೊಳ್ಳದೆ, ಸಿನಿಮಾಗಾಗಿ ಎರಡು ವರ್ಷ ಮೀಸಲಿಟ್ಟಿದ್ದರು ದೀಕ್ಷಿತ್. ಇದುವೇ ಚಿತ್ರತಂಡಕ್ಕೆ ಸ್ಫೂರ್ತಿಯಾಗಿತ್ತು. ಸಂಗೀತ ನಿರ್ದೇಶಕ ಚೇತನ್ ಅವರಿಗೆ ಇದು ಮೊದಲನೇ ಸಿನಿಮಾ. ನನಗೆ ಇದು ಎರಡನೇ ಸಿನಿಮಾ. ಇದೊಂದು ಪ್ರೇಮಕಥೆಯಾಗಿದ್ದು ಎಲ್ಲರನ್ನೂ ಕಾಡುತ್ತದೆ. ಸುತ್ತಮುತ್ತ ನೋಡುವ ಕಥೆಗಳೇ ಈ ಸಿನಿಮಾದಲ್ಲಿದೆ. ಕೆಟಿಎಂ ಎಂದರೆ ಕೇವಲ ಬೈಕ್ ಅಲ್ಲ. ಆ ಕಥೆ ಏನು ಎಂಬುವುದನ್ನು ಸಿನಿಮಾದಲ್ಲೇ ನೋಡಬೇಕು. ಮೂರು ಹಂತದಲ್ಲಿ ಸಿನಿಮಾದ ಕಥಾಹಂದರವಿದೆ' ಎನ್ನುತ್ತಾರೆ ಅರುಣ್.

'ಇವತ್ತಿನ ದಿನಗಳಲ್ಲಿ ಕಲಾವಿದನಿಗೆ ಪ್ರತಿ ದಿನವೂ ಹೋರಾಟವೇ. ಪ್ರತಿ ಶುಕ್ರವಾರ ಏಳೆಂಟು ಸಿನಿಮಾಗಳು ಬಿಡುಗಡೆಯಾಗುತ್ತಿವೆ. 'ದಿಯಾ'ದಿಂದ ಹಿಡಿದು ಇಲ್ಲಿಯವರೆಗಿನ ಪಯಣದ ಬಗ್ಗೆ ಖುಷಿ ಇದೆ. ತೃಪ್ತಿ ಯಾವಾಗ ಸಿಗುತ್ತದೆಯೋ ಗೊತ್ತಿಲ್ಲ. ಒಂದೇ ಜಾನರ್‌ನ ಹಾಗೂ ಒಂದೇ ಮಾದರಿಯ ಪಾತ್ರಗಳನ್ನು ಮಾಡಬಾರದು ಎನ್ನುವ ಗುರಿ ನನ್ನದು. ಈ ಹಿನ್ನೆಲೆಯಲ್ಲಿ 'ಕೆಟಿಎಂ' ನೋಡಿದಾಗ ನನ್ನೊಳಗಿನ ಕಲಾವಿದನ ಸಂಪೂರ್ಣ ಪರಿಚಯವಾಗುತ್ತದೆ' ಎಂದರು ದೀಕ್ಷಿತ್.

ದರ್ಶನ್ ಬೆಳ್ಳಿ ಪರ್ವ



ನಟ ದರ್ಶನ್ ಚಂದನವನಕ್ಕೆ ಪದಾರ್ಪಣೆ ಮಾಡಿ 25 ವರ್ಷಗಳಾಗಿದ್ದು, ಅವರ ನೆಚ್ಚಿನ ಸೆಲೆಬ್ರೆಟಿಗಳು, ಸ್ನೇಹಿತರು ಹಾಗೂ ಹಿತೈಷಿಗಳೆಲ್ಲ ಒಟ್ಟಾಗಿ 'ಬೆಳ್ಳಿ ಪರ್ವ ಡಿ-25' ಎಂಬ ಕಾರ್ಯಕ್ರಮ ಹಮ್ಮಿಕೊಂಡಿದ್ದಾರೆ.

'ಫೆಬ್ರುವರಿ 17ರ ಶನಿವಾರ ಸಂಜೆ 5 ಗಂಟೆಗೆ ಶ್ರೀರಂಗಪಟ್ಟಣದ ರಂಗನಾಥಸ್ವಾಮಿ ದೇವಸ್ಥಾನದ ಮೈದಾನದಲ್ಲಿ ಬೆಳ್ಳಿ ಪರ್ವ ಕಾರ್ಯಕ್ರಮ ನಡೆಯಲಿದೆ. ಆದಿಚುಂಚನಗಿರಿ ಶ್ರೀಗಳು, ಸುತ್ತೂರು ಶ್ರೀಗಳು, ಬೀಬಿಮಠದ ಶ್ರೀಗಳು, ಸಂಸದೆ ಸುಮಲತಾ ಅಂಬರೀಶ್ ಮೊದಲಾದವರು ಉಪಸ್ಥಿತರಿರಲಿದ್ದಾರೆ' ಎಂದು ಕಾರ್ಯಕ್ರಮದ ಉಸ್ತುವಾರಿ ಎಸ್.ಸಚ್ಚಿದಾನಂದ ಇಂಡುವಾಳು ತಿಳಿಸಿದ್ದಾರೆ. 'ದರ್ಶನ್ ಅವರಿಗೆ ಸನ್ಮಾನ ಕಾರ್ಯಕ್ರಮ ನಡೆಯಲಿದೆ. ಬಳಿಕ ವಿ.ಹರಿಕೃಷ್ಣ ಸಂಗೀತ ಸಂಜೆ ಸೇರಿದಂತೆ ಹಲವು ಮನರಂಜನಾ ಕಾರ್ಯಕ್ರಮಗಳು ಇರಲಿವೆ. ವಿನೋದ್ ರಾಜ್ ಕುಮಾರ್, ವಿನೋದ್ ಪ್ರಭಾಕರ್, ಸತೀಶ್ ನೀನಾಸಂ, ಡಾಲಿ ಧನಂಜಯ, ಅಭಿಷೇಕ್ ಅಂಬರೀಶ್, ಧನ್ವೀರ್, ಚಿಕ್ಕಣ್ಣ, ಝೈದ್ ಖಾನ್, ಶಿವರಾಜ್ ಕೆ.ಆರ್ ಪೇಟೆ ಹಾಗೂ ಸೂರಜ್ ಸೇರಿದಂತೆ ಸಾಕಷ್ಟು ನಟ, ನಟಿಯರು ಹಾಜರಿರುತ್ತಾರೆ' ಎಂದು ಅವರು ಹೇಳಿದ್ದಾರೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

'**ಅಯೋಧ್ಯೆಯಲ್ಲಿ** ನೀರಿನ ಖಾಲಿ ಬಾಟಲಿಗಳನ್ನು ವಾಪಸು ಮಾಡಿದರೆ, ₹5 ಸಿಗಲಿದೆ. ವೈಜ್ಞಾನಿಕ ಹೊಸತನಕ್ಕೆ, ಪರಿಸರ ಸಂರಕ್ಷಣೆಗೆ ಇದೊಂದು ಮಹತ್ವದ ಉದಾಹರಣೆ. ಇಂಥ ಕ್ರಾಂತಿಯಿಂದ ನೀವು ಪುಳಕಿತರಾಗಿದ್ದೀರೇ?'– ಈ ಅರ್ಥದ ಹಲವು ಪೋಸ್ಟ್‌ಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ. ಕೆಲವರು ₹5 ಅನ್ನು ಬಹುಮಾನವನ್ನಾಗಿ ನೀಡಲಾಗುತ್ತದೆ ಎಂದೂ ಬರೆದುಕೊಂಡಿದ್ದಾರೆ. ನೀರಿನ ಖಾಲಿ ಬಾಟಲಿ ಮೇಲೆ ಕ್ಯುಆರ್ ಕೋಡ್ ಒಂದನ್ನು ಅಂಟಿಸಿರುವ ಫೋಟೊವನ್ನು ಇಂಥ ಪೋಸ್ಟ್‌ಗಳೊಂದಿಗೆ ಹಂಚಿಕೊಳ್ಳಲಾಗುತ್ತಿದೆ. ಆದರೆ, ಇದು ತಿರುಚಲಾದ ಸುದ್ದಿ.



ಜಾಲತಾಣಗಳಲ್ಲಿ ಹಂಚಿಕೆಯಾಗುತ್ತಿರುವ ಫೋಟೊದಲ್ಲಿರುವ ಬಾಟಲಿ ಮೇಲೆ 'ದಿ ಕಬಾಡಿವಾಲಾ' ಎನ್ನುವ ಹೆಸರಿದೆ. ಈ ಸಂಸ್ಥೆಯು ಅಯೋಧ್ಯೆಯಲ್ಲಿ ಇಂಥದ್ದೊಂದು ವ್ಯವಸ್ಥೆಯನ್ನು ಜಾರಿಗೆ ತಂದಿದೆ. ಈ ಬಗ್ಗೆ ಈ ಸಂಸ್ಥೆಯೇ ತನ್ನ ಎಕ್ಸ್ ಖಾತೆಯಲ್ಲಿ ಹಂಚಿಕೊಂಡಿದೆ. ಇಲ್ಲಿ, ಗಮನಿಸಬೇಕಾದ ಅಂಶವೊಂದಿದೆ. ₹10 ನೀರಿನ ಬಾಟಲಿಯನ್ನು ₹15ಕ್ಕೆ ಮಾರಾಟ ಮಾಡಲಾಗುತ್ತದೆ. ನಂತರ, ಖಾಲಿ ಬಾಟಲಿಯನ್ನು ವಾಪಾಸು ಮಾಡಿದರೆ, ಹೆಚ್ಚುವರಿಯಾಗಿ ಪಡೆದಿದ್ದ ₹5 ಅನ್ನು ವಾಪಸು ಕೊಡಲಾಗುತ್ತದೆ. ನಿಮ್ಮಿಂದ ಪಡೆಯಲಾಗಿದ್ದ ಹೆಚ್ಚುವರಿ 5 ರೂಪಾಯಿಯನ್ನು ವಾಪಸು ಕೊಡುತ್ತಾರೆಯೇ ಹೊರತು, ₹5 ಅನ್ನು ಬಹುಮಾನವಾಗಿ ನೀಡುವುದಿಲ್ಲ ಎಂದು ದಿ ಕ್ವಿಂಟ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ. ಜತೆಗೆ ಇದು ಅಯೋಧ್ಯೆಯಲ್ಲೇ ಮೊದಲ ಬಾರಿಗೆ ಆರಂಭವಾದ ವ್ಯವಸ್ಥೆ ಅಲ್ಲ. ಇಂತಹ ಪದ್ಧತಿ ಈಗಾಗಲೇ ಹಲವು ರಾಜ್ಯಗಳ ಧಾರ್ಮಿಕ ಹಾಗೂ ಪ್ರವಾಸಿ ಸ್ಥಳಗಳಲ್ಲಿ ಇದೆ.

ಗುಂಡಣ್ಣ



ಪ್ರೀತಿ ಎಂದರೆ ಹೀಗೆ...

ನುಡಿ ಬೆಳಗು





ಕಲೀಮ್ ಉಲ್ಲಾ, ಕನ್ನಡ ಉಪನ್ಯಾಸಕ

ಪರ್ಷಿಯಾದ ಅಮರ ಪ್ರೇಮಕವಿ ಜಲಾಲುದ್ದೀನ್ ಮೊಹಮ್ಮದ್ ರೂಮಿ ಜಗತ್ತಿಗೆ ಪ್ರೀತಿಯ ಅರ್ಥ ಕಲಿಸಲು ಹೆಣಗಾಡಿದ ವ್ಯಕ್ತಿ. ಒಂದು ಹುಡುಗ ಹುಡುಗಿಯ ಕಥೆಯೇ ಎಲ್ಲಾ ಪ್ರೀತಿಗಳಿಗೆ ಸಂಕೇತ ಎಂದು ಸುಲಭಕ್ಕೆ ಭಾವಿಸುವವರು ನಾವು. ಆದರೆ ಅದಕ್ಕೂ ಮೀರಿದ ಪ್ರೀತಿಗಳು ನಮ್ಮ ಸಮಾಜದಲ್ಲಿ ಇದ್ದೇ ಇವೆ. ಇವುಗಳ ಉಲ್ಲೇಖ ಕೆಲಕಡೆ ಇಲ್ಲದಿರಬಹುದು, ಕೆಲವು ಕಡೆ ಇರಬಹುದು. ಮನುಷ್ಯನೊಬ್ಬ ಯಾವ ಸ್ವಾರ್ಥವೂ ಇಲ್ಲದೆ ತನ್ನ ಸುತ್ತಲ ಪರಿಸರದ ಜೀವಜಾಲಕ್ಕೆ ತೋರುವ ನಿಷ್ಕಲ್ಮಶ ಮಮತೆಯೇ ಪ್ರೀತಿ. ಪ್ರೀತಿಗೆ ನಿರೀಕ್ಷೆಗಳ ಭಾರವಿರುವುದಿಲ್ಲ. ತ್ಯಾಗ ಮಾಡಲು ಹಾತೊರೆಯುವ ಮನಃಸ್ಥಿತಿಯೇ ಪ್ರೀತಿ.

ರೂಮಿ ಹೇಳುತ್ತಾನೆ. ಪ್ರೀತಿ ಎಂಬುದು ಎಂದೂ ಖಿನ್ನತೆ ತರುವುದಿಲ್ಲ. ಖಂಡಿತಾ ಅದು ಪುಸ್ತಕದಲ್ಲಿ ವರ್ಣಿಸುವಂತೆ ಇರುವುದಿಲ್ಲ. ಅಥವಾ ಹಾಳೆಯ ಮೇಲೆ ಬರೆದು ತೋರುವಂಥದ್ದೂ ಅಲ್ಲ. ಪ್ರೀತಿ ಎಂಬುದು ಮರದ ಹಾಗೆ. ಕಾಣುವ ಕೊಂಬೆಗಳು ದಿಗಂತದವರೆಗೆ ಚಾಚಿರುತ್ತವೆ. ಅದರಲ್ಲಿ ಚಿಗುರು, ಹೂವು, ಹಣ್ಣುಗಳು ಇರಬಹುದು. ಅದರ ನೋಟ, ಸವಿ, ರುಚಿಕರವೂ ಅನ್ನಿಸಬಹುದು. ಆದರೆ ಇಷ್ಟಕ್ಕೆಲ್ಲಾ ಕಾರಣವಾದ ಬೇರು ಮಾತ್ರ ಕಾಣದೆ ಅಮರತ್ವಕ್ಕೆ ಒಡ್ಡಿಕೊಂಡಿರುತ್ತದೆ. ಮೇಲಿನ ಸಕಲವನ್ನೂ ಕಾಪಾಡಲು ಬೇರು, ಮಣ್ಣಿನ ಜೊತೆ ಗುದ್ದಾಡುತ್ತಿರುತ್ತದೆ. ತನ್ನ ಮುಖವನ್ನು ಹೊರಜಗತ್ತಿಗೆ ಎಂದೂ ತೋರಿಸುವುದಿಲ್ಲ. ಒಳಗೊಳಗೇ ಜೀವಾಮೃತವ ಸೃಷ್ಟಿಸಿ ಮೇಲೆ ಕಾಯುವ ಚಿಗುರು, ಹೂವು, ಹಣ್ಣು ಎಲೆಗಳಿಗೆ ರವಾನಿಸಿ ತಾನು ಮಾತ್ರ ಇಳೆಯ ಆಳಕ್ಕೆ ಇಳಿಯುತ್ತಲೇ ಹೋಗುತ್ತದೆ. ಪ್ರತಿಫಲವನ್ನು, ಪ್ರಶಂಸೆಯನ್ನು ಅದು ಎಂದೂ ಬಯಸುವುದಿಲ್ಲ. ತಾಯ ಎದೆಹಾಲ ಬಸಿವ ನಿಷ್ಕಾಮ ರಕ್ತನಾಳಗಳಂತೆ, ಯಾವ ಶರತ್ತನ್ನೂ ಒಡ್ಡುವುದಿಲ್ಲ. ಕಾಪಾಡುವುದಷ್ಟೇ ಅದರ ಕಾಯಕ. ಬೇರಿನ ಈ ಸ್ವಭಾವವೇ ನಿಜವಾದ ಪ್ರೀತಿಯನ್ನು ಧರಿಸಿರುತ್ತದೆ.

ಓ ಪ್ರೀತಿಯೇ, ನಿನ್ನನ್ನು ಸಾವಿರ ಮಂದಿ ಸಾವಿರ ಹೆಸರಿಟ್ಟು ಕರೆಯುತ್ತಾರೆ. ನಿನಗೆ ಪ್ರತ್ಯೇಕವಾಗಿ ಒಂದು ರೂಪವೆಂಬುದು ಇಲ್ಲ ಎಂಬುದು ನನಗೆ ಗೊತ್ತು. ಸಾವಿರ ರೂಪಗಳ ಸಮೂಹಾರವು ನೀನು. ಮೋಡ ತನ್ನ ಕಣ್ಣೀರು ಸುರಿಸದೇ ಹೋದರೆ, ಹೂದೋಟದ ತುಟಿಯ ಮೇಲೆ ನಗು ಹೇಗೆ ಚಿಗುರುತ್ತದೆ? ಮಗುವಿನ ನಗುವಿನಲ್ಲಿ, ತಾಯ ನೋಟದಲ್ಲಿ, ಸಾಂತ್ವನ ಹೇಳುವ ಗೆಳೆಯನ ಮಾತಿನಲ್ಲಿ, ಹಸಿದವನಿಗೆ ಅನ್ನವಿಕ್ಕುವ ಹೃದಯದಲ್ಲಿ, ಹಕ್ಕಿಯ ರೆಕ್ಕೆ ಬಣ್ಣದಲ್ಲಿ ನೀನು ವಾಸಿಸುವೆ ಎನ್ನುತ್ತಾನೆ ರೂಮಿ.

ತನಗೂ ಹೆಚ್ಚೆಚ್ಚು ಪ್ರೀತಿ ಬೇಕೆಂಬ ಹಂಬಲಿಕೆಯಲ್ಲೇ ಪ್ರತಿಯೊಬ್ಬರೂ ಬದುಕುತ್ತಿದ್ದೇವೆ. ಆಸ್ತಿ, ಅಂತಸ್ತು, ಅಧಿಕಾರ ಎಲ್ಲ ಪಡೆದವನೂ ಪ್ರೀತಿ ಸಿಗದ ಹಸಿವಲ್ಲಿ ನರಳುತ್ತಿರುತ್ತಾನೆ. ಪ್ರೀತಿ ಎಂಬುದು ಬರೀ ಪಡೆಯಲು ಮಾತ್ರ ಇರುವ ಉಡುಗೊರೆಯಲ್ಲ. ಅದು ಹಂಚಿದಷ್ಟೂ ಮತ್ತೆ ಸಿಗುವ ಅಮೃತ. ಬೇಡಿ ಪಡೆಯುವ ಭಿಕ್ಷೆಯಲ್ಲ. ಸುತ್ತಲಿನ ಮನಸ್ಸುಗಳ ಗೆದ್ದು ಗಳಿಸುವ ಸಂಪತ್ತು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಬುಧವಾರ ಫೆಬ್ರುವರಿ 14, 2024

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಮಾಘ ಶುಕ್ಲ ಪಂಚಮಿ ಗಂ. 12-10 ನಕ್ಷತ್ರ: ರೇವತಿ ಗಂ. 10-43 ಯೋಗ: ಶುಭ ಗಂ. 19-59 ಕರಣ: ಬಾಲವ ಗಂ. 12-10, ಕುಂಭ ಮಾಸದ 01 ನೇ ದಿನ, ಮಳೆನಕ್ಷತ್ರ: ಧನಿಷ್ಠಾ 3.
ರಾಹುಕಾಲ: ಮಧ್ಯಾಹ್ನ 12-00 – 01-30
ಸೂರ್ಯೋದಯ: 06-57 ಸೂರ್ಯಾಸ್ತ : 06-32
ಮುಸ್ಲಿಂ ದಿನಾಂಕ : 03 ಶಬನ್
ದಿನ ವಿಶೇಷ : ವಸಂತ ಪಂಚಮಿ, ಅದೃಷ್ಟ ಸಂಖ್ಯೆ : 5, 12

ಮೇಷ: ಇನ್ನೊಬ್ಬರ ಕಷ್ಟಗಳಿಗೆ ನೆರವಾಗಿ ನಿಮ್ಮ ಸಮಯ ವ್ಯರ್ಥವಾಗಲಿದೆ, ಆದರೆ ಸಮಯ ವ್ಯರ್ಥವೆಂದು ಭಾವಿಸಬೇಡಿ. ಸತ್ಯಾಸತ್ಯತೆಯನ್ನು ತಿಳಿದು ಕಾರ್ಯ ಮುಂದುವರಿಸಿ. ಹೊಸ ಅನುಭವ ಎದುರು ನೋಡುವಂತಾಗುತ್ತದೆ.

ವೃಷಭ: ಕೆಲವೊಂದು ಕಠಿಣ ನಿರ್ಧಾರಗಳನ್ನು ಕೈಗೊಳ್ಳುವ ಪ್ರಸಂಗ ಬರಬಹುದು. ಇದಕ್ಕಾಗಿ ವಿಚಲಿತರಾಗಬೇಕಾಗಿಲ್ಲ. ಸರ್ಕಾರಿ ಕಚೇರಿಗಳಲ್ಲಿನ ಕೆಲಸಕ್ಕಾಗಿ ಹೆಚ್ಚು ಓಡಾಡುವ ಸಂದರ್ಭ ಬರುವುದು.

ಮಿಥುನ: ವಿವಿಧ ಧಾರ್ಮಿಕ ಕಾರ್ಯಕ್ರಮ ಮಾಡುವುದರಿಂದ ಅಥವಾ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದರಿಂದ ಮನಸ್ಸಿಗೆ ನೆಮ್ಮದಿ ಇರುವುದು. ಕೃಷಿ ಕಾರ್ಯಗಳು ಬಿಡುವಿಲ್ಲದೆ ನಡೆಯುವುದು.

ಕರ್ಕಾಟಕ: ನೀವು ಮಾಡುವ ಹೊಸ ಕಾರ್ಯದಿಂದ ಹೆಜ್ಜೆ ಹೆಜ್ಜೆಗೂ ಸಮಸ್ಯೆಗಳು ಎದುರಾಗುವುದು. ಆದ್ದರಿಂದ ಈ ದಿನದಂದು ಯಾವುದೇ ಹೊಸ ನಿರ್ಧಾರವನ್ನು ತೆಗೆದುಕೊಳ್ಳಬೇಡಿ. ಮಡದಿಯ ಭಾವನೆಗಳಿಗೆ ಬೆಲೆ ಕೊಡಿ.

ಸಿಂಹ: ಸಂಚಾರಶೀಲರಾಗಿರುವ ನೀವು ಪ್ರಯಾಣದಲ್ಲಿ ಜಾಗ್ರತೆ ವಹಿಸುವುದು ಅಗತ್ಯ. ಮನೆಯಲ್ಲಿ ಶಾಂತಿ ಹೋಮ ನಡೆಸಲು ಖರ್ಚಿನ ವಿಷಯ ಚರ್ಚೆಗೆ ಬರುವುದು. ಕಿರಿಯರಿಗೆ ನಿಮ್ಮ ಮಾರ್ಗದರ್ಶನದ ಅವಶ್ಯಕತೆ ಇದೆ.

ಕನ್ಯಾ: ಲಾಭದಾಯಕ ಎನಿಸುವ ಕೆಲಸ ಅಥವಾ ವ್ಯಕ್ತಿಗಳೊಂದಿಗೆ ಮಾತ್ರ ನೀವು ವ್ಯವಹರಿಸಿದ ಪರಿಣಾಮ ಪಶ್ಚಾತಾಪ ಪಡುವಂತಾಗುವುದು. ಸರ್ಕಾರಿ ಕಾನೂನುಗಳಿಗೆ ಬೆಲೆ ಕೊಡುವ ಮನೋಭಾವವನ್ನು ಬೆಳೆಸಿಕೊಳ್ಳಿರಿ

ತುಲಾ: ಮೊದಲ ಆದ್ಯತೆ ನಿಮ್ಮ ವೃತ್ತಿಪರ ಕೆಲಸಗಳ ಬಗೆಗೆ ಮಾತ್ರ ಇರಲಿ. ಕಾಫೀ ಹಾಗೂ ಏಲಕ್ಕಿ ಬೆಳೆಗಾರರು ಉತ್ತಮ ಫಸಲನ್ನು ಎದುರು ನೋಡಬಹುದು. ನಿಮ್ಮ ಸಮಸ್ಯೆಗಳು ತನ್ನಂತಾನೆಯೇ ಬಗೆಹರಿಯುವುದು.

ವೃಶ್ಚಿಕ: ಸಾಮರ್ಥ್ಯ, ದಕ್ಷತೆ ಹಾಗೂ ಸೇವಾ ಮನೋಭಾವಗಳಿಂದಾಗಿ ಸಂಸ್ಥೆಯಲ್ಲಿ ಜವಾಬ್ದಾರಿಯುತ ಹುದ್ದೆಯನ್ನು ನಿಮ್ಮದಾಗಿಸಿಕೊಳ್ಳುವಿರಿ. ಯಶಸ್ಸಿನ ಹಾದಿಯಲ್ಲಿದ್ದೀರಿ.

ಧನು: ಕಾರ್ಮಿಕರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವ ನಿಮ್ಮ ನಿರ್ಧಾರವು ಅನುಕೂಲಕರವಾಗುವುದು. ಅವಿವಾಹಿತರಿಗೆ ಕಂಕಣಭಾಗ್ಯ ಕೂಡಿಬರುವುದು. ಸಮಸ್ಯೆಯ ಸರಮಾಲೆ ಬಗೆಹರಿಸಲು ಜಾಣತನ ತೋರುವಿರಿ.

ಮಕರ: ವ್ಯಾಪಾರ ವ್ಯವಹಾರಗಳಲ್ಲಿ ನವೀನ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವುದರಿಂದ ಅಭಿವೃದ್ಧಿ ನೋಡಬಹುದು. ಆರಕ್ಷಕರಿಗೆ ಅನಿವಾರ್ಯವಾಗಿ ಬಿಡುವಿಲ್ಲದ ಕೆಲಸವನ್ನು ಮಾಡಬೇಕಾಗಬಹುದು.

ಕುಂಭ: ಅಧಿಕಾರಿಗಳ ಮನಸ್ಥಿತಿಯನ್ನು ಅರಿತುಕೊಂಡು ನಿಮ್ಮ ಬೇಡಿಕೆಯನ್ನು ನೆರವೇರಿಸಿಕೊಳ್ಳುವ ಪ್ರಯತ್ನ ಮಾಡಿ. ವೃತ್ತಿಯಲ್ಲಿ ಅನುಭವ ಹೊಂದಿದವರಿಂದ ಬೈಗುಳ ಕೇಳಬೇಕಾಗುವುದು. ಮಾನಸಿಕ ಧೈರ್ಯ ವೃದ್ಧಿ.

ಮೀನ: ಒಡಹುಟ್ಟಿದವರಲ್ಲಿ ಭಾವನಾತ್ಮಕ ಸಂಬಂಧಗಳನ್ನು ಬೆಳೆಸಲು ಇದು ಸೂಕ್ತ ಕಾಲ. ವೈಯಕ್ತಿಕ ವಿಷಯಗಳ ಬಗ್ಗೆ ನಿಗಾ ವಹಿಸುವುದು ಉತ್ತಮ. ಪಾಲಕರಾಗುವ ಸುದ್ದಿ ತಿಳಿದು ಅತೀವ ಸಂತಸ ಮೂಡುವುದು.

ಪದಬಂಧ 5591

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಹಡಗಿನ ಚುಕ್ಕಾಣಿ ಹಿಡಿದವನು (4)
2.ಬಹಳ ಇಂಪಾದುದು (4)
5.ಭೇದ ಅಥವಾ ಅಂತರ (3)
7.ಹುಯಿಲಿಡುತಾ ಓದಿದ ಮರಣಪತ್ರ (3)
8.ಪ್ರೇಮಿಗಳ ಅಗಲಿಕೆಯ ಬೇನೆ (5)
11.ನೆಲವನ್ನು ಗೋಮಯದಿಂದ ಸಾರಿಸುವುದು (3)
12.ಸೊಕ್ಕಿಗೊಂದು ಪರ್ಯಾಯ ಪದ (3)
14.ಮನಸ್ಸಿನ ಬಯಕೆ (4)
15.ಕತ್ತಿಯ ಅಲುಗು (4)

ಮೇಲಿಂದ ಕೆಳಕ್ಕೆ
1.ಮಾಡಲೇ ಬೇಕಾದುದು (3)
3.ನೈರ್ಮಲ್ಯದ ಉಡಿ! (3)
4.ಯುದ್ಧದ ನಗಾರಿ (4)
6.ಸರಸದ ವಿರುದ್ಧ ಪದವಿಲ್ಲಿ ಉಲ್ಟಾ ಆಗಿದೆ (3)
7.ನಡುವೆ ದಾಹವಿದ್ದಾಗ ನೀಡಿದ ದೃಷ್ಟಾಂತ (5)
9.ಈ ಪರಿ ಕಾಣಿಸಿದ ಆವರಣ (3)
10.ಇದು ಹೋಲಿಕೆಗೆ ಮೀರಿದುದು (4)
11.ಆಧಾರದಿಂದ ಕೂಡಿದುದು (3)
13.ತಪ್ಪಾಗಿ ಹಾರಿಸುವ ಕೀಲುಮೊಳೆ ಅಶ್ವವೇ? (3)

1				■	2	3		4
	■	■	■	■	■		■	
5		6	■	7			■	
■	■		■		■	■	■	
■	■	8				9	■	■
10	■	■	■		■		■	■
	■	11			■	12		13
	■		■	■	■	■	■	
14				■	15			

5590ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಉಪಮಾನ 3.ಅವಸಾನ
5.ತಲಿನ 6.ತತ್ತಿ
7.ಒಣಹರಟೆ 10.ಶಾಪ
12.ನೆನಪು 14.ನತದೃಷ್ಟ
15.ವರ್ಧಮಾನ

ಮೇಲಿಂದ ಕೆಳಕ್ಕೆ:
1.ಉಪವೀತ 2.ನವೀಕರಣ
3.ಅಣ್ಣ 4.ನವೋನವ
5.ತಮ್ಮಟೆ 7.ಒನಪು
8.ರಜತೋತ್ಸವ
9.ಮನೆತನ 11.ಪರಿಜ್ಞಾನ
13.ಕಷ್ಟ

ಸುಡೊಕು 5976

		9		2		3		5
3		6	5		8		1	
	4			7	3	2		6
	6						7	9
9		1		8				
						1		8
		2	3		7		5	
7	1					6		3
		3	4		2		9	1

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5975 ಸುಡೊಕು

4	9	7	1	8	3	5	2	6
2	3	1	4	6	5	9	7	8
6	8	5	7	9	2	4	1	3
9	2	4	6	7	8	1	3	5
5	7	3	2	4	1	8	6	9
8	1	6	3	5	9	7	4	2
1	6	9	5	2	7	3	8	4
3	4	8	9	1	6	2	5	7
7	5	2	8	3	4	6	9	1

ಮಂಡ್ಯದಲ್ಲಿ ಬಂಧಿತ ಬುಕ್ಕಿಯನ್ನು ಬಿಡಿಸಿದ್ದ ಮಾಜಿ ಮುಖ್ಯಮಂತ್ರಿ: ವಿಧಾನಸಭೆಯಲ್ಲಿ ಗಣಿಗ ರವಿಕುಮಾರ್

ಕ್ರಿಕೆಟ್ ಬೆಟ್ಟಿಂಗ್‌ಗೆ ಕಡಿವಾಣ: ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕ್ರಿಕೆಟ್ ಬೆಟ್ಟಿಂಗ್‌ನಿಂದಾಗಿ ಸಣ್ಣ ಸಣ್ಣ ಊರುಗಳಲ್ಲೂ ಜನ ಹಣ ಕಳೆದುಕೊಂಡು ಬೀದಿಗೆ ಬರುತ್ತಿದ್ದಾರೆ. ಯುವಕರ ಬದುಕು ಹಾಳಾಗುತ್ತಿದೆ ಎಂದು ಪಕ್ಷ ಭೇದ ಮರೆತು ವಿಧಾನ ಸಭೆಯಲ್ಲಿ ಶಾಸಕರು ಆತಂಕ ವ್ಯಕ್ತಪಡಿಸಿದ್ದೂ ಅಲ್ಲದೇ, ಇದನ್ನು ತಡೆಯಲು ಕಟ್ಟುನಿಟ್ಟಿನ ಕಾನೂನು ಜಾರಿ ಮಾಡಬೇಕು ಎಂದು ಆಗ್ರಹಿಸಿದರು.

ಕಾಂಗ್ರೆಸ್‌ನ ಗಣಿಗ ರವಿಕುಮಾರ್ ಅವರು ಮಂಡಿಸಿದ ಗಮನ ಸೆಳೆಯುವ ಸೂಚನೆಗೆ ಎಲ್ಲ ಪಕ್ಷಗಳ ಸದಸ್ಯರೂ ಧ್ವನಿಗೂಡಿಸಿದರು.

ವಿಷಯ ಪ್ರಸ್ತಾಪಿಸಿದ ಗಣಿಗ ರವಿವಿಕುಮಾರ್, ಕ್ರಿಕೆಟ್ ಬೆಟ್ಟಿಂಗ್ ಹೆಚ್ಚಾಗುತ್ತಿದ್ದಂತೆ ಎಲ್ಲೆಡೆ ರೌಡಿಸಂ ಕೂಡಾ ಹೆಚ್ಚಾಗುತ್ತಿದೆ. ಐಪಿಎಲ್‌ನಲ್ಲಿ ಯುವಕನೊಬ್ಬ ಬೆಟ್ಟಿಂಗ್ ಕಟ್ಟಿದ್ದ ₹11 ಸಾವಿರ ಕೊಟ್ಟಿಲ್ಲ ಎಂಬ ಕಾರಣಕ್ಕೆ ಆತನನ್ನು ಕೊಲೆ ಮಾಡಲಾಯಿತು. ಮನೆ ಮನೆಯಲ್ಲೂ ಬೆಟ್ಟಿಂಗ್ ಕಟ್ಟುವ ಗೀಳು ಹಬ್ಬಿದೆ ಎಂದು ಹೇಳಿದರು.

ಬುಕ್ಕಿಗಳು ಎಲ್ಲ ಪಕ್ಷಗಳ ನಾಯಕರ ಜತೆಗೂ ಗುರುತಿಸಿಕೊಂಡಿದ್ದಾರೆ. ಮಂಡ್ಯ ಜಿಲ್ಲೆಯಲ್ಲಿ ಒಬ್ಬ ಬುಕ್ಕಿಯನ್ನು ಬಂಧಿಸಿದಾಗ, ಆತ ಪಕ್ಷದ ಕಾರ್ಯಕರ್ತ ಎಂದು ಮಾಜಿ ಮುಖ್ಯಮಂತ್ರಿಯೊಬ್ಬರು ಎಸ್‌ಪಿಗೆ ದೂರವಾಣಿ ಕರೆ ಮಾಡಿ ಬಿಡಿಸಿದರು. ರಾಜಕಾರಣಿಗಳು ಬುಕ್ಕಿಗಳನ್ನು ಪೋಷಿಸುವುದನ್ನು ನಿಲ್ಲಿಸಬೇಕು ಎಂದು ಮನವಿ ಮಾಡಿದರು.



ಶಾಸಕ ಗಣಿಗ ರವಿಕುಮಾರ್ ಅವರು ಕಲಾಪದಲ್ಲಿ ಮಾತನಾಡಿದರು

ಆಗ ಮಧ್ಯ ಪ್ರವೇಶಿಸಿ ಮಾತನಾಡಿದ ವಿರೋಧ ಪಕ್ಷದ ನಾಯಕ ಆರ್. ಅಶೋಕ ಅವರು, ಕ್ರಿಕೆಟ್ ಬೆಟ್ಟಿಂಗ್ ದಂಧೆ ಮಂಡ್ಯ ಅಥವಾ ಒಂದೆರಡು ಊರುಗಳಲ್ಲಿ ಅಲ್ಲ, ಇಡೀ ದೇಶದಲ್ಲೇ ಹಬ್ಬಿದೆ. ಒಂದು ಸಾವಿರ ಕೋಟಿ ರೂಪಾಯಿಯಷ್ಟು ಬೆಟ್ಟಿಂಗ್ ದಂಧೆ ನಡೆಯುತ್ತಿದೆ. ಬೆಂಗಳೂರಿನಲ್ಲಿ ಒಬ್ಬರು ಕ್ರಿಕೆಟ್ ಬೆಟ್ಟಿಂಗ್‌ನಿಂದ ₹120 ಕೋಟಿಯಷ್ಟು ಕಳೆದುಕೊಂಡು ಬೀದಿಗೆ ಬಿದ್ದರು. ಆದ್ದರಿಂದ ಬೆಟ್ಟಿಂಗ್ ತಡೆಗಟ್ಟಲು ವಿಶೇಷ ತಂಡ ರಚಿಸಬೇಕು ಎಂದರು.

ಬಿಜೆಪಿಯ ಶರಣು ಸಲಗರ ಮಾತನಾಡಿ, ಪ್ರತಿ ತಾಲ್ಲೂಕಿನಲ್ಲಿ ಬೆಟ್ಟಿಂಗ್ ನಡೆಯುತ್ತಿದೆ. ಬುಕ್ಕಿಗಳನ್ನು ಪತ್ತೆ ಹಚ್ಚುವುದು ಕಷ್ಟವಿಲ್ಲ ಆದರೆ, ಆ ಕೆಲಸ ಆಗುತ್ತಿಲ್ಲ. ಹೀಗೆ ಬುಕ್ಕಿಗಳನ್ನು ಬೆಳೆಯಲು ಬಿಟ್ಟರೆ ಇವರು ಶಾಸಕರಾಗಿ ವಿಧಾನಸಭೆಗೆ ಬರುವ ದಿನಗಳು ದೂರವಿಲ್ಲ. ಮೊದಲಿಗೆ ಇವರನ್ನು ಗಡೀಪಾರು ಮಾಡಬೇಕು ಎಂದು ಒತ್ತಾಯಿಸಿದರು.

ಕಾಂಗ್ರೆಸ್‌ನ ಪ್ರದೀಪ್ ಈಶ್ವರ್, ಎಚ್‌.ಡಿ.ರಂಗನಾಥ್, ಬಿಜೆಪಿಯ ಆರಗ ಜ್ಞಾನೇಂದ್ರ, ಸುರೇಶ್‌ಗೌಡ, ರವಿಸುಬ್ರಹ್ಮಣ್ಯ ಅವರು ಮಾತನಾಡಿದರು.

ಇದಕ್ಕೆ ಪ್ರತಿಕ್ರಿಯಿಸಿದ ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ, 'ಬೆಟ್ಟಿಂಗ್ ತಡೆಗಟ್ಟುವ ದಿಸೆಯಲ್ಲಿ ಕೇಂದ್ರದ ಜತೆ ಮಾತುಕತೆ ಮಾಡಬೇಕು. ಗೇಮಿಂಗ್ ವ್ಯಾಖ್ಯಾನ ಬದಲಾಗಬೇಕು. ರಿಯಲ್ ಟೈಮ್ ಮನಿ ಗೇಮಿಂಗ್‌ಗಳಿಂದ ಕೇಂದ್ರ ಸರ್ಕಾರಕ್ಕೆ ಜಿಎಸ್‌ಟಿ ಮೂಲಕ ನಾಲ್ಕು ವರ್ಷಗಳಿಗೆ ₹74 ಸಾವಿರ ಕೋಟಿ ಆದಾಯ ಬರುತ್ತದೆ. ಇಷ್ಟು ಹಣ ಕಳೆದು ಕೊಳ್ಳಲು ಯಾವುದೇ ಸರ್ಕಾರವೂ ತಯಾರಿಲ್ಲ. ಆದರೆ ಸಾಮಾನ್ಯ ಜನ ಬೆಟ್ಟಿಂಗ್ ಕಟ್ಟಿ ಬೀದಿ ಪಾಲಾಗುವುದನ್ನು ತಡೆಯಲು ಕೇಂದ್ರ ಮತ್ತು ರಾಜ್ಯಗಳು ಚರ್ಚಿಸಿ ಕಾನೂನು ಜಾರಿ ಮಾಡಬೇಕು' ಎಂದು ಸಲಹೆ ನೀಡಿದರು.

'ರಾಜ್ಯ 6 ತಿಂಗಳಲ್ಲಿ ಮಾದಕ ದ್ರವ್ಯ ಮುಕ್ತ'

ಕಳೆದ ಏಳು ತಿಂಗಳಲ್ಲಿ 9,645 ಕೆ.ಜಿ ಗಾಂಜಾ ಮತ್ತು 233 ಕೆ.ಜಿ ಸಿಂಥೆಟಿಕ್ ಡ್ರಗ್ಸ್ ವಶಕ್ಕೆ ತೆಗೆದುಕೊಳ್ಳಲಾಗಿದ್ದು, ಇದರ ಒಟ್ಟು ಮೌಲ್ಯ ₹142 ಕೋಟಿ. ಮಾದಕ ದ್ರವ್ಯಮುಕ್ತ ರಾಜ್ಯವಾಗಿಸುವ ದಿಸೆಯಲ್ಲಿ ಕಠಿಣ ಕ್ರಮ ತೆಗೆದುಕೊಳ್ಳಲಾಗಿದೆ. ಇನ್ನು ಆರು ತಿಂಗಳಲ್ಲಿ ಕರ್ನಾಟಕವು ಮಾದಕ ದ್ರವ್ಯ ಮುಕ್ತ ರಾಜ್ಯವಾಗಲಿದೆ ಎಂದು ಗೃಹ ಸಚಿವ ಪರಮೇಶ್ವರ ವಿಧಾನಸಭೆಯಲ್ಲಿ ತಿಳಿಸಿದರು.

ಶಾಲೆಗಳಲ್ಲಿ ಚಾಕೊಲೇಟ್ ಮೂಲಕ ಮಾದಕದ್ರವ್ಯ ಹಂಚುವ ಜಾಲವೇ ಇದೆ. 102 ವಿದೇಶಿ ಪೆಡ್ಲರ್‌ಗಳ ಮೇಲೆ ಪ್ರಕರಣ ದಾಖಲಿಸಲಾಗಿದೆ. ಆಫ್ರಿಕಾ ಮೂಲದ 245 ಮಂದಿಯನ್ನು ಅವರ ದೇಶಕ್ಕೆ ವಾಪಸ್ ಕಳಿಸಲಾಗಿದೆ. ಆಫ್ರಿಕದವರು ಭಾರತ ಬಿಟ್ಟು ಹೋಗುವುದನ್ನು ತಪ್ಪಿಸಿಕೊಳ್ಳಲು ಅವರೇ ಕೇಸ್ ಹಾಕಿಸಿಕೊಳ್ಳುತ್ತಾರೆ. ಈ ರೀತಿ ಕೇಸ್ ಹಾಕಿಸಿಕೊಂಡವರನ್ನು ಸುಲಭವಾಗಿ ಅವರ ದೇಶಕ್ಕೆ ಕಳುಹಿಸಲು ಆಗುವುದಿಲ್ಲ. ಆ ಕಾರಣಕ್ಕೆ ಕೇಸ್ ಹಾಕಿಸಿಕೊಳ್ಳುತ್ತಾರೆ ಎಂದರು.

ಮನೆಗಳಲ್ಲಿ ಮದ್ಯ ಮಾರಾಟ ತಡೆಗೆ ಒತ್ತಾಯ

ರಾಜ್ಯದಲ್ಲಿ ಮನೆ, ಮನೆಗಳಲ್ಲಿ ನಡೆಯುತ್ತಿರುವ ಮದ್ಯ ಮಾರಾಟ ತಡೆಗೆ ಬಿಗಿ ಕ್ರಮಗಳನ್ನು ಕೈಗೊಳ್ಳುವಂತೆ ಶಾಸಕರು ವಿಧಾನಸಭೆಯಲ್ಲಿ ಮಂಗಳವಾರ ಆಗ್ರಹಿಸಿದರು.

ಅಬಕಾರಿ ಸಚಿವ ಆರ್.ಬಿ. ತಿಮ್ಮಾಪುರ ಅವರಿಗೆ ಪ್ರಶ್ನೆ ಕೇಳಿದ ಬಿಜೆಪಿಯ ಧೀರಜ್ ಮುನಿರಾಜು, 'ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ಮದ್ಯದ ಅಕ್ರಮ ಮಾರಾಟ ವ್ಯಾಪಕವಾಗಿದೆ. ನನ್ನ ಮತಗಟ್ಟೆ ವ್ಯಾಪ್ತಿಯೊಂದರಲ್ಲೇ ಅತಿಯಾದ ಮದ್ಯ ಸೇವನೆಯಿಂದ ವರ್ಷದಲ್ಲಿ 14 ಮಂದಿ ಮೃತಪಟ್ಟಿದ್ದಾರೆ. ಮನೆಗಳಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಮಾಡುವುದನ್ನು ತಡೆಯಲು ಬಿಗಿಯಾದ ಕ್ರಮ ಕೈಗೊಳ್ಳಬೇಕು' ಎಂದು ಆಗ್ರಹಿಸಿದರು.

ಬಿಜೆಪಿಯ ಆರಗ ಜ್ಞಾನೇಂದ್ರ ಮಾತನಾಡಿ, 'ಮದ್ಯದ ಅಕ್ರಮ ಮಾರಾಟಕ್ಕೆ ಪೊಲೀಸರು, ಅಬಕಾರಿ ಅಧಿಕಾರಿಗಳು ನೆರವಾಗುತ್ತಿದ್ದಾರೆ. ಈ ಸಮಸ್ಯೆಯಿಂದ ಬೇಸತ್ತಿರುವ ಮಹಿಳೆಯರು ತಡರಾತ್ರಿ ಕರೆ ಮಾಡಿ ಕಣ್ಣೀರು ಹಾಕುತ್ತಿದ್ದಾರೆ. ಸರ್ಕಾರ ತಕ್ಷಣ ಕ್ರಮ ಕೈಗೊಳ್ಳಬೇಕು' ಎಂದು ಒತ್ತಾಯಿಸಿದರು.

ಬಿಜೆಪಿ, ಜೆಡಿಎಸ್, ಕಾಂಗ್ರೆಸ್‌ನ ಹಲವು ಶಾಸಕರು ಈ ಬೇಡಿಕೆಗೆ ದನಿಗೂಡಿಸಿದರು. ಮದ್ಯದಂಗಡಿಗಳಿಂದ ದೊಡ್ಡ ಪ್ರಮಾಣದಲ್ಲಿ ಖರೀದಿ ಆಗುತ್ತಿರುವುದರ ಮೇಲೆ ನಿಗಾ ವಹಿಸುವಂತೆ ಸಲಹೆ ನೀಡಿದರು.

ಉತ್ತರ ನೀಡಿದ ಸಚಿವರು, 'ಈಗ ಇರುವ ಕಾಯ್ದೆಯ ಪ್ರಕಾರ, ಸಣ್ಣ ಪ್ರಮಾಣದಲ್ಲಿ ಮದ್ಯದ ದಾಸ್ತಾನು ಹೊಂದಿರುವವರ ವಿರುದ್ಧ ಪ್ರಕರಣ ದಾಖಲಿಸಲು ಅವಕಾಶವಿಲ್ಲ. ಕಾಯ್ದೆ ತಿದ್ದುಪಡಿ ಕುರಿತು ಪರಿಶೀಲಿಸಲಾಗುವುದು' ಎಂದರು.

ಸುದ್ದಿ 2 ನಿಮಿಷ

ಅನರ್ಹ ಕಾರ್ಮಿಕ ಕಾರ್ಡ್‌ಗಳಿಗೆ ಕಡಿವಾಣ: ಸಂತೋಷ್ ಲಾಡ್

ಬೆಂಗಳೂರು: 'ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಿಂದ ಕಾರ್ಮಿಕ ಕಾರ್ಡ್ ಪಡೆದಿರುವವರಲ್ಲಿ ಶೇಕಡ 50ಕ್ಕೂ ಹೆಚ್ಚು ಮಂದಿ ಅನರ್ಹರಿರುವ ಅನುಮಾನವಿದ್ದು, ಅಂತಹ ಕಾರ್ಡ್‌ಗಳನ್ನು ರದ್ದುಗೊಳಿಸಲು ಕ್ರಮ ಕೈಗೊಳ್ಳಲಾಗುವುದು' ಎಂದು ಕಾರ್ಮಿಕ ಸಚಿವ ಸಂತೋಷ್ ಲಾಡ್ ಅವರು ತಿಳಿಸಿದರು.

ಬಿಜೆಪಿಯ ಸಿದ್ದು ಸವದಿ ಪ್ರಶ್ನೆಗೆ ವಿಧಾನಸಭೆಯಲ್ಲಿ ಮಂಗಳವಾರ ಉತ್ತರ ನೀಡಿದ ಅವರು, 'ಮಂಡಳಿಯಿಂದ 53 ಲಕ್ಷ ಕಾರ್ಮಿಕ ಕಾರ್ಡ್‌ಗಳನ್ನು ವಿತರಿಸಲಾಗಿತ್ತು. ಮೊದಲ ಹಂತದ ಪರಿಶೀಲನೆ ವೇಳೆ ಏಳು ಲಕ್ಷ ಅನರ್ಹ ಕಾರ್ಡ್‌ಗಳನ್ನು ಪತ್ತೆಹಚ್ಚಲಾಗಿದೆ' ಎಂದು ಹೇಳಿದರು.



ಪ್ರತಿ ಜಿಲ್ಲೆಯಲ್ಲೂ 2.5 ಲಕ್ಷದಿಂದ 3 ಲಕ್ಷ ಕಾರ್ಮಿಕ ಕಾರ್ಡ್‌ಗಳನ್ನು ವಿತರಿಸಲಾಗಿದೆ. ಅವುಗಳಲ್ಲಿ ಶೇ 50ಕ್ಕಿಂತಲೂ ಹೆಚ್ಚು ಅನರ್ಹರ ಪಾಲಾಗಿವೆ. ಹಾವೇರಿ ಜಿಲ್ಲೆಯಲ್ಲಿ 3 ಲಕ್ಷ ಕಾರ್ಡ್‌ಗಳನ್ನು ವಿತರಿಸಲಾಗಿತ್ತು. ಸಾಮಾಜಿಕ ಲೆಕ್ಕಪರಿಶೋಧನೆ ನಡೆಸಿದಾಗ 2.70 ಲಕ್ಷ ಅನರ್ಹ ಫಲಾನುಭವಿಗಳು ಪತ್ತೆಯಾಗಿದ್ದಾರೆ ಎಂದು ತಿಳಿಸಿದರು. ಅನರ್ಹ ಫಲಾನುಭವಿಗಳ ಪತ್ತೆಗೆ ಇನ್ನಷ್ಟು ಪರಿಶೀಲನೆ ಅಗತ್ಯವಿದೆ. ಕೆಲವು ತಿಂಗಳೊಳಗೆ ಮತ್ತೊಮ್ಮೆ ಪರಿಶೀಲನೆ ನಡೆಸಿ, ಅನರ್ಹರಿಗೆ ನೀಡಿರುವ ಕಾರ್ಡ್‌ಗಳ ರದ್ಧತಿಗೆ ಕ್ರಮ ಕೈಗೊಳ್ಳಲಾಗುವುದು ಎಂದು ಅವರು ಭರವಸೆ ನೀಡಿದರು.

'ಪ್ರತ್ಯೇಕ ವಸತಿ ಯೋಜನೆ'

ಬೆಂಗಳೂರು: ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕರಿಗಾಗಿ ಪ್ರತ್ಯೇಕವಾದ ವಸತಿ ಯೋಜನೆಯನ್ನು ರೂಪಿಸಲಾಗುತ್ತಿದೆ. ಶೀಘ್ರದಲ್ಲಿ ಈ ಯೋಜನೆಯನ್ನು ಜಾರಿಗೊಳಿಸಲಾಗುವುದು ಎಂದು ಸಚಿವ ಸಂತೋಷ್ ಲಾಡ್ ಹೇಳಿದರು.

ಕಟ್ಟಡ ಕಾರ್ಮಿಕರ ಕಲ್ಯಾಣ ಮಂಡಳಿಯ ಕಚೇರಿಗಳನ್ನು ಜಿಲ್ಲಾ ಮಟ್ಟದಲ್ಲಿ ತೆರೆಯಲು ನಿರ್ಧರಿಸಲಾಗಿದೆ. ಆರು ತಿಂಗಳಲ್ಲಿ ಈ ಕಚೇರಿಗಳು ಕಾರ್ಯಾರಂಭ ಮಾಡಲಿವೆ ಎಂದರು.

ಕಾರ್ಮಿಕರ ನೋಂದಣಿ, ವಿವಿಧ ಯೋಜನೆಗಳ ಫಲಾನುಭವಿಗಳ ಆಯ್ಕೆ ಮತ್ತಿತರ ಕೆಲಸಗಳನ್ನು ನಿರ್ವಹಿಸಲು ಜಿಲ್ಲಾ ಮಟ್ಟದ ಕಚೇರಿಗಳ ಅಗತ್ಯವಿದೆ. ಇದರಿಂದ ಅರ್ಹ ಕಾರ್ಮಿಕರನ್ನು ಗುರುತಿಸಲು ಸುಲಭವಾಗುತ್ತದೆ ಎಂದು ಸಂತೋಷ್ ಲಾಡ್ ಅವರು ತಿಳಿಸಿದರು.



ಚರ್ಚೆ ವಿಧಾನ ಪರಿಷತ್ ಕಲಾಪದಲ್ಲಿ ಸದಸ್ಯೆ ಉಮಾಶ್ರೀ, ಸಹಕಾರ ಸಚಿವ ಕೆ. ರಾಜಣ್ಣ ಹಾಗೂ ಮುಖ್ಯ ಸಚೇತಕ ಸಲೀಂ ಅಹ್ಮದ್ ಅವರು ಚರ್ಚೆಯಲ್ಲಿ ತೊಡಗಿದ್ದರು –ಪ್ರಜಾವಾಣಿ ಚಿತ್ರ

'ಕೌನ್ಸೆಲಿಂಗ್ ಮೂಲಕ ಪಿಡಿಒ ವರ್ಗಾವಣೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಿಡಿಒ (ಪಂಚಾಯತ್ ಅಭಿವೃದ್ಧಿ ಅಧಿಕಾರಿ) ವರ್ಗಾವಣೆಯನ್ನು ಮುಂದಿನ ವರ್ಷದಿಂದ ಕೌನ್ಸೆಲಿಂಗ್ ಮೂಲಕ ನಡೆಸಲಾಗುವುದು ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದರು.

ವಿಧಾನಸಭೆಯಲ್ಲಿ ಮಂಗಳವಾರ ಕಾಂಗ್ರೆಸ್‌ನ ಎಚ್‌.ಡಿ.ರಂಗನಾಥ ಅವರ ಗಮನ ಸೆಳೆಯುವ ಸೂಚನೆಗೆ ಉತ್ತರ ನೀಡಿದ ಅವರು ಈ ವಿಷಯ ತಿಳಿಸಿದರು.

ಪಿಡಿಒಗಳು ಸಚಿವರು, ಶಾಸಕರಿಗೆ ಆಪ್ತ ಸಹಾಯಕರಾಗಲು ಒಪ್ಪಿಗೆ ಕೊಡುತ್ತಿಲ್ಲ. ಇದರಿಂದ ಗ್ರಾಮಗಳಲ್ಲಿನ ಕೆಲಸ ಕಾರ್ಯಗಳಿಗೆ ತೊಂದರೆ ಆಗುತ್ತಿದೆ. 60ರಿಂದ 70 ಜನ ಪಿಡಿಒಗಳು ಆಪ್ತ ಸಹಾಯಕರಾಗಿ ಹೋದರೆ, ದೊಡ್ಡ ಮಟ್ಟದ ಕೊರತೆ ಆಗುತ್ತದೆ. ಆದ್ದರಿಂದ ಆಪ್ತ ಸಹಾಯಕರನ್ನಾಗಿ ತೆಗೆದುಕೊಳ್ಳುವುದನ್ನು ನಿಲ್ಲಿಸುವುದು ಒಳ್ಳೆಯದು ಎಂದು ಪ್ರಿಯಾಂಕ್ ಹೇಳಿದರು.

ಪಿಡಿಒಗಳ ವರ್ಗಾವಣೆಯಲ್ಲಿ ಸಮಸ್ಯೆ ಆಗುತ್ತಿದೆ. ಇದನ್ನು ತಪ್ಪಿಸಲು ಕೌನ್ಸೆಲಿಂಗ್ ಮೂಲಕವೇ ವರ್ಗಾವಣೆ ತೀರ್ಮಾನಿಸಲಾಗಿದೆ ಎಂದು ವಿವರಿಸಿದರು.

ನೀರಿಗಾಗಿ ಮಹಾರಾಷ್ಟ್ರಕ್ಕೆ ಮನವಿ: ಕಲಬುರಗಿ ಜಿಲ್ಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಉಲ್ಬಣವಾಗಿರುವುದರಿಂದ ನೀರು ಹರಿಸುವಂತೆ ಮಹಾರಾಷ್ಟ್ರಕ್ಕೆ ಮನವಿ ಮಾಡಲಾಗುವುದು ಎಂದು ಪ್ರಿಯಾಂಕ್ ಖರ್ಗೆ ಅವರು ಅಲ್ಲಮಪ್ರಭು ಪಾಟೀಲ ಅವರ ಗಮನ ಸೆಳೆಯುವ ಸೂಚನೆಗೆ ಪ್ರತಿಕ್ರಿಯಿಸಿದರು.

ಕನ್ನಡ ನಾಮಫಲಕ: ಮಸೂದೆ ಮಂಡನೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಕೈಗಾರಿಕೆಗಳು, ವಾಣಿಜ್ಯ ಚಟುವಟಿಕೆ ಕೇಂದ್ರಗಳು, ಆಸ್ಪತ್ರೆ, ಪ್ರಯೋಗಾಲಯಗಳು ಸೇರಿದಂತೆ ರಾಜ್ಯದಲ್ಲಿನ ಎಲ್ಲ ವಹಿವಾಟು ಕೇಂದ್ರಗಳ ನಾಮಫಲಕಗಳಲ್ಲಿ ಶೇಕಡ 60ರಷ್ಟು ಕನ್ನಡ ಬಳಕೆಯಾಗಿರುವುದನ್ನು ಖಚಿತಪಡಿಸಿಕೊಳ್ಳಲು ಅಧಿಕಾರ ನೀಡುವ ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ (ತಿದ್ದುಪಡಿ) ಮಸೂದೆ–2024 ಅನ್ನು ವಿಧಾನಸಭೆಯಲ್ಲಿ ಮಂಗಳವಾರ ಮಂಡಿಸಲಾಯಿತು.

ಕನ್ನಡ ಮತ್ತು ಸಂಸ್ಕೃತಿ ಸಚಿವರ ಪರವಾಗಿ ಗೃಹ ಸಚಿವ ಜಿ. ಪರಮೇಶ್ವರ ಮಸೂದೆಯನ್ನು ಮಂಡಿಸಿದರು. ಮನರಂಜನಾ ಕೇಂದ್ರಗಳು, ಹೋಟೆಲ್‌ಗಳು, ಪ್ರಯೋಗಾಲಯಗಳು, ಟ್ರಸ್ಟ್‌ಗಳು, ಸಮಾಲೋಚನಾ ಕೇಂದ್ರಗಳು ಸೇರಿದಂತೆ ಎಲ್ಲ ಬಗೆಯ ಸಂಸ್ಥೆಗಳಿಗೂ ಈ ತಿದ್ದುಪಡಿ ಅನ್ವಯವಾಗಲಿದೆ. 2022ರ ಕಾಯ್ದೆಗೆ ಈ ತಿದ್ದುಪಡಿಯನ್ನು ತರಲಾಗುತ್ತಿದೆ.

ರಾಜ್ಯ ಸರ್ಕಾರದ ಹಣಕಾಸು ಕುರಿತ ಸಿಎಜಿ ವರದಿಯಲ್ಲಿ ಬಹಿರಂಗ

47 ವರ್ಷವಾದರೂ ವಸೂಲಾಗದ ಸಾಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರವು ತನ್ನದೇ ಅಧೀನದ ವಿವಿಧ ಇಲಾಖೆಗಳು ಮತ್ತು ಸಂಸ್ಥೆಗಳಿಗೆ ನೀಡಿರುವ ₹10,389.78 ಕೋಟಿ ಸಾಲ ದಶಕಗಳಿಂದಲೂ ವಸೂಲಾಗಿಲ್ಲ. ಬೆಂಗಳೂರು ಜಲಮಂಡಳಿ ಮತ್ತು ಕರ್ನಾಟಕ ಬೀಜ ನಿಗಮಕ್ಕೆ 47 ವರ್ಷಗಳ ಹಿಂದೆ ನೀಡಿದ್ದ ಸಾಲಗಳೂ ಈ ಪಟ್ಟಿಯಲ್ಲಿವೆ.

2022–23ನೇ ಆರ್ಥಿಕ ವರ್ಷಕ್ಕೆ ಸಂಬಂಧಿಸಿದಂತೆ ರಾಜ್ಯ ಹಣಕಾಸು ಲೆಕ್ಕಪತ್ರಗಳ ಕುರಿತ ಪ್ರಧಾನ ಮಹಾಲೇಖಪಾಲರ (ಸಿಎಜಿ) ವರದಿಯನ್ನು ವಿಧಾನಸಭೆಯಲ್ಲಿ ಮಂಗಳವಾರ ಮಂಡಿಸಲಾಯಿತು. ಎಂಟು ಇಲಾಖೆಗಳ 21 ಸಂಸ್ಥೆಗಳಿಗೆ ನೀಡಿರುವ ಸಾಲವು ದಶಕಗಳು ಕಳೆದರೂ ಬಾಕಿ ಇದೆ ಎಂಬುದು ವರದಿಯಲ್ಲಿ ಬಹಿರಂಗವಾಗಿದೆ.

'ಎಂಟು ಇಲಾಖೆಗಳಿಗೆ ಸಂಬಂಧಿಸಿದ 21 ಸಂಸ್ಥೆಗಳು ಸರ್ಕಾರದಿಂದ ಪಡೆದಿದ್ದ ಸಾಲದ ಅಸಲನ್ನು ಕೂಡ ದಶಕಗಳಿಂದ ಮರುಪಾವತಿ ಮಾಡಿಲ್ಲ. ಸಾಲ ಮಂಜೂರಾತಿಯ ಸಂದರ್ಭದಲ್ಲಿ ಮರುಪಾವತಿ ಕುರಿತು ವಿಧಿಸಿದ್ದ ಷರತ್ತುಗಳನ್ನು ಪಾಲಿಸುವಲ್ಲಿ ಈ ಸಾಲಗಾರ ಸಂಸ್ಥೆಗಳು ವಿಫಲವಾಗಿವೆ' ಎಂದು ಸಿಎಜಿ ಹೇಳಿದೆ.

ಈ ಸಾಲಗಾರ ಸಂಸ್ಥೆಗಳಿಂದ ಸರ್ಕಾರಕ್ಕೆ ₹9,380 ಕೋಟಿ ಅಸಲು ಬಾಕಿ ಇದೆ. ಚಕ್ರಬಡ್ಡಿಯೂ ಸೇರಿದರೆ ಬಾಕಿ ಮೊತ್ತವು ₹15,856 ಕೋಟಿಯಷ್ಟಾಗುತ್ತದೆ ಎಂಬ ಉಲ್ಲೇಖ ವರದಿಯಲ್ಲಿದೆ.

ಸಾಲ ಬಾಕಿ

₹12,144 ಕೋಟಿ
ಬೆಂಗಳೂರು ಜಲಮಂಡಲಿ

₹1.44 ಕೋಟಿ
ಕರ್ನಾಟಕ ಬೀಜ ನಿಗಮ

₹5.24 ಕೋಟಿ
ಕರ್ನಾಟಕ ಪ್ರವಾಸೋದ್ಯಮ ಅಭಿವೃದ್ಧಿ ನಿಗಮವು 1981ರಲ್ಲಿ ಪಡೆದಿದ್ದ ಸಾಲ

'ಪಿ.ಡಿ ಖಾತೆಗಳಲ್ಲಿ ಬಳಸದ ₹29,509 ಕೋಟಿ'

2023ರ ಮಾರ್ಚ್ 31ರ ಅಂತ್ಯಕ್ಕೆ ರಾಜ್ಯ ಸರ್ಕಾರದ ವಿವಿಧ ಯೋಜನೆಗಳಿಗೆ ಬಿಡುಗಡೆಯಾಗಿದ್ದ ಮೊತ್ತದಲ್ಲಿ ₹29,509.54 ಕೋಟಿ ಬಳಕೆಯಾಗದೇ ಅಧಿಕಾರಿಗಳ ವೈಯಕ್ತಿಕ ಠೇವಣಿ (ಪಿ.ಡಿ) ಖಾತೆಯಲ್ಲಿ ಇತ್ತು ಎಂಬುದು ಸಿಎಜಿ ಲೆಕ್ಕಪರಿಶೋಧನೆಯಲ್ಲಿ ಪತ್ತೆಯಾಗಿದೆ.

2022–23ರಲ್ಲಿ ಒಟ್ಟು ₹32,201.44 ಕೋಟಿ ಅಧಿಕಾರಿಗಳ ಪಿ.ಡಿ ಖಾತೆಗಳಿಗೆ ವರ್ಗಾವಣೆಯಾಗಿತ್ತು. ಇದರಲ್ಲಿ ಕರ್ನಾಟಕ ಗಣಿ ಪರಿಸರ ಪುನಶ್ಚೇತನ ನಿಗಮದ ವ್ಯವಸ್ಥಾಪಕ ನಿರ್ದೇಶಕರ ಖಾತೆಗೆ ವರ್ಗಾವಣೆಯಾಗಿದ್ದ ₹23,122.88 ಕೋಟಿ ಕೂಡ ಸೇರಿತ್ತು. ಆ ವರ್ಷ ಪಿ.ಡಿ ಖಾತೆಗಳಲ್ಲಿದ್ದ ಮೊತ್ತದಲ್ಲಿ ₹6,797.51 ಕೋಟಿಯಷ್ಟನ್ನು ಮಾತ್ರ ಹಿಂಪಡೆಯಲಾಗಿತ್ತು ಎಂದು ವರದಿ ಹೇಳಿದೆ.

2022–23ನೇ ಆರ್ಥಿಕ ವರ್ಷದ ಅಂತ್ಯದಲ್ಲಿ ವಿವಿಧ ಕೇಂದ್ರ ಪುರಸ್ಕೃತ ಯೋಜನೆಗಳ ₹12,925.31 ಕೋಟಿಯು ಏಕ ನೋಡಲ್ ಏಜೆನ್ಸಿಯ ಬ್ಯಾಂಕ್ ಖಾತೆಯಲ್ಲಿ ಉಳಿದಿತ್ತು ಎಂಬ ಉಲ್ಲೇಖವೂ ವರದಿಯಲ್ಲಿದೆ.

2022-23ರಲ್ಲಿ ಸರ್ಕಾರಿ ಖಾತರಿಗಳ ಮೇಲಿನ ಕಮಿಷನ್ ರೂಪದಲ್ಲಿ ರಾಜ್ಯ ಸರ್ಕಾರಕ್ಕೆ ₹314 ಕೋಟಿ ಲಭ್ಯವಾಗಿತ್ತು. ಅದೇ ಮೊದಲ ಬಾರಿಗೆ ಸರ್ಕಾರವು ಅಂತಹ ಮೊತ್ತವನ್ನು ಭಾರತೀಯ ರಿಸರ್ವ್ ಬ್ಯಾಂಕ್‌ನಲ್ಲಿ ಹೂಡಿಕೆ ಮಾಡಿತ್ತು ಎಂದು ಸಿಎಜಿ ಹೇಳಿದೆ.

ಪರಶುರಾಮ ಥೀಮ್ ಪಾರ್ಕ್ ಅವ್ಯವಹಾರ ಪ್ರಕರಣದ ಚರ್ಚೆ ಗದ್ದಲ

'ದೇವರ ಹೆಸರಿನಲ್ಲಿ ಲೂಟಿ ಮಾಡಿದವರಿಗೆ ಶಿಕ್ಷೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉಡುಪಿ ಜಿಲ್ಲೆಯ ಪರಶುರಾಮ ಥೀಮ್ ಪಾರ್ಕ್ ಅವ್ಯವಹಾರ ಪ್ರಕರಣ ಕುರಿತು ಸರ್ಕಾರದ ವಿರುದ್ಧವೇ ಕಾಂಗ್ರೆಸ್‌ನ ಯು.ಬಿ. ವೆಂಕಟೇಶ್ ಮಾಡಿದ ಆರೋಪಕ್ಕೆ, ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ತಂಗಡಗಿ ನಕ್ಕಿದ್ದು ಬಿಜೆಪಿ ಸದಸ್ಯರನ್ನು ಕೆರಳಿಸಿತು. ಪರಿಷತ್‌ನಲ್ಲಿ ಗದ್ದಲಕ್ಕೆ ನಾಂದಿ ಹಾಡಿತು.

'ವೆಂಕಟೇಶ್ ಅವರ ಪ್ರಶ್ನೆಗೆ ಉತ್ತರ ನೀಡಿದ ತಂಗಡಗಿ, ಉಡುಪಿಯ ಎರ್ಲಪಾಡಿ ಗ್ರಾಮ ಪಂಚಾಯಿತಿಯ ಬೈಲೂರು ಉಮಿಕಲ್ ಬೆಟ್ಟದಲ್ಲಿ ಥೀಮ್ ಪಾರ್ಕ್ ನಿರ್ಮಾಣವಾಗಿದ್ದು ಬಿಜೆಪಿ ಅವಧಿಯಲ್ಲಿ. ದೈವ ಭಕ್ತಿಗೆ, ದೇಗುಲಗಳಿಗೆ ಹೆಸರಾದ, ದೇವರನ್ನು ತಲೆಯ ಮೇಲೆ ಹೊತ್ತುಕೊಳ್ಳುವ ಜನರಿರುವ ಜಿಲ್ಲೆಯಲ್ಲೇ ದೇವರ ಹೆಸರಿನಲ್ಲಿ ವಂಚನೆ ನಡೆದಿದೆ. ಪರಶುರಾಮನ ಅರ್ಧ ಮೂರ್ತಿಯನ್ನು ಸಮುದ್ರಕ್ಕೆ ಎಸೆಯಲಾಗಿದೆ. ನಿವೃತ್ತ ನ್ಯಾಯಮೂರ್ತಿ ನಾಗಮೋಹನದಾಸ್ ಆಯೋಗ ತನಿಖೆ ನಡೆಸಿದೆ. ಶೀಘ್ರ ವರದಿ ನೀಡಲಿದೆ. ಸಿಐಡಿಯೂ ಪ್ರತ್ಯೇಕ ತನಿಖೆ ಆರಂಭಿಸಿದೆ. ದೇವರ ಹೆಸರಲ್ಲೂ ಲೂಟಿ ಮಾಡಿವರಿಗೆ ಶಿಕ್ಷೆಯಾಗಲಿದೆ' ಎಂದರು.

'ದೇವರನ್ನು ತಲೆಯ ಮೇಲೆ ಹೊತ್ತುಕೊಳ್ಳುವ ಬಗ್ಗೆ ನೀವು ಹೇಳುವ ಅಗತ್ಯವಿಲ್ಲ. ನೀವು ತೀರ್ಪು ನೀಡಬೇಡಿ, ಮೊದಲು ತನಿಖೆ ಮಾಡಿಸಿ' ಎಂದು ಬಿಜೆಪಿಯ ಭಾರತಿ ಶೆಟ್ಟಿ, ಕೇಶವ ಪ್ರಸಾದ್, ಪ್ರತಾಪಸಿಂಹ ನಾಯಕ್, ಜೆಡಿಎಸ್‌ನ ಗೋವಿಂದರಾಜು ಆಕ್ರೋಶ ವ್ಯಕ್ತಪಡಿಸಿದರು.

'ಕುಂಬಳ ಕಾಯಿ ಕಳ್ಳ ಎಂದರೆ ನೀವೇಕೆ ಹೆಗಲು ಮುಟ್ಟಿಕೊಳ್ಳುವಿರಿ. ದೇವರ ಹೆಸರಲ್ಲಿ ಲೂಟಿ ಮಾಡಿದವರು ಅನುಭವಿಸುತ್ತಾರೆ ಬಿಡಿ' ಎಂದು ತಂಗಡಗಿ ಕಾಲೆಳೆದರು. ಸಭಾಪತಿ ಬಸವರಾಜ್ ಹೊರಟ್ಟಿ ಮಧ್ಯ ಪ್ರವೇಶಿಸಿ, ಚರ್ಚೆಯನ್ನು ಮುಕ್ತಾಯಗೊಳಿಸಿದರು.

ಹೊರಟ್ಟಿಗೆ ಸದನದ ಗೌರವ: ಒಂದೇ ಕ್ಷೇತ್ರದಿಂದ ಸತತವಾಗಿ ಎಂಟು ಬಾರಿ ವಿಧಾನ ಪರಿಷತ್‌ಗೆ ಆಯ್ಕೆಯಾದ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರ ಹೆಸರು ಲಿಮ್ಕಾ ವಿಶ್ವ ದಾಖಲೆ ಪುಸ್ತಕಕ್ಕೆ ಸೇರಿರುವುದಕ್ಕೆ ಎಲ್ಲ ಸದಸ್ಯರು ನುಡಿ ಗೌರವ ಸಲ್ಲಿಸಿದರು. ಕಾಂಗ್ರೆಸ್‌ನ ಬಿ.ಕೆ.ಹರಿಪ್ರಸಾದ್ ಮಂಡಿಸಿದ ವಿಷಯ ಕುರಿತು ಎರಡೂವರೆ ಗಂಟೆ ಚರ್ಚೆ ನಡೆಯಿತು.

ಎಲ್ ಆ್ಯಂಡ್ ಟಿ ಕಂಪನಿಗೆ ₹25 ಕೋಟಿ ದಂಡ

ಕಲಬುರಗಿ ನಗರಕ್ಕೆ ಪೂರೈಸುವ ಕುಡಿಯುವ ನೀರು ಸರಬರಾಜು ಯೋಜನೆಯ ಕಾಮಗಾರಿಯಲ್ಲಿ ಕಳಪೆ ಪೈಪ್ ಅಳವಡಿಸಿದ್ದ ಎಲ್ ಆ್ಯಂಡ್ ಟಿ ಲಿಮಿಟೆಡ್ ಕಂಪನಿಗೆ ಸರ್ಕಾರ ₹25.92 ಕೋಟಿ ದಂಡ ವಿಧಿಸಿದೆ ಎಂದು ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಹೇಳಿದರು.

ವಿಧಾನ ಪರಿಷತ್‌ನಲ್ಲಿ ಮಂಗಳವಾರ ಕಾಂಗ್ರೆಸ್‌ನ ತಿಪ್ಪಣ್ಣಪ್ಪ ಕಮಕನೂರ ಪ್ರಶ್ನೆಗೆ ಉತ್ತರಿಸಿದ ಅವರು, ಕರ್ನಾಟಕ ನಗರ ನೀರು ಸರಬರಾಜು ಆಧುನೀಕರಣ ಯೋಜನೆ ಅಡಿ ₹837.43 ಕೋಟಿ ವೆಚ್ಚದ ಕಾಮಗಾರಿಯನ್ನು 2020ರಲ್ಲಿ ಎಲ್ ಆ್ಯಂಡ್ ಟಿ ಲಿಮಿಟೆಡ್ ಕಂಪನಿಗೆ ನೀಡಲಾಗಿತ್ತು. ಕಾಮಗಾರಿ ಪೂರ್ಣಗೊಳಿಸಲು ಐದು ವರ್ಷ ನೀಡಲಾಗಿತ್ತು. 100 ಕಿ.ಮೀ. ಮುಖ್ಯ ಮಾರ್ಗದಲ್ಲಿ ಪೈಪ್ ಅಳವಡಿಸಲಾಗಿತ್ತು. ಪ್ರಾಯೋಗಿಕವಾಗಿ ನೀರು ಹರಿಸಿದಾಗ ಕಳಪೆ ಪೈಪ್ ಅಳವಡಿಸಿರುವುದು ಗಮನಕ್ಕೆ ಬಂದಿತು. ಅದಕ್ಕಾಗಿ ದಂಡ ವಿಧಿಸಲಾಗಿದೆ. ಮತ್ತೆ ಹೊಸದಾಗಿ ಗುಣಮಟ್ಟದ ಪೈಪ್ ಅಳವಡಿಸಲಾಗುತ್ತಿದೆ. 2025ರ ಜೂನ್ ಒಳಗೆ ಕಾಮಗಾರಿ ಪೂರ್ಣಗೊಳಿಸಲು ಸೂಚಿಸಲಾಗಿದೆ ಎಂದು ಅವರು ವಿವರ ನೀಡಿದರು.

ಆನೆ ಹಾವಳಿ: ₹186 ಕೋಟಿ ವೆಚ್ಚದಲ್ಲಿ ತಡೆಬೇಲಿ

ಆನೆಗಳ ಹಾವಳಿಯಿಂದ ಜೀವ ಹಾಗೂ ಬೆಳೆ ಹಾನಿ ತಡೆಯಲು ₹186 ಕೋಟಿ ವೆಚ್ಚದಲ್ಲಿ ಅನುಪಯುಕ್ತ ರೈಲ್ವೆ ಹಳಿಯ ಕಬ್ಬಿಣ ಬಳಸಿ ತಡೆ ಬೇಲಿ ನಿರ್ಮಿಸಲಾಗುತ್ತಿದೆ ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ಹೇಳಿದರು.

ರಾಮನಗರ, ಕಾವೇರಿ ವನ್ಯಜೀವಿ ವಿಭಾಗ, ಬನ್ನೇರುಘಟ್ಟ ವಿಭಾಗಗಳಲ್ಲಿ ಆನೆಗಳ ಹಾವಳಿ ಕುರಿತು ಕಾಂಗ್ರೆಸ್‌ನ ಎಸ್.ರವಿ ಅವರ ಪ್ರಶ್ನೆಗೆ ಉತ್ತರಿಸಿದ ಅವರು, ಕಬ್ಬಿಣದ ತಡೆಬೇಲಿ ನಿರ್ಮಿಸಲು ₹100 ಕೋಟಿ ಬಿಡುಗಡೆ ಮಾಡಲಾಗಿತ್ತು. ಇನ್ನೂ ₹100 ಕೋಟಿ ದೊರೆತಿದೆ. ಈಗಾಗಲೇ 312 ಕಿ.ಮೀ. ಕಾಮಗಾರಿ ಪೂರ್ಣಗೊಂಡಿದೆ. 330 ಕಿ.ಮೀ. ಆರಂಭಿಸಬೇಕಿದೆ. ಮತ್ತೆ ಹೊಸದಾಗಿ 120 ಕಿ.ಮೀ.ಗೆ ಕ್ರಿಯಾ ಯೋಜನೆ ರೂಪಿಸಲಾಗಿದೆ ಎಂದರು.

'ಸ್ಥಳೀಯರಿಗೆ ಉದ್ಯೋಗ ನೀಡದವರ ವಿರುದ್ಧ ಕ್ರಮ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರದಿಂದ ರಿಯಾಯಿತಿ ಪಡೆದುಕೊಂಡು ಸ್ಥಳೀಯರಿಗೆ ಉದ್ಯೋಗ ನೀಡದೇ ಇದ್ದರೆ ಅಂತಹ ಉದ್ಯಮಗಳು ಅಥವಾ ಕಂಪನಿಗಳಿಂದ ರಿಯಾಯ್ತಿಗಳನ್ನು ಹಿಂದಕ್ಕೆ ಪಡೆದುಕೊಳ್ಳಲಾಗುವುದು ಎಂದು ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಹೇಳಿದರು.

ವಿಧಾನಸಭೆಯಲ್ಲಿ ಜೆಡಿಎಸ್‌ನ ಸಮೃದ್ಧಿ ಮಂಜುನಾಥ್ ಅವರ ಗಮನ ಸೆಳೆಯುವ ಸೂಚನೆಗೆ ಉತ್ತರಿಸಿ ಈ ವಿಷಯ ತಿಳಿಸಿದರು.

ಹಲವು ಉದ್ಯಮಗಳಿಗೆ ರಿಯಾಯಿತಿ ದರದಲ್ಲಿ ಭೂಮಿ, ನೀರು, ವಿದ್ಯುತ್ ನೀಡಲಾಗಿದೆ. ಈ ರೀತಿ ರಿಯಾಯಿತಿ ಪಡೆದವರು ಸ್ಥಳೀಯರಿಗೆ ಉದ್ಯೋಗ ನೀಡಬೇಕು ಎಂಬ ಷರತ್ತು ವಿಧಿಸಲಾಗಿದೆ. ಯಾವುದೇ ರಿಯಾಯಿತಿ ಪಡೆಯದ ಉದ್ಯಮಗಳಿಗೆ ಸ್ಥಳೀಯರಿಗೆ ಉದ್ಯೋಗ ನೀಡಬೇಕು ಎಂಬ ನಿಯಮ ಅನ್ವಯ ಆಗುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ಬಿಜೆಪಿಯ ಅರವಿಂದ ಬೆಲ್ಲದ ಮಾತನಾಡಿ, 'ಇನ್ಫೊಸಿಸ್ ಉದ್ಯಮ ಸ್ಥಾಪಿಸುವುದಾಗಿ ಹುಬ್ಬಳ್ಳಿಯಲ್ಲಿ ಸರ್ಕಾರದಿಂದ ಜಮೀನು ಪಡೆಯಿತು. ಆದರೆ, ಅಲ್ಲಿ ಉದ್ಯಮ ಸ್ಥಾಪಿಸದೇ ಮರಗಳನ್ನು ಬೆಳೆಸಿದೆ. ಭೂಮಿ ಬಿಟ್ಟುಕೊಟ್ಟವರು ತಮಗೆ ಉದ್ಯೋಗ ಸಿಗುತ್ತದೆ ಎಂಬ ನಿರೀಕ್ಷೆಯಲ್ಲಿದ್ದಾರೆ. ಅವರು ನಮ್ಮ ಬಳಿ ನಿರೀಕ್ಷೆಯಿಂದ ಬಂದು ವಿಚಾರಿಸುತ್ತಾರೆ' ಎಂದು ಹೇಳಿದರು.

ಇದಕ್ಕೆ ಪ್ರತಿಕ್ರಿಯಿಸಿದ ಎಂ.ಬಿ.ಪಾಟೀಲ, ನಿರ್ದಿಷ್ಟ ಪ್ರಕರಣಗಳಿದ್ದರೆ, ತಿಳಿಸಿ ಕ್ರಮ ತೆಗೆದುಕೊಳ್ಳುವುದಾಗಿ ಭರವಸೆ ನೀಡಿದರು.

ಕೊಬ್ಬರಿ: ಅಕ್ರಮ ತಡೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ಯೋಜನೆಯಡಿ ಕೊಬ್ಬರಿ ಖರೀದಿಗೆ ರೈತರ ನೋಂದಣಿಯಲ್ಲಿನ ಅಕ್ರಮ ತಡೆಗೆ ಬಿಗಿಯಾದ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಜೆಡಿಎಸ್‌ನ ಎಚ್‌.ಡಿ. ರೇವಣ್ಣ, ಸಿ.ಎನ್. ಬಾಲಕೃಷ್ಣ ಸೇರಿದಂತೆ ಹಲವು ಶಾಸಕರು ವಿಧಾನಸಭೆಯಲ್ಲಿ ಮಂಗಳವಾರ ಆಗ್ರಹಿಸಿದರು.

ಸದನದ ಕಲಾಪ ಆರಂಭವಾಗುತ್ತಿದ್ದಂತೆಯೇ ವಿಷಯ ಪ್ರಸ್ತಾಪಿಸಿದ ಬಾಲಕೃಷ್ಣ, ಕೊಬ್ಬರಿ ಖರೀದಿಗೆ ಸಂಬಂಧಿಸಿದಂತೆ ನಿಲುವಳಿ ಸೂಚನೆ ಮಂಡನೆಗೆ ಅವಕಾಶ ಕೋರಿದರು. 'ಕೊಬ್ಬರಿ ಖರೀದಿಯಲ್ಲಿ ಭಾರಿ ಅಕ್ರಮ ನಡೆಯುತ್ತಿದೆ. ಅನಧಿಕೃತ ಉಪಕರಣಗಳನ್ನು ಬಳಸಿಕೊಂಡು ವರ್ತಕರ ಹೆಸರನ್ನು ರೈತರ ಪಟ್ಟಿಯಲ್ಲಿ ನೋಂದಣಿ ಮಾಡಲಾಗಿದೆ. ಇದರಿಂದ ರೈತರಿಗೆ ಅನ್ಯಾಯವಾಗಿದೆ' ಎಂದರು.

'ಕೊಬ್ಬರಿ ಖರೀದಿ ವಿಚಾರದಲ್ಲಿ ರಾಜ್ಯ ಸರ್ಕಾರ ಸರಿಯಾದ ತೀರ್ಮಾನ ಕೈಗೊಳ್ಳಬೇಕು. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ವಿಧಾನಸಭಾ ಚುನಾವಣೆಯಲ್ಲಿ ನೀಡಿದ್ದ ಭರವಸೆಯಂತೆ ಪ್ರತಿ ಕ್ವಿಂಟಲ್‌ಗೆ ₹15,000 ದರದಲ್ಲಿ ಕೊಬ್ಬರಿ ಖರೀದಿಸಬೇಕು' ಎಂದು ಆಗ್ರಹಿಸಿದರು.

ಕಾಂಗ್ರೆಸ್‌ನ ಕೆ.ಎಂ. ಶಿವಲಿಂಗೇಗೌಡ ಮಾತನಾಡಿ, 'ಮಾರುಕಟ್ಟೆಯಲ್ಲಿ ಕೊಬ್ಬರಿ ದರ ಕ್ವಿಂಟಲ್‌ಗೆ ₹10,000 ಇದೆ. ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ₹12,000 ನಿಗದಿ ಮಾಡಲಾಗಿದೆ. ರಾಜ್ಯ ಸರ್ಕಾರ ಪ್ರತಿ ಕ್ವಿಂಟಲ್‌ಗೆ ₹1,500 ಪ್ರೋತ್ಸಾಹಧನ ನೀಡುತ್ತಿದೆ. ಕೇಂದ್ರ ಸರ್ಕಾರವನ್ನು ಮಾತ್ರ ಹೊಗಳಿದರೆ ಸಾಲದು, ರಾಜ್ಯ ಸರ್ಕಾರದ ಕೊಡುಗೆಯನ್ನೂ ಹೇಳಬೇಕು' ಎಂದರು.

ಬಿಜೆಪಿಯ ಸುರೇಶ್ ಗೌಡ, ಎಚ್‌.ಕೆ. ಸುರೇಶ್, ಕಾಂಗ್ರೆಸ್‌ನ ಷಡಾಕ್ಷರಿ, ಜಿ.ಎಚ್‌. ಶ್ರೀನಿವಾಸ್ ಸೇರಿದಂತೆ ಹಲವು ಶಾಸಕರು ಕೊಬ್ಬರಿ ಖರೀದಿಯಲ್ಲಿನ ಸಮಸ್ಯೆಗಳ ಪರಿಹಾರಕ್ಕೆ ಆಗ್ರಹಿಸಿದರು. ಕೊಬ್ಬರಿ ಕುರಿತು ವಿಷಯ ಪ್ರಸ್ತಾಪಿಸುವ ಪೈಪೋಟಿಯಲ್ಲಿ ಎಚ್‌.ಡಿ. ರೇವಣ್ಣ ಮತ್ತು ಶಿವಲಿಂಗೇಗೌಡ ಮಧ್ಯೆ ವಾಕ್ಸಮರವೂ ನಡೆಯಿತು.

ಕೃಷಿ ಉತ್ಪನ್ನ ಮಾರುಕಟ್ಟೆ ಸಚಿವರಿಂದ ಬುಧವಾರ ಉತ್ತರ ಕೊಡಿಸುವುದಾಗಿ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಭರವಸೆ ನೀಡಿದರು.

ನಿಲುವಳಿ ಸೂಚನೆ ಮಂಡನೆಗೆ ಪಟ್ಟು

ಕಾಂಗ್ರೆಸ್ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ ಎಂದು ವಿಧಾನಸಭೆಯಲ್ಲಿ ಮಂಗಳವಾರ ಆರೋಪಿಸಿದ ಬಿಜೆಪಿ ಸದಸ್ಯರು, ಈ ಕುರಿತು ನಿಲುವಳಿ ಸೂಚನೆ ಮಂಡನೆಗೆ ಅವಕಾಶ ನೀಡುವಂತೆ ಕೆಲ ಕಾಲ ಪಟ್ಟು ಹಿಡಿದರು.

ಕಲಾಪದ ಆರಂಭದಲ್ಲೇ ವಿಷಯ ಪ್ರಸ್ತಾಪಿಸಲು ಯತ್ನಿಸಿದ ವಿರೋಧ ಪಕ್ಷದ ನಾಯಕ ಆರ್. ಅಶೋಕ, 'ರಾಜ್ಯದಲ್ಲಿ ನಿತ್ಯವೂ ಕೊಲೆ, ಸುಲಿಗೆ ನಡೆಯುತ್ತಿದೆ. ಸರ್ಕಾರ ಸತ್ತಿದೆಯಾ ಬದುಕಿದೆಯಾ ಗೊತ್ತಿಲ್ಲ. ನಿಲುವಳಿ ಸೂಚನೆ ಮಂಡನೆಗೆ ಅವಕಾಶ ಕೊಡಿ' ಎಂದು ಸಭಾಧ್ಯಕ್ಷ ಯು.ಟಿ. ಖಾದರ್ ಅವರನ್ನು ಆಗ್ರಹಿಸಿದರು.

'ಪ್ರಶ್ನೋತ್ತರವನ್ನು ಬದಿಗೊತ್ತಿ ಚರ್ಚೆಗೆ ಅವಕಾಶ ಕಲ್ಪಿಸಿ' ಎಂದು ಬಿಜೆಪಿಯ ವಿ. ಸುನಿಲ್ ಕುಮಾರ್ ಹೇಳಿದರು.

ಮಧ್ಯ ಪ್ರವೇಶಿಸಿದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ, 'ಪರಶುರಾಮನ ಪ್ರತಿಮೆ ಅವ್ಯವಹಾರದಿಂದ ಪೊಲೀಸ್ ಸಬ್ ಇನ್‌ಸ್ಪೆಕ್ಟರ್ ನೇಮಕಾತಿ ಹಗರಣ ಕುರಿತು ನ್ಯಾಯಮೂರ್ತಿ ಬಿ. ವೀರಪ್ಪ ಆಯೋಗ ನೀಡಿರುವ ವರದಿಯವರೆಗೆ ಎಲ್ಲವೂ ತನಿಖೆಯಾಗಲಿ' ಎಂದರು.

'ಕಾಂಗ್ರೆಸ್‌ನವರು ನಮಗೆ ಬುದ್ಧಿ ಹೇಳುವುದು ಬೇಡ. ಇಂಡಿಯಾ ಮೈತ್ರಿಕೂಟ ತೊರೆಯುತ್ತಿರುವವರಿಗೆ ಬುದ್ಧಿ ಹೇಳಿ' ಎಂದು ಅಶೋಕ ಕೆಣಕಿದರು.

ಕೊಬ್ಬರಿ ಕುರಿತು ನಿಲುವಳಿ ಸೂಚನೆ ಮಂಡನೆಗೆ ಜೆಡಿಎಸ್‌ನವರು ಮೊದಲು ಸೂಚನಾ ಪತ್ರ ನೀಡಿರುವುದರಿಂದ ಬುಧವಾರ ಪುನಃ ಪತ್ರ ಕೊಡುವಂತೆ ಬಿಜೆಪಿ ಸದಸ್ಯರಿಗೆ ಸಭಾಧ್ಯಕ್ಷರು ಸೂಚಿಸಿದರು. ಅದನ್ನು ಒಪ್ಪದ ಬಿಜೆಪಿ ಸದಸ್ಯರು ಕೆಲಕಾಲ ಪಟ್ಟು ಸಡಿಲಿಸಲಿಲ್ಲ. ಪ್ರಶ್ನೋತ್ತರ ಆರಂಭವಾಗುತ್ತಿದ್ದಂತೆ ಸುಮ್ಮನಾದರು.

ಎಚ್‌ಎಲ್‌ಸಿ ಹುದ್ದೆ- ಕಾಯಂ ಕಾರ್ಯದರ್ಶಿ ಹೊರಗಿಟ್ಟು ನೇಮಕ

ಕೆಪಿಎಸ್‌ಸಿ 'ಅಸಾಂವಿಧಾನಿಕ ಆಯ್ಕೆ'ಗೆ ಅಸ್ತು?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಲೋಕಸೇವಾ ಆಯೋಗದಲ್ಲಿ (ಕೆಪಿಎಸ್‌ಸಿ) ಅಧ್ಯಕ್ಷ ಹಾಗೂ ಕೆಲವು ಸದಸ್ಯರು ಮತ್ತು ಕಾರ್ಯದರ್ಶಿ ನಡುವೆ ಸಂಘರ್ಷಕ್ಕೆ ಕಾರಣವಾಗಿದ್ದ ಕಾನೂನು ಕೋಶದ ಮುಖ್ಯಸ್ಥ (ಎಚ್‌ಎಲ್‌ಸಿ) ಹುದ್ದೆಗೆ ನಿವೃತ್ತ ನ್ಯಾಯಾಧೀಶ ಎಸ್‌.ಬಿ. ವಸ್ತ್ರದಮಠ ನೇಮಕಕ್ಕೆ ಅನುಮೋದನೆ ನೀಡಲಾಗಿದೆ. ನ. 15ರಂದು ಹೊರಡಿಸಿದ್ದ ನೇಮಕಾತಿ ಅಧಿಸೂಚನೆಯಂತೆ ಈ ನೇಮಕಾತಿ ನಡೆದಿದೆ.

ಕೆಪಿಎಸ್‌ಸಿ ಕಾರ್ಯದರ್ಶಿಯಾಗಿದ್ದ ಕೆ.ಎಸ್. ಲತಾಕುಮಾರಿ ಅವರು ಫೆ. 7ರಿಂದ 10 ದಿನಗಳ ರಜೆಯಲ್ಲಿ ತೆರಳಿದ ಕಾರಣ ಆ ಹುದ್ದೆಯನ್ನು ಸಮಾಜ ಕಲ್ಯಾಣ ಇಲಾಖೆಯ ಆಯುಕ್ತ ರಾಕೇಶ್ ಕುಮಾರ್ ಅವರಿಗೆ ಹೆಚ್ಚುವರಿಯಾಗಿ ನೀಡಲಾಗಿತ್ತು. ರಾಕೇಶ್ ಕುಮಾರ್ ಅವರ ಸಭಾ ಸೂಚನೆಯಂತೆ ಮಂಗಳವಾರ (ಫೆ.13) ಆಯೋಗದ ಸಭೆ ನಡೆದಿದೆ. ಅಧ್ಯಕ್ಷ ಮತ್ತು ಎಲ್ಲ 10 ಸದಸ್ಯರು ಸಭೆಯಲ್ಲಿದ್ದು, ವಸ್ತ್ರದಮಠ ಅವರ ನೇಮಕಕ್ಕೆ ಅನುಮೋದನೆ ಪಡೆಯಲಾಗಿದೆ ಎಂದು ಕೆಪಿಎಸ್‌ಸಿ ಮೂಲಗಳು ತಿಳಿಸಿವೆ.

ಎಚ್‌ಎಲ್‌ಸಿ ಹುದ್ದೆಗೆ ನೇಮಕಕ್ಕೆ ನ. 15ರಂದು ಹೊರಡಿಸಿದ್ದ ಅಧಿಸೂಚನೆಯನ್ನು ಆಡಳಿತಾತ್ಮಕ ಕಾರಣ ನೀಡಿ ಲತಾಕುಮಾರಿ ಅವರು ಹಿಂಪಡೆದಿದ್ದರು. ಅಲ್ಲದೆ, ಜ. 9ರಂದು ಹೊಸ ಅಧಿಸೂಚನೆಯನ್ನು ಅವರು ಹೊರಡಿಸಿದ್ದರು. ಮೊದಲ ಅಧಿಸೂಚನೆಯಂತೆ ನಡೆದಿದ್ದ ಎಚ್‌ಎಲ್‌ಸಿ ಆಯ್ಕೆಗೆ ಸಂಬಂಧಿಸಿದ ನಡಾವಳಿಯಲ್ಲಿ ಯಾವುದೇ ಸ್ಪಷ್ಟ ಮಾಹಿತಿ ಇಲ್ಲದೇ ಇರುವುದರಿಂದ, ಅದು 'ಅಸಾಂವಿಧಾನಿಕ ಆಯ್ಕೆ' ಪ್ರಕ್ರಿಯೆ ಎಂದು ಮುಖ್ಯ ಕಾರ್ಯದರ್ಶಿಗೆ ಪತ್ರ ಬರೆದಿದ್ದರು.

ಈ ಮಧ್ಯೆ, ನ. 15ರ ಅಧಿಸೂಚನೆಯಂತೆ ಆಯೋಗದ ಆಯ್ಕೆ ಸಮಿತಿ ಶಿಫಾರಸು ಮಾಡಿದ್ದ ಅಭ್ಯರ್ಥಿಯನ್ನೇ ನೇಮಿಸಿ ಆದೇಶ ಹೊರಡಿಸದಿದ್ದರೆ ಯಾವುದೇ ಆಯ್ಕೆ ಪಟ್ಟಿ ಅಥವಾ ಕಡತಕ್ಕೆ ಅನುಮೋದನೆ ನೀಡುವುದಿಲ್ಲವೆಂದು ಆಯೋಗದ ಕೆಲವು ಸದಸ್ಯರು ಪಟ್ಟು ಹಿಡಿದಿದ್ದರು. ಹೀಗಾಗಿ ಸುಮಾರು ಒಂದೂವರೆ ತಿಂಗಳು ಆಯೋಗದ ಸಭೆಯೇ ನಡೆದಿರಲಿಲ್ಲ. ಮಂಗಳವಾರ ನಡೆದ ಸಭೆಗೆ ಈ ಎಲ್ಲ ಸದಸ್ಯರೂ ಹಾಜರಾಗಿದ್ದು, ಲತಾಕುಮಾರಿ ಅವರು 'ಅಸಾಂವಿಧಾನಿಕ ಆಯ್ಕೆ' ಎಂದಿದ್ದ ಪ್ರಕ್ರಿಯೆಗೇ ಅನುಮೋದನೆ ನೀಡಲಾಗಿದೆ.

ಆಯೋಗದ ನಾಲ್ವರು ಸದಸ್ಯರು ಜ. 31 ಮತ್ತು ಫೆ. 6ರಂದು ಅನುಮೋದಿಸಿದ್ದ ಅಂತಿಮ ಆಯ್ಕೆ ಪಟ್ಟಿಗಳು ಮತ್ತು ನೇಮಕಾತಿ ಅಧಿಸೂಚನೆಗಳಿಗೂ ಮಂಗಳವಾರ ನಡೆದ ಸಭೆಯಲ್ಲಿ ಸ್ಥಿರೀಕರಿಸಿ ಒಪ್ಪಿಗೆ ನೀಡಲಾಗಿದೆ ಎಂದೂ ಕೆಪಿಎಸ್‌ಸಿ ಮೂಲಗಳು ತಿಳಿಸಿವೆ.

ಮುಖ್ಯಾಂಶಗಳು

- ನ್ಯಾಯಾಧೀಶ ಎಸ್‌.ಬಿ. ವಸ್ತ್ರದಮಠ ನೇಮಕಕ್ಕೆ ಅನುಮೋದನೆ
- ನಾಲ್ವರು ಸದಸ್ಯರು ಅನುಮೋದಿಸಿದ್ದ ಅಂತಿಮ ಆಯ್ಕೆ ಪಟ್ಟಿಗಳಿಗೂ ಒಪ್ಪಿಗೆ

ಶಿಕ್ಷಕಿಯರ ಜಗಳ; ಮಕ್ಕಳಿಗೆ ಸ್ವಚ್ಛತೆ 'ಶಿಕ್ಷೆ'

ಪ್ರಜಾವಾಣಿ ವಾರ್ತೆ

ದಾವಣಗೆರೆ: ತಾಲ್ಲೂಕಿನ ಮೆಳ್ಳೆಕಟ್ಟೆ ಗ್ರಾಮದ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿನಿಯರಿಂದ ಶೌಚಾಲಯ ಸ್ವಚ್ಛಗೊಳಿಸಿದ್ದ ಶಿಕ್ಷಕಿಯನ್ನು ಮಂಗಳವಾರ ಅಮಾನತು ಮಾಡಲಾಗಿದೆ.

ಶಾಲೆಯ ಮುಖ್ಯ ಶಿಕ್ಷಕಿ ಜೊತೆಗಿದ್ದ ಮನಸ್ತಾಪದ ಕಾರಣಕ್ಕೆ ಶಿಕ್ಷಕಿ ಸಿ.ಕೆ. ಸಾವಿತ್ರಮ್ಮ ಅವರು ಸೋಮವಾರ ವಿದ್ಯಾರ್ಥಿನಿಯರಿಂದ ಶೌಚಾಲಯ ಸ್ವಚ್ಛಗೊಳಿಸಿ, ಅದನ್ನು ಮೊಬೈಲ್‌ನಲ್ಲಿ ಚಿತ್ರೀಕರಿಸಿ ಸಾಮಾಜಿಕ ಜಾಲತಾಣದಲ್ಲಿ ಹರಿಬಿಟ್ಟಿದ್ದರು.

ವಿದ್ಯಾರ್ಥಿನಿಯರು ಬಕೆಟ್, ಕಸಪೊರಕೆ ಹಿಡಿದು ಶೌಚಾಲಯ ಸ್ವಚ್ಛಗೊಳಿಸುತ್ತಿರುವ ದೃಶ್ಯ ವಿಡಿಯೊದಲ್ಲಿದೆ.

ಶಾಲಾ ಶಿಕ್ಷಣ ಇಲಾಖೆಯು ಪ್ರಾಥಮಿಕ ತನಿಖೆ ನಡೆಸಿದ ಸಂದರ್ಭ ಉದ್ದೇಶಪೂರ್ವಕ ಕೃತ್ಯ ಎಂಬುದು ದೃಢಪಟ್ಟಿದ್ದರಿಂದ ಅವರನ್ನು ಅಮಾನತು ಮಾಡಲಾಗಿದೆ.

ಶಾಲೆಯಲ್ಲಿ ಅತಿಯಾಗಿ ಮೊಬೈಲ್ ಬಳಸುವುದು, ಪರೀಕ್ಷೆಯ ಉತ್ತರ ಪತ್ರಿಕೆಗಳ ಮೌಲ್ಯಮಾಪನವನ್ನು ಕುಟುಂಬದವರಿಂದ ಮಾಡಿಸುವುದು ಸೇರಿದಂತೆ ಇನ್ನಿತರ ಅಂಶಗಳನ್ನು ಉಲ್ಲೇಖಿಸಿ ಮುಖ್ಯ ಶಿಕ್ಷಕಿ ಎ.ಶೋಭಾ ಅವರು ಶಿಕ್ಷಕಿ ಸಾವಿತ್ರಮ್ಮ ಅವರಿಗೆ ಕೆಲ ದಿನಗಳ ಹಿಂದೆ ನೋಟಿಸ್ ನೀಡಿದ್ದರು. ಇದೇ ಕಾರಣಕ್ಕೆ ಮನಸ್ತಾಪ ಉಂಟಾಗಿ, ಅವರು ಮುಖ್ಯಶಿಕ್ಷಕಿ ವಿರುದ್ಧ ಹುನ್ನಾರ ನಡೆಸಿದ್ದರು ಎಂದು ಮೂಲಗಳು ತಿಳಿಸಿವೆ.

ದಾವಣಗೆರೆ ಉತ್ತರ ವಲಯದ ಕ್ಷೇತ್ರ ಶಿಕ್ಷಣಾಧಿಕಾರಿ ಶೇರ್ ಅಲಿ ಹಾಗೂ ಸಿಬ್ಬಂದಿ ಶಾಲೆಗೆ ಭೇಟಿ ನೀಡಿ ಗ್ರಾಮಸ್ಥರು, ಎಸ್‌ಡಿಎಂಸಿ ಸದಸ್ಯರೊಂದಿಗೆ ಸಭೆ ನಡೆಸಿ ಮಾಹಿತಿ ಸಂಗ್ರಹಿಸಿದಾಗ, 'ಶಿಕ್ಷಕಿ ಸಾವಿತ್ರಮ್ಮ ಅವರೇ ಶೌಚಾಲಯ ಸ್ವಚ್ಛಗೊಳಿಸಲು ತಿಳಿಸಿದ್ದರು' ಎಂದು ವಿದ್ಯಾರ್ಥಿನಿಯರು ಹೇಳಿಕೆ ನೀಡಿದ್ದರು.

'ನನ್ನ ಮೇಲಿನ ಮನಸ್ತಾಪದಿಂದ ಶಿಕ್ಷಕಿಯೇ ಈ ರೀತಿ ಮಾಡಿದ್ದಾರೆ' ಎಂದು ಮುಖ್ಯ ಶಿಕ್ಷಕಿ ಶೋಭಾ ದೂರಿದ್ದಾರೆ.

'ವಿದ್ಯಾರ್ಥಿನಿಯರಿಂದ ಶೌಚಾಲಯ ಸ್ವಚ್ಛಗೊಳಿಸುವಂತೆ ಮುಖ್ಯ ಶಿಕ್ಷಕಿಯೇ ಸೂಚಿಸಿದ್ದರು. ಅವರೇ ಪೊರಕೆ, ಸೋಪಿನಪುಡಿ ತರಿಸಿದ್ದರು. ಅವರ ಸೂಚನೆ ಮೇರೆಗೆ ಶೌಚಾಲಯ ಸ್ವಚ್ಛಗೊಳಿಸಲಾಗಿತ್ತು' ಎಂದು ಶಿಕ್ಷಕಿ ಸಾವಿತ್ರಮ್ಮ ಹೇಳಿದ್ದಾರೆ.



ದಾವಣಗೆರೆ ತಾಲ್ಲೂಕಿನ ಮೆಳ್ಳೆಕಟ್ಟೆ ಗ್ರಾಮದ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿನಿಯರು ಶೌಚಾಲಯ ಸ್ವಚ್ಛಗೊಳಿಸಿದ್ದ ದೃಶ್ಯ

ವಿದ್ಯಾರ್ಥಿನಿಯರಿಂದ ಶೌಚಾಲಯ ಸ್ವಚ್ಛಗೊಳಿಸಿ ಕರ್ತವ್ಯಲೋಪ ಎಸಗಿರುವ ಶಿಕ್ಷಕಿಯನ್ನು ಇಲಾಖಾ ವಿಚಾರಣೆ ಬಾಕಿ ಇಟ್ಟು ಅಮಾನತುಗೊಳಿಸಲಾಗಿದೆ

ಸುರೇಶ ಬಿ. ಇಟ್ನಾಳ್, ಸಿಇಒ, ಜಿಲ್ಲಾ ಪಂಚಾಯಿತಿ

₹74.93 ಕೋಟಿ ಮೌಲ್ಯದ ಆಸ್ತಿ ಗಳಿಕೆ ಆರೋಪ: ಪ್ರತ್ಯೇಕ ತನಿಖೆ ಆರಂಭ

ಡಿಕೆಶಿ ವಿರುದ್ಧ 'ಲೋಕಾ' ಎಫ್‌ಐಆರ್

ಪ್ರಜಾವಾಣಿ ವಾರ್ತೆ



ಡಿ.ಕೆ ಶಿವಕುಮಾರ್

ಬೆಂಗಳೂರು: 2013ರ ಏಪ್ರಿಲ್ 1ರಿಂದ 2018ರ ಏಪ್ರಿಲ್ 30ರ ಅವಧಿಯಲ್ಲಿ ಅಕ್ರಮವಾಗಿ ₹74.93 ಕೋಟಿ ಮೌಲ್ಯದ ಆಸ್ತಿ ಗಳಿಸಿರುವ ಆರೋಪದ ಮೇಲೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ವಿರುದ್ಧ ಲೋಕಾಯುಕ್ತ ಪೊಲೀಸರು ನಾಲ್ಕು ದಿನಗಳ ಹಿಂದೆ ಎಫ್‌ಐಆರ್ ದಾಖಲಿಸಿದ್ದಾರೆ.

ಇದೇ ಆರೋಪದಡಿ ಶಿವಕುಮಾರ್ ವಿರುದ್ಧ 2020ರ ಅಕ್ಟೋಬರ್ 3ರಂದು ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯಡಿ ಪ್ರಕರಣ ದಾಖಲಿಸಿದ್ದ ಸಿಬಿಐ, ತನಿಖೆ ನಡೆಸುತ್ತಿತ್ತು.

ಸಿಬಿಐ ತನಿಖೆಗೆ ನೀಡಿದ್ದ ಅನುಮತಿಯನ್ನು ಹಿಂಪಡೆದಿದ್ದ ರಾಜ್ಯ ಸರ್ಕಾರ, ಶಿವಕುಮಾರ್ ವಿರುದ್ಧದ ಪ್ರಕರಣದ ತನಿಖೆಯನ್ನು ಲೋಕಾಯುಕ್ತ ಪೊಲೀಸ್ ವಿಭಾಗಕ್ಕೆ ವಹಿಸುವ ತೀರ್ಮಾನವನ್ನು 2023ರ ನವೆಂಬರ್ 23ರಂದು ಕೈಗೊಂಡಿತ್ತು.

'ರಾಜ್ಯ ಸರ್ಕಾರದ ಆದೇಶದಂತೆ ಲೋಕಾಯುಕ್ತ ಪೊಲೀಸ್ ವಿಭಾಗವು ಶಿವಕುಮಾರ್ ವಿರುದ್ಧ ಎಫ್‌ಐಆರ್ ದಾಖಲಿಸಿದೆ. ಪ್ರಕರಣದ ತನಿಖೆಯನ್ನು ಪ್ರತ್ಯೇಕ ತಂಡಕ್ಕೆ ವಹಿಸಲಾಗಿದೆ. ಸದ್ಯ ಪ್ರಕರಣಕ್ಕೆ ಸಂಬಂಧಿಸಿದಂತೆ ನಮ್ಮ ಬಳಿ ಯಾವುದೇ ದಾಖಲೆಗಳಿಲ್ಲ. ಸಿಬಿಐ ಅಧಿಕಾರಿಗಳು 2020ರ ಅ. 3ರಂದು ಶಿವಕುಮಾರ್ ವಿರುದ್ಧ ದಾಖಲಿಸಿದ್ದ ಎಫ್‌ಐಆರ್‌ನಲ್ಲಿದ್ದ ಅಂಶಗಳನ್ನೇ ನಾವು ದಾಖಲಿಸಿರುವ ಎಫ್‌ಐಆರ್‌ನಲ್ಲೂ ಉಲ್ಲೇಖಿಸಿದ್ದೇವೆ' ಎಂದು ಲೋಕಾಯುಕ್ತದ ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

ಪ್ರಕರಣಕ್ಕೆ ಸಂಬಂಧಿಸಿದ ದಾಖಲೆಗಳನ್ನು ಹಸ್ತಾಂತರಿಸುವಂತೆ ಸಿಬಿಐಗೆ ಪತ್ರ ಬರೆಯಲಾಗಿದೆ. ಸಿಬಿಐ ಅಧಿಕಾರಿಗಳು ದಾಖಲೆಗಳನ್ನು ಒದಗಿಸಿದ ಬಳಿಕ ತನಿಖೆ ಮುಂದುವರಿಯಲಿದೆ ಎಂದು ಮೂಲಗಳು ತಿಳಿಸಿವೆ.

'ಕಾನೂನು ಹೋರಾಟ ಮುಂದುವರಿಸುವೆ': ಶಿವಕುಮಾರ್

'ಅಕ್ರಮ ಆಸ್ತಿ ಸಂಪಾದಿಸಿದ ಆರೋಪದ ಮೇಲೆ ಲೋಕಾಯುಕ್ತ ಪೊಲೀಸರು ಎಫ್‌ಐಆರ್ ದಾಖಲಿಸಿದ್ದು, ನಾನು ಕಾನೂನು ಹೋರಾಟ ಮುಂದುವರಿಸುತ್ತೇನೆ' ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಅವರು, 'ನಾನು ಯಾವುದೇ ತಪ್ಪು ಮಾಡಿಲ್ಲ. ನನ್ನ ಪ್ರಕರಣವನ್ನು ಸಿಬಿಐಗೆ ನೀಡಲು ಆಗುವುದಿಲ್ಲ ಎಂದು ಅಂದಿನ ಅಡ್ವೊಕೇಟ್ ಜನರಲ್ ಹೇಳಿದ್ದರು. ಅದರ ದಾಖಲೆಯನ್ನು ನಾನು ಮಾಹಿತಿ ಹಕ್ಕು ಮೂಲಕ ಪಡೆದಿದ್ದೇನೆ. ಯಡಿಯೂರಪ್ಪ ನೇತೃತ್ವದ ಬಿಜೆಪಿ ಸರ್ಕಾರ ಸಿಬಿಐ ತನಿಖೆಗೆ ನೀಡಿದ್ದೇ ತಪ್ಪು. ಹೀಗಾಗಿ ನಮ್ಮ ಸರ್ಕಾರ ಅನುಮತಿ ವಾಪಸ್ ಪಡೆದು ಲೋಕಾಯುಕ್ತಕ್ಕೆ ವಹಿಸಿದೆ' ಎಂದರು.

'ಸರ್ಕಾರ ನನ್ನ ವಿರುದ್ಧದ ತನಿಖೆಯ ಅನುಮತಿ ಹಿಂಪಡೆದ ನಂತರವೂ ಸಿಬಿಐನವರು ನನ್ನ ಸಂಸ್ಥೆಗಳು ಹಾಗೂ ನನ್ನ ಜತೆ ವ್ಯವಹಾರ ಮಾಡಿರುವವರಿಗೆ ನೂರಾರು ನೋಟಿಸ್ ನೀಡುತ್ತಿದ್ದಾರೆ. ಯಾಕೆ ನೋಟಿಸ್ ನೀಡುತ್ತಿದ್ದಾರೋ ಗೊತ್ತಿಲ್ಲ' ಎಂದೂ ಹೇಳಿದರು.

ಹೈಕೋರ್ಟ್‌ನಲ್ಲಿ ಪ್ರಕರಣ

ಘೋಷಿತ ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿದ್ದ ಆರೋಪದಡಿ ಡಿ.ಕೆ. ಶಿವಕುಮಾರ್ ವಿರುದ್ಧ ದಾಖಲಿಸಿದ್ದ ಪ್ರಕರಣದ ತನಿಖೆಯನ್ನು ಲೋಕಾಯುಕ್ತ ಪೊಲೀಸ್ ವಿಭಾಗದ ವರ್ಗಾಯಿಸಿರುವ ರಾಜ್ಯ ಸರ್ಕಾರದ ನಿರ್ಧಾರವನ್ನು ಪ್ರಶ್ನಿಸಿ ಸಿಬಿಐ ಸಲ್ಲಿಸಿರುವ ರಿಟ್ ಅರ್ಜಿ ಹೈಕೋರ್ಟ್‌ನಲ್ಲಿ ಬಾಕಿ ಇದೆ.

ಸಿಬಿಐ ತನಿಖೆಗೆ ನೀಡಿದ್ದ ಅನುಮತಿ ಹಿಂಪಡೆದ ಸರ್ಕಾರದ ನಿರ್ಧಾರ ಪ್ರಶ್ನಿಸಿ ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಕೂಡ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ. ಎರಡೂ ಅರ್ಜಿಗಳ ವಿಚಾರಣೆಗೆ ನ್ಯಾಯಮೂರ್ತಿ ಕೆ. ಸೋಮಶೇಖರ್ ನೇತೃತ್ವದ ವಿಭಾಗೀಯ ಪೀಠದಲ್ಲಿ ಸೋಮವಾರ ನಡೆದಿತ್ತು. ಮುಂದಿನ ವಿಚಾರಣೆ ಫೆ. 29ಕ್ಕೆ ನಿಗದಿಯಾಗಿದೆ.

ಮುಖ್ಯಾಂಶಗಳು

- ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯಡಿ ಪ್ರಕರಣ ದಾಖಲಿಸಿದ್ದ ಸಿಬಿಐ
- ಲೋಕಾಯುಕ್ತ ತನಿಖೆಗೆ ನೀಡಲು ತೀರ್ಮಾನ ತೆಗೆದುಕೊಂಡಿದ್ದ ಸರ್ಕಾರ

2013ರ ಮಾರ್ಚ್ 31ರ ವೇಳೆಗೆ ಶಿವಕುಮಾರ್ ಕುಟುಂಬ ₹33.92 ಕೋಟಿ ಮೌಲ್ಯದ ಆಸ್ತಿ ಹೊಂದಿತ್ತು. ಐದು ವರ್ಷಗಳಲ್ಲಿ ಅವರ ಕುಟುಂಬ ₹166.79 ಕೋಟಿಯನ್ನು ವರಮಾನ ಮತ್ತು ಇತರ ರೂಪದಲ್ಲಿ ಪಡೆದಿದೆ. ಇದೇ ಅವಧಿಯಲ್ಲಿ ₹113.12 ಕೋಟಿ ವೆಚ್ಚ ಮಾಡಲಾಗಿದೆ ಎಂಬ ಅಂಶ ಸಿಬಿಐ ಎಫ್‌ಐಆರ್‌ನಲ್ಲಿತ್ತು.

2018ರ ಏ.30ರ ವೇಳೆಗೆ ಆರೋಪಿತರ ಕುಟುಂಬ ₹128.60 ಕೋಟಿ ಆಸ್ತಿ ಹೊಂದಿತ್ತು. ವರಮಾನ, ಸ್ವೀಕೃತಿ ಮತ್ತು ವೆಚ್ಚಕ್ಕೆ ಹೋಲಿಸಿದರೆ ಶೇಕಡ 44.93ರಷ್ಟು ಹೆಚ್ಚುವರಿ ಆಸ್ತಿ ಇರುವುದು ಪ್ರಾಥಮಿಕ ತನಿಖೆ ವೇಳೆ ಪತ್ತೆಯಾಗಿದೆ ಎಂದು ಸಿಬಿಐ ಎಫ್‌ಐಆರ್‌ನಲ್ಲಿ ಉಲ್ಲೇಖಿಸಿತ್ತು.

ಎಲ್ಲ ಸರ್ಕಾರಿ ಕಚೇರಿಯಲ್ಲಿ ಬಸವಣ್ಣನ ಭಾವಚಿತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಿಶ್ವ ಗುರು ಬಸವಣ್ಣ ಸಾಂಸ್ಕೃತಿಕ ನಾಯಕ' ಎಂಬ ಘೋಷ ವಾಕ್ಯ ಇಡೀ ರಾಜ್ಯದ ತುಂಬ ಮೊಳಗಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಬಸವಣ್ಣನವರ ಭಾವಚಿತ್ರವನ್ನು ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಸೋಮವಾರ ಅನಾವರಣ ಮಾಡಿ ಮಾತನಾಡಿದ ಅವರು, 'ಎಲ್ಲ ಸರ್ಕಾರಿ ಕಚೇರಿಗಳಲ್ಲಿ ಇದೇ 17ರಂದು ಬಸವಣ್ಣನವರ ಭಾವಚಿತ್ರ ಅನಾವರಣ ಮಾಡಲಾಗುವುದು. ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಉಸ್ತುವಾರಿ ಸಚಿವರು, ತಾಲ್ಲೂಕು ಮಟ್ಟದಲ್ಲಿ ಶಾಸಕರು ಹಾಗೂ ನಗರ ಹಾಗೂ ಗ್ರಾಮೀಣ ಸಂಸ್ಥೆಗಳಲ್ಲಿ ಆಯಾ ಸಂಸ್ಥೆಯ ಅಧ್ಯಕ್ಷರಿಂದ ನೆರವೇರಿಸಲು ಸೂಚಿಸಲಾಗಿದೆ' ಎಂದರು.

'ಮನುಷ್ಯನು ಮನುಷ್ಯನನ್ನು ಪ್ರೀತಿಸಬೇಕು. ದ್ವೇಷಿಸುವುದು ದುರ್ಗುಣ. ಬಸವಣ್ಣ ಸಾಂಸ್ಕೃತಿಕ ನಾಯಕ ಎನ್ನುವುದು ಅತ್ಯಂತ ಯೋಗ್ಯವಾಗಿದೆ. ಎಲ್ಲ ಕಚೇರಿಗಳಲ್ಲಿಯೂ ಬಸವಣ್ಣನವರ ಭಾವಚಿತ್ರ ಇರಬೇಕು. ಅವರ ತತ್ವಾದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು' ಎಂದರು. 'ಬಸವಾದಿ ಶರಣರ ವಚನಗಳು ಹಿಂದೆ, ಇಂದು ಹಾಗೂ ಮುಂದೆಯೂ ಪ್ರಸ್ತುತವಾಗಿರಲಿವೆ. ಬಸವಣ್ಣನವರ ಕಾರ್ಯಕ್ರಮಕ್ಕೆ ಯಾವ ಕಾರಣಕ್ಕೂ ಸರ್ಕಾರದಲ್ಲಿ ಅನುದಾನದ ಕೊರತೆಯಿಲ್ಲ' ಎಂದರು.

'ನುಡಿದಂತೆ ನಡೆದ ಕೀರ್ತಿ ಬಸವಣ್ಣನವರಿಗೆ ಸಲ್ಲುತ್ತದೆ. ವರ್ಗರಹಿತ, ಜಾತಿರಹಿತ, ಮೌಢ್ಯಗಳಿಲ್ಲದ ವೈಚಾರಿಕ ಸಮಾಜ ಸ್ಥಾಪನೆಯ ಆಶಯದಿಂದ ಅವರು ವಚನಗಳನ್ನು ರಚಿಸಿದರು. ಕಾಯಕ, ದಾಸೋಹವನ್ನು ಬೋಧಿಸಿದ ಬಸವಣ್ಣನವರು ಯಾರೂ ಕುಳಿತು ತಿನ್ನದೇ ಕಾಯಕದಲ್ಲಿ ತೊಡಗಬೇಕೆಂದು ಪ್ರತಿಪಾದಿಸಿದರು. ಬಡವರು ಬಡವರಾಗಿಯೇ ಉಳಿಯುವ ಹಾಗೂ ಶ್ರೀಮಂತರ ಕುಳಿತು ತಿನ್ನುವ ವ್ಯವಸ್ಥೆ ಹೋಗಬೇಕು' ಎಂದರು.



ಬಸವಣ್ಣನವರ ಭಾವಚಿತ್ರವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅನಾವರಣ ಮಾಡಿದರು. ಮಧು ಬಂಗಾರಪ್ಪ, ಎಂ.ಬಿ. ಪಾಟೀಲ, ಶಿವರಾಜ ತಂಗಡಗಿ, ಬಸವರಾಜ ಹೊರಟ್ಟಿ, ಯು.ಟಿ. ಖಾದರ್, ಈಶ್ವರ ಖಂಡ್ರೆ, ಬಸವರಾಜ ರಾಯರಡ್ಡಿ, ಕೆ.ಎಚ್ ಮುನಿಯಪ್ಪ ಇದ್ದರು ಪ್ರಜಾವಾಣಿ ಚಿತ್ರ

ಮರಳು ದಂಧೆ: ವೈದ್ಯ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ರೋಣ (ಗದಗ ಜಿಲ್ಲೆ): ತಾಲ್ಲೂಕಿನ ಹಿರೇಹಾಳ ಗ್ರಾಮದ ಕಾಂಗ್ರೆಸ್ ಮುಖಂಡ ಮತ್ತು ವೈದ್ಯ ಶಶಿಧರ್ ಹಟ್ಟಿ ಡೆತ್‌ನೋಟ್ ಬರೆದಿಟ್ಟು ಸೋಮವಾರ ಆತ್ಮಹತ್ಯೆ ಮಾಡಿಕೊಂಡಿದ್ದು, ಮೃತರ ಪತ್ನಿ ಸುನಂದಾ ರೋಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ.

'ವೈದ್ಯ ವೃತ್ತಿ ಜೊತೆ ಎಂಟು ವರ್ಷಗಳಿಂದ ಮರಳಿನ ವ್ಯವಹಾರ ನಡೆಸುತ್ತಿದ್ದ ಶಶಿಧರ ಹಟ್ಟಿ ಡೆತ್ ನೋಟ್‌ನಲ್ಲಿ ತಮ್ಮ ಸಾವಿಗೆ ಮರಳು ದಂಧೆಕೋರ, ಕಾಂಗ್ರೆಸ್ ಮುಖಂಡ ಶರಣಗೌಡ ಪಾಟೀಲ ಕಾರಣವೆಂದು ಬರೆದಿದ್ದಾರೆ' ಎಂದು ಪೊಲೀಸರು ತಿಳಿಸಿದ್ದಾರೆ.

'ಶಶಿಧರ ಹಟ್ಟಿ ಎರಡು ಮೂರು ತಿಂಗಳ ಹಿಂದೆ ರಾಜು ಶಿರಗುಂಪಿ, ಅಶೋಕ ವಾಸವಿ ಶೆಟ್ಟರ, ಶರಣಗೌಡ ಎಲ್.ಪಾಟೀಲ ಇನ್ನೂ ಕೆಲವರು ಹೊಳೆಮಣ್ಣೂರಿನಲ್ಲಿ ಮರಳಿನ ಪಾಯಿಂಟ್ ಮಾಡಿಕೊಂಡಿದ್ದರು. ಶರಣಗೌಡ ಪಾಟೀಲ ತನಗೆ ಪ್ರತಿದಿನ ಮರಳಿನ ವ್ಯವಹಾರದ ಲೆಕ್ಕಪತ್ರ ಹಾಗೂ ಹಣವನ್ನು ಕೊಡುವಂತೆ ಒತ್ತಡ ಹೇರುತ್ತ, ಮಾನಸಿಕ ತೊಂದರೆ ಕೊಡುತ್ತಿದ್ದ. ವ್ಯವಹಾರದಲ್ಲಿ ತಾನು ಹಾಕಿದ್ದ ಹಣ ವಾಪಸ್ ನೀಡದೇ ತೊಂದರೆ ಮಾಡುತ್ತಿದ್ದ ಎಂಬ ಅಂಶ ಡೆತ್‌ನೋಟ್‌ನಲ್ಲಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

'ಶರಣಗೌಡ ಅವರಿಗೆ ಶಿಕ್ಷೆ ಕೊಡಿಸಬೇಕು. ಗದಗ ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ.ಪಾಟೀಲ ಅವರಿಗೆ ಈ ವಿಷಯ ತಿಳಿಸಿ ಎಂದು ಡೆತ್‌ನೋಟ್‌ನಲ್ಲಿ ಬರೆದಿದ್ದಾರೆ' ಎಂದು ತಿಳಿಸಿದ್ದಾರೆ.



ಶಶಿಧರ ಹಟ್ಟಿ

ಎಂಟು ಮಂದಿ ವಿರುದ್ಧ ಪ್ರಕರಣ

ಬಳ್ಳಾರಿ: ನಕಲಿ ದಾಖಲೆ ಸೃಷ್ಟಿಸಿ ಕೃಷಿ ಭೂಮಿಯನ್ನು ನೋಂದಣಿ ಮಾಡಿದ ಆರೋಪದ ಮೇಲೆ ಬಳ್ಳಾರಿಯ ಉಪನೋಂದಣಾಧಿಕಾರಿ ರವಿಕುಮಾರ್ ಆರ್, ಕಂದಾಯ ಇನ್‌ಸ್ಪೆಕ್ಟರ್ ರಾಜೇಶ್ ಕುಮಾರ್, ಗ್ರಾಮ ಲೆಕ್ಕಿಗ ಶಿವಕುಮಾರ್ ಸೇರಿ 8 ಜನರ ವಿರುದ್ಧ ಮೋಕಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. 'ದೂರುದಾರರಾದ ಅಯ್ಯಮ್ಮ ಅವರಿಗೆ ಬೆಣಕಲ್ಲು ಗ್ರಾಮದ ಸರ್ವೆ ನಂಬರ್ 114/ಎ/2ಬಿ ರಲ್ಲಿ 1 ಎಕರೆ 80 ಸೆಂಟ್ಸ್ ಜಾಗವಿದೆ. ಈ ಭೂಮಿಯನ್ನು ಮೊದಲ ಆರೋಪಿ ಎಂ. ಮಲ್ಲಿಕಾರ್ಜುನ ಎಂಬುವರು ಅಯ್ಯಮ್ಮ ಎಂಬ ನಕಲಿ ವ್ಯಕ್ತಿಯೊಬ್ಬರನ್ನು ಕರೆತಂದು ನಕಲಿ ದಾಖಲೆ ಬಳಸಿ ತಮ್ಮ ಹೆಸರಿಗೆ ಬರೆಸಿಕೊಂಡಿದ್ದಾರೆ' ಎಂದು ಎಫ್‌ಐಆರ್‌ನಲ್ಲಿ ತಿಳಿಸಲಾಗಿದೆ.

ಬಾವಿ ತೋಡುವಿಕೆ: ಸಿಇಒಗೆ ವರದಿ



ಶಿರಸಿಯ ಗಣೇಶನಗರದ ಅಂಗನವಾಡಿ ಕೇಂದ್ರದ ಬಳಿ ಬಾವಿ ತೋಡುತ್ತಿರುವ ಕಾಮಗಾರಿ ಸ್ಥಳಕ್ಕೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕಿ ಹುಲಿಗೆಮ್ಮ ಭೇಟಿ ನೀಡಿ, ಪರಿಶೀಲಿಸಿದರು

ಪ್ರಜಾವಾಣಿ ವಾರ್ತೆ

ಶಿರಸಿ: ಇಲ್ಲಿನ ಗಣೇಶನಗರ ಅಂಗನವಾಡಿ ಕೇಂದ್ರ-6ರ ಹಿಂಭಾಗದಲ್ಲಿ ಗೌರಿ ನಾಯ್ಕ ಎಂಬುವರು ತೋಡುತ್ತಿರುವ ಬಾವಿ ಕಾಮಗಾರಿ ಸ್ಥಳಕ್ಕೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕಿ ಹುಲಿಗೆಮ್ಮ ಮಂಗಳವಾರ ಭೇಟಿ ನೀಡಿ, ಪರಿಶೀಲಿಸಿದರು. ಇಲಾಖೆಯ ಅನುಮತಿ ಇಲ್ಲದೆ ತೋಡಲು ಅವಕಾಶವಿಲ್ಲ ಎಂದು ಸೂಚಿಸಿದರು.

ಇದಕ್ಕೆ ಆಕ್ಷೇಪಣೆ ವ್ಯಕ್ತಪಡಿಸಿದ ಸಾರ್ವಜನಿಕರು, 'ಎರಡು ವಾರಗಳಿಂದ ಗೌರಿ ನಾಯ್ಕ ಬಾವಿ ತೋಡುವ ಕೆಲಸದಲ್ಲಿ ನಿರತರಾಗಿದ್ದಾರೆ. ಅವರಿಗೆ ಹೀಗೆ ಅಡ್ಡಿಪಡಿಸುವುದು ಸರಿಯಲ್ಲ' ಎಂದರು. 'ಬಾವಿ ತೋಡುವುದು ತಪ್ಪೆಂದರೆ, ನಾನು ನಿಲ್ಲಿಸುವೆ. ಇದರಿಂದ ನನಗೇನೂ ನಷ್ಟವಿಲ್ಲ' ಎಂದು ಗೌರಿ ನಾಯ್ಕ ಹೇಳಿದರು.

ಈ ಸಂದರ್ಭದಲ್ಲಿ ಸುದ್ದಿಗಾರರ ಜೊತೆ ಹುಲಿಗೆಮ್ಮ ಮಾತನಾಡಿ, 'ಗೌರಿ ನಾಯ್ಕ ಅವರ ಕಾರ್ಯ ಶ್ಲಾಘನೀಯ. ಆದರೆ, ಸರ್ಕಾರಿ ಇಲಾಖೆಯ ಅನುಮತಿಯಿಲ್ಲದೇ ಬಾವಿ ತೋಡಲು ಅವಕಾಶವಿಲ್ಲ. ಈ ಕಾರಣ ಜಿಲ್ಲಾ ಪಂಚಾಯಿತಿ ಮುಖ್ಯಕಾರ್ಯನಿರ್ವಹಣಾಧಿಕಾರಿ ಈಶ್ವರ್ ಕಾಂದು ಅವರಿಗೆ ಸಮಗ್ರ ವರದಿ ಸಲ್ಲಿಸಲಾಗುವುದು. ಅವರು ನೀಡುವ ಸೂಚನೆ ಅನುಸರಿಸಿ, ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು' ಎಂದರು. ತಹಶೀಲ್ದಾರ್ ಶ್ರೀಧರ ಮುಂದಲಮನಿ, ತಾಲ್ಲೂಕು ಪಂಚಾಯಿತಿ ಇಒ ಸತೀಶ ಹೆಗಡೆ, ನಗರಸಭೆ ಸದಸ್ಯ ಪ್ರದೀಪ ಶೆಟ್ಟಿ ಇದ್ದರು.

ಆಶಾ ಕಾರ್ಯಕರ್ತೆಯರ ಧರಣಿ

ಮೂಲಸೌಕರ್ಯ ಕೊರತೆ: ಸ್ವಾತಂತ್ರ್ಯ ಉದ್ಯಾನದ ಪ್ರತಿಭಟನೆ ಸ್ಥಳದಲ್ಲಿ ಮಹಿಳೆಯರ ಪರದಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಆಶಾ ಕಾರ್ಯಕರ್ತೆಯರಿಗೆ ತಿಂಗಳಿಗೆ ಕನಿಷ್ಠ ₹15,000 ಪ್ರೋತ್ಸಾಹ ಧನ ನೀಡಬೇಕು' ಎಂಬುದೂ ಸೇರಿ ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಆಶಾ ಕಾರ್ಯಕರ್ತೆಯರು ನಗರದಲ್ಲಿ ಅಹೋರಾತ್ರಿ ಧರಣಿ ಆರಂಭಿಸಿದ್ದಾರೆ.

ಸ್ವಾತಂತ್ರ್ಯ ಉದ್ಯಾನದಲ್ಲಿ ಮಂಗಳವಾರ ಸೇರಿದ್ದ ಆಶಾ ಕಾರ್ಯಕರ್ತೆಯರು, ಬೇಡಿಕೆ ಈಡೇರಿಕೆಗಾಗಿ ಘೋಷಣಾ ಫಲಕ ಪ್ರದರ್ಶಿಸಿದರು. ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘದಿಂದ ಹಮ್ಮಿಕೊಂಡಿರುವ ಧರಣಿಯಲ್ಲಿ ರಾಜ್ಯದ ವಿವಿಧ ಜಿಲ್ಲೆಗಳ ಪ್ರತಿನಿಧಿಗಳು ಪಾಲ್ಗೊಂಡಿದ್ದಾರೆ. ಕೆಲವರು, ತಮ್ಮ ಮಕ್ಕಳನ್ನೂ ಕರೆತಂದಿದ್ದಾರೆ.

'ಎಂಟು ವರ್ಷಗಳಿಂದ ಕೆಲಸಕ್ಕೆ ತಕ್ಕಂತೆ ಪ್ರೋತ್ಸಾಹ ಧನ ಸಿಗದೇ ವಂಚನೆಯಾಗುತ್ತಿದೆ. ಇದನ್ನು ತಡೆಯಲು ಆಶಾ ಪೇಮೆಂಟ್ ಪ್ರಕ್ರಿಯೆಯಿಂದ ಆರ್‌ಸಿಎಚ್ ಪೋರ್ಟಲ್ ಅನ್ನು ಡೀಲಿಂಕ್ ಮಾಡಬೇಕು. ಹೆಚ್ಚುವರಿ ಕೆಲಸ ಮತ್ತು ನಗರ ಜೀವನದ ವೆಚ್ಚಗಳಿಗೆ ಅನುಗುಣವಾಗಿ ಗೌರವಧನ ಹೆಚ್ಚಿಸಬೇಕು' ಎಂದು ಪ್ರತಿಭಟನಕಾರರು ಆಗ್ರಹಿಸಿದರು.



ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಮಂಗಳವಾರದಿಂದ ಅಹೋರಾತ್ರಿ ಧರಣಿ ನಡೆಸುತ್ತಿರುವ ಆಶಾ ಕಾರ್ಯಕರ್ತೆಯರು ತಮ್ಮ ಬೇಡಿಕೆ ಈಡೇರಿಕೆಗಾಗಿ ಘೋಷಣೆ ಕೂಗಿದರು – ಪ್ರಜಾವಾಣಿ ಚಿತ್ರ

'60 ವರ್ಷಕ್ಕೆ ಸೇವಾ ನಿವೃತ್ತಿ ಪಡೆಯುವ ಕಾರ್ಯಕರ್ತೆಯರಿಗೆ ₹3 ಲಕ್ಷ ಪರಿಹಾರ ನೀಡಬೇಕು. ತೀವ್ರವಾದ ಆರೋಗ್ಯ ಸಮಸ್ಯೆ ಹಾಗೂ ಚಿಕಿತ್ಸೆ ಅವಧಿಯಲ್ಲಿ ಮೂರು ತಿಂಗಳು ನಿಶ್ಚಿತ ಗೌರವಧನ ಮತ್ತು ಪ್ರೋತ್ಸಾಹ ಧನ ನೀಡಬೇಕು. ಕಾರ್ಯಕರ್ತೆಯರು ಹಾಗೂ ಅವರ ಕುಟುಂಬಕ್ಕೆ ₹5 ಲಕ್ಷದವರೆಗೆ ಉಚಿತ ಚಿಕಿತ್ಸೆ ದೊರೆಯುವಂತೆ ವಿಮೆ ಯೋಜನೆ ಜಾರಿಗೊಳಿಸಬೇಕು' ಎಂದು ಅವರು ಒತ್ತಾಯಿಸಿದರು.

'ಕಾಲಕಾಲಕ್ಕೆ ಸಮವಸ್ತ್ರ ಒದಗಿಸಬೇಕು. ವಾರ್ಷಿಕ ಡೈರಿಗಳನ್ನು ನಿಗದಿತ ಸಮಯಕ್ಕೆ ನೀಡಬೇಕು. ಬಾಕಿ ಇರುವ ಪ್ರೋತ್ಸಾಹಧನ ಕೂಡಲೇ ಬಿಡುಗಡೆ ಮಾಡಬೇಕು. ಆಶಾ ಕಾರ್ಯಕರ್ತೆಯರನ್ನು ಕಾರ್ಮಿಕರೆಂದು ಪರಿಗಣಿಸಿ, ಕನಿಷ್ಠ ವೇತನ, ಗ್ರಾಚ್ಯುಟಿ, ಪಿಎಫ್ ಹಾಗೂ ಇಎಸ್ಐ ಸೌಲಭ್ಯ ಕಲ್ಪಿಸಬೇಕು' ಎಂದು ಆಗ್ರಹಿಸಿದರು.

ಮೂಲ ಸೌಕರ್ಯ ಕೊರತೆ: ರಾಜ್ಯದ ವಿವಿಧ ಜಿಲ್ಲೆಗಳಿಂದ 1,000ಕ್ಕೂ ಹೆಚ್ಚು ಆಶಾ ಕಾರ್ಯಕರ್ತೆಯರು ಧರಣಿಯಲ್ಲಿ ಪಾಲ್ಗೊಂಡಿದ್ದಾರೆ. ಬುಧವಾರವೂ ಹೆಚ್ಚು ಕಾರ್ಯಕರ್ತೆಯರು ಧರಣಿಯಲ್ಲಿ ಭಾಗವಹಿಸುವ ಸಾಧ್ಯತೆ ಇದೆ. ಸ್ವಾತಂತ್ರ್ಯ ಉದ್ಯಾನ ಹಾಗೂ ಸುತ್ತಮುತ್ತ ಮೂಲ ಸೌಕರ್ಯಗಳ ಕೊರತೆ ಇದ್ದು, ಪ್ರತಿಭಟನಾನಿರತ ಮಹಿಳೆಯರು ಪರದಾಡುತ್ತಿದ್ದಾರೆ. ಉದ್ಯಾನದಲ್ಲಿಯೇ ಕಾರ್ಯಕರ್ತೆಯರು ಉಳಿದುಕೊಂಡಿದ್ದಾರೆ.

'ಕುಡಿಯುವ ನೀರು, ಶೌಚಾಲಯ ಸಮಸ್ಯೆ ಹೆಚ್ಚಿದೆ. ಕೆಲವೆಡೆ ತಾತ್ಕಾಲಿಕ ಶೌಚಾಲಯಗಳನ್ನು ಇರಿಸಿದರೂ ಸಾಲುತ್ತಿಲ್ಲ. ಹಣ ನೀಡಿ ಉಪಯೋಗಿಸುವ ಶೌಚಾಲಯಗಳಿದ್ದರೂ ಗಂಟೆಗಟ್ಟಲೇ ಸರದಿಯಲ್ಲಿ ನಿಲ್ಲಬೇಕಾದ ಸ್ಥಿತಿ ಇದೆ' ಎಂದು ಆಶಾ ಕಾರ್ಯಕರ್ತೆಯರೊಬ್ಬರು ಅಳಲು ತೋಡಿಕೊಂಡರು.

'ಮಹಿಳೆಯರ ಸಂಖ್ಯೆಗೆ ತಕ್ಕಂತೆ ಮೂಲ ಸೌಕರ್ಯ ಕಲ್ಪಿಸಬೇಕು' ಎಂದೂ ಆಗ್ರಹಿಸಿದರು.

> **ಈ ಬಾರಿ ನಮ್ಮ ಅಹೋರಾತ್ರಿ ಹೋರಾಟ ಅನಿರ್ದಿಷ್ಟಾವಧಿಗೆ ಮುಂದುವರಿಯಲಿದೆ. ಸ್ವಾತಂತ್ರ್ಯ ಉದ್ಯಾನ ಬಿಟ್ಟು ಹೋಗುವುದಿಲ್ಲ.**
> **ಡಿ. ನಾಗಲಕ್ಷ್ಮಿ,** ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘದ ಕಾರ್ಯದರ್ಶಿ

ಸಭೆಯಲ್ಲಿ ಕೊರಳುಪಟ್ಟಿ ಹಿಡಿದು ಮಾರಾಮಾರಿ

ಕೋಲಾರ: ಕಾಂಗ್ರೆಸ್ ಕಿತ್ತಾಟ

ಪ್ರಜಾವಾಣಿ ವಾರ್ತೆ

ಕೋಲಾರ: ಜಿಲ್ಲಾ ಕಾಂಗ್ರೆಸ್‌ನಲ್ಲಿ ಮತ್ತೆ ಬಣ ರಾಜಕಾರಣ ಸ್ಫೋಟಗೊಂಡಿದ್ದು ಸಚಿವ ಕೆ.ಎಚ್.ಮುನಿಯಪ್ಪ ಹಾಗೂ ಶಾಸಕ ಕೊತ್ತೂರು ಮಂಜುನಾಥ್ ಬೆಂಬಲಿಗರು ಮಂಗಳವಾರ ಕಾಂಗ್ರೆಸ್ ಭವನದಲ್ಲಿ ನಡೆದ ಸಭೆಯಲ್ಲಿ ಕೊರಳುಪಟ್ಟಿ ಹಿಡಿದು ಬಡಿದಾಡಿಕೊಂಡಿದ್ದಾರೆ.

ಲೋಕಸಭೆ ಚುನಾವಣೆ ಹಿನ್ನೆಲೆಯಲ್ಲಿ ಬೂತ್ ಮಟ್ಟದ ಏಜೆಂಟರ ನೇಮಕ ಸಂಬಂಧ ನಡೆದ ಸಭೆಯಲ್ಲಿ ಕೆಪಿಸಿಸಿ ಉಪಾಧ್ಯಕ್ಷ ಪಿ.ಆರ್.ರಮೇಶ್ ಹಾಗೂ ಪ್ರಧಾನ ಕಾರ್ಯದರ್ಶಿ ರಾಜ್‌ಕುಮಾರ್ ಸಮ್ಮುಖದಲ್ಲೇ ಪರಸ್ಪರ ಹಲ್ಲೆ ನಡೆಸಿ, ತಲೆಗೆ ಡಿಚ್ಚಿ ಹೊಡೆದರು.

ಹಲ್ಲೆಗೆ ಒಳಗಾದ ಜಿಲ್ಲಾ ಕಾಂಗ್ರೆಸ್ ಕಾರ್ಯಾಧ್ಯಕ್ಷ, ಮುನಿಯಪ್ಪ ಆಪ್ತ ಊರುಬಾಗಿಲು ಶ್ರೀನಿವಾಸ್ ನಗರದ ನ್ಯೂ ಕಾಮಧೇನು ನರ್ಸಿಂಗ್ ಹೋಂಗೆ ದಾಖಲಾಗಿ ಚಿಕಿತ್ಸೆ ಪಡೆದರು. ಇತ್ತ ಕೊತ್ತೂರು ಮಂಜುನಾಥ್ ಬೆಂಬಲಿಗ ಕಠಾರಿಪಾಳ್ಯದ ಶಿವಕುಮಾರ್ ಜಿಲ್ಲಾಸ್ಪತ್ರೆಗೆ ದಾಖಲಾಗಿದ್ದಾರೆ.

ಜಗಳದ ಕಿಡಿ ಹೊತ್ತಿಸಿದ ಬ್ಯಾನರ್:

ವೇದಿಕೆಯಲ್ಲಿ ಅಳವಡಿಸಿದ್ದ ಬ್ಯಾನರ್‌ನಲ್ಲಿ ಕೊತ್ತೂರು ಮಂಜುನಾಥ್, ವಿಧಾನ ಪರಿಷತ್ ಸದಸ್ಯ ಎಂ.ಎಲ್. ಅನಿಲ್ ಕುಮಾರ್, ಮುಖ್ಯಮಂತ್ರಿ ರಾಜಕೀಯ ಕಾರ್ಯದರ್ಶಿ ನಸೀರ್ ಅಹ್ಮದ್, ಮಾಜಿ ಸಚಿವ ಕೆ.ಆರ್. ರಮೇಶ್ ಕುಮಾರ್ ಭಾವಚಿತ್ರ ಇಲ್ಲದಿರುವುದನ್ನು ಕೊತ್ತೂರು ಬೆಂಬಲಿಗ, ನಗರಸಭೆ ಸದಸ್ಯ ಅಂಬರೀಶ್ ಪ್ರಶ್ನಿಸಿದರು. ಊರುಬಾಗಿಲು ಶ್ರೀನಿವಾಸ್ ಮೇಲೆ ಮುಗಿಬಿದ್ದರು. ಆಗ ಪರಸ್ಪರ ಮಾತಿನ ಚಕಮಕಿ ನಡೆಯಿತು.

ಕೊತ್ತೂರು ಬೆಂಬಲಿಗ ಶಿವಕುಮಾರ್ ಎಂಬುವರು ವೇದಿಕೆಯತ್ತ ಏಕಾಏಕಿ ನುಗ್ಗಿ ಊರುಬಾಗಿಲು ಶ್ರೀನಿವಾಸ್ ಅವರ ಕೊರಳುಪಟ್ಟಿ ಹಿಡಿದು ಎಳೆದರು. ಇದರಿಂದ ಕುಪಿತಗೊಂಡ ಅವರು, ಡಿಚ್ಚಿ ಹೊಡೆದು ಬಿಡಿಸಿಕೊಳ್ಳಲು ಪ್ರಯತ್ನಿಸಿದರು. ಶಾಸಕರ ಬೆಂಬಲಿಗರೂ ಡಿಚ್ಚಿ ಹೊಡೆದರು. ಅಷ್ಟರಲ್ಲಿ ನೂಕಾಟ, ತಳ್ಳಾಟ ಜೋರಾಗಿ ಎರಡೂ ಬಣದವರು ಪರಸ್ಪರ ಹಲ್ಲೆ ನಡೆಸಿದರು. ಕೂಡಲೇ ಅಲ್ಲಿಂದ ಶ್ರೀನಿವಾಸ್ ಅವರನ್ನು ಜಿಲ್ಲಾ ಎಸ್‌ಸಿ ಘಟಕದ ಅಧ್ಯಕ್ಷ ಕೆ.ಜಯದೇವ್ ಬಿಡಿಸಿ ಹೊರಗಡೆ ಕಳುಹಿಸಿದರು.

ಇಷ್ಟಾಗಿಯೂ ಜಗಳ ನಿಲ್ಲಲಿಲ್ಲ. ಶಾಸಕರ ಬೆಂಬಲಿಗರು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸಿ.ಲಕ್ಷ್ಮಿನಾರಾಯಣ ಮೇಲೂ ಮುಗಿಬಿದ್ದರು. ಪೊಲೀಸರು ಜಗಳ ನಿಯಂತ್ರಿಸಲು ಪರದಾಡಿದರು. ಸ್ಥಳದಲ್ಲಿ ಬಿಗುವಿನ ವಾತಾವರಣ ಇತ್ತು.


ಕೋಲಾರದ ಕಾಂಗ್ರೆಸ್ ಭವನದಲ್ಲಿ ಮಂಗಳವಾರ ನಡೆದ ಸಭೆ ವೇಳೆ ಬಡಿದಾಡಿಕೊಂಡ ಕಾಂಗ್ರೆಸ್ ಮುಖಂಡರು

> **ಕೊತ್ತೂರು ಮಂಜುನಾಥ್ ಅವರ ಶಿಷ್ಯರು ಇಷ್ಟು ಕೆಳ ಮಟ್ಟಕ್ಕೆ ಇಳಿಯಬಾರದಿತ್ತು**
> **ಊರುಬಾಗಿಲು ಶ್ರೀನಿವಾಸ್,** ಜಿಲ್ಲಾ ಕಾಂಗ್ರೆಸ್ ಕಾರ್ಯಾಧ್ಯಕ್ಷ, ಮುನಿಯಪ್ಪ ಬೆಂಬಲಿಗ

> **ಹೊಡೆದಾಟ ಇಲ್ಲದ ಪಕ್ಷ ಇಲ್ಲ. ಘಟನೆಯನ್ನು ಪಕ್ಷದ ಶಿಸ್ತು ಸಮಿತಿ ಗಮನಕ್ಕೆ ತರಲಾಗುವುದು. ಹಿಂದೆ ಇಂಥ ಘಟನೆಗಳ ಬಗ್ಗೆ ಯಾವುದೇ ದೂರು ಬಂದಿರಲಿಲ್ಲ**
> **ಪಿ.ಆರ್.ರಮೇಶ್,** ಕೆಪಿಸಿಸಿ ಉಪಾಧ್ಯಕ್ಷ

> **ಅಣ್ಣ ತಮ್ಮಂದಿರ ನಡುವೆ ಜಗಳ ಇರುವುದಿಲ್ಲವೇ? ಬ್ಯಾನರ್ ಅನ್ನು ತಕ್ಷಣವೇ ತೆಗೆದು ಹಾಕಿದ್ದೇವೆ. ನಾವೆಲ್ಲರೂ ಕಾಂಗ್ರೆಸ್‌ನವರೇ...**
> **ಸಿ.ಲಕ್ಷ್ಮಿನಾರಾಯಣ,** ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ, ಕೋಲಾರ

> **ಕೊತ್ತೂರು ಮಂಜುನಾಥ್ ಭಾವಚಿತ್ರ ಹಾಕದೆ ಊರುಬಾಗಿಲು ಶ್ರೀನಿವಾಸ್ ಪಕ್ಷಕ್ಕೆ ದ್ರೋಹ ಬಗೆದಿದ್ದಾರೆ. ಅವರನ್ನು ಪಕ್ಷದಿಂದ ಉಚ್ಚಾಟಿಸಬೇಕು**
> **ಅಂಬರೀಶ್,** ನಗರಸಭೆ ಸದಸ್ಯ

ಮಾದಾರಶ್ರೀ ಚುನಾವಣಾ ಕಣಕ್ಕೆ?

ಪ್ರಜಾವಾಣಿ ವಾರ್ತೆ

ಪ್ರಜಾ ಮತ ಜನತಂತ್ರದ ಹಬ್ಬ
ಲೋಕಸಭಾ ಚುನಾವಣೆ - 2024

ಚಿತ್ರದುರ್ಗ: ಪರಿಶಿಷ್ಟ ಜಾತಿಗೆ ಮೀಸಲಾಗಿರುವ ಚಿತ್ರದುರ್ಗ ಲೋಕಸಭಾ ಕ್ಷೇತ್ರದ ಅಭ್ಯರ್ಥಿಯನ್ನಾಗಿ ಮಾದಾರ ಚನ್ನಯ್ಯ ಗುರುಪೀಠದ ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿ ಅವರನ್ನು ಕಣಕ್ಕೆ ಇಳಿಸಲು ಬಿಜೆಪಿ ಚಿಂತನೆ ನಡೆಸುತ್ತಿದೆ.

ಸಂಘ ಪರಿವಾರದ ಪ್ರಭಾವ ಬಳಸಿ ಮಠಾಧೀಶರನ್ನು ಸಕ್ರಿಯ ರಾಜಕಾರಣಕ್ಕೆ ಕರೆತರುವ ಪ್ರಯತ್ನ ತೆರೆಮರೆಯಲ್ಲಿ ನಡೆಯುತ್ತಿದೆ.

ಮಠಾಧೀಶರನ್ನು ಚುನಾವಣಾ ಅಖಾಡಕ್ಕೆ ಇಳಿಸಿದರೆ ರಾಜ್ಯ ರಾಜಕಾರಣದ ಚಿತ್ರಣ ಬದಲಾಗಬಹುದು ಎಂಬುದು ಬಿಜೆಪಿ ಲೆಕ್ಕಾಚಾರ. ರಾಜಕೀಯ ಪ್ರವೇಶದ ಕುರಿತು ಸ್ವಾಮೀಜಿ ಈವರೆಗೆ ನಿಲುವು ಪ್ರಕಟಿಸಿಲ್ಲ. ಸ್ವಾಮೀಜಿ ಅಭಿಪ್ರಾಯ ಆಧರಿಸಿ ಮುಂದುವರಿಯಲು ಬಿಜೆಪಿ ಇಚ್ಛಿಸಿದೆ.

ಕೇಂದ್ರದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಖಾತೆಯ ರಾಜ್ಯ ಸಚಿವ ಎ.ನಾರಾಯಣಸ್ವಾಮಿ ಅವರು ಚಿತ್ರದುರ್ಗ ಲೋಕಸಭಾ ಕ್ಷೇತ್ರವನ್ನು ಪ್ರತಿನಿಧಿಸುತ್ತಿದ್ದಾರೆ. ಅವರು ರಾಜಕಾರಣದಿಂದ ದೂರ ಉಳಿಯುವ ಇಂಗಿತ ವ್ಯಕ್ತಪಡಿಸಿದ ಪರಿಣಾಮ ಪಕ್ಷವು ಸಮರ್ಥ ಅಭ್ಯರ್ಥಿಯ ಹುಡುಕಾಟದಲ್ಲಿ ತೊಡಗಿದ್ದು, ರಾಜ್ಯ ರಾಜಕಾರಣದಲ್ಲಿ ಹೊಸ ಪ್ರಯೋಗಕ್ಕೆ ಸಜ್ಜಾಗಿದೆ. ಸ್ಥಳೀಯರಿಗೆ ಅವಕಾಶ ನೀಡಬೇಕು ಎಂಬ ಕೂಗಿಗೂ ಮನ್ನಣೆ ನೀಡಿದಂತಾಗುತ್ತದೆ ಎಂಬ ಚರ್ಚೆಗಳು ಮುನ್ನೆಲೆಗೆ ಬಂದಿವೆ.


ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿ

ಚಿತ್ರದುರ್ಗ ಲೋಕಸಭಾ ಕ್ಷೇತ್ರದಲ್ಲಿ ಪರಿಶಿಷ್ಟ ಜಾತಿಯ ಮಾದಿಗ ಸಮುದಾಯದ ಮತಗಳು ಹೆಚ್ಚಿನ ಸಂಖ್ಯೆಯಲ್ಲಿವೆ. ರಾಜ್ಯದ ಹಲವು ಭಾಗಗಳಲ್ಲಿ ದಲಿತ ಎಡಗೈ ಸಮುದಾಯದ ಮತಗಳು ನಿರ್ಣಾಯಕವಾಗಿವೆ. ಮಾದಾರ ಚನ್ನಯ್ಯ ಗುರುಪೀಠದ ಮಠಾಧೀಶರನ್ನು ಅಭ್ಯರ್ಥಿಯನ್ನಾಗಿ ಮಾಡಿದರೆ ಇತರ ಕ್ಷೇತ್ರಗಳಲ್ಲಿಯೂ ಅನುಕೂಲವಾಗಲಿದೆ ಎಂಬುದು ಬಿಜೆಪಿ ಲೆಕ್ಕಾಚಾರ.

2019ರ ಲೋಕಸಭಾ ಚುನಾವಣೆಯಲ್ಲಿಯೇ ಮಾದಾರ ಚನ್ನಯ್ಯ ಸ್ವಾಮೀಜಿ ಅವರನ್ನು ಅಖಾಡಕ್ಕೆ ಇಳಿಸುವ ಪ್ರಯತ್ನ ನಡೆದಿತ್ತು. ಬಿಜೆಪಿ ಆಹ್ವಾನವನ್ನು ಸ್ವಾಮೀಜಿ ನಿರಾಕರಿಸಿದ ಬಳಿಕ ಎ.ನಾರಾಯಣಸ್ವಾಮಿ ಅವರಿಗೆ ಅವಕಾಶ ಸಿಕ್ಕಿತ್ತು. 2024ರ ಲೋಕಸಭಾ ಚುನಾವಣೆಗೆ ಮಠಾಧೀಶರನ್ನು ಕರೆತರುವ ಮತ್ತೊಂದು ಸುತ್ತಿನ ಪ್ರಯತ್ನಕ್ಕೆ ಬಿಜೆಪಿ ಮತ್ತು ಸಂಘ ಪರಿವಾರ ಮುಂದಾಗಿವೆ. ಸಂಘ ಪರಿವಾರದ ಜೊತೆಗೆ ಉತ್ತಮ ಸಂಬಂಧ ಹೊಂದಿರುವ ಸ್ವಾಮೀಜಿ ಈ ಆಹ್ವಾನವನ್ನು ನಿರಾಕರಿಸಲಿಕ್ಕಿಲ್ಲ ಎಂದು ಪಕ್ಷದ ಮೂಲಗಳು ಹೇಳಿವೆ.

ಈ ಕುರಿತು ಪ್ರತಿಕ್ರಿಯೆ ಪಡೆಯಲು 'ಪ್ರಜಾವಾಣಿ' ಯತ್ನಿಸಿದರೂ ಮಾದಾರ ಚನ್ನಯ್ಯ ಸ್ವಾಮೀಜಿ ಅವರು ಸಂಪರ್ಕಕ್ಕೆ ಸಿಗಲಿಲ್ಲ.

ನಿಧನ ವಾರ್ತೆ

ಬಂಟ್ವಾಳ ನರಸಿಂಹ ಸೋಮಯಾಜಿ


ಮಂಗಳೂರು: ಅಮೆರಿಕದಲ್ಲಿ ಪಚನಾಂಗ ತಜ್ಞರಾಗಿದ್ದ ಡಾ. ಬಂಟ್ವಾಳ ನರಸಿಂಹ ಸೋಮಯಾಜಿ (89) ಅವರು ಮಂಗಳವಾರ ಇಲ್ಲಿ ನಿಧನರಾದರು. ಅವರಿಗೆ ಪತ್ನಿ ಸುಮೇಧಾ, ಪುತ್ರ, ಪುತ್ರಿ ಇದ್ದಾರೆ.

ಮಂಗಳೂರಿನಲ್ಲಿ ಜನಿಸಿದ್ದ ಅವರು, ಗಣಪತಿ ಪ್ರೌಢಶಾಲೆಯಲ್ಲಿ ಆರಂಭಿಕ ಶಿಕ್ಷಣ ಪಡೆದು, ಬಳಿಕ ಮದ್ರಾಸ್ ಮೆಡಿಕಲ್ ಕಾಲೇಜಿನಲ್ಲಿ ಎಂಬಿಬಿಎಸ್ ಶಿಕ್ಷಣ ಪೂರೈಸಿದ್ದರು. ನಂತರ ಇಂಗ್ಲೆಂಡ್‌ನ ಬರ್ಮಿಂಗ್‌ಹ್ಯಾಂ, ಅಮೆರಿಕದ ಹ್ಯೂಸ್ಟನ್‌ನಲ್ಲಿ ಸ್ನಾತಕೋತ್ತರ ವ್ಯಾಸಂಗ ಮಾಡಿ, ಅಮೆರಿಕದ ಟೆನಿಸಿ ರಾಜ್ಯದ ನಾಶ್‌ವಿಲ್‌ನ ಮೆಹಾರಿ ಮೆಡಿಕಲ್ ಕಾಲೇಜಿನಲ್ಲಿ ಪಚನಾಂಗ ವಿಜ್ಞಾನದ ಪ್ರೊಫೆಸರ್ ಆಗಿ ಕಾರ್ಯನಿರ್ವಹಿಸಿದ್ದರು. ನಾಶ್‌ವಿಲ್‌ನಲ್ಲಿ ಪಚನಾಂಗ ತಜ್ಞರಾಗಿ 40ಕ್ಕೂ ಹೆಚ್ಚು ವರ್ಷ ಕೆಲಸ ಮಾಡಿದ್ದರು.


ನರಸಿಂಹ ಸೋಮಯಾಜಿ

ನಾಶ್‌ವಿಲ್‌ನಲ್ಲಿ ಟೆನಿಸಿಯ ಹಿಂದೂ ಸಾಂಸ್ಕೃತಿಕ ಕೇಂದ್ರವನ್ನು 1980ರಲ್ಲಿ ಸ್ಥಾಪಿಸುವಲ್ಲಿ ಅವರು ಪ್ರಮುಖ ಪಾತ್ರ ವಹಿಸಿದ್ದರು. 15 ವರ್ಷ ಕೇಂದ್ರದ ಅಧ್ಯಕ್ಷರಾಗಿದ್ದಾಗ ನಾಶ್‌ವಿಲ್‌ನಲ್ಲಿ ಗಣೇಶ ದೇವಾಲಯ ನಿರ್ಮಾಣಕ್ಕೆ ಶ್ರಮಿಸಿದ್ದರು. ಸ್ಥಳೀಯ ಕಾರ್ಯಗಳಿಗೆ ಹಾಗೂ ಮಕ್ಕಳ ವಿದ್ಯಾಭ್ಯಾಸಕ್ಕೆ ನೆರವು ನೀಡುವುದಕ್ಕಾಗಿ ಮಂಗಳೂರಿನಲ್ಲಿ ಸಪ್ತಗಿರಿ ಫೌಂಡೇಶನ್ ಅನ್ನು 1989ರಲ್ಲಿ ಸ್ಥಾಪಿಸಿದ್ದರು. ಅವರು ತಮ್ಮ ಜೀವಿತದ ಕೊನೆಯ ದಿನಗಳನ್ನು ಕಳೆಯಲು ಮಂಗಳೂರಿಗೆ ಬಂದು ನೆಲೆಸಿದ್ದರು.

ಬೋಳೂರು ರುದ್ರಭೂಮಿಯಲ್ಲಿ ಮೃತರ ಅಂತ್ಯಕ್ರಿಯೆ ನಡೆಯಿತು.



ನ್ಯಾಯಕ್ಕೆ ಒತ್ತಾಯ

ನ್ಯಾಯ ಕೊಡಿ... ವಲಯ, ಉಪವಲಯ ಅರಣ್ಯಾಧಿಕಾರಿ ಮತ್ತು ಉಪ ಅರಣ್ಯ ಸಂರಕ್ಷಣಾಧಿಕಾರಿ ಹುದ್ದೆಗಳನ್ನು ಸಂಪೂರ್ಣವಾಗಿ ಬಿ.ಎಸ್ಸಿ. ಅರಣ್ಯಶಾಸ್ತ್ರ ಪದವೀಧರರಿಗೆ ಮೀಸಲಿಡಬೇಕು ಎನ್ನುವುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಕೊಡಗು ಜಿಲ್ಲೆಯ ಪೊನ್ನಂಪೇಟೆಯ ಅರಣ್ಯ ಕಾಲೇಜಿನ ವಿದ್ಯಾರ್ಥಿಗಳು ಅನಿರ್ದಿಷ್ಟಾವಧಿ ಪ್ರತಿಭಟನೆ ನಡೆಸುತ್ತಿದ್ದಾರೆ. ಇದರ ಅಂಗವಾಗಿ ಮಂಗಳವಾರ ಕಾಲೇಜಿನ ಮೈದಾನದಲ್ಲಿ ಬಿಸಿಲಿನಲ್ಲಿ ಮಲಗಿ 'ವಿ ವಾಂಟ್ ಜಸ್ಟೀಸ್' ಎಂಬ ರಚನೆ ಮೂಡಿಸಿ ಗಮನಸೆಳೆದರು

'ಲೋಕಸಭೆ ಚುನಾವಣೆ: ಎಚ್‌ಡಿಕೆ ಸ್ಪರ್ಧೆ ಇಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೋಕಸಭೆ ಚುನಾವಣೆಯಲ್ಲಿ ಎಚ್.ಡಿ.ಕುಮಾರಸ್ವಾಮಿ ಸ್ಪರ್ಧಿಸುವುದಿಲ್ಲ ಎಂದು ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡ ಹೇಳಿದರು.

ತಮ್ಮ ನಿವಾಸದಲ್ಲಿ ಮಂಗಳವಾರ ಮಂಡ್ಯ ಜಿಲ್ಲೆಯ ನಾಯಕರ ಸಭೆ ನಡೆಸಿದ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಮಂಡ್ಯದಲ್ಲಿ ಯಾರು ಅಭ್ಯರ್ಥಿಯಾಗಬೇಕು ಎಂಬ ಬಗ್ಗೆ ಚರ್ಚೆ ನಡೆಯಿತು. ನಾನೇ ನಿಲ್ಲಬೇಕು ಅಥವಾ ಕುಮಾರಸ್ವಾಮಿ, ನಿಖಿಲ್ ಇಬ್ಬರ ಪೈಕಿ ಒಬ್ಬರು ಸ್ಪರ್ಧೆ ಮಾಡಬೇಕು ಎಂದು ಸಭೆಯಲ್ಲಿ ಪಾಲ್ಗೊಂಡವರು ಅಪೇಕ್ಷಿಸಿದರು. ನಾನು ಮತ್ತು ನಿಖಿಲ್ ನಿಲ್ಲುವುದಿಲ್ಲ ಎಂದು ಹೇಳಿದ್ದೇವೆ' ಎಂದರು.

'ಕುಮಾರಸ್ವಾಮಿ ಶಾಸಕಾಂಗ ಪಕ್ಷದ ನಾಯಕರಾಗಿದ್ದು, ಇಲ್ಲಿ ಸದನದ ಒಳ–ಹೊರಗೆ ಹೋರಾಟ ಮಾಡಬೇಕಾಗಿದೆ. ಹೀಗಾಗಿ, ಲೋಕಸಭೆಗೆ ಹೋಗುವೆ ಎಂದು ಅವರು ಹೇಳಿಲ್ಲ, ಹೇಳುವುದೂ ಇಲ್ಲ. ಅವರ ಸ್ಪರ್ಧೆ ಬಗ್ಗೆ ಊಹಾಪೋಹ ಸೃಷ್ಟಿಸಲಾಗಿದೆ. ಇರುವ ವಾಸ್ತವಾಂಶ ಇದು' ಎಂದರು.

'ಮಂಡ್ಯ ಜಿಲ್ಲೆಯ ಎಲ್ಲ ವಿಧಾನಸಭಾ ಕ್ಷೇತ್ರಗಳಲ್ಲಿ ಪ್ರವಾಸ ಮಾಡಿ ಅಭಿಪ್ರಾಯ ಸಂಗ್ರಹಿಸುತ್ತೇವೆ. ಅಭ್ಯರ್ಥಿ ಬಗ್ಗೆ ತೀರ್ಮಾನ ತೆಗೆದುಕೊಂಡು ಮೈತ್ರಿಕೂಟದ ನಾಯಕರಿಗೆ ವಿಷಯ ತಿಳಿಸುತ್ತೇವೆ. ಈ ಕ್ಷೇತ್ರದ ಅಭ್ಯರ್ಥಿ ಆಯ್ಕೆಯ ತೀರ್ಮಾನವನ್ನು ಕುಮಾರಸ್ವಾಮಿ ಅವರಿಗೆ ನೀಡಲಾಗಿದೆ' ಎಂದರು.


ಎಚ್‌.ಡಿ. ದೇವೇಗೌಡ


ಎಚ್‌.ಡಿ. ಕುಮಾರಸ್ವಾಮಿ

'ಶಿಕ್ಷಕರ ಕ್ಷೇತ್ರಕ್ಕೆ ಕೆ.ಟಿ. ಶ್ರೀಕಂಠೇಗೌಡ ಹಾಗೂ ವಿವೇಕ್ ಅವರ ಹೆಸರಿವೆ. ಇಬ್ಬರಲ್ಲಿ ಯಾರಿಗೆ ಟಿಕೆಟ್ ನೀಡಬೇಕು ಎಂಬ ನಿರ್ಧಾರವನ್ನು ಕುಮಾರಸ್ವಾಮಿಗೇ ಬಿಡುತ್ತೇನೆ. ಅವರು ಏನು ಹೇಳುತ್ತಾರೋ ಅದರಂತೆ ಇಬ್ಬರೂ ನಡೆದುಕೊಳ್ಳಬೇಕು' ಎಂದು ದೇವೇಗೌಡ ಹೇಳಿದರು.

ಶಾಸಕರಾದ ಜಿ.ಟಿ. ದೇವೇಗೌಡ, ಮಂಜುನಾಥ್, ಮಂಜೇಗೌಡ, ಮಾಜಿ ಶಾಸಕರಾದ ಸಿ.ಎಸ್. ಪುಟ್ಟರಾಜು, ಸಾ.ರಾ. ಮಹೇಶ್, ಸುರೇಶ ಗೌಡ, ರವೀಂದ್ರ ಶ್ರೀಕಂಠಯ್ಯ, ಕೆ. ಅನ್ನದಾನಿ, ಕೆ.ಟಿ. ಶ್ರೀಕಂಠೇಗೌಡ, ಯುವ ಜನತಾದಳದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಸಭೆಯಲ್ಲಿದ್ದರು.

ಲಿಂಗಾಯತ ಸಚಿವರು, ಶಾಸಕರ ಜೊತೆ ಡಿಕೆಶಿ ಚರ್ಚೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭೆಯ ಮಧ್ಯಾಹ್ನದ ಭೋಜನ ವಿರಾಮದ ವೇಳೆ, ತಮ್ಮ ಆಪ್ತ ಸಚಿವರು, ಪ್ರಮುಖವಾಗಿ ಉತ್ತರ ಕರ್ನಾಟಕ ಭಾಗದ ಲಿಂಗಾಯತ ಶಾಸಕರ ಜತೆ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಒಂದು ಗಂಟೆಗೂ ಹೆಚ್ಚು ಹೊತ್ತು ಸಮಾಲೋಚನೆ ನಡೆಸಿದರು.

ಸಭಾಧ್ಯಕ್ಷ ಯು.ಟಿ.ಖಾದರ್ ಅವರು ಮಧ್ಯಾಹ್ನ ಒಂದು ಗಂಟೆಗೆ ಕಲಾಪವನ್ನು ಮುಂದೂಡಿದರು. ಸಭಾಂಗಣದಲ್ಲೇ ಉಳಿದ ಶಿವಕುಮಾರ್, ಎರಡು ಗಂಟೆಯವರೆಗೆ ನಿರಂತರ ಸಮಾಲೋಚನೆ ನಡೆಸಿದರು.

ಸದನದಲ್ಲಿದ್ದ ಶಿವಕುಮಾರ್ ಅವರನ್ನು ಸಚಿವರು, ಶಾಸಕರು ಸುತ್ತುವರಿದು ಮಾತುಕತೆಯಲ್ಲಿ ತೊಡಗಿದರು. ಸಚಿವೆ ಲಕ್ಷ್ಮಿ ಹೆಬ್ಬಾಳಕರ, ಶಾಸಕರಾದ ಆರ್.ವಿ. ದೇಶಪಾಂಡೆ, ಲಕ್ಷ್ಮಣ ಸವದಿ, ಯು.ಬಿ. ಬಣಕಾರ, ವಿನಯ ಕುಲಕರ್ಣಿ, ವಿಜಯಾನಂದ ಕಾಶಪ್ಪನವರ, ಮಹಾಂತೇಶ ಕೌಜಲಗಿ ಸೇರಿದಂತೆ ಬೆಳಗಾವಿ ಮತ್ತು ಉತ್ತರ ಕರ್ನಾಟಕ ಭಾಗದ ಶಾಸಕರು ಇದ್ದರು.

ಶಿವಕುಮಾರ್ ಜತೆ ನಿಕಟವಾಗಿ ಗುರುತಿಸಿಕೊಂಡಿರುವ ದಕ್ಷಿಣ ಕರ್ನಾಟಕದ ಯಾವುದೇ ಶಾಸಕರೂ ಈ ವೇಳೆ ಇರಲಿಲ್ಲ.

ಏತನ್ಮಧ್ಯೆ, ಸಕ್ಕರೆ ಸಚಿವ ಶಿವಾನಂದ ಪಾಟೀಲ ಸಭಾಂಗಣದೊಳಗೆ ಇಣುಕಿದರು. ಮಾತುಕತೆ ನಡೆಯುತ್ತಿದ್ದುದನ್ನು ನೋಡಿದ ಅವರು, ಮೊಗಸಾಲೆಗೆ ತೆರಳಿ ಅಲ್ಲಿಯೇ ಕುಳಿತರು.

ನಿಗಮ–ಮಂಡಳಿ ನೇಮಕದಲ್ಲಿ ಶಿವಕುಮಾರ್ ಮೇಲುಗೈ ಸಾಧಿಸಿರುವುದು, ಕೆಲವೇ ಕ್ಷೇತ್ರಗಳಿಗೆ ಜಲಸಂಪನ್ಮೂಲ ಇಲಾಖೆಯ ಅನುದಾನ ಹಂಚಿಕೆ ಮಾಡಿರುವುದು ಸಚಿವರ ಆಕ್ರೋಶಕ್ಕೆ ಕಾರಣವಾಗಿದೆ. ಈ ಹಿನ್ನೆಲೆಯೊಳಗೆ ಸಮಾಲೋಚನೆ ನಡೆದಿದೆ ಎಂದು ಮೂಲಗಳಿಂದ ಗೊತ್ತಾಗಿದೆ.

ವಿಧಾನ ಪರಿಷತ್ ಸ್ಥಾನಕ್ಕೆ ರಾಜೀನಾಮೆ ನೀಡಿ ಜಗದೀಶ ಶೆಟ್ಟರ್ ಅವರು ಬಿಜೆಪಿಗೆ ವಾಪಸಾಗಿರುವುದು, ಮುಂಬರುವ ಲೋಕಸಭೆ ಚುನಾವಣೆಗೆ ಅಭ್ಯರ್ಥಿಗಳ ಆಯ್ಕೆ, ಶಾಸಕರಿಗೆ ಮುಖ್ಯಮಂತ್ರಿಯಿಂದ ವಿಶೇಷ ಅನುದಾನ, ಬುಧವಾರ (ಫೆಬ್ರುವರಿ 14) ನಡೆಯಲಿರುವ ಶಾಸಕಾಂಗ ಪಕ್ಷದ ಸಭೆ, ಗ್ಯಾರಂಟಿ ಯೋಜನೆಗಳು, ಬಿಜೆಪಿಯ ಚುನಾವಣಾ ಕಾರ್ಯತಂತ್ರ ಮತ್ತಿತರ ವಿಷಯಗಳ ಕುರಿತು ವಿಚಾರ ವಿನಿಮಯ ನಡೆಯಿತು ಎಂದು ಮೂಲಗಳು ಮಾಹಿತಿ ನೀಡಿವೆ.

ಖರ್ಚೇ ಆಗದ ₹5,727 ಕೋಟಿ: ಜೋಶಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೇಂದ್ರ ಸರ್ಕಾರ ಪ್ರಾಯೋಜಿತ ವಿವಿಧ ಯೋಜನೆಗಳಡಿ ಕರ್ನಾಟಕಕ್ಕೆ ನೀಡಿದ್ದ ₹5,727 ಕೋಟಿ ಖರ್ಚಾಗದೇ ಉಳಿದಿದೆ' ಎಂದು ಎಂದು ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಶಿ ಹೇಳಿದರು.

ಬಿಜೆಪಿ ರಾಜ್ಯ ಕಾರ್ಯಾಲಯದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೇಂದ್ರ ಅನುದಾನ ಕೊಡುತ್ತಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸುಳ್ಳು ಹೇಳುತ್ತಿದ್ದಾರೆ. ಆದರೆ, ನೀಡಿದ್ದ ಅನುದಾನದಲ್ಲಿ ಶೇ 34ರಷ್ಟು ಮೊತ್ತವನ್ನು ಖರ್ಚು ಮಾಡಿಲ್ಲ. ಇದು ರಾಜ್ಯ ಸರ್ಕಾರದ ಡ್ಯಾಶ್ ಬೋರ್ಡ್‌ನ ಮಾಹಿತಿ ಎಂದರು.

'ರಾಜ್ಯದ ಕೃಷಿ ಇಲಾಖೆಗೆ ಕೊಟ್ಟ ಹಣವೂ ಸರಿಯಾಗಿ ವೆಚ್ಚಮಾಡಿಲ್ಲ. ಪಶು ಚಿಕಿತ್ಸಾಲಯ, ಪಶುಗಳಿಗೆ ಬೇಕಾದ ಔಷಧಿಗೆ ಬೇಡಿಕೆ ಇದೆ. ಈ ಉದ್ದೇಶಕ್ಕೆ ಕೇಂದ್ರ ಕೊಟ್ಟ ಅನುದಾನವನ್ನು ಸರಿಯಾಗಿ ಬಳಸಿಲ್ಲ' ಎಂದು ಆಕ್ಷೇಪ ವ್ಯಕ್ತಪಡಿಸಿದರು.

ಬರ ಪರಿಹಾರಕ್ಕಾಗಿ ಎನ್‌ಡಿಆರ್‌ಎಫ್‌ನಡಿ ನಮ್ಮ ಸರ್ಕಾರದ ಅವಧಿಯಲ್ಲಿಯೇ ಹೆಚ್ಚಿನ ಅನುದಾನ ನೀಡಲಾಗಿದೆ. 2009-14ರ ಯುಪಿಎ ಎರಡನೇ ಅವಧಿಯಲ್ಲಿ ರಾಜ್ಯ ಸರ್ಕಾರ ₹29,097 ಕೋಟಿ ಕೇಳಿತ್ತು. ₹3,297 ಕೋಟಿಯನ್ನು ಕೇಂದ್ರ ಬಿಡುಗಡೆ ಮಾಡಿತ್ತು. ಇದು ಬೇಡಿಕೆ ಸಲ್ಲಿಸಿದ ಶೇ 10ರಷ್ಟು ಮೊತ್ತ ಮಾತ್ರ. ಎನ್‌ಡಿಎ ಆಡಳಿತದ 2014–24ರ ಅವಧಿಯಲ್ಲಿ ಸುಮಾರು ₹63,440 ಕೋಟಿಯಷ್ಟು ಪರಿಹಾರವನ್ನು ರಾಜ್ಯ ಸರ್ಕಾರ ಕೇಳಿದ್ದು, ₹13,378 ಕೋಟಿ ನೀಡಲಾಗಿದೆ ಎಂದು ಜೋಶಿ ಹೇಳಿದರು.

ಅನುದಾನ ಮತ್ತು ತೆರಿಗೆ ಹಂಚಿಕೆ ಪಾಲಿನ ವಿಷಯದಲ್ಲಿ ಯುಪಿಎ ಅವಧಿಗೆ ಹೋಲಿಸಿದರೆ, ಎನ್‌ಡಿಎ ಅವಧಿಯಲ್ಲಿ ಅತಿ ಹೆಚ್ಚಿನ ಮೊತ್ತ ರಾಜ್ಯಕ್ಕೆ ಹರಿದು ಬಂದಿದೆ. ವಾಸ್ತವವಾಗಿ ಸಿದ್ದರಾಮಯ್ಯನವರು ನರೇಂದ್ರ ಮೋದಿಯವರನ್ನು ಅಭಿನಂದಿಸಬೇಕಿತ್ತು. ಅವರು ಸುಳ್ಳುರಾಮಯ್ಯನಾಗಿರುವುದರಿಂದ ಸುಳ್ಳನ್ನೇ ಹೇಳುತ್ತಿದ್ದಾರೆ ಎಂದರು.

ತಮ್ಮ ಮತ್ತು ಡಿ.ಕೆ. ಶಿವಕುಮಾರ್ ನಡುವಿನ ಒಳಜಗಳದಿಂದ ಗಮನವನ್ನು ಬೇರೆಡೆಗೆ ತಿರುಗಿಸಲು ಕೇಂದ್ರದ ವಿರುದ್ಧ ಗೂಬೆ ಕೂರಿಸುವ ಯತ್ನವನ್ನು ಅವರು ಮಾಡುತ್ತಿದ್ದಾರೆ ಎಂದು ಜೋಶಿ ದೂರಿದರು.


ಭರತ್ ರೆಡ್ಡಿ ಮನೆ, ಕಚೇರಿ ಮೇಲಿನ ದಾಳಿ ವೇಳೆ ₹31 ಲಕ್ಷ ವಶಕ್ಕೆ: ಇ.ಡಿ

ಪ್ರಜಾವಾಣಿ ವಾರ್ತೆ

ಬಳ್ಳಾರಿ: ಬಳ್ಳಾರಿ ನಗರದ ಕಾಂಗ್ರೆಸ್ ಶಾಸಕ ನಾರಾ ಭರತ್ ರೆಡ್ಡಿ ಅವರ ಮನೆ ಮತ್ತು ಕಚೇರಿ ಮೇಲೆ ನಡೆಸಿದ ದಾಳಿಯ ವೇಳೆ ಹಲವು ಮಹತ್ವದ ದಾಖಲೆಗಳು ಮತ್ತು ಲೆಕ್ಕಕ್ಕೆ ಸಿಗದ ₹31 ಲಕ್ಷ ಹಣ ವಶಕ್ಕೆ ಪಡೆಯಲಾಗಿದೆ ಎಂದು ಜಾರಿ ನಿರ್ದೇಶನಾಲಯ (ಇ.ಡಿ) ಮಂಗಳವಾರ ತಿಳಿಸಿದೆ.

ಇ.ಡಿ ಅಧಿಕಾರಿಗಳ ತಂಡ ಕಳೆದ ಶನಿವಾರ (ಫೆ.10) ಬೆಳಿಗ್ಗೆ 6.30ಕ್ಕೆ ನಾರಾ ಭರತ್ ರೆಡ್ಡಿ, ಅವರ ತಂದೆ ಮಾಜಿ ಶಾಸಕ ಸೂರ್ಯ ನಾರಾಯಣ ರೆಡ್ಡಿ ಮತ್ತು ಸಂಬಂಧಿಗಳ ಹಲವು ಸ್ಥಳಗಳ ಮೇಲೆ ಏಕಕಾಲಕ್ಕೆ ದಾಳಿ ನಡೆಸಿತ್ತು. ಇ.ಡಿ ಅಧಿಕಾರಿಗಳ ಶೋಧ ಕಾರ್ಯವು ಭಾನುವಾರ (ಫೆ.11) ರಾತ್ರಿ 11.30ಕ್ಕೆ ಕೊನೆಗೊಂಡಿತ್ತು.

'ಬಳ್ಳಾರಿಯ ಗಾಂಧಿನಗರ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ಎಫ್‌ಐಆರ್ ಆಧಾರದ ಮೇಲೆ ತನಿಖೆ ನಡೆಯಿತು. ಸೂರ್ಯ ನಾರಾಯಣ ರೆಡ್ಡಿ, ಭರತ್ ರೆಡ್ಡಿ ಮತ್ತು ಇತರರಿಗೆ ಸಂಬಂಧಿಸಿದ ಪ್ರಕರಣದಲ್ಲಿ ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆ (ಪಿಎಂಎಲ್‌ಎ) 2002ರಡಿ ಕರ್ನಾಟಕ, ಆಂಧ್ರ ಪ್ರದೇಶದಲ್ಲಿ ದಾಳಿ ನಡೆಯಿತು' ಎಂದು ಇ.ಡಿ ತಿಳಿಸಿದೆ.


ನಾರಾ ಭರತ್ ರೆಡ್ಡಿ

'ವಿಧಾನಸಭಾ ಚುನಾವಣೆಗೂ ಕೆಲ ತಿಂಗಳಿಗೆ ಮೊದಲು ಭರತ್ ರೆಡ್ಡಿ ₹42 ಕೋಟಿ ಹಣ ಸಂಗ್ರಹಿಸಿ, ಕಾನೂನುಬಾಹಿರ ರೂಪದಲ್ಲಿ ಬಳಸಿದ್ದರು. ಭರತ್ ರೆಡ್ಡಿಯ ಸಹೋದರ ಶರತ್ ರೆಡ್ಡಿ ಎಂಬುವರು ವಿದೇಶಿ ಮೂಲದ ಕಂಪನಿಗಳಲ್ಲಿ ರಹಸ್ಯ ಹೂಡಿಕೆ ಮಾಡಿದ್ದಾರೆ. ಬೇನಾಮಿಯಾಗಿ ಆಸ್ತಿಗಳಲ್ಲಿ ಹೂಡಿಕೆ ಮಾಡಿದ್ದು ಅಲ್ಲದೇ, ಸಂಬಂಧಿಕರಿಂದ ಅನುಮಾನಾಸ್ಪದ ರೀತಿ ಸಾಲ ಪಡೆದಿದ್ದಾರೆ. ಬ್ಯಾಂಕ್ ಖಾತೆಗಳು ಸಂದೇಹಾಸ್ಪದವಾದ ರೀತಿ ಬಳಕೆಯಾಗಿವೆ' ಎಂದು ಇ.ಡಿ ತಿಳಿಸಿದೆ.

ರಾಜ್ಯದ ಅಮೋಘ್ ಸೇರಿ 23 ಅಭ್ಯರ್ಥಿಗಳಿಗೆ ಪೂರ್ಣಾಂಕ

ನವದೆಹಲಿ(ಪಿಟಿಐ): ಅಖಿಲ ಭಾರತ ಮಟ್ಟದಲ್ಲಿ ಎಂಜಿನಿಯರಿಂಗ್ ಕೋರ್ಸ್‌ಗಳ ಪ್ರವೇಶಕ್ಕಾಗಿ ಪ್ರಸಕ್ತ ವರ್ಷದಲ್ಲಿ ನಡೆದ ಜೆಇಇ– ಮೇನ್ (2024) ಮೊದಲ ಆವೃತ್ತಿಯ ಫಲಿತಾಂಶ ಮಂಗಳವಾರ ಪ್ರಕಟವಾಗಿದ್ದು, ಕರ್ನಾಟಕದ ಅಮೋಘ್ ಅಗ್ರವಾಲ್ ಸೇರಿದಂತೆ 23 ಅಭ್ಯರ್ಥಿಗಳು ಪೂರ್ಣ 100 ಅಂಕಗಳನ್ನು ಪಡೆದಿದ್ದಾರೆ.

ತೆಲಂಗಾಣದ ಏಳು ಅಭ್ಯರ್ಥಿಗಳು ಪೂರ್ಣ 100 ಅಂಕಗಳನ್ನು ಪಡೆದಿದ್ದಾರೆ ಎಂದು ರಾಷ್ಟ್ರೀಯ ಪರೀಕ್ಷಾ ಏಜೆನ್ಸಿ (ಎನ್‌ಟಿಎ) ತಿಳಿಸಿದೆ.

ಆಂಧ್ರಪ್ರದೇಶ, ರಾಜಸ್ಥಾನ, ಮಹಾರಾಷ್ಟ್ರದಿಂದ ತಲಾ ಮೂವರು, ಹರಿಯಾಣ, ದೆಹಲಿಯಿಂದ ತಲಾ ಇಬ್ಬರು, ಗುಜರಾತ್, ಕರ್ನಾಟಕ ಮತ್ತು ತಮಿಳುನಾಡು ರಾಜ್ಯಗಳಿಂದ ತಲಾ ಒಬ್ಬರು ಪೂರ್ಣಾಂಕಗಳನ್ನು ಪಡೆದಿದ್ದಾರೆ. ಇವರೆಲ್ಲರೂ ಯುವಕರಾಗಿದ್ದಾರೆ.

ಒಟ್ಟಾರೆ 291 ನಗರಗಳಲ್ಲಿನ (ವಿದೇಶಗಳಲ್ಲಿನ 21 ನಗರಗಳೂ ಸೇರಿ) 544 ಕೇಂದ್ರಗಳಲ್ಲಿ ಪರೀಕ್ಷೆ ನಡೆಸಲಾಗಿತ್ತು. ನೋಂದಾಯಿಸಿದ್ದ 12.21 ಲಕ್ಷ ಅಭ್ಯರ್ಥಿಗಳ ಪೈಕಿ 11.70 ಲಕ್ಷ ಅಭ್ಯರ್ಥಿಗಳು ಹಾಜರಾಗಿದ್ದರು.

ಜೆಇಇ ಮೇನ್ ಪರೀಕ್ಷೆಯ ಮೊದಲ ಆವೃತ್ತಿಯು ಜನವರಿ– ಫೆಬ್ರುವರಿಯಲ್ಲಿ ನಡೆದಿತ್ತು. ಎರಡನೇ ಆವೃತ್ತಿ ಏಪ್ರಿಲ್‌ನಲ್ಲಿ ನಿಗದಿಯಾಗಿದೆ. ಎರಡೂ ಆವೃತ್ತಿಗಳ ಫಲಿತಾಂಶ ಆಧರಿಸಿ, ಜೆಇಇ–ಅಡ್ವಾನ್ಸ್ಡ್ ಪರೀಕ್ಷೆಗೆ ಹಾಜರಾಗುವ ಅಭ್ಯರ್ಥಿಗಳ ಪಟ್ಟಿ ಸಿದ್ಧಪಡಿಸಲಾಗುತ್ತದೆ ಎಂದು ಪ್ರಕಟಣೆ ತಿಳಿಸಿದೆ.

ಕೃಷಿ ಜಮೀನಿನಲ್ಲಿ ಸ್ಫೋಟಕ ಪತ್ತೆ

ಪ್ರಜಾವಾಣಿ ವಾರ್ತೆ

ಶ್ರೀರಂಗಪಟ್ಟಣ (ಮಂಡ್ಯ ಜಿಲ್ಲೆ): ತಾಲ್ಲೂಕಿನ ಜಕ್ಕನಹಳ್ಳಿ ಗ್ರಾಮದ ಕೃಷಿ ಜಮೀನುಗಳಲ್ಲಿ ಅಪಾಯಕಾರಿ ಸ್ಫೋಟಕಗಳು ಪತ್ತೆಯಾಗಿವೆ.

ತಮ್ಮ ಜಮೀನಿನಲ್ಲಿ ಬಿದ್ದಿದ್ದ ಸ್ಫೋಟಕ ವಸ್ತುಗಳನ್ನು ರೈತ ಜೆ.ಎಂ. ಬಾಲಕೃಷ್ಣ ಸೋಮವಾರ ಪ್ರದರ್ಶಿಸಿ, ತೀವ್ರ ಕಳವಳ ವ್ಯಕ್ತಪಡಿಸಿದರು.

'ಗ್ರಾಮದ ಬಳಿಯ ಸ.ನಂ.83ರಲ್ಲಿ ಕಲ್ಲು ಗಣಿಗಾರಿಕೆ ನಡೆಸುವವರು ಸ್ಫೋಟಕಗಳನ್ನು ಮನಬಂದಂತೆ ಬಳಸುತ್ತಿದ್ದಾರೆ. ಅದು ಸರ್ಕಾರಿ ಗೋಮಾಳವಾಗಿದೆ. ಜಿಲೆಟಿನ್ ಕಡ್ಡಿ ಮತ್ತು ಅಮೋನಿಯಂ ಸಲ್ಫೇಟ್‌ನಂತಹ ಅಪಾಯಕಾರಿ ವಸ್ತುಗಳು ಜನರ ಕೈಗೆ ಸುಲಭವಾಗಿ ಸಿಗುತ್ತಿವೆ. ಅವುಗಳನ್ನು ವಿಧ್ವಂಸಕ ಕೃತ್ಯಗಳಿಗೆ ಬಳಸಿದರೆ ಗತಿ ಏನು' ಎಂದು ಕಳವಳದಿಂದ ಕೇಳಿದರು.

'ಕಲ್ಲು ಗಣಿಗಾರಿಕೆಯಿಂದಾಗಿ ನಾನೂ ಸೇರಿದಂತೆ ಆಸುಪಾಸಿನ ಹತ್ತಾರು ರೈತರು ಕೃಷಿ ಮಾಡದೇ ಜಮೀನನ್ನು ಪಾಳು ಬಿಟ್ಟಿದ್ದೇವೆ. ಹಗಲಿನಲ್ಲೇ ಕಲ್ಲು ಬಂಡೆ ಸ್ಫೋಟಿಸುತ್ತಿದ್ದು, ಕಲ್ಲು ಮತ್ತು ದೂಳು ಜಮೀನಿಗೆ ಬಂದು ಬೀಳುತ್ತಿವೆ. ಜಮೀನಿಗೆ ಹೋದರೆ ಕಲ್ಲುಗಳು ಮೈ ಮೇಲೆ ಬೀಳಬಹುದು ಎಂಬ ಭಯ ಕಾಡುತ್ತಿದೆ' ಎಂದು ಅಳಲು ತೋಡಿಕೊಂಡರು.

'ಗಣಿ ಮತ್ತು ಭೂ ವಿಜ್ಞಾನ ಇಲಾಖೆಗೆ ದೂರು ನೀಡಿದ್ದರೂ ಕ್ರಮ ಕೈಗೊಂಡಿಲ್ಲ' ಎಂದು ದೂರಿದರು.

'ಜಕ್ಕನಹಳ್ಳಿ ಬಳಿ ಅಕ್ರಮವಾಗಿ ಸ್ಫೋಟಕ ಬಳಸುತ್ತಿರುವ ಬಗ್ಗೆ ಮಾಹಿತಿ ಇಲ್ಲ. ಸ್ಥಳ ಪರಿಶೀಲಿಸಿ ಕ್ರಮ ವಹಿಸಲಾಗುವುದು' ಎಂದು ಗ್ರಾಮಾಂತರ ಠಾಣೆ ಸಿಪಿಐ ಬಿ.ಜಿ. ಕುಮಾರ್ ಪ್ರತಿಕ್ರಿಯಿಸಿದರು.



ಶ್ರೀರಂಗಪಟ್ಟಣ ತಾಲ್ಲೂಕಿನ ಜಕ್ಕನಹಳ್ಳಿ ಗ್ರಾಮದ ತಮ್ಮ ಜಮೀನಿನಲ್ಲಿ ಸಿಕ್ಕ ಸ್ಫೋಟಕ ವಸ್ತುಗಳನ್ನು ರೈತ ಜೆ.ಎಂ. ಬಾಲಕೃಷ್ಣ ಪ್ರದರ್ಶಿಸಿದರು

21ರಂದು ಕಿತ್ತೂರಿನಲ್ಲಿ 'ನಾನೂ ರಾಣಿ ಚನ್ನಮ್ಮ ರಾಷ್ಟ್ರೀಯ ಆಂದೋಲನ'

ಪ್ರಜಾವಾಣಿ ವಾರ್ತೆ

ಧಾರವಾಡ: 'ಕಿತ್ತೂರು ರಾಣಿ ಚನ್ನಮ್ಮ ಬ್ರಿಟಿಷರ ವಿರುದ್ಧ ಹೋರಾಡಿ 200 ವರ್ಷ ಸಂದ ನೆನಪಿನಲ್ಲಿ ವಿವಿಧ ಸಂಘಟನೆಗಳಿಂದ ಫೆಬ್ರುವರಿ 21ರಂದು ಬೆಳಗಾವಿ ಜಿಲ್ಲೆಯ ಕಿತ್ತೂರಿನಲ್ಲಿ 'ನಾನೂ ರಾಣಿ ಚನ್ನಮ್ಮ ರಾಷ್ಟ್ರೀಯ ಆಂದೋಲನ' ನಡೆಯಲಿದೆ ಎಂದು ನವದೆಹಲಿಯ ಆ್ಯಕ್ಟ್ ನೌ ಫಾರ್ ಹಾರ್ಮೊನಿ ಅಂಡ್ ಡೆಮಾಕ್ರಸಿ (ಅನ್‌ಹದ್) ಟ್ರಸ್ಟ್‌ನ ಟ್ರಸ್ಟಿ ಶಬನಂ ಹಶ್ಮಿ ತಿಳಿಸಿದರು.

'ಆಂದೋಲನಕ್ಕೆ ಅನಹದ್ ಸೇರಿ 22ಕ್ಕೂ ಹೆಚ್ಚು ಸಂಘಟನೆಗಳ ಸಹಕಾರವಿದೆ. ಫೆಬ್ರುವರಿ 21ರಂದು ಬೆಳಿಗ್ಗೆ 9ಕ್ಕೆ ಮೆರವಣಿಗೆ, ನಂತರ 11 ಗಂಟೆಗೆ ವೇದಿಕೆ ಕಾರ್ಯಕ್ರಮ ನಡೆಯಲಿದೆ' ಎಂದು ಅವರು ಮಂಗಳವಾರ ತಿಳಿಸಿದರು.

'ಆಂದೋಲನದಲ್ಲಿ ವೀರ ವನಿತೆಯರ ಕುರಿತು ವಿಶೇಷ ಪ್ರದರ್ಶನ ಇರಲಿದೆ. 'ಕಿತ್ತೂರು ಘೋಷಣೆ' ಬಿಡುಗಡೆ ಮಾಡಲಾಗುವುದು. 20ಕ್ಕೂ ಹೆಚ್ಚು ರಾಜ್ಯಗಳಿಂದ ಮೂರು ಸಾವಿರ ಜನರು ಪಾಲ್ಗೊಳ್ಳುವರು' ಎಂದರು.

ಜೆಇಇ ಮೇನ್ಸ್: ಎಕ್ಸ್‌ಪರ್ಟ್‌ನ ನಾಲ್ವರು ವಿದ್ಯಾರ್ಥಿಗಳಿಗೆ 100 ಪರ್ಸಂಟೈಲ್

ಮಂಗಳೂರು: ಎಂಜಿನಿಯರಿಂಗ್ ಪ್ರವೇಶಕ್ಕೆ ರಾಷ್ಟ್ರ ಮಟ್ಟದಲ್ಲಿ ನಡೆಸುವ ಜೆಇಇ ಮೇನ್ಸ್ ಪರೀಕ್ಷೆಯಲ್ಲಿ ಇಲ್ಲಿನ ಕೊಡಿಯಾಲ್‌ಬೈಲ್‌ನಲ್ಲಿರುವ ಎಕ್ಸ್‌ಪರ್ಟ್ ಪದವಿ ಪೂರ್ವ ಕಾಲೇಜಿನ ಮೂವರು ವಿದ್ಯಾರ್ಥಿಗಳು ಭೌತವಿಜ್ಞಾನದಲ್ಲಿ ಮತ್ತು ಒಬ್ಬ ವಿದ್ಯಾರ್ಥಿ ರಸಾಯನ ವಿಜ್ಞಾನದಲ್ಲಿ 100 ಪರ್ಸಂಟೈಲ್ ದಾಖಲಿಸಿದ್ದಾರೆ.

ಪ್ರತೀಕ್ ಪಿ. ಗೌಡ (ರಸಾಯನ ವಿಜ್ಞಾನದಲ್ಲಿ 100 ಪರ್ಸಂಟೈಲ್, ಒಟ್ಟು 99.5733606 ಪರ್ಸಂಟೈಲ್), ಭೌತ ವಿಜ್ಞಾನದಲ್ಲಿ 100 ಪರ್ಸಂಟೈಲ್ ಪಡೆದ ಸುಜನ್ ಶಿವಾನಂದ ಮುಳ್ಳಟ್ಟಿ (ಒಟ್ಟು 99.4584867), ಸಂಜನ್ ಡಿ. (ಒಟ್ಟು 99.414274), ಸಾತ್ವಿಕ್ ಅಖಿಲ್ ಶರ್ಮಾ (ಒಟ್ಟು 96.7868736) ಉತ್ತಮ ಸಾಧನೆ ಮಾಡಿದ್ದಾರೆ. ಸಂಸ್ಥೆಯ ಒಟ್ಟು 28 ವಿದ್ಯಾರ್ಥಿಗಳು 99 ಪರ್ಸಂಟೈಲ್‌ಗಿಂತ ಹೆಚ್ಚು ಅಂಕ ಪಡೆದಿದ್ದಾರೆ. ಜನವರಿಯಲ್ಲಿ ನಡೆದ ಜೆಇಇ ಪರೀಕ್ಷೆಯಲ್ಲಿ ಎಕ್ಸ್‌ಪರ್ಟ್ ಕಾಲೇಜಿನ 48 ವಿದ್ಯಾರ್ಥಿಗಳು 98 ಪರ್ಸಂಟೈಲ್‌ಗಿಂತ ಅಧಿಕ, 81 ವಿದ್ಯಾರ್ಥಿಗಳು 97 ಪರ್ಸಂಟೈಲ್‌ಗಿಂತ ಅಧಿಕ, 113 ವಿದ್ಯಾರ್ಥಿಗಳು 96 ಪರ್ಸಂಟೈಲ್‌ಗಿಂತ ಅಧಿಕ, 146 ವಿದ್ಯಾರ್ಥಿಗಳು 95 ಪರ್ಸಂಟೈಲ್‌ಗಿಂತ ಅಧಿಕ ಹಾಗೂ 278 ವಿದ್ಯಾರ್ಥಿಗಳು 90 ಪರ್ಸಂಟೈಲ್‌ಗಿಂತ ಅಧಿಕ ಫಲಿತಾಂಶ ಗಳಿಸಿದ್ದಾರೆ ಎಂದು ಸಂಸ್ಥೆಯ ಅಧ್ಯಕ್ಷ ಪ್ರೊ. ನರೇಂದ್ರ ಎಲ್. ನಾಯಕ್ ತಿಳಿಸಿದ್ದಾರೆ.


ಸುಜನ್ ಶಿವಾನಂದ ಮುಳ್ಳಟ್ಟಿ


ಸ್ವಸ್ತಿಕ್ ಅಖಿಲ್ ಶರ್ಮಾ


ಪ್ರತೀಕ್ ಗೌಡ


ಸಂಜನ್ ಡಿ

ರೈತರ ಪ್ರತಿಭಟನೆ: ಡ್ರೋನ್, ಸಿ.ಸಿ.ಟಿ.ವಿ ಕ್ಯಾಮೆರಾಗಳ ಕಣ್ಗಾವಲು • ಕೆಲ ಮೆಟ್ರೊ ನಿಲ್ದಾಣಗಳ ದ್ವಾರ ಬಂದ್

ಭದ್ರತೆ: ಸಂಚಾರ ದಟ್ಟಣೆಗೆ ನಲುಗಿದ ದೆಹಲಿ

ನವದೆಹಲಿ(ಪಿಟಿಐ): ಪ್ರತಿಭಟನೆ ನಿರತ ರೈತರು ರಾಷ್ಟ್ರ ರಾಜಧಾನಿ ದೆಹಲಿ ಪ್ರದೇಶವನ್ನು ಪ್ರವೇಶಿಸದಂತೆ ತಡೆಯುವುದಕ್ಕಾಗಿ ಪ್ರಮುಖ ಸ್ಥಳಗಳಲ್ಲಿ ಪೊಲೀಸರು ಮಂಗಳವಾರ ಕೈಗೊಂಡಿದ್ದ ಬ್ಯಾರಿಕೇಡ್ ಅಳವಡಿಕೆ, ಮಾರ್ಗ ಬದಲಾವಣೆಯಂತಹ ಕ್ರಮಗಳು ನಗರದಲ್ಲಿ ಭಾರಿ ಸಂಚಾರ ದಟ್ಟಣೆಗೆ ಕಾರಣವಾದವು.

ಅದರಲ್ಲೂ, ಸಿಂಘು ಮತ್ತು ಟಿಕ್ರಿ ಗಡಿಗಳಲ್ಲಿ ವಾಹನಗಳ ಸಂಚಾರವನ್ನು ಸಂಪೂರ್ಣ ಸ್ಥಗಿತಗೊಳಿಸಿದ್ದರಿಂದ, ಆ ಮಾರ್ಗಗಳಲ್ಲಿ ಸಂಚರಿಸಿದವರು ಸಾಕಷ್ಟು ತೊಂದರೆ ಅನುಭವಿಸುವಂತಾಯಿತು.

ಗಲಭೆ ನಿಗ್ರಹಕ್ಕೆ ಅಗತ್ಯವಿರುವ ಸಾಧನ-ಸಲಕರಣೆಗೊಂದಿಗೆ ಸಜ್ಜಾಗಿರುವ ಭದ್ರತಾ ಸಿಬ್ಬಂದಿಯನ್ನು ಭದ್ರತೆ ಕಾರ್ಯಕ್ಕೆ ನಿಯೋಜಿಸಲಾಗಿತ್ತು. ಲೋಹ ಹಾಗೂ ಕಾಂಕ್ರೀಟ್ ಇಟ್ಟಿಗೆಗಳನ್ನುಬಳಸಿ ಪ್ರಮುಖ ರಸ್ತೆಗಳಲ್ಲಿ ಬ್ಯಾರಿಕೇಡ್‌ಗಳನ್ನು ಹಾಕಲಾಗಿತ್ತು. ಇದರಿಂದಾಗಿ, ಈ ರಸ್ತೆಗಳಲ್ಲಿ ನಿತ್ಯ ಸಂಚರಿಸುವವರು ಸಾಕಷ್ಟು ತೊಂದರೆ ಅನುಭವಿಸಬೇಕಾಯಿತು.

ಗಾಜಿಪುರ ಗಡಿಗೆ ಹೊಂದಿಕೊಂಡ ಪ್ರದೇಶಗಳಲ್ಲಿಯೂ ಭಾರಿ ದಟ್ಟಣೆ ಉಂಟಾಗಿತ್ತು. ದೆಹಲಿ ಮತ್ತು ನೋಯ್ಡಾ ನಡುವಿನ ಮಾರ್ಗದಲ್ಲಿ ಅರ್ಧದಷ್ಟು ದೂರದವರೆಗೆ ಬ್ಯಾರಿಕೇಡ್‌ಗಳನ್ನು ಅಳವಡಿಸಿದ್ದರಿಂದ ಏಕಕಾಲದಲ್ಲಿ ಎರಡು ವಾಹನಗಳಿಗೆ ಮಾತ್ರ ಸಂಚರಿಸಲು ಅವಕಾಶ ನೀಡಿದ್ದು ದಟ್ಟಣೆ ಹೆಚ್ಚುವಂತೆ ಮಾಡಿತ್ತು.

ಸಿಂಘು, ಟಿಕ್ರಿ ಹಾಗೂ ಗಾಜಿಪುರ ಗಡಿಗಳಲ್ಲಿ ಬೆಳಿಗ್ಗೆ 7ಗಂಟೆ ಹೊತ್ತಿಗೆ ಸಂಚಾರ ದಟ್ಟಣೆ ಕಂಡುಬಂದಿತ್ತು. ಸಂಭಾವ್ಯ ದಟ್ಟಣೆ ಬಗ್ಗೆ ಅರಿವಿದ್ದ ಹಲವು ಉದ್ಯೋಗಿಗಳು, ದಿನಕ್ಕಿಂತಲೂ 1-2 ಗಂಟೆಗಳಷ್ಟು ಮೊದಲೇ ಮನೆಯಿಂದ ಹೊರಟಿದ್ದರು. ಆದಾಗ್ಯೂ, ದಟ್ಟಣೆಯಲ್ಲಿ ಸಿಲುಕಿ, ಉದ್ಯೋಗದ ಸ್ಥಳವನ್ನು ತಡವಾಗಿ ತಲುಪಿದ ಬಗ್ಗೆ ವರದಿಯಾಗಿದೆ.

'78 ವರ್ಷದ ನನ್ನ ತಂದೆ ಅನಾರೋಗ್ಯದಿಂದ ಬಳಲುತ್ತಿದ್ದು, ದೆಹಲಿಯ ಲೋಕನಾಯಕ ಆಸ್ಪತ್ರೆಯಲ್ಲಿ ದಾಖಲಿಸಲಾಗಿದೆ. ಅವರನ್ನು ಕಾಣುವುದಕ್ಕಾಗಿ ಉತ್ತರಾಖಂಡದಿಂದ ಬಂದಿದ್ದೇನೆ. ಗಾಜಿಪುರ ಗಡಿಗೆ ಬೆಳಿಗ್ಗೆ 11ಕ್ಕೆ ಬಂದಿದ್ದು, ದಟ್ಟಣೆಯಲ್ಲಿ ಸಿಲುಕಿ ಸಂಕಟ ಅನುಭವಿಸುತ್ತಿದ್ದೇನೆ' ಎಂದು ಅರುಣ್ ಸಿಂಗ್ ಹೇಳಿದರು.

ಬರೇಲಿ, ಮೀರಠ್, ಮುಜಫ್ಫರ್ ನಗರ, ರಿಷಿಕೇಶ, ಡೆಹ್ರಾಡೂನ್, ಮಸ್ಸೂರಿ, ಮುರಾದಾಬಾದ್, ನೈನಿತಾಲ್ ಸೇರಿದಂತೆ ದೆಹಲಿಗೆ ಸಂಪರ್ಕಿಸುವ ಪ್ರಮುಖ ರಸ್ತೆಗಳಲ್ಲಿ ಸಂಚರಿಸುವ ಜನರು ತೊಂದರೆ ಅನುಭವಿಸಿದರು.

9 ಮೆಟ್ರೊ ದ್ವಾರಗಳು ಬಂದ್: ಮುಂಜಾಗ್ರತಾ ಕ್ರಮವಾಗಿ 9 ಮೆಟ್ರೊ ನಿಲ್ದಾಣಗಳ ಪ್ರವೇಶ ಮತ್ತು ನಿರ್ಗಮನ ದ್ವಾರಗಳನ್ನು ಮುಚ್ಚಲಾಗಿತ್ತು.





'ದೆಹಲಿ ಚಲೋ' ಪ್ರತಿಭಟನಾ ಮೆರವಣಿಗೆಯಲ್ಲಿ ಪಾಲ್ಗೊಂಡ ರೈತರು ಮಂಗಳವಾರ ಪಂಜಾಬ್– ಹರಿಯಾಣದ ಶಂಭು ಗಡಿಯಲ್ಲಿ ಸೇರಿದ್ದ ದೃಶ್ಯ (ಎಡಚಿತ್ರ). ದೆಹಲಿ–ಗುರುಗ್ರಾಮ ಎಕ್ಸ್‌ಪ್ರೆಸ್‌ವೇನಲ್ಲಿ ಕಂಡು ಬಂದ ವಾಹನ ದಟ್ಟಣೆ —ಪಿಟಿಐ ಚಿತ್ರಗಳು

5 ಸಾವಿರ ಸಿಬ್ಬಂದಿ ನಿಯೋಜನೆ

ವಿವಿಧ ಬೇಡಿಕೆಗಳನ್ನು ಮುಂದಿಟ್ಟುಕೊಂಡು ರೈತರು ಪ್ರತಿಭಟನೆ ನಡೆಸುತ್ತಿರುವ ಹಿನ್ನೆಲೆಯಲ್ಲಿ ಕೇಂದ್ರ ದೆಹಲಿಯಲ್ಲಿ ಮಂಗಳವಾರ ಭಾರಿ ಭದ್ರತೆ ವ್ಯವಸ್ಥೆ ಮಾಡಲಾಗಿತ್ತು.

ನಿಷೇಧಾಜ್ಞೆಯೂ ಜಾರಿಯಲ್ಲಿರುವ ಕಾರಣ, ಸಂಸತ್ ಭವನ ಸೇರಿದಂತೆ ಪ್ರಮುಖ ಸ್ಥಳಗಳ ಸಮೀಪ ಇರುವ ಮೆಟ್ರೊ ನಿಲ್ದಾಣದ ಪ್ರವೇಶ ಮತ್ತು ನಿರ್ಗಮನ ದ್ವಾರಗಳನ್ನು ಮುಂಜಾಗ್ರತಾ ಕ್ರಮವಾಗಿ ಮುಚ್ಚಲಾಗಿತ್ತು.

ಪ್ರತಿಭಟನೆ ನಡೆಸುತ್ತಿರುವವರ ಮೇಲೆ ತೀವ್ರ ನಿಗಾ ಇಡುವುದಕ್ಕಾಗಿ ಡ್ರೋನ್‌ಗಳು ಹಾಗೂ ಸಿ.ಸಿ. ಟಿ.ವಿ ಕ್ಯಾಮೆರಾಗಳನ್ನು ವ್ಯಾಪಕವಾಗಿ ಬಳಸಲಾಗಿದೆ.

ಟಿಕ್ರಿ, ಸಿಂಘು ಹಾಗೂ ಗಾಜಿಪುರ ಗಡಿ ಭಾಗಗಳಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವುದಕ್ಕಾಗಿ ಅರೆಸೇನಾ ಪಡೆಗಳ ಯೋಧರು ಹಾಗೂ ಪೊಲೀಸರು ಸೇರಿದಂತೆ 5 ಸಾವಿರಕ್ಕೂ ಹೆಚ್ಚು ಸಿಬ್ಬಂದಿಯನ್ನು ನಿಯೋಜಿಸಲಾಗಿತ್ತು.

'ಪ್ರತಿಭಟನೆಯಿಂದಾಗಿ ಉದ್ಭವಿಸಬಹುದಾದ ಯಾವುದೇ ಸನ್ನಿವೇಶವನ್ನು ನಿಭಾಯಿಸಲು ರೂಪಿಸಿರುವ 'ಪ್ಲಾನ್ ಬಿ' ಭಾಗವಾಗಿ ಈ ಭದ್ರತಾ ವ್ಯವಸ್ಥೆ ಮಾಡಲಾಗಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಸಿಂಘು ಗಡಿಗೆ ಭೇಟಿ ನೀಡಿದ ವಿಶೇಷ ಆಯುಕ್ತ (ಕಾನೂನು ಮತ್ತು ಸುವ್ಯವಸ್ಥೆ) ರವೀಂದ್ರ ಯಾದವ್, 'ರೈತರು ದೆಹಲಿ ಪ್ರವೇಶಿಸಲು ಯತ್ನಿಸಿದರೆ ಹಾಗೂ ಅಪ್ರಚೋದಿತವಾಗಿ ಆಕ್ರಮಣ ಮಾಡಿದಲ್ಲಿ, ಅಷ್ಟೇ ಆಕ್ರಮಣಕಾರಿಯಾಗಿ ಪ್ರತಿಕ್ರಿಯಿಸಿ' ಎಂದು ಸಿಬ್ಬಂದಿಗೆ ಸೂಚನೆ ನೀಡಿದರು.

ಗಡಿ ಗ್ರಾಮಗಳ ಜನರಿಗೆ ತೊಂದರೆ

ಪ್ರತಿಭಟನೆ ಕೈಗೊಂಡಿರುವ ರೈತರು ದೆಹಲಿ ಪ್ರವೇಶಿಸದಂತೆ ತಡೆಯುವುದಕ್ಕಾಗಿ ಗಡಿಯಲ್ಲಿ ಭಾರಿ ಭದ್ರತೆ ಹಾಕಿರುವುದು, ಹರಿಯಾಣಕ್ಕೆ ಹೊಂದಿಕೊಂಡಿರುವ ಸೀಮೆಗುಂಟ ಇರುವ ಹಳ್ಳಿಗಳ ಜನರಿಗೆ ತೊಂದರೆ ಉಂಟು ಮಾಡಿದೆ.

'ನಮಗೂ ಈ ಪ್ರತಿಭಟನೆಗೂ ಯಾವುದೇ ಸಂಬಂಧ ಇಲ್ಲ. ನಮ್ಮ ಕೆಲಸ ಮುಗಿಸಿ, ಮನೆಗೆ ಮರಳಬೇಕಾದರೆ, ಮೂರು ಕಡೆಗಳಲ್ಲಿ ನಮ್ಮ ಗುರುತಿನ ಚೀಟಿ ತೋರಿಸಬೇಕು' ಎಂದು ಕಾರ್ಮಿಕ ರಾಜಾರಾಮ್ ಎಂಬುವವರು ತಮಗಾದ ತೊಂದರೆಯನ್ನು ವಿವರಿಸಿದರು.

'ಗಡಿಗೆ ಹೊಂದಿಕೊಂಡಿರುವ ಗ್ರಾಮಗಳಲ್ಲಿನ ಶಾಲೆಗಳಿಗೆ ಹೋಗುವ ಮಕ್ಕಳು ಮರಳಿ ಮನೆ ತಲುಪುವುದಕ್ಕೆ ಪ್ರಯಾಸ ಪಟ್ಟರು. ಸಂಚಾರ ಮಾರ್ಗವನ್ನು ಬದಲಾಯಿಸಿದ ಸಂದರ್ಭದಲ್ಲಿ, ಅದರ ಸಮರ್ಪಕ ನಿರ್ವಹಣೆಗಾಗಿ ಸಿಬ್ಬಂದಿಯನ್ನು ನಿಯೋಜಿಸಬೇಕಿತ್ತು' ಎಂದು ತಿಕ್ರಿ ಕಲನ್ ಗ್ರಾಮದ ನಿವಾಸಿ ಸುರೇಂದ್ರಕುಮಾರ್ ಹೇಳಿದರು.

'ತಪ್ಪಿತಸ್ಥ' ರೈತರ ವಿರುದ್ಧ ಕ್ರಮ: 'ಸುಪ್ರೀಂ' ವಕೀಲರ ಆಗ್ರಹ

'ಜನರ ದೈನಂದಿನ ಜೀವನಕ್ಕೆ ಅಡ್ಡಿಯುಂಟು ಮಾಡಲು ಹಾಗೂ ಗೊಂದಲ ಸೃಷ್ಟಿಸುವುದಕ್ಕಾಗಿ ದೆಹಲಿಯನ್ನು ಬಲವಂತದಿಂದ ಪ್ರವೇಶಿಸಲು ಯತ್ನಿಸುತ್ತಿರುವ 'ತಪ್ಪಿತಸ್ಥ' ರೈತರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಸುಪ್ರೀಂ ಕೋರ್ಟ್ ವಕೀಲರ ಸಂಘವು (ಎಸ್‌ಸಿಬಿಎ) ಮುಖ್ಯನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ಅವರನ್ನು ಮಂಗಳವಾರ ಆಗ್ರಹಿಸಿದೆ.

ಈ ಕುರಿತು ಸಂಘದ ಅಧ್ಯಕ್ಷ ಆದೀಶ್ ಸಿ.ಅಗರವಾಲ್ ಅವರು ಸಿಜೆಐ ಅವರಿಗೆ ಪತ್ರ ಬರೆದಿದ್ದಾರೆ.

'ದೆಹಲಿ ಗಡಿಗಳ ಮೂಲಕ ಜನರ ಸಂಚಾರಕ್ಕೆ ಅಡ್ಡಿ ಉಂಟಾಗಿದೆ. ಹೀಗಾಗಿ, ವಿವಿಧ ಪೀಠಗಳ ಮುಂದಿರುವ ಅರ್ಜಿಗಳ ವಿಚಾರಣೆಗಾಗಿ ಕಕ್ಷಿದಾರರಿಗೆ ಹಾಜರಾಗಲು ಸಾಧ್ಯವಾಗದೇ ಇರಬಹುದು. ಹೀಗಾಗಿ, ಯಾವುದೇ ರೀತಿಯ ವ್ಯತಿರಿಕ್ತ ಆದೇಶಗಳನ್ನು ಹೊರಡಿಸಬಾರದು' ಎಂದು ಅವರು ಪತ್ರದಲ್ಲಿ ಮನವಿ ಮಾಡಿದ್ದಾರೆ.

'ಪ್ರತಿಭಟಿಸುತ್ತಿರುವ ರೈತರ ಬೇಡಿಕೆಗಳು ನ್ಯಾಯ ಯುತವಾಗಿಯೇ ಇದ್ದರೂ, ಸಾರ್ವಜನಿಕರಿಗೆ ತೊಂದರೆಯನ್ನುಂಟು ಮಾಡಲು ಅವರಿಗೆ ಯಾವುದೇ ಹಕ್ಕು ಇಲ್ಲ' ಎಂದು ವಿವರಿಸಿದ್ದಾರೆ.

ಪ್ರತಿಭಟನೆ; ಪ್ರಮುಖಾಂಶಗಳು

- ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ ಹಾಗೂ ಕೃಷಿ ಸಚಿವ ಅರ್ಜುನ್ ಮುಂಡಾ ಅವರ ನಿವಾಸಗಳಿರುವ ಲೋಕ ಕಲ್ಯಾಣ ಮಾರ್ಗದಲ್ಲಿ ವ್ಯಾಪಕ ಭದ್ರತಾ ವ್ಯವಸ್ಥೆ ಮಾಡಲಾಗಿತ್ತು
- ದೆಹಲಿಯ ಪೂರ್ವ ಭಾಗವನ್ನು ಕೇಂದ್ರೀಯ ಭಾಗದೊಂದಿಗೆ ಸಂಪರ್ಕಿಸುವ ವಿಕಾಸ್ ಮಾರ್ಗವನ್ನು ಸಹ ಮುಚ್ಚಲಾಗಿತ್ತು
- ಗಾಜಿಪುರದಿಂದ ಅಕ್ಷರ ಧಾಮ ಸಂಪರ್ಕಿಸುವ ರಾಷ್ಟ್ರೀಯ ಹೆದ್ದಾರಿ-9ರಲ್ಲಿ ಕ್ರೇನ್‌ಗಳು ಹಾಗೂ ಭಾರಿ ಯಂತ್ರಗಳನ್ನು ಬಳಸಿ ಬ್ಯಾರಿಕೇಡ್ ನಿರ್ಮಿಸಲಾಗಿತ್ತು
- ದೆಹಲಿಯಿಂದ ಮೀರಠ್, ಗುರುಗ್ರಾಮ ಸಂಪರ್ಕಿಸುವ ರಸ್ತೆಗಳಲ್ಲಿ ವಾಹನಗಳು ನಿಧಾನವಾಗಿ ಸಂಚರಿಸಿದವು
- ಸಿಂಘು ಗಡಿಯಲ್ಲಿ ಜಮಾಯಿಸಿದ್ದ ಸ್ಥಳೀಯರು ಪ್ರತಿಭಟನೆ ನಿರತ ರೈತರಿಗೆ ಬೆಂಬಲ ಸೂಚಿಸಿದರು

'ಕೇಂದ್ರದಿಂದ ರೈತರ ದನಿ ಹತ್ತಿಕ್ಕುವ ಯತ್ನ'



ಮಲ್ಲಿಕಾರ್ಜುನ ಖರ್ಗೆ

'ಕಳೆದ ಹತ್ತು ವರ್ಷಗಳ ಅವಧಿಯಲ್ಲಿ ರೈತರಿಗೆ ನೀಡಿದ್ದ ಭರವಸೆಗಳನ್ನು ಈಡೇರಿಸುವಲ್ಲಿ ವಿಫಲವಾಗಿರುವ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ, ಈಗ ರೈತರ ದನಿಯನ್ನು ದಮನ ಮಾಡುತ್ತಿದೆ' ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಮಂಗಳವಾರ ಟೀಕಿಸಿದ್ದಾರೆ.

ವಿವಿಧ ಬೇಡಿಕೆಗಳನ್ನು ಮುಂದಿಟ್ಟುಕೊಂಡು 'ದೆಹಲಿ ಚಲೋ' ಹಮ್ಮಿಕೊಂಡಿರುವ ರೈತರು, ರಾಷ್ಟ್ರ ರಾಜಧಾನಿ ಪ್ರವೇಶಿಸದಂತೆ ವ್ಯಾಪಕ ಬಂದೋಬಸ್ತ್ ಮಾಡಿರುವ ಸರ್ಕಾರದ ನಡೆ ವಿರುದ್ಧ ಅವರು ವಾಗ್ದಾಳಿ ನಡೆಸಿದ್ದಾರೆ.

'ಮುಳ್ಳು ತಂತಿಗಳ ಬೇಲಿ ಅಳವಡಿಕೆ, ಡ್ರೋನ್‌ಗಳಿಂದ ಅಶ್ರುವಾಯು ಶೆಲ್ ಸಿಡಿಸುವುದು ಸೇರಿದಂತೆ ರೈತರು ದೆಹಲಿ ಪ್ರವೇಶಿಸದಂತೆ ತಡೆಯುವುದಕ್ಕಾಗಿ ಸರ್ಕಾರ ಎಲ್ಲ ಪ್ರಯತ್ನಗಳನ್ನು ಮಾಡುತ್ತಿದೆ. ಸರ್ವಾಧಿಕಾರ ಧೋರಣೆಯ ಈ ಸರ್ಕಾರ ರೈತರ ದನಿ ಹತ್ತಿಕ್ಕುತ್ತಿದೆ' ಎಂದು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

'ಈ ಹಿಂದೆಯೂ ರೈತರು ಪ್ರತಿಭಟನೆ ನಡೆಸಿದ್ದರು. ಆಗ, 'ಆಂದೋಲನ ಜೀವಿ' ಹಾಗೂ 'ಪರಾವಲಂಬಿ'ಗಳು ಎಂಬುದಾಗಿ ಕರೆಯುವ ಮೂಲಕ ಅವರನ್ನು ಅವಮಾನಿಸಲಾಗಿತ್ತು . ಪ್ರತಿಭಟನೆ ವೇಳೆ 750 ರೈತರು ಪ್ರಾಣ ಕಳೆದುಕೊಂಡಿದ್ದರು' ಎಂದು ಅವರು ಹಿಂದಿಯಲ್ಲಿ ಮಾಡಿರುವ ಪೋಸ್ಟ್‌ನಲ್ಲಿ ಅವರು ತಿಳಿಸಿದ್ದಾರೆ.

ಪ್ರತಿಭಟನೆ ನಡೆಸುತ್ತಿರುವ ರೈತರಿಗೆ ಕಾಂಗ್ರೆಸ್ ಪಕ್ಷ ಸಂಪೂರ್ಣ ಬೆಂಬಲ ನೀಡುತ್ತದೆ ಎಂದಿರುವ ಅವರು, 'ನಾವು ಹೆದರುವುದಿಲ್ಲ; ನಾವು ಬಗ್ಗುವುದಿಲ್ಲ' ಎಂದು ಖರ್ಗೆ ಅವರು ತಿಳಿಸಿದ್ದಾರೆ.



ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವು ಲಾಭಕೋರರ ಜೊತೆ ಸೇರಿ ಪಿತೂರಿ ನಡೆಸಿದೆ ಮತ್ತು ರೈತರಿಗೆ ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ನೀಡಲು ಅದಕ್ಕೆ ಮನಸ್ಸಿಲ್ಲ. ರೈತರ ಹೆಸರಿನಲ್ಲಿ ಮತ ಬಯಸುವ ಮತ್ತು ಎಂ.ಎಸ್.ಸ್ವಾಮಿನಾಥನ್ ಮತ್ತು ಚೌಧರಿ ಚರಣ್ ಸಿಂಗ್ ಅವರಿಗೆ 'ಭಾರತ ರತ್ನ' ನೀಡಿದ ಸರ್ಕಾರಕ್ಕೆ ರೈತರಿಗೆ ಎಂಎಸ್‌ಪಿ ನೀಡಲು ಏಕೆ ಸಾಧ್ಯವಿಲ್ಲ?. ರೈತರ ಆದಾಯವನ್ನು ದ್ವಿಗುಣ ಮಾಡುತ್ತೇವೆ, ಎಂಎಸ್‌ಪಿ ಜಾರಿ ಮಾಡುತ್ತೇವೆ ಎಂದವರೇ ಇಂದು ರೈತರ ಧ್ವನಿಯನ್ನು ಹತ್ತಿಕ್ಕುತ್ತಿದ್ದಾರೆ.

ಅಖಿಲೇಶ್ ಯಾದವ್, ಸಮಾಜವಾದಿ ಪಕ್ಷದ ಮುಖ್ಯಸ್ಥ



ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು ರೈತರಿಗೆ ವಿಶ್ವಾಸದ್ರೋಹ ಬಗೆಯುತ್ತಿದೆ ಮತ್ತು ಅವರ ಹಕ್ಕುಗಳನ್ನು ನಿರಾಕರಿಸುತ್ತಿದೆ. ಕೇಂದ್ರ ಸರ್ಕಾರವು ಕೃಷಿ ವಿಜ್ಞಾನಿ ಎಂ.ಎಸ್.ಸ್ವಾಮಿನಾಥನ್ ಅವರಿಗೆ ಬಹಳ ತಡವಾಗಿ ಭಾರತ ರತ್ನ ಘೋಷಿಸಿತು. ಅವರು ರೈತರ ಹಕ್ಕುಗಳ ಪರವಾಗಿದ್ದರು. ಅನ್ನದಾತರ ಅನುಕೂಲಕ್ಕಾಗಿ ಅವರ ನೇತೃತ್ವದ ಆಯೋಗವು ನೀಡಿದ್ದ ಶಿಫಾರಸುಗಳನ್ನು ಇನ್ನೂ ಜಾರಿ ಮಾಡಿಲ್ಲ. ರೈತರ ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆ ಖಾತರಿಗೆ ಕಾನೂನು ಜಾರಿ ಮಾಡಲು ಸಾಧ್ಯವಿಲ್ಲ ಎಂದು ಕೇಂದ್ರವು ಏಕೆ ಹೇಳುತ್ತಿದೆ?


ಬೃಂದಾ ಕಾರಟ್, ಸಿಪಿಎಂ ಹಿರಿಯ ನಾಯಕಿ



ರೈತರ ಅಭಿವೃದ್ಧಿಗಾಗಿ ಶ್ರಮಿಸಿದ್ದ ಹಿರಿಯ ನಾಯಕ ಚೌಧರಿ ಚರಣ್ ಸಿಂಗ್, ಕೃಷಿ ವಿಜ್ಞಾನಿ ಎಂ.ಎಸ್.ಸ್ವಾಮಿನಾಥನ್ ಅವರಿಗೆ ಭಾರತ ರತ್ನ ಘೋಷಿಸಿ, ಇನ್ನೊಂದೆಡೆ ರೈತಾಪಿ ಜನರಿಗೆ ಅನ್ಯಾಯ ಮಾಡಲಾಗುತ್ತಿದೆ. ರೈತ ಮುಖಂಡರು ಹಾಗೂ ಕೇಂದ್ರದ ನಡುವಿನ ಮಾತುಕತೆ ಬಿದ್ದು ಹೋದ ಬೆನ್ನಲ್ಲೇ, ದೆಹಲಿಯಲ್ಲಿ ಭದ್ರತೆಯನ್ನು ಹೆಚ್ಚಿಸಲಾಗಿದೆ. ಗಡಿಯಲ್ಲಿ ಕಾಂಕ್ರೀಟ್ ಇಟ್ಟಿಗೆಗಳು, ಮೊಳೆಗಳು ಹಾಗೂ ಕಂಟೇನರ್‌ಗಳನ್ನು ಅಡ್ಡ ಹಾಕುವ ಮೂಲಕ ರೈತರು ದೆಹಲಿ ಪ್ರವೇಶಿಸದಂತೆ ತಡೆಯಲಾಗಿದೆ

ಜೈರಾಮ್ ರಮೇಶ್, ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ

ಎಂಎಸ್‌ಪಿಗೆ ಕಾನೂನು ಖಾತ್ರಿ: ಕಾಂಗ್ರೆಸ್ ಭರವಸೆ



ರಾಹುಲ್ ಗಾಂಧಿ

ನವದೆಹಲಿ(ಪಿಟಿಐ): 'ಇಂಡಿಯಾ' ಮೈತ್ರಿಕೂಟ ಅಧಿಕಾರಕ್ಕೆ ಬಂದಲ್ಲಿ, ಕನಿಷ್ಠ ಬೆಂಬಲ ಬೆಲೆಗೆ (ಎಂಎಸ್‌ಪಿ) ಕಾನೂನು ಖಾತ್ರಿ ನೀಡಬೇಕು ಎಂಬ ರೈತರ ಪ್ರಮುಖ ಬೇಡಿಕೆಯನ್ನು ಈಡೇರಿಸುವುದಾಗಿ ಕಾಂಗ್ರೆಸ್ ಮಂಗಳವಾರ ಹೇಳಿದೆ.

'ಪಕ್ಷ ನೀಡಿರುವ ಈ ಭರವಸೆಯು ಕ್ರಾಂತಿಕಾರಿ' ಎಂದು ಬಣ್ಣಿಸಿರುವ ಕಾಂಗ್ರೆಸ್, 'ಪಕ್ಷದ ಪರಿಕಲ್ಪನೆಯು ದೇಶದ ಜನರ ಬೆಂಬಲದಿಂದಾಗಿ ಶೀಘ್ರವೇ ಕಾರ್ಯರೂಪಕ್ಕೆ ಬರಲಿದೆ' ಎಂದೂ ವಿಶ್ವಾಸ ವ್ಯಕ್ತಪಡಿಸಿದೆ.

ಈ ಕುರಿತು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿರುವ ಪಕ್ಷದ ನಾಯಕ ರಾಹುಲ್ ಗಾಂಧಿ, 'ಪಕ್ಷ ಕೈಗೊಂಡಿರುವ ಈ ನಿರ್ಧಾರದಿಂದ 15 ಕೋಟಿ ರೈತ ಕುಟುಂಬಗಳ ಅಭಿವೃದ್ಧಿಯಾಗಿ, ಅವರ ಜೀವನವೇ ಬದಲಾಗುವುದು. ರೈತರಿಗೆ ನ್ಯಾಯ ದೊರಕಿಸಿ ಕೊಡುವ ನಿಟ್ಟಿನಲ್ಲಿ ಕಾಂಗ್ರೆಸ್ ನೀಡುವ ಮೊದಲ ಗ್ಯಾರಂಟಿ ಇದು' ಎಂದು ಹೇಳಿದ್ದಾರೆ.

'ಪ್ರತಿಭಟನೆ ನಡೆಸುತ್ತಿರುವ ರೈತರೊಂದಿಗೆ ನೇರವಾಗಿ ಮಾತುಕತೆ ನಡೆಸಿ, ಅವರಿಗೆ ನ್ಯಾಯ ಒದಗಿಸಿ ಕೊಡಬೇಕು' ಎಂದು ಅವರು ಪ್ರಧಾನಿ ನರೇಂದ್ರ ಮೋದಿ ಅವರನ್ನು ಒತ್ತಾಯಿಸಿದ್ದಾರೆ.

ಪಕ್ಷದ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರೂ ಈ ಕುರಿತು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದು, 'ತಾವು ಬೆಳೆದ ಬೆಳೆಗಳಿಗೆ ನ್ಯಾಯಯುತ ಬೆಲೆ ಪಡೆಯುವುದು ರೈತರ ಹಕ್ಕು' ಎಂದಿದ್ದಾರೆ.

'ರೈತರು ಗೌರವಯುತವಾದ ಆದಾಯ ಬಯಸುತ್ತಾರೆಯೇ ಹೊರತು, ಅಶ್ರುವಾಯು ಪ್ರಯೋಗ, ಗುಂಡೇಟು, ಹಿಂಸಾಚಾರವನ್ನಲ್ಲ. ನ್ಯಾಯಯುತ ಬೇಡಿಕೆಗಳಿಗೆ ಹೋರಾಡುತ್ತಿರುವ ರೈತರೊಂದಿಗೆ ಕಾಂಗ್ರೆಸ್ ನಿಲ್ಲುತ್ತದೆ' ಎಂದೂ ಹೇಳಿದ್ದಾರೆ.

ಛತ್ತೀಸಗಢದ ಅಂಬಿಕಾಪುರದಲ್ಲಿ ಭಾರತ ಜೋಡೊ ನ್ಯಾಯ ಯಾತ್ರೆ ಅಂಗವಾಗಿ ನಡೆದ ಸಭೆಯಲ್ಲಿ ಮಾತನಾಡಿದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, 'ಮುಂಬರುವ ಲೋಕಸಭಾ ಚುನಾವಣೆಗಳ ನಂತರ ಕೇಂದ್ರದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದರೆ, ಎಂಎಸ್‌ಪಿಗೆ ಕಾನೂನು ಖಾತ್ರಿ ನೀಡಲಿದೆ' ಎಂದು ಹೇಳಿದ್ದಾರೆ.

ಪಕ್ಷದ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲಾ ಮಾತನಾಡಿ, 'ಇದು ಆರಂಭ ಮಾತ್ರ. ಸದ್ಯ, ಹರಿಯಾಣ ಮತ್ತು ಪಂಜಾಬ್ ರೈತರು ಮಾತ್ರ ಪ್ರತಿಭಟನೆಯಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ಶೀಘ್ರವೇ, ದೇಶದ ಎಲ್ಲ ಭಾಗಗಳ ರೈತರು ಈ ಪ್ರತಿಭಟನೆಯಲ್ಲಿ ಪಾಲ್ಗೊಳ್ಳುವರು' ಎಂದು ಎಚ್ಚರಿಕೆ ನೀಡಿದರು.

ಫೆ.21ಕ್ಕೆ ಟ್ರ್ಯಾಕ್ಟರ್ ರ‍್ಯಾಲಿಗೆ ಕರೆ

ಪ್ರಜಾವಾಣಿ ವಾರ್ತೆ

ಜೈಪುರ: 'ದೆಹಲಿ ಚಲೋ' ಪ್ರತಿಭಟನೆಗೆ ರಾಜಸ್ಥಾನದ ರೈತರು ಬೆಂಬಲ ನೀಡಿದ್ದಾರೆ. ಜೊತೆಗೆ ಫೆ.21ರಂದು ರಾಷ್ಟ್ರ ರಾಜಧಾನಿವರೆಗೆ 'ಟ್ರ್ಯಾಕ್ಟರ್ ರ‍್ಯಾಲಿ' ನಡೆಸಲು ಯೋಜನೆ ರೂಪಿಸಿದ್ದಾರೆ.

ಫೆ.21ರಂದು ರೈತರೆಲ್ಲಾ ಜೈಪುರದಲ್ಲಿ ಒಂದುಗೂಡಿ ದೆಹಲಿವರೆಗೆ ರ‍್ಯಾಲಿ ನಡೆಸಲಿದ್ದಾರೆ. ಕನಿಷ್ಠ ಬೆಂಬಲ ಬೆಲೆಗೆ (ಎಂಎಸ್‌ಪಿ) ಕಾನೂನು ಜಾರಿ ಮಾಡಬೇಕೆಂದು ಆಗ್ರಹಿಸುವ ಪ್ರತಿಭಟನೆಯಲ್ಲಿ ರಾಜ್ಯದ ಮುಖ್ಯಮಂತ್ರಿಗಳೂ ಭಾಗಿಯಾಗಬೇಕು ಎಂದು ರೈತರು ಮನವಿ ಮಾಡಿದ್ದಾರೆ.

'ದೆಹಲಿ ಚಲೋ'ದಲ್ಲಿ ಭಾಗಿಯಾಗಲು ಹನುಮಗಢ ಮತ್ತು ಶ್ರೀಗಂಗಾನಗರ ಜಿಲ್ಲೆಯ ರೈತರು ದೆಹಲಿಗೆ ಆಗಮಿಸುತ್ತಿದ್ದಾರೆ' ಎಂದು ಕಿಸಾನ್ ಮಹಾಪಂಚಾಯತ್ ರಾಷ್ಟ್ರೀಯ ಅಧ್ಯಕ್ಷ ರಾಂಪಾಲ್ ಜಾಟ್ 'ಪ್ರಜಾವಾಣಿ'ಗೆ ತಿಳಿಸಿದರು.

'ರೈತರು ಅತ್ಯಂತ ಅಪಾಯಕಾರಿ ಶತ್ರುಗಳು ಎಂಬಂತೆ ಕೇಂದ್ರ ಸರ್ಕಾರವು ರೈತರ ವಿರುದ್ಧ ಯುದ್ಧ ಸಾರಿದೆ. ನಾವು ಬೆಳೆದ ಬೆಳೆಗೆ ಎಂಎಸ್‌ಪಿ ಕೇಳುತ್ತಿದ್ದೇವೆ. ಈ ಕುರಿತಂತೆ ರಚನೆಯಾದ ಸಮಿತಿಯು ಸರಿಯಾಗಿ ಕೆಲಸ ಮಾಡಿಲ್ಲ. ಕನಿಷ್ಠ ಬೆಂಬಲ ಬೆಲೆ ನಿಗದಿ ಮಾಡಲು ಇಷ್ಟೊಂದು ವಿಳಂಬ ಏಕೆ? ಬೆವರು ಹರಿಸಿ ಬೆಳೆದ ಬೆಳೆಗಳನ್ನು ಕಡಿಮೆ ದರಕ್ಕೆ ಮಾರಾಟ ಮಾಡುವ ಮೂಲಕ ರೈತರು ಶೋಷಣೆಗೆ ಒಳಗಾಗುತ್ತಿದ್ದಾರೆ' ಎಂದರು.

ಕೆಂಪುಕೋಟೆಗೆ ಪ್ರವೇಶ ನಿಷೇಧ

ನವದೆಹಲಿ (ಪಿಟಿಐ): ರೈತರು ದೆಹಲಿಯತ್ತ ಪ್ರತಿಭಟನಾ ಮೆರವಣಿಗೆ ಹಮ್ಮಿಕೊಂಡಿರುವ ಕಾರಣ ಐತಿಹಾಸಿಕ ಕೆಂಪುಕೋಟೆಗೆ ಪ್ರವಾಸಿಗರು ಬೇಟಿ ನೀಡದಂತೆ ತಾತ್ಕಾಲಿಕವಾಗಿ ಮುಚ್ಚಲಾಗಿದೆ ಎಂದು ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯ (ಎಎಸ್‌ಐ) ಹಿರಿಯ ಅಧಿಕಾರಿಯೊಬ್ಬರು ಮಂಗಳವಾರ ತಿಳಿಸಿದರು.

ಯುನೆಸ್ಕೊ ವಿಶ್ವ ಪಾರಂಪರಿಕ ಸ್ಥಳಗಳ ಪಟ್ಟಿಯಲ್ಲಿ ಸ್ಥಾನ ಪಡೆದಿರುವ ಸ್ಮಾರಕವನ್ನು ಭದ್ರತೆಯ ಕಾರಣದಿಂದ ಸೋಮವಾರ ರಾತ್ರಿಯೇ ಏಕಾಏಕಿ ಮುಚ್ಚಲಾಗಿದೆ ಎಂದು ತಿಳಿಸಿದರು.

ಕೇಂದ್ರ, ಪಂಜಾಬ್, ಹರಿಯಾಣ ಸರ್ಕಾರಗಳಿಗೆ ನೋಟಿಸ್

ಚಂಡೀಗಢ (ಪಿಟಿಐ): 'ದೆಹಲಿ ಚಲೋ' ಪ್ರತಿಭಟನಾ ಮೆರವಣಿಗೆ ವಿಷಯವಾಗಿ ಸಲ್ಲಿಕೆಯಾದ ಎರಡು ಪ್ರತ್ಯೇಕ ಅರ್ಜಿಗಳಿಗೆ ಸಂಬಂಧಿಸಿದಂತೆ ಹರಿಯಾಣ, ಪಂಜಾಬ್ ರಾಜ್ಯ ಸರ್ಕಾರಗಳು ಮತ್ತು ಕೇಂದ್ರ ಸರ್ಕಾರಕ್ಕೆ ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್ ನೋಟಿಸ್ ನೀಡಿದೆ.

ಪ್ರತಿಭಟನೆಯನ್ನು ತಡೆಯಲು ಸರ್ಕಾರಗಳು ಕೈಗೊಂಡಿರುವ ಕಠಿಣ ಕ್ರಮಗಳನ್ನು ನಿಲ್ಲಿಸಲು ನಿರ್ದೇಶನ ನೀಡಬೇಕು ಎಂದು ಅರ್ಜಿಯೊಂದರಲ್ಲಿ ಮನವಿ ಮಾಡಲಾಗಿತ್ತು. ಪ್ರತಿಭಟನಕಾರರು ರಾಷ್ಟ್ರೀಯ ಹೆದ್ದಾರಿಗಳನ್ನು ತಡೆಯದಂತೆ ಮತ್ತು ಹೆದ್ದಾರಿ ತಡೆಯುವವರಿಗೆ ಶಿಕ್ಷೆ ನೀಡುವಂತೆ ನಿರ್ದೇಶನ ನೀಡಬೇಕು ಎಂದು ಇನ್ನೊಂದು ಅರ್ಜಿಯಲ್ಲಿ ಕೋರಲಾಗಿತ್ತು.

ಹಂಗಾಮಿ ಮುಖ್ಯ ನ್ಯಾಯಾಧೀಶ ಜಿ.ಎಸ್.ಸಂಧವಾಲಿಯಾ ಮತ್ತು ನ್ಯಾಯಮೂರ್ತಿ ಲಪಿತಾ ಬನರ್ಜಿ ಅವರನ್ನು ಒಳಗೊಂಡ ನ್ಯಾಯಪೀಠ ಅರ್ಜಿಗಳ ವಿಚಾರಣೆ ನಡೆಸಿತು. ನಂತರ ಫೆ.15ಕ್ಕೆ ವಿಚಾರಣೆಯನ್ನು ಮುಂದೂಡಿತು.

ದೆಹಲಿಯತ್ತ ನುಗ್ಗಿದ ಪ್ರತಿಭಟನನಿರತ ರೈತಪಡೆ

ಒಂದನೇ ಪುಟದಿಂದ....

ಮನವಿ: ತಮ್ಮ ಹೋರಾಟಕ್ಕೆ ಬೆಂಬಲ ಸೂಚಿಸಿ ಕಾರ್ಮಿಕ ಸಂಘಟನೆಗಳು ಫೆ.16ರಂದು ಕರೆ ನೀಡಿರುವ ಗ್ರಾಮೀಣ ಭಾರತ ಬಂದ್‌ನಲ್ಲಿ ಪಾಲ್ಗೊಳ್ಳುವಂತೆ ಎಲ್ಲ ಸಮಾನ ಮನಸ್ಕ ರೈತ ಸಂಘಟನೆಗಳಿಗೆ ಸಂಯುಕ್ತ ಕಿಸಾನ್ ಮೋರ್ಚಾ (ಎಸ್‌ಕೆಎಂ) ಮನವಿ ಮಾಡಿದೆ.

ಪ್ರಧಾನಿಗೆ ಪ್ರತ್ಯೇಕ ಪತ್ರ: ಕನಿಷ್ಠ ಬೆಂಬಲ ಬೆಲೆಗೆ ಕಾನೂನು ಖಾತರಿ ಒದಗಿಸುವುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಪ್ರತಿಭಟಿಸುತ್ತಿರುವ ರೈತರ ಮೇಲೆ ಕ್ರಮ ಕೈಗೊಂಡಿರುವುದನ್ನು ಖಂಡಿಸಿರುವ ಸಂಯುಕ್ತ ಕಿಸಾನ್ ಮೋರ್ಚಾ, ಈ ಕುರಿತು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆದಿದೆ.

'ರೈತ ಸಂಘಟನೆಗಳ ನಡುವೆ ಒಡಕಿದೆ ಎಂಬಂತೆ ಬಿಂಬಿಸಲು ಸರ್ಕಾರ ಯತ್ನಿಸುತ್ತಿದೆ' ಎಂದೂ ಟೀಕಿಸಿದೆ.

'ಶಾಂತಿಯುತವಾಗಿ ಪ್ರತಿಭಟನೆ ನಡೆಸುತ್ತಿದ್ದ ರೈತರ ಮೇಲೆ ಹರಿಯಾಣ ಮತ್ತು ಉತ್ತರ ಪ್ರದೇಶದಲ್ಲಿರುವ ಬಿಜೆಪಿ ನೇತೃತ್ವದ ಸರ್ಕಾರಗಳು ದಮನಕಾರಿ ಕ್ರಮಗಳನ್ನು ತೆಗೆದುಕೊಂಡಿವೆ. ಲಾಠಿ ಪ್ರಹಾರ ನಡೆಸುವುದು, ರಬ್ಬರ್ ಗುಂಡುಗಳನ್ನು ಹೊಡೆಯುವುದು ಹಾಗೂ ಅಶ್ರುವಾಯು ಪ್ರಯೋಗಿಸುವುದರ ಮೂಲಕ ದಬ್ಬಾಳಿಕೆ ನಡೆಸಿವೆ. ಈ ಮೂಲಕ, ಸಾಮಾನ್ಯ ರೈತರಿಗೆ ಭಯದ ವಾತಾವರಣ ನಿರ್ಮಿಸುತ್ತಿವೆ' ಎಂದು ಎಸ್‌ಕೆಎಂ ಟೀಕಿಸಿದೆ.

ಅವಸರದಲ್ಲಿ ಕಾನೂನು ರಚನೆ ಅಸಾಧ್ಯ: ಮುಂಡಾ

ಒಂದನೇ ಪುಟದಿಂದ...

ರಾಜ್ಯ ಸರ್ಕಾರಗಳು ಸೇರಿದಂತೆ ಸಂಬಂಧಿಸಿದ ಭಾಗೀದಾರರ ಅಭಿಪ್ರಾಯಗಳನ್ನು ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ ಎಂದು ಸಚಿವ ಮುಂಡಾ ವಿವರಿಸಿದ್ದಾರೆ.

'ರೈತರು ಸೇರಿದಂತೆ ಎಲ್ಲ ಭಾಗೀದಾರರ ಅಭಿವೃದ್ಧಿಗಾಗಿ ನರೇಂದ್ರ ಮೋದಿ ನೇತೃತ್ವದ ಸರ್ಕಾರವು ದೃಢವಾದ ಕೆಲಸ ಮಾಡುತ್ತದೆ. ಆದರೆ, ಮುಂದಿನ ದಿನಗಳಲ್ಲಿ ವ್ಯರ್ಥ ಪ್ರಯತ್ನವೆನಿಸುವಂತಹ ಯಾವುದೇ ಘೋಷಣೆಗಳನ್ನು ಅವಸರದಲ್ಲಿ ಮಾಡುವುದಿಲ್ಲ' ಎಂದು ಸ್ಪಷ್ಟಪಡಿಸಿದ್ದಾರೆ.

'ಕೇಂದ್ರ ಸರ್ಕಾರ ಕೆಲ ಘೋಷಣೆಗಳನ್ನು ಮಾಡಬೇಕು ಎಂಬುದು ರೈತರ ಬಯಕೆ. ಆದರೆ, ಸರ್ಕಾರ ಇರುವುದು ಕೆಲಸ ಮಾಡುವುದಕ್ಕಾಗಿಯೇ ಹೊರತು, ಘೋಷಣೆಗಳನ್ನು ಮಾಡುವುದಕ್ಕಲ್ಲ. ಪರಿಪಕ್ವ ಚರ್ಚೆ ನಂತರ ಘೋಷಣೆ ಮಾಡಲಾಗುತ್ತದೆ. ಇಂತಹ ಪರಿಪಕ್ವ ಚರ್ಚೆ ನಡೆಸುವಾಗ ಪ್ರತಿಯೊಬ್ಬ ಭಾಗೀದಾರನ ಹಿತಾಸಕ್ತಿಯನ್ನು ಗಮನದಲ್ಲಿ ಇಟ್ಟುಕೊಳ್ಳಬೇಕಾಗುತ್ತದೆ' ಎಂದೂ ಹೇಳಿದ್ದಾರೆ.

'ಪಿ.ಎಂ ಸೂರ್ಯ ಘರ್' ಯೋಜನೆಗೆ ಚಾಲನೆ

ನವದೆಹಲಿ (ಪಿಟಿಐ): ಸೌರವಿದ್ಯುತ್ ಬಳಕೆಗೆ ಉತ್ತೇಜನ ನೀಡುವ ಉದ್ದೇಶದಿಂದ ಕೇಂದ್ರ ಸರ್ಕಾರವು 'ಪಿಎಂ ಸೂರ್ಯ ಘರ್: ಮುಫ್ತ್ ಬಿಜ್ಲಿ ಯೋಜನಾ' ಆರಂಭಿಸುತ್ತಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಮಂಗಳವಾರ ತಿಳಿಸಿದ್ದಾರೆ. ಒಂದು ಕೋಟಿ ಮನೆಗಳಿಗೆ ಪ್ರತಿ ತಿಂಗಳು ತಲಾ 300 ಯೂನಿಟ್‌ವರೆಗೆ ಉಚಿತವಾಗಿ ವಿದ್ಯುತ್ ಪೂರೈಸುವ ಗುರಿಯನ್ನು ಈ ಯೋಜನೆಯು ಹೊಂದಿದೆ.

ಈ ಯೋಜನೆಗಾಗಿ ಒಟ್ಟು ₹75 ಸಾವಿರ ಕೋಟಿಗಿಂತ ಹೆಚ್ಚಿನ ಮೊತ್ತವನ್ನು ವಿನಿಯೋಗಿಸಲಾಗುತ್ತದೆ ಎಂದು ಮೋದಿ ತಿಳಿಸಿದ್ದಾರೆ. 'ಸುಸ್ಥಿರ ಅಭಿವೃದ್ಧಿ ಹಾಗೂ ಜನರ ಹಿತದ ದೃಷ್ಟಿಯಿಂದ ನಾವು ಈ ಯೋಜನೆಯನ್ನು ಆರಂಭಿಸುತ್ತಿದ್ದೇವೆ. ಈ ಯೋಜನೆಯು 1 ಕೋಟಿ ಮನೆಗಳಿಗೆ ತಿಂಗಳಿಗೆ 300 ಯೂನಿಟ್‌ಗಳವರೆಗೆ ಉಚಿತ ವಿದ್ಯುತ್ ಒದಗಿಸುವ ಉದ್ದೇಶ ಹೊಂದಿದೆ' ಎಂದು ಪ್ರಧಾನಿಯವರು ತಮ್ಮ 'ಎಕ್ಸ್' ಖಾತೆಯಲ್ಲಿ ಬರೆದಿದ್ದಾರೆ.

ಗಣನೀಯ ಪ್ರಮಾಣದ ಸಬ್ಸಿಡಿಯನ್ನು ಇದು ಒಳಗೊಂಡಿದೆ. ಸಬ್ಸಿಡಿ ಮೊತ್ತವನ್ನು ಯೋಜನೆಗೆ ಸೇರುವವರ ಖಾತೆಗೆ ನೇರವಾಗಿ ವರ್ಗಾಯಿಸಲಾಗುತ್ತದೆ. ಬ್ಯಾಂಕ್ ಸಾಲವನ್ನು ರಿಯಾಯಿತಿ ದರದಲ್ಲಿ ನೀಡಲಾಗುತ್ತದೆ. ಈ ಮೂಲಕ ಜನರ ಮೇಲೆ ವೆಚ್ಚದ ಹೊರೆ ಬೀಳದಂತೆ ಕೇಂದ್ರ ಸರ್ಕಾರ ನೋಡಿಕೊಳ್ಳುತ್ತದೆ ಎಂದು ಪ್ರಧಾನಿ ಭರವಸೆ ನೀಡಿದ್ದಾರೆ.

ಈ ಯೋಜನೆಯನ್ನು ತಳಮಟ್ಟದಲ್ಲಿ ಜನಪ್ರಿಯಗೊಳಿಸಲು ನಗರ ಸ್ಥಳೀಯ ಸಂಸ್ಥೆಗಳಿಗೆ ಹಾಗೂ ಪಂಚಾಯಿತಿಗಳಿಗೆ ಪ್ರೋತ್ಸಾಹ ನೀಡಲಾಗುತ್ತದೆ. ಈ ಯೋಜನೆಯು ಜನರ ಆದಾಯ ಹೆಚ್ಚಿಸುತ್ತದೆ, ವಿದ್ಯುತ್ ಬಿಲ್ ಮೊತ್ತವನ್ನು ತಗ್ಗಿಸುತ್ತದೆ ಹಾಗೂ ಉದ್ಯೋಗ ಸೃಷ್ಟಿಸುತ್ತದೆ ಎಂದಿದ್ದಾರೆ.

pmsuryaghar.gov.in ವೆಬ್‌ಸೈಟ್‌ಗೆ ಭೇಟಿ ನೀಡಿ ಯೋಜನೆಯ ಅಡಿ ಅರ್ಜಿ ಸಲ್ಲಿಸಬಹುದು.

ಸೂರಿಲ್ಲದ 200ಕ್ಕೂ ಹೆಚ್ಚು ಕುಟುಂಬಗಳಿಗೆ ವಸತಿ ಭಾಗ್ಯ ಕಲ್ಪಿಸಿದ ಟೀಚರ್

ಶಿಕ್ಷಕಿಯ ಮನೆ ಕಟ್ಟುವ 'ಕಾಯಕ'

ಪ್ರಜಾವಾಣಿ ವಾರ್ತೆ



ಲಿಸಿ ಚಕ್ಕಾಲೈಕಲ್

ತಿರುವನಂತಪುರ: ನಿವೃತ್ತಿಯಾಗುವ ಬಹುತೇಕ ಶಿಕ್ಷಕರಿಗೆ ತಾವು ನೂರಾರು ವಿದ್ಯಾರ್ಥಿಗಳ ಜ್ಞಾನವೃದ್ಧಿಗೆ ನೆರವಾದೆವು ಎಂಬ ತೃಪ್ತಿ ಇರುತ್ತದೆ. ಆದರೆ ಇಲ್ಲಿ ಶಿಕ್ಷಕಿಯಾಗಿ ವೃತ್ತಿ ಆರಂಭಿಸಿದ ಕ್ರೈಸ್ತ ಸನ್ಯಾಸಿನಿಯೊಬ್ಬರು 200ಕ್ಕೂ ಹೆಚ್ಚು ವಸತಿ ರಹಿತ ಕುಟುಂಬಗಳಿಗೆ ಮನೆ ಒದಗಿಸಿದ ಸಂತೃಪ್ತಿಯೊಂದಿಗೆ ತಮ್ಮ ಅಧಿಕೃತ ವೃತ್ತಿ ಜೀವನಕ್ಕೆ ವಿದಾಯ ಹೇಳುತ್ತಿದ್ದಾರೆ.

ಕೊಚ್ಚಿಯ ತೋಪ್ಪುಂಪಾಡಿಯಲ್ಲಿರುವ 'ಅವರ್ ಲೇಡಿಸ್ ಕಾನ್ವೆಂಟ್' ಬಾಲಕಿಯರ ಶಾಲೆಯ ಪ್ರಾಂಶುಪಾಲರಾದ ಲಿಸಿ ಚಕ್ಕಾಲೈಕಲ್ ನಿವೃತ್ತಿಯಾಗುತ್ತಿರುವ ಶಿಕ್ಷಕಿ.

ಅವರು ಆರಂಭಿಸಿದ 'ಹೋಮ್ ಚಾಲೆಂಜ್ ಮಿಷನ್'ನಿಂದಾಗಿ 200ಕ್ಕೂ ಹೆಚ್ಚು ವಸತಿಹೀನ ಕುಟುಂಬಗಳಿಗೆ ಮನೆ ದೊರೆತಂತಾಗಿದೆ. ಇದೊಂದು 'ಕ್ರೌಡ್ ಫಂಡಿಂಗ್' ಕಾರ್ಯಕ್ರಮ. 'ನಮ್ಮ ಈ ಕಾರ್ಯಕ್ರಮದಿಂದ ಪ್ರೇರಿತವಾಗಿ ದೇಶ, ವಿದೇಶಗಳಲ್ಲಿನ ಕೆಲ ವೇದಿಕೆಗಳು ಈ ರೀತಿಯ ಮಾದರಿಯನ್ನು ಅಳವಡಿಸಿಕೊಂಡಿವೆ' ಎಂದು ಲಿಸಿ ಹೆಮ್ಮೆಯಿಂದ ಪ್ರತಿಕ್ರಿಯಿಸಿದರು.

ಅತ್ಯಂತ ದಯನೀಯ ಸ್ಥಿತಿಯಲ್ಲಿ ವಾಸಿಸುತ್ತಿದ್ದ ಶಾಲೆಯ ವಿದ್ಯಾರ್ಥಿನಿಯೊಬ್ಬಳಿಗೆ ಮನೆ ನಿರ್ಮಿಸಿಕೊಡುವ ಉದ್ದೇಶದಿಂದ 2011ರಲ್ಲಿ ಈ ಕಾರ್ಯಕ್ರಮ ಆರಂಭಿಸಿದೆ. ವಿವಿಧೆಡೆಯಿಂದ ಇದಕ್ಕೆ ಸಕಾರಾತ್ಮಕ ಸ್ಪಂದನೆ ದೊರೆಯಿತು. ಇದು, ಈ ಯೋಜನೆಯನ್ನು ವಿಸ್ತರಿಸುವಂತೆ ಮತ್ತು ಕೆಟ್ಟ ಪರಿಸ್ಥಿತಿಯಲ್ಲಿ ವಾಸಿಸುತ್ತಿರುವ ನಿರಾಶ್ರಿತ ಕುಟುಂಬಗಳಿಗೆ ನೆರವಿನ ಹಸ್ತ ಚಾಚುವಂತೆ ನಮ್ಮನ್ನು ಪ್ರೇರೇಪಿಸಿತು ಎಂದು ಅವರು ವಿವರಿಸಿದರು.

ಹಣದ ಜತೆಗೆ, ನಿವೇಶನ, ನಿರ್ಮಾಣ ಸಾಮಗ್ರಿಗಳು ಮತ್ತು ಮಾನವ ಕೆಲಸಗಳ ರೂಪದಲ್ಲಿಯೂ ಕೊಡುಗೆಗಳು ಹರಿದು ಬಂದವು. ಇದರಿಂದ ಸುಮಾರು 600 ಚದರ ಅಡಿ ವಿಸ್ತೀರ್ಣದ ಮನೆಗಳನ್ನು ನಿರ್ಮಿಸಿಕೊಡಲು ಸಾಧ್ಯವಾಯಿತು ಎಂದು ಅವರು ಸ್ಮರಿಸಿದರು.

'ಇಲ್ಲಿಯವರೆಗೆ 200 ಮನೆಗಳನ್ನು ನಿರ್ಮಿಸಲಾಗಿದ್ದು, ವಿವಿಧ ಬಗೆಯ ಅಂಗವಿಕಲತೆ ಹೊಂದಿರುವವರಿಗಾಗಿ 20ಕ್ಕೂ ಹೆಚ್ಚು ಮನೆಗಳ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದೆ' ಎಂದು ಅವರು 'ಪ್ರಜಾವಾಣಿ'ಗೆ ಮಾಹಿತಿ ನೀಡಿದರು.

'ಸುಮಾರು 200 ಕುಟುಂಬಗಳಿಗೆ ಆಶ್ರಯ ಒದಗಿಸಲು ನಾನು ಕಾರಣ ನಾದೆನಲ್ಲ ಎಂಬುದರ ಬಗ್ಗೆ ನನಗೆ ಖುಷಿಯಿದೆ. ಅಲ್ಲದೆ ದೇಶದ ವಿವಿಧೆಡೆ ಮತ್ತು ಇಂಡೊನೇಷ್ಯಾದಂತಹ ದೇಶಗಳಲ್ಲಿಯೂ ಈ ಮಾದರಿ ಅಳವಡಿಕೆ ಆಗುತ್ತಿರುವುದು ಹೆಮ್ಮೆ ಅನಿಸುತ್ತದೆ. ಇದು ಇನ್ನಷ್ಟು ಜನರಿಗೆ ಸ್ಫೂರ್ತಿ ನೀಡುವಂತಾಗಲಿ' ಎಂದು ಅವರು ಹೇಳಿದರು.

'ನಿವೃತ್ತಿಯ ನಂತರವೂ ಸಮಾಜ ಸೇವೆ ಮುಂದುವರಿಸಲು ಆದ್ಯತೆ ನೀಡುವುದಾಗಿ' ಅವರು ಪ್ರತಿಕ್ರಿಯಿಸಿದರು.

ಸೀಟುಹಂಚಿಕೆ: 'ಇಂಡಿಯಾ' ಮೈತ್ರಿಕೂಟದಲ್ಲಿ ಮುಂದುವರಿದ ಗೊಂದಲ

ದೆಹಲಿ: ಆರು ಸ್ಥಾನಗಳಲ್ಲಿ ಎಎಪಿ ಸ್ಪರ್ಧೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಅರವಿಂದ ಕೇಜ್ರಿವಾಲ್ ನೇತೃತ್ವದ ಎಎಪಿಯು ಮುಂಬರುವ ಲೋಕಸಭಾ ಚುನಾವಣೆಯಲ್ಲಿ ದೆಹಲಿಯ ಏಳು ಕ್ಷೇತ್ರಗಳ ಪೈಕಿ ಆರರಲ್ಲಿ ತನ್ನ ಅಭ್ಯರ್ಥಿಗಳನ್ನು ಕಣಕ್ಕಿಳಿಸಲು ನಿರ್ಧರಿಸಿದೆ. ಕಾಂಗ್ರೆಸ್‌ಗೆ ಕೇವಲ ಒಂದು ಸ್ಥಾನ ಬಿಟ್ಟುಕೊಡುವುದಾಗಿ ಹೇಳಿದೆ. ಈ ಬೆಳವಣಿಗೆಯು 'ಇಂಡಿಯಾ' ಮೈತ್ರಿಕೂಟದಲ್ಲಿ ಸೀಟು ಹಂಚಿಕೆಗೆ ಸಂಬಂಧಿಸಿದಂತೆ ಗೊಂದಲ ಮುಂದುವರಿದಿರುವುದನ್ನು ಎತ್ತಿ ತೋರಿಸಿದೆ.

'ನಾವು ಇಂಡಿಯಾ ಮೈತ್ರಿಕೂಟದ ಜತೆ ಇದ್ದೇವೆ' ಎಂದು ಹೇಳಿರುವ ಎಎಪಿ, ಬಿಜೆಪಿಯನ್ನು ಮಣಿಸಲು ಯಾವುದೇ ನಿರ್ಧಾರ ತೆಗೆದುಕೊಳ್ಳಲೂ ಸಿದ್ಧ ಎಂದಿದೆ. ಆದರೂ ದೆಹಲಿಯಲ್ಲಿ ಸೀಟು ಹಂಚಿಕೆ ವಿಷಯದಲ್ಲಿ ಏಕಪಕ್ಷೀಯ ನಿರ್ಧಾರ ತೆಗೆದುಕೊಂಡಿದೆ. 'ಇಂಡಿಯಾ' ಮೈತ್ರಿಕೂಟದ ಇನ್ನೊಂದು ಪಕ್ಷ ತೃಣಮೂಲ ಕಾಂಗ್ರೆಸ್, ಪಶ್ಚಿಮ ಬಂಗಾಳದಲ್ಲಿ ಏಕಾಂಗಿಯಾಗಿ ಸ್ಪರ್ಧಿಸುವುದಾಗಿ ಈ ಹಿಂದೆಯೇ ಹೇಳಿದೆ. ಜೆಡಿಯು ಮತ್ತು ಆರ್‌ಎಲ್‌ಡಿ, ಈಗಾಗಲೇ ಬಣವನ್ನು ತೊರೆದಿದೆ. ಇದರಿಂದ ಕಾಂಗ್ರೆಸ್‌ಗೆ ಪರಿತ್ಯಕ್ತ ಸ್ಥಿತಿ ಎದುರಾಗಿದೆ.

> ಸೀಟುಹಂಚಿಕೆ ಸುದ್ದಿಗೋಷ್ಠಿಯಲ್ಲಿ ನಿರ್ಧಾರವಾಗುವುದಿಲ್ಲ. 2019ರ ಚುನಾವಣೆಯಲ್ಲಿ ದೆಹಲಿಯ 5 ಕ್ಷೇತ್ರಗಳಲ್ಲಿ ಕಾಂಗ್ರೆಸ್ 2ನೇ ಸ್ಥಾನ ಗಳಿಸಿತ್ತು
>
> **ಅರವಿಂದರ್ ಸಿಂಗ್ ಲವ್ಲಿ,** ಕಾಂಗ್ರೆಸ್ ದೆಹಲಿ ಘಟಕದ ಅಧ್ಯಕ್ಷ

> ಸೀಟು ಹಂಚಿಕೆ ಸಂಬಂಧ ಮೈತ್ರಿಕೂಟವು ಶೀಘ್ರ ಅಂತಿಮ ನಿರ್ಧಾರ ತೆಗೆದುಕೊಳ್ಳುವ ವಿಶ್ವಾಸವಿದೆ. ಇಲ್ಲದಿದ್ದರೆ ಆರು ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಘೋಷಿಸುತ್ತೇವೆ
>
> **ಸಂದೀಪ್ ಪಾಠಕ್** ಎಎಪಿ ಪ್ರಧಾನ ಕಾರ್ಯದರ್ಶಿ

ದೆಹಲಿಯಲ್ಲಿ ಆರು ಸ್ಥಾನಗಳಲ್ಲಿ ಅಭ್ಯರ್ಥಿಗಳನ್ನು ಕಣಕ್ಕಿಳಿಸುವ ನಿರ್ಧಾರವನ್ನು ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅಧ್ಯಕ್ಷತೆಯಲ್ಲಿ ಮಂಗಳವಾರ ನಡೆದ ಪಕ್ಷದ ಸಭೆಯಲ್ಲಿ ತೆಗೆದುಕೊಳ್ಳಲಾಗಿದೆ. ಎಎಪಿಯು ಗುಜರಾತ್‌ನ ಭರೂಚ್ ಕ್ಷೇತ್ರಕ್ಕೂ ತನ್ನ ಅಭ್ಯರ್ಥಿಯ ಹೆಸರನ್ನು ಪ್ರಕಟಿಸಿದೆ. ದಿವಂಗತ ಅಹ್ಮದ್ ಪಟೇಲ್ ಅವರ ನಂಟು ಇರುವ ಕಾರಣ ಕಾಂಗ್ರೆಸ್ ಪಾಲಿಗೆ ಭರೂಚ್, 'ಭಾವನಾತ್ಮಕ' ಕ್ಷೇತ್ರ ಎನಿಸಿಕೊಂಡಿದೆ.

ಮೈತ್ರಿಕೂಟದ ಅನುಮೋದನೆ ಸಿಗಬಹುದು ಎಂಬ ಭರವಸೆಯೊಂದಿಗೆ ಎಎಪಿಯು ಅಸ್ಸಾಂನ ಮೂರು ಕ್ಷೇತ್ರಗಳಿಗೆ ಕಳೆದ ವಾರವೇ ಅಭ್ಯರ್ಥಿಗಳನ್ನು ಘೋಷಿಸಿತ್ತು.

ಎಎಪಿ ಪ್ರಧಾನ ಕಾರ್ಯದರ್ಶಿ ಸಂದೀಪ್ ಪಾಠಕ್ ಅವರು ಈಗ ಆಗಿರುವ ಬೆಳವಣಿಗೆಗಳಿಗೆ ಕಾಂಗ್ರೆಸ್ ಪಕ್ಷವನ್ನು ಹೊಣೆಯನ್ನಾಗಿ ಮಾಡಿದ್ದಾರೆ. ಸೀಟು ಹಂಚಿಕೆ ಸಂಬಂಧ ಕಾಂಗ್ರೆಸ್ ಜತೆ ಸಭೆ ನಡೆಸಲು ಕಳೆದ ಒಂದು ತಿಂಗಳಲ್ಲಿ ನಡೆಸಿದ ಎಲ್ಲ ಪ್ರಯತ್ನಗಳೂ ವಿಫಲವಾಗಿವೆ ಎಂದು ದೂರಿದ್ದಾರೆ. 'ಬಿಜೆಪಿಯನ್ನು ಮಣಿಸಬೇಕೆಂಬ ಏಕೈಕ ಉದ್ದೇಶದಿಂದ' ಈ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದಿದ್ದಾರೆ.

'ಸೀಟು ಹಂಚಿಕೆ ಸಂಬಂಧ ಚರ್ಚಿಸಲು ಕಾಂಗ್ರೆಸ್ ಜತೆ ಜನವರಿ 8 ಮತ್ತು 12 ರಂದು ಎರಡು ಸಭೆಗಳನ್ನು ನಡೆಸಿದ್ದೆವು. ಸಭೆಗಳು ಸೌಹಾರ್ದಯುತ ವಾತಾವರಣದಲ್ಲಿ ನಡೆದಿದ್ದರೂ, ಅಂತಿಮ ತೀರ್ಮಾನ ಹೊರಬಿದ್ದಿರಲಿಲ್ಲ. ಸೀಟು ಹಂಚಿಕೆ ಯಾವಾಗ ನಡೆಯಲಿದೆ ಎಂಬ ಬಗ್ಗೆ ಕಾಂಗ್ರೆಸ್‌ನ ಹಿರಿಯ ನಾಯಕರಿಗೂ ಸುಳಿವು ಇಲ್ಲ' ಎಂದು ಮಂಗಳವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ದೆಹಲಿಯ ಮೂರು ಕ್ಷೇತ್ರಗಳಲ್ಲಿ ಸ್ಪರ್ಧಿಸುವುದು ಕಾಂಗ್ರೆಸ್‌ನ ಲೆಕ್ಕಾಚಾರ. 'ಆದರೆ ಇಂದಿನ ಪರಿಸ್ಥಿತಿಯಲ್ಲಿ ಕಾಂಗ್ರೆಸ್‌ಗೆ ಒಂದು ಸ್ಥಾನವನ್ನು ಕೇಳುವ ಹಕ್ಕು ಕೂಡಾ ಇಲ್ಲ' ಎಂದು ಪಾಠಕ್ ಹೇಳಿದರು. 'ದೆಹಲಿಯಲ್ಲಿ ಕಾಂಗ್ರೆಸ್‌ನ ಒಂಬತ್ತು ಕೌನ್ಸಿಲರ್‌ಗಳು ಮಾತ್ರ ಇದ್ದಾರೆ. ಒಬ್ಬನೇ ಒಬ್ಬ ಸಂಸದ ಅಥವಾ ಶಾಸಕ ಇಲ್ಲ. ಆದರೆ ಇಲ್ಲಿ ಅಂಕಿ–ಅಂಶವೊಂದೇ ಮುಖ್ಯವಲ್ಲ. ಮೈತ್ರಿಯನ್ನು ಗೌರವಿಸುವ ಉದ್ದೇಶದಿಂದ ಕಾಂಗ್ರೆಸ್‌ಗೆ ಒಂದು ಸ್ಥಾನ ಬಿಟ್ಟುಕೊಟ್ಟು, ಉಳಿದ ಆರು ಕಡೆ ಸ್ಪರ್ಧಿಸುವುದು ನಮ್ಮ ಯೋಜನೆ' ಎಂದರು.

ಪಾಕ್‌ನಲ್ಲಿ ಸರ್ಕಾರ ರಚನೆ ಮುಂದುವರಿದ ಅನಿಶ್ಚಿತತೆ

ಇಸ್ಲಾಮಾಬಾದ್ (ಪಿಟಿಐ): ಅತಂತ್ರ ಸಂಸತ್ತು ಸೃಷ್ಟಿಯಾಗಿರುವ ಪಾಕಿಸ್ತಾನದಲ್ಲಿ ಸರ್ಕಾರ ರಚನೆಯ ಅನಿಶ್ಚಿತತೆ ಮುಂದುವರಿದಿದೆ. ಪ್ರಮುಖ ಪಕ್ಷಗಳ ಜೊತೆಗೂಡಿ ಮೈತ್ರಿ ಸರ್ಕಾರ ರಚಿಸುವುದನ್ನು ಮಾಜಿ ಪ್ರಧಾನಿ, ಪಿಟಿಐ ಅಧ್ಯಕ್ಷ ಇಮ್ರಾನ್ ಖಾನ್ ತಳ್ಳಿಹಾಕಿದ್ದಾರೆ. ಸರ್ಕಾರ ರಚನೆ ಕುರಿತ ಚರ್ಚೆಗೆ ಪ್ರಾಂತ್ಯವಾರು ವಿಶೇಷ ಸಮಿತಿಗಳನ್ನು ಅವರು ರಚಿಸಿದ್ದಾರೆ.

ಅಡಿಯಾಲ ಜೈಲಿನಲ್ಲಿ ಸುದ್ದಿಗಾರರ ಜೊತೆ ಮಾತನಾಡಿದ ಅವರು, ಸರ್ಕಾರ ರಚನೆಗೆ 'ಪಿಎಂಎಲ್‌–ಎನ್, ಪಿಪಿಪಿ, ಎಂಕ್ಯೂಎಂ ಜೊತೆ ಚರ್ಚೆ ಇಲ್ಲ. ಇತರೆ ಪಕ್ಷಗಳು, ಆಸಕ್ತರ ಜೊತೆಗೆ ಚರ್ಚೆಗೆ ಸಿದ್ಧ' ಎಂದು ಹೇಳಿದರು.

ಪಾಕಿಸ್ತಾನ್ ಪೀಪಲ್ಸ್ ಪಾರ್ಟಿ ಅಧ್ಯಕ್ಷ ಬಿಲಾವಲ್ ಭುಟ್ಟೊ ಜರ್ಧಾರಿ ಅವರು ಪ್ರಧಾನಿ ಸ್ಥಾನದ ಸ್ಪರ್ಧೆಯಿಂದ ಹಿಂದೆ ಸರಿದಿದ್ದಾರೆ. ಸರ್ಕಾರದಲ್ಲಿ ಭಾಗಿಯಾಗದೇ ಪಿಎಂಎಲ್‌–ನವಾಜ್ ಪಕ್ಷ ಬೆಂಬಲಿಸಲಾಗುವುದು ಎಂದಿದ್ದಾರೆ.

ಈ ಮೊದಲು ಸರ್ಕಾರದ ಭಾಗವಾಗಬೇಕೇ ಅಥವಾ ಪ್ರತಿಪಕ್ಷದ ಸಾಲಿನಲ್ಲಿ ಕೂರಬೇಕೇ ಎಂಬ ಕುರಿತಂತೆ ಬಿಲಾವಲ್ ಭುಟ್ಟೊ ನೇತೃತ್ವದ ಪಾಕಿಸ್ತಾನ ಪೀಪಲ್ಸ್ ಪಾರ್ಟಿಯಲ್ಲಿ ಗೊಂದಲ ಮೂಡಿತ್ತು. ಮತ್ತೊಂದು ಬೆಳವಣಿಗೆಯಲ್ಲಿ ಪಿಎಂಎಲ್‌– ನವಾಜ್ ಪಕ್ಷದ ಮುಖ್ಯಸ್ಥ ನವಾಜ್ ಷರೀಫ್ ಅವರು ಪ್ರಧಾನಿ ಸ್ಥಾನಕ್ಕೆ ಏರುವುದು ನಿಶ್ಚಿತ ಎಂದು ಮಾಜಿ ಪ್ರಧಾನಿ ಶೆಹಬಾಜ್ ಷರೀಫ್ ಹೇಳಿ ದ್ದಾರೆ.

ಅರ್ಜಿಗಳ ವಜಾ: ಚುನಾವಣಾ ಫಲಿತಾಂಶ ಪ್ರಶ್ನಿಸಿದ್ದ 30ಕ್ಕೂ ಹೆಚ್ಚು ತಕರಾರು ಅರ್ಜಿಗಳನ್ನು ಲಾಹೋರ್ ಹೈಕೋರ್ಟ್ ವಜಾ ಮಾಡಿದೆ.

ಹೂಡಿಕೆ ಉತ್ತೇಜನಕ್ಕೆ ಒಪ್ಪಂದ

ಪ್ರಧಾನಿ ಮೋದಿ, ಯುಎಇ ಅಧ್ಯಕ್ಷರ ಉಪಸ್ಥಿತಿ • ವ್ಯಾಪಾರ, ಸಂಪರ್ಕ ಸೇವೆ ವೃದ್ಧಿ

ಅಬುಧಾಬಿ (ಪಿಟಿಐ): ಭಾರತ ಹಾಗೂ ಯುಎಇಯಲ್ಲಿ ಪರಸ್ಪರ ಬಂಡವಾಳ ಹೂಡಿಕೆಗೆ ಉತ್ತೇಜನ ನೀಡುವ ದ್ವಿಪಕ್ಷೀಯ ಹೂಡಿಕೆ ಒಪ್ಪಂದಕ್ಕೆ (ಬಿಐಟಿ) ಮಂಗಳವಾರ ಇಲ್ಲಿ ಸಹಿ ಹಾಕಲಾಯಿತು.

ಪ್ರಧಾನಿ ನರೇಂದ್ರ ಮೋದಿ ಹಾಗೂ ಯುಎಇ ಅಧ್ಯಕ್ಷ ಶೇಖ್ ಮೊಹಮ್ಮದ್ ಬಿನ್ ಜಯೇದ್ ಅಲ್ ನಯ್ಯಾನ್ ಅವರು ಮಂಗಳವಾರ ಇಲ್ಲಿ ಒಪ್ಪಂದಕ್ಕೆ ಸಹಿ ಹಾಕುವುದಕ್ಕೆ ಸಾಕ್ಷಿಯಾದರು.

ಉಭಯ ರಾಷ್ಟ್ರಗಳಲ್ಲಿ ಹೂಡಿಕೆಗೆ ಇದು ಉತ್ತೇಜನ ನೀಡಲಿದೆ. ಸಮಗ್ರ ಆರ್ಥಿಕ ಪಾಲುದಾರಿಕೆ, ವ್ಯಾಪಾರ, ಸಂಚಾರ ಮಾರ್ಗ ಕುರಿತ ಒಡಂಬಡಿಕೆಗೂ ಸಹಿ ಹಾಕಲಾಯಿತು ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ತಿಳಿಸಿದೆ.

ಸಾಗರೋತ್ತರ ನೇರ ಹೂಡಿಕೆಯ ಅವಕಾಶ ಸೃಷ್ಟಿಸುವುದು, ದೇಶೀಯ ಉತ್ಪಾದನೆಗೆ ಪ್ರೋತ್ಸಾಹ ನೀಡುವುದು, ಆಮದು ಮೇಲಿನ ಅವಲಂಬನೆ ತಪ್ಪಿಸಿ, ರಫ್ತು ವಹಿವಾಟು ಹೆಚ್ಚಿಸುವುದು ಇದರ ಗುರಿಯಾಗಿದೆ ಎಂದೂ ತಿಳಿಸಿದೆ.

ಅಲ್ಲದೆ, ಭಾರತ –ಮಧ್ಯ ಪ್ರಾಚ್ಯ–ಯೂರೋಪ್ ಆರ್ಥಿಕ ಕಾರಿಡಾರ್ ಅಭಿವೃದ್ಧಿ, ಹಡಗು, ರೈಲು ಸಂಚಾರ ನೆಟ್‌ವರ್ಕ್ ಅಭಿವೃದ್ಧಿ ಕುರಿತ ಒಪ್ಪಂದಕ್ಕೂ ಉಭಯ ಸರ್ಕಾರಗಳು ಸಹಿ ಹಾಕಿದವು.

ಇದಕ್ಕೂ ಮೊದಲು ಎರಡು ದಿನದ ಭೇಟಿಗಾಗಿ ಇಲ್ಲಿಗೆ ಆಗಮಿಸಿದ ಪ್ರಧಾನಿ ಅವರನ್ನು ಯುಎಇ ಅಧ್ಯಕ್ಷರು ಬರಮಾಡಿಕೊಂಡರು. ಇದು, ಕಳೆದ ಎಂಟು ತಿಂಗಳಲ್ಲಿ ಅಬುಧಾಬಿಗೆ ಪ್ರಧಾನಿಯವರ ಮೂರನೇ ಭೇಟಿಯಾಗಿದೆ.

ಯುಎಇ ಭಾರತದ ಅತಿದೊಡ್ಡ ವ್ಯಾಪಾರ ಪಾಲುದಾರಿಕೆಯ ರಾಷ್ಟ್ರವಾಗಿದ್ದು, 2022 ಮತ್ತು 2023ರ ಅವಧಿಯಲ್ಲಿ ಸುಮಾರು ₹ 70 ಸಾವಿರ ಕೋಟಿ ವಹಿವಾಟು ನಡೆದಿದೆ.

ಬಳಿಕ ಇಲ್ಲಿನ ಜಯೇದ್ ಸ್ಪೋರ್ಟ್ ಸಿಟಿ ಕ್ರೀಡಾಂಗಣದಲ್ಲಿ ಪ್ರಧಾನಿ ಅವರು ಯುಎಇಯಲ್ಲಿರುವ ಭಾರತೀಯರನ್ನು ಉದ್ದೇಶಿಸಿ ಮಾತನಾಡಿದರು.

ಭಾರತ ಮೂಲದ ಸುಮಾರು 60 ಸಾವಿರ ಜನರು ಭಾಗವಹಿಸಿದ್ದರು.



ಅಬುಧಾಬಿಗೆ ಭೇಟಿ ನೀಡಿರುವ ಪ್ರಧಾನಿ ನರೇಂದ್ರ ಮೋದಿ ಅವರನ್ನು ಭಾರತ ಮೂಲದ ನಿವಾಸಿಗಳು ಮಂಗಳವಾರ ಆತ್ಮೀಯವಾಗಿ ಬರಮಾಡಿಕೊಂಡರು –ಪಿಟಿಐ ಚಿತ್ರ

ಇಂದು ದೇವಸ್ಥಾನ ಉದ್ಘಾಟನೆ

ದುಬೈ: ಪ್ರಧಾನಿ ಮೋದಿ ಅವರು ಬುಧವಾರ, ಇಲ್ಲಿ ನಿರ್ಮಾಣವಾಗಿರುವ ಬೊಚಾಸನ್ವಾಸಿ ಶ್ರೀ ಅಕ್ಷರ ಪುರುಷೋತ್ತಮ ಸ್ವಾಮಿನಾರಾಯಣ ಸಂಸ್ಥಾ (ಬಿಎಪಿಎಸ್) ಮಂದಿರವನ್ನು ಉದ್ಘಾಟಿಸುವರು.

ಅಬು ಮುರೇಖಾದಲ್ಲಿ 27 ಎಕರೆ ವಿಸ್ತೀರ್ಣದ ಭೂಮಿಯಲ್ಲಿ ಮಂದಿರ ನಿರ್ಮಾಣವಾಗಿದೆ. 2019ರಲ್ಲಿ ನಿರ್ಮಾಣ ಚಟುವಟಿಕೆ ಆರಂಭವಾಗಿತ್ತು. ದೇವಸ್ಥಾನಕ್ಕೆ ಭೂಮಿ ನೀಡಿದ್ದಕ್ಕಾಗಿ ಯುಎಇ ಅಧ್ಯಕ್ಷರಿಗೆ ಮೋದಿ ಕೃತಜ್ಞತೆ ಸಲ್ಲಿಸಿದ್ದಾರೆ.

ಯುಎಇಯಲ್ಲಿ ಇನ್ನೂ ಮೂರು ಹಿಂದೂ ದೇವಾಲಯಗಳಿವೆ. ಆದರೆ, ವಿಸ್ತಾರ ಭೂಮಿಯಲ್ಲಿ, ಕಲ್ಲಿನಲ್ಲಿ ನಿರ್ಮಿಸಿರುವ ಈ ದೇವಸ್ಥಾನ, ಗಲ್ಫ್ ವಲಯದಲ್ಲಿಯೇ ಅತಿ ದೊಡ್ಡದು ಎಂಬ ಹಿರಿಮೆಗೆ ಪಾತ್ರವಾಗಲಿದೆ.

ಸುದ್ದಿ 2 ನಿಮಿಷ

ಎಸ್‌ಪಿ ಪ್ರಧಾನ ಕಾರ್ಯದರ್ಶಿ ಹುದ್ದೆಗೆ ಮೌರ್ಯ ರಾಜೀನಾಮೆ

ಲಖನೌ (ಪಿಟಿಐ): ಸಮಾಜವಾದಿ ಪಕ್ಷದ (ಎಸ್‌ಪಿ) ಹಿರಿಯ ನಾಯಕ ಸ್ವಾಮಿ ಪ್ರಸಾದ್ ಮೌರ್ಯ ಅವರು ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸ್ಥಾನಕ್ಕೆ ಮಂಗಳವಾರ ರಾಜೀನಾಮೆ ನೀಡಿದರು.

ಸಮಾಜವಾದಿ ಪಕ್ಷದ ಅಧ್ಯಕ್ಷ ಅಖಿಲೇಶ್ ಯಾದವ್ ಅವರನ್ನು ಉಲ್ಲೇಖಿಸಿ ಬರೆದಿರುವ ರಾಜೀನಾಮೆ ಪತ್ರವನ್ನು ಸಾಮಾಜಿಕ ಜಾಲತಾಣಗಳಲ್ಲಿ ಬಹಿರಂಗಪಡಿಸಿದ್ದಾರೆ. ಯಾವುದೇ ಹುದ್ದೆಯಲ್ಲಿ ಇರದೇ ಪಕ್ಷ ಬಲಪಡಿಸಲು ಶ್ರಮಿಸುವುದಾಗಿ ಅವರು ಪತ್ರದಲ್ಲಿ ಹೇಳಿದ್ದಾರೆ.



ರಾಮಚರಿತ ಮಾನಸ ಮತ್ತು ಅಯೋಧ್ಯೆ ಪ್ರಾಣ ಪ್ರತಿಷ್ಠಾಪನೆ ಕುರಿತು ವಿಧಾನ ಪರಿಷತ್ ಸದಸ್ಯರಾಗಿರುವ ಮೌರ್ಯ ಅವರು ನೀಡಿದ್ದ ಹೇಳಿಕೆಗಳು ವಿವಾದಕ್ಕೆ ಈಡಾಗಿದ್ದವು.

ಮೌರ್ಯ ಅವರು 2022ರ ವಿಧಾನಸಭೆ ಚುನಾವಣೆಗೂ ಮುನ್ನ ಬಿಜೆಪಿ ತೊರೆದು ಎಸ್‌ಪಿ ಸೇರಿದ್ದರು. ಚುನಾವಣೆಯಲ್ಲಿ ಫಾಜಿಲ್‌ನಗರದಿಂದ ಸ್ಪರ್ಧಿಸಿ ಸೋತಿದ್ದರು.

ಎನ್‌ಸಿಪಿ ಮಾನ್ಯತೆ: 'ಸುಪ್ರೀಂ' ಮೆಟ್ಟಿಲೇರಿದ ಶರದ್ ಪವಾರ್

ನವದೆಹಲಿ (ಪಿಟಿಐ): ಮಹಾರಾಷ್ಟ್ರದ ಉಪ ಮುಖ್ಯಮಂತ್ರಿ ಅಜಿತ್ ಪವಾರ್ ನೇತೃತ್ವದ ಎನ್‌ಸಿಪಿ ಬಣವೇ ನಿಜವಾದ ಎನ್‌ಸಿಪಿ ಎಂದು ಚುನಾವಣಾ ಆಯೋಗ ಮಾನ್ಯತೆ ನೀಡಿರುವುದನ್ನು ಪ್ರಶ್ನಿಸಿ ಶರದ್ ಪವಾರ್ ಅವರು ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ.

ಶರದ್ ಪವಾರ್ ಅವರು ಅರ್ಜಿ ಸಲ್ಲಿಸಿದಲ್ಲಿ ತನ್ನ ವಾದ ಆಲಿಸದೆ ಯಾವುದೇ ಆದೇಶ ನೀಡಬಾರದು ಎಂಬ ಕೋರಿಕೆಯೊಂದಿಗೆ ಅಜಿತ್ ಪವಾರ್ ಬಣವು ಸುಪ್ರೀಂ ಕೋರ್ಟ್‌ಗೆ ಕೇವಿಯಟ್ ಒಂದನ್ನು ಈಗಾಗಲೇ ಸಲ್ಲಿಸಿದೆ. ಅಜಿತ್ ಪವಾರ್ ಬಣವೇ ನಿಜವಾದ ಎನ್‌ಸಿಪಿ ಎಂದು ಚುನಾವಣಾ ಆಯೋಗವು ಫೆಬ್ರುವರಿ 6ರಂದು ಆದೇಶ ನೀಡಿದೆ. ಇದು ಎನ್‌ಸಿಪಿ ಸಂಸ್ಥಾಪಕರೂ ಆಗಿರುವ ಶರದ್ ಪವಾರ್ ಅವರಿಗೆ ಎದುರಾದ ದೊಡ್ಡ ಹಿನ್ನಡೆ ಎಂದು ವಿಶ್ಲೇಷಿಸಲಾಗಿದೆ. ಎನ್‌ಸಿಪಿಯ 'ಗಡಿಯಾರ' ಚಿಹ್ನೆಯನ್ನು ಚುನಾವಣಾ ಆಯೋಗವು ಅಜಿತ್ ಪವಾರ್ ಬಣಕ್ಕೆ ನೀಡಿದೆ.

'ಇಂದಿರಾ', 'ನರ್ಗೀಸ್' ಹೆಸರಿಗೆ ಕೊಕ್

ರಾಷ್ಟ್ರೀಯ ಸಿನಿಮಾ ಪ್ರಶಸ್ತಿ ಹೆಸರು ಬದಲಾಯಿಸಿದ ಕೇಂದ್ರ ಸರ್ಕಾರ

ನವದೆಹಲಿ (ಪಿಟಿಐ): ರಾಷ್ಟ್ರೀಯ ಸಿನಿಮಾ ಪ್ರಶಸ್ತಿಗಳ ಪೈಕಿ 'ಇಂದಿರಾ ಗಾಂಧಿ ಅತ್ಯುತ್ತಮ ಮೊದಲ ಸಿನಿಮಾ ಪ್ರಶಸ್ತಿ' ಹಾಗೂ 'ನರ್ಗೀಸ್ ದತ್ ಅತ್ಯುತ್ತಮ ರಾಷ್ಟ್ರೀಯ ಭಾವೈಕ್ಯ ಚಲನಚಿತ್ರ ಪ್ರಶಸ್ತಿ' ಹೆಸರನ್ನು ಬದಲಾಯಿಸಲಾಗಿದೆ. ಈ ಎರಡು ಪ್ರಶಸ್ತಿಗಳಲ್ಲಿ ಇದ್ದ 'ಇಂದಿರಾ ಗಾಂಧಿ' ಮತ್ತು 'ನರ್ಗೀಸ್ ದತ್' ಹೆಸರು ಕೈಬಿಡಲಾಗಿದೆ.

'70ನೇ ರಾಷ್ಟ್ರೀಯ ಸಿನಿಮಾ ಪುರಸ್ಕಾರ 2022'ಕ್ಕಾಗಿನ ನಿಯಮಗಳಿಗೆ ಅನುಗುಣವಾಗಿ ಈ ಬದಲಾವಣೆಗಳನ್ನು ಮಾಡಲಾಗಿದೆ ಎಂದು ಅಧಿಸೂಚನೆಯಲ್ಲಿ ತಿಳಿಸಲಾಗಿದೆ. ಮಾಹಿತಿ ಮತ್ತು ಪ್ರಸಾರ ಸಚಿವಾಲಯವು ರಚಿಸಿದ್ದ ಸಮಿತಿಯೊಂದರ ಶಿಫಾರಸು ಆಧರಿಸಿ ಈ ಬದಲಾವಣೆಗಳನ್ನು ತರಲಾಗಿದೆ. ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿ ಸೇರಿದಂತೆ ಕೆಲವು ಪ್ರಶಸ್ತಿಗಳಿಗೆ ನೀಡುವ ನಗದು ಮೊತ್ತವನ್ನು ಹೆಚ್ಚಿಸಲಾಗಿದೆ, ಕೆಲವು ಪ್ರಶಸ್ತಿಗಳನ್ನು ವಿಲೀನಗೊಳಿಸಲಾಗಿದೆ.

ಬದಲಾವಣೆಗಳನ್ನು ತರುವ ತೀರ್ಮಾನವನ್ನು ಸರ್ವಸಮ್ಮತಿಯೊಂದಿಗೆ ಕೈಗೊಳ್ಳಲಾಗಿದೆ ಎಂದು ಸಮಿತಿಯ ಸದಸ್ಯರೊಬ್ಬರು ತಿಳಿಸಿದರು.

'ಇಂದಿರಾ ಗಾಂಧಿ ಅತ್ಯುತ್ತಮ ಮೊದಲ ಸಿನಿಮಾ ಪ್ರಶಸ್ತಿ'ಯ ಹೆಸರನ್ನು 'ನಿರ್ದೇಶಕರ ಅತ್ಯುತ್ತಮ ಮೊದಲ ಸಿನಿಮಾ' ಎಂದು ಬದಲಿಸಲಾಗಿದೆ. ನಿರ್ದೇಶಕ ಮತ್ತು ನಿರ್ಮಾಪಕರ ನಡುವೆ ಹಂಚುತ್ತಿದ್ದ ಈ ಪ್ರಶಸ್ತಿ ಮೊತ್ತವನ್ನು ಇನ್ನು ಮುಂದೆ ನಿರ್ದೇಶಕರಿಗೆ ಮಾತ್ರವೇ ನೀಡಲಾಗುತ್ತದೆ.

'ನರ್ಗೀಸ್ ದತ್ ಅತ್ಯುತ್ತಮ ರಾಷ್ಟ್ರೀಯ ಭಾವೈಕ್ಯ ಚಲನಚಿತ್ರ ಪ್ರಶಸ್ತಿ'ಯ ಹೆಸರನ್ನು 'ರಾಷ್ಟ್ರೀಯ, ಸಾಮಾಜಿಕ ಮತ್ತು ಪರಿಸರ ಮೌಲ್ಯಗಳನ್ನು ಉತ್ತೇಜಿಸುವ ಅತ್ಯುತ್ತಮ ಸಿನಿಮಾ' ಎಂದು ಬದಲಿಸಲಾಗಿದೆ. ಸಾಮಾಜಿಕ ಸಂಗತಿಗಳು, ಪರಿಸರ ಸಂರಕ್ಷಣೆಯ ವಿಭಾಗದ ಪ್ರಶಸ್ತಿಗಳನ್ನು ಇದರಲ್ಲಿ ವಿಲೀನಗೊಳಿಸಲಾಗಿದೆ.

ಪ್ರಶಸ್ತಿಗಳಲ್ಲಿ ಬದಲಾವಣೆ ತರುವಂತೆ ಶಿಫಾರಸು ಮಾಡಿದ್ದ ಸಮಿತಿಗೆ ಸಚಿವಾಲಯದ ಹೆಚ್ಚುವರಿ ಕಾರ್ಯದರ್ಶಿ ನೀರ್ಜಾ ಶೇಖರ್ ಅಧ್ಯಕ್ಷರಾಗಿದ್ದರು. ಸಂಗೀತ ನಿರ್ದೇಶನ ವಿಭಾಗದಲ್ಲಿ ಕೆಲವು ಬದಲಾವಣೆಗಳನ್ನು ಮಾಡಲಾಗಿದ್ದು, ಈ ವಿಭಾಗವನ್ನು ಇನ್ನು 'ಅತ್ಯುತ್ತಮ ಹಿನ್ನೆಲೆ ಸಂಗೀತ' ಎಂದು ಗುರುತಿಸಲಾಗುತ್ತದೆ.

ಪ್ರಶಸ್ತಿ ಮೊತ್ತ ಏರಿಕೆ

- ಭಾರತೀಯ ಸಿನಿಮಾ ಕ್ಷೇತ್ರಕ್ಕೆ ನೀಡಿದ ಅತಿವಿಶಿಷ್ಟ ಕೊಡುಗೆಯನ್ನು ಗುರುತಿಸಿ ನೀಡುವ ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿಯ ಮೊತ್ತ ₹10 ಲಕ್ಷ ಇದ್ದಿದ್ದನ್ನು ₹15 ಲಕ್ಷಕ್ಕೆ ಹೆಚ್ಚಿಸಲಾಗಿದೆ
- ಎಲ್ಲ ವಿಭಾಗಗಳಲ್ಲಿ ಸ್ವರ್ಣ ಕಮಲ ಪ್ರಶಸ್ತಿಯ ಮೊತ್ತವು ₹3 ಲಕ್ಷಕ್ಕೆ ಹೆಚ್ಚಿದೆ
- ರಜತ ಕಮಲ ಪ್ರಶಸ್ತಿಯ ಮೊತ್ತ ಎಲ್ಲ ವಿಭಾಗಗಳಲ್ಲಿ ₹2 ಲಕ್ಷಕ್ಕೆ ಏರಿಕೆ ಕಂಡಿದೆ

'ಎನ್‌ಡಿಎ –ಆರ್‌ಎಲ್‌ಡಿ ಮೈತ್ರಿ'

ಪ್ರಜಾವಾಣಿ ವಾರ್ತೆ

ನವದೆಹಲಿ: ಎನ್‌ಡಿಎ ಜತೆಗೆ ಮೈತ್ರಿ ಮಾಡಿಕೊಳ್ಳುವುದಾಗಿ ರಾಷ್ಟ್ರೀಯ ಲೋಕ ದಳದ (ಆರ್‌ಎಲ್‌ಡಿ) ಮುಖ್ಯಸ್ಥ ಜಯಂತ್ ಚೌದರಿ ಇದೇ ಮೊದಲ ಬಾರಿಗೆ ಅಧಿಕೃತವಾಗಿ ಘೋಷಿಸಿದರು.

ಮಾಜಿ ಪ್ರಧಾನಿ ಚೌದರಿ ಚರಣ್ ಸಿಂಗ್ ಅವರಿಗೆ 'ಭಾರತ ರತ್ನ' ಘೋಷಣೆ ಮಾಡಿರುವುದೇ ಈ ನಿರ್ಧಾರಕ್ಕೆ ಪ್ರಮುಖ ಕಾರಣ ಎಂದೂ ತಿಳಿಸಿದರು.

ಸುದ್ದಿಗಾರರೊಂದಿಗೆ ಮಂಗಳವಾರ ಮಾತನಾಡಿದ ಅವರು, ಭಾರತ ರತ್ನ ಪ್ರಶಸ್ತಿಯು ನಮ್ಮ ಕುಟುಂಬ ಅಥವಾ ಪಕ್ಷಕ್ಕೆ ಸೀಮಿತವಾಗಿಲ್ಲ. ಇದು ದೇಶದ ಎಲ್ಲ ರೈತರು, ಯುವಕರು ಮತ್ತು ಬಡವರಿಗೆ ಸಂದ ಗೌರವ ಎಂದು ಹೇಳಿದರು.

ಸದ್ಯದ ಪರಿಸ್ಥಿತಿ ಗಮನದಲ್ಲಿ ಇಟ್ಟುಕೊಂಡು ಈ ನಿರ್ಧಾರ ಕೈಗೊಳ್ಳಲೇಬೇಕಿತ್ತು ಎಂದು ಹೇಳಿದರು.

ತಮ್ಮ ನಿರ್ಧಾರದಿಂದ ಪಕ್ಷದ ಕೆಲ ನಾಯಕರು ಅಸಮಾಧಾನಗೊಂಡಿದ್ದಾರೆಯೇ ಎಂಬ ಪ್ರಶ್ನೆಗೆ, 'ಎಲ್ಲ ಶಾಸಕರು ಮತ್ತು ಕಾರ್ಯಕರ್ತರೊಂದಿಗೆ ಚರ್ಚಿಸಿ ನಿರ್ಧಾರ ತೆಗೆದುಕೊಂಡಿರುವೆ. ಕೆಲ ನಾಯಕರು ಅಸಮಾಧಾನಗೊಂಡಿದ್ದಾರೆ ಎಂಬುದು ಸುಳ್ಳು ವರದಿ. ಈ ನಿರ್ಧಾರದ ಹಿಂದೆ ದೊಡ್ಡ ಯೋಜನೆ ಇದೆ ಎಂಬುದೂ ಸತ್ಯಕ್ಕೆ ದೂರವಾದುದು' ಎಂದರು.

ಸಿ.ಇ.ಸಿ., ಇ.ಸಿ ನೇಮಕ: ಕಾಯ್ದೆಗೆ ತಡೆ ಇಲ್ಲ

ನವದೆಹಲಿ (ಪಿಟಿಐ): ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಇಲ್ಲದ ಸಮಿತಿಯು ಮುಖ್ಯ ಚುನಾವಣಾ ಆಯುಕ್ತ (ಸಿ.ಇ.ಸಿ) ಮತ್ತು ಚುನಾವಣಾ ಆಯುಕ್ತರನ್ನು (ಇ.ಸಿ) ನೇಮಕ ಮಾಡಲು ಅವಕಾಶ ಕಲ್ಪಿಸುವ ಹೊಸ ಕಾಯ್ದೆಗೆ ತಡೆ ನೀಡಲು ಸುಪ್ರೀಂ ಕೋರ್ಟ್ ಮಂಗಳವಾರ ನಿರಾಕರಿಸಿದೆ.

ಸರ್ಕಾರೇತರ ಸಂಘಟನೆಯಾದ ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್ (ಎಡಿಆರ್) ಸಲ್ಲಿಸಿರುವ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ ಮತ್ತು ದೀಪಾಂಕರ್ ದತ್ತ ಅವರು ಇದ್ದ ವಿಭಾಗೀಯ ಪೀಠವು, ಇದನ್ನು ಇದೇ ವಿಷಯಕ್ಕೆ ಸಂಬಂಧಿಸಿದ ಬೇರೆ ಅರ್ಜಿಗಳ ಜೊತೆ ಏಪ್ರಿಲ್‌ನಲ್ಲಿ ವಿಚಾರಣೆಗೆ ಕೈಗೆತ್ತಿಕೊಳ್ಳಲು ನಿರ್ಧರಿಸಿದೆ.

ಎಡಿಆರ್ ಸಲ್ಲಿಸಿರುವ ಅರ್ಜಿಯು 'ಮುಖ್ಯ ಚುನಾವಣಾ ಆಯುಕ್ತ ಮತ್ತು ಇತರ ಚುನಾವಣಾ ಆಯುಕ್ತರ (ನೇಮಕಾತಿ, ಸೇವಾ ನಿಬಂಧನೆಗಳು ಮತ್ತು ಸೇವಾವಧಿ) ಕಾಯ್ದೆ – 2023'ರ ಸಾಂವಿಧಾನಿಕ ಸಿಂಧುತ್ವವನ್ನು ಪ್ರಶ್ನಿಸಿದೆ.

ಸಿ.ಇ.ಸಿ ಮತ್ತು ಇ.ಸಿ. ನೇಮಕ ಮಾಡುವ ಸಮಿತಿಯಲ್ಲಿ ಸಿಜೆಐ ಅವರೂ ಇರಬೇಕು ಎಂದು ಸುಪ್ರೀಂ ಕೋರ್ಟ್‌ನ ಸಂವಿಧಾನ ಪೀಠವು ತೀರ್ಪು ನೀಡಿತ್ತು. ಆದರೆ ಕಾಯ್ದೆಯು ಈ ತೀರ್ಪಿಗೆ ವಿರುದ್ಧವಾಗಿದೆ ಎಂದು ಎಡಿಆರ್ ಪರ ವಕೀಲ ಪ್ರಶಾಂತ್ ಭೂಷಣ್ ಅವರು ಪೀಠಕ್ಕೆ ವಿವರಿಸಿದರು.

ಇಬ್ಬರು ಚುನಾವಣಾ ಆಯುಕ್ತರು ನಿವೃತ್ತರಾಗಲಿದ್ದಾರೆ. ಈ ಕಾಯ್ದೆಯ ಜಾರಿಗೆ ತಡೆ ನೀಡದೆ ಇದ್ದರೆ ಅರ್ಜಿಯು ನಿರುಪಯುಕ್ತವಾಗುತ್ತದೆ ಎಂದು ಭೂಷಣ್ ಹೇಳಿದರು. 'ನಾವು ಈ ವಿಚಾರದಲ್ಲಿ ಮಧ್ಯಂತರ ತಡೆ ನೀಡಲು ಆಗದು. ಸಾಂವಿಧಾನಿಕ ಸಿಂಧುತ್ವಕ್ಕೆ ಸಂಬಂಧಿಸಿದ ಪ್ರಶ್ನೆಯು ಯಾವತ್ತಿಗೂ ನಿರುಪಯುಕ್ತ ಆಗುವುದಿಲ್ಲ. ಮಧ್ಯಂತರ ಆದೇಶ ನೀಡಲು ಇರುವ ಮಾನದಂಡಗಳು ಯಾವುವು ಎಂಬುದು ನಮಗೆ ಗೊತ್ತಿದೆ' ಎಂದು ಪೀಠ ಹೇಳಿತು.

'ಈ ಕಾಯ್ದೆಯ ಪ್ರಕಾರ, ಮುಖ್ಯ ಚುನಾವಣಾ ಆಯುಕ್ತ ಹಾಗೂ ಚುನಾವಣಾ ಆಯುಕ್ತರ ನೇಮಕವನ್ನು ಕಾರ್ಯಾಂಗವೇ ನಡೆಸುತ್ತದೆ. ಆಯ್ಕೆ ಸಮಿತಿಯಲ್ಲಿ ಕಾರ್ಯಾಂಗದ ಪ್ರತಿನಿಧಿಗಳಾದ ಪ್ರಧಾನಿ ಮತ್ತು ಸಂಪುಟದ ಸದಸ್ಯರೊಬ್ಬರು ಇರುತ್ತಾರೆ, ಸಂಪುಟದ ಸದಸ್ಯರನ್ನು ಸಮಿತಿಗೆ ಪ್ರಧಾನಿ ನೇಮಿಸುತ್ತಾರೆ' ಎಂದು ಅರ್ಜಿಯಲ್ಲಿ ಹೇಳಲಾಗಿದೆ.

ಬಿಜೆಪಿ ಸೇರಿದ ಅಶೋಕ್ ಚವ್ಹಾಣ್

ಮುಂಬೈ(ಪಿಟಿಐ): ಮಹಾರಾಷ್ಟ್ರದ ಮಾಜಿ ಮುಖ್ಯಮಂತ್ರಿ ಅಶೋಕ್ ಚವ್ಹಾಣ್ ಅವರು ಮಂಗಳವಾರ ಇಲ್ಲಿ ಆಡಳಿತಾರೂಢ ಬಿಜೆಪಿ ಸೇರಿದರು. ಅವರು ಸೋಮವಾರವಷ್ಟೇ ಕಾಂಗ್ರೆಸ್ ಪಕ್ಷ ತೊರೆದಿದ್ದರು.

ಮುಂಬೈನ ಬಿಜೆಪಿ ಕಚೇರಿಯಲ್ಲಿ ಮಹಾರಾಷ್ಟ್ರ ಉಪಮುಖ್ಯಮಂತ್ರಿ ದೇವೇಂದ್ರ ಫಡಣವೀಸ್, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಚಂದ್ರಶೇಖರ್ ಬವಾಂಕುಲೆ, ಸಚಿವ ಗಿರೀಶ್ ಮಹಾಜನ್ ಅವರ ಸಮ್ಮುಖದಲ್ಲಿ ಚವ್ಹಾಣ್ ಬಿಜೆಪಿ ಸೇರ್ಪಡೆಯಾದರು.

ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಪ್ರಧಾನಿ ನರೇಂದ್ರ ಮೋದಿ ಅವರ 'ಸಬ್ಕಾ ಸಾಥ್, ಸಬ್ಕಾ ವಿಕಾಸ್' ಕೆಲಸದಿಂದ ಪ್ರಭಾವಿತನಾಗಿ ಬಿಜೆಪಿ ಸೇರಿದ್ದೇನೆ. ಈ ಮೂಲಕ ನನ್ನ ರಾಜಕೀಯ ಜೀವನದ ಹೊಸ ಪಯಣ ಆರಂಭಿಸುತ್ತಿದ್ದೇನೆ. ಮಹಾರಾಷ್ಟ್ರದಲ್ಲಿ ಕೇಸರಿ ಪಕ್ಷಕ್ಕೆ ಹೆಚ್ಚಿನ ಸ್ಥಾನಗಳು ಬರುವಂತೆ ಮಾಡಲು ಶ್ರಮಿಸುತ್ತೇನೆ' ಎಂದರು.

ಚವ್ಹಾಣ್ ಅವರು ಮಾಜಿ ಮುಖ್ಯಮಂತ್ರಿ ಶಂಕರರಾವ್ ಚವ್ಹಾಣ್ ಅವರ ಮಗ. ಸುಮಾರು ನಾಲ್ಕು ದಶಕಗಳ ಕಾಲದಿಂದ ಕಾಂಗ್ರೆಸ್‌ನಲ್ಲಿದ್ದ ಅವರು, ಲೋಕಸಭಾ ಚುನಾವಣೆ ಸಮೀಪಿಸುತ್ತಿರುವಾಗ ಪಕ್ಷ ತೊರೆದಿರುವುದು ಕಾಂಗ್ರೆಸ್‌ಗೆ ಆಘಾತ ತರಿಸಿದೆ ಎನ್ನಲಾಗಿದೆ. ಹಿರಿಯ ಕಾಂಗ್ರೆಸ್ ನಾಯಕರಾದ ಬಾಬಾ ಸಿದ್ದಿಕಿ ಮತ್ತು ಮಿಲಿಂದ್ ದೇವ್ರಾ ಅವರು ಪಕ್ಷ ತೊರೆದ ಕೆಲ ದಿನಗಳಲ್ಲಿಯೇ ಚವ್ಹಾಣ್ ಅವರೂ ಪಕ್ಷದಿಂದ ಹೊರ ನಡೆದಿದ್ದಾರೆ.

> **ಕೇಸರಿ ಪಕ್ಷದ ವಿರುದ್ಧ ಹೋರಾಡುವ ಶಕ್ತಿ, ಸಾಮರ್ಥ್ಯ ಹೊಂದಿರುವ ಕೆಲ ನಾಯಕರು ನಿಜವಾಗಿಯೂ ಬಿಜೆಪಿ ಒತ್ತಡಕ್ಕೆ ಮಣಿಯುತ್ತಿದ್ದಾರೆ**
> **ಕ್ಲೈಡ್ ಕ್ರಾಸ್ಟೊ,** ವಕ್ತಾರ, ಶರದ್ ಪವಾರ್ ನೇತೃತ್ವದ ಎನ್‌ಸಿಪಿ

ಮುಂಬೈನಲ್ಲಿ ನಡೆದ ಆದರ್ಶ ವಸತಿ ಹಗರಣದಲ್ಲಿ ಭಾಗಿಯಾಗಿರುವ ಆರೋಪ ಎದುರಾದ ಕಾರಣ ಚವ್ಹಾಣ್ ಅವರು 2010ರಲ್ಲಿ ಮುಖ್ಯಮಂತ್ರಿ ಹುದ್ದೆಯಿಂದ ಕೆಳಗಿಳಿದಿದ್ದರು. ಅವರು 2014–19ರ ಅವಧಿಯಲ್ಲಿ ಮಹಾರಾಷ್ಟ್ರ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾಗಿದ್ದರು.

ಆದರ್ಶ ಹೌಸಿಂಗ್ ಸೊಸೈಟಿ ಹಗರಣದಲ್ಲಿ ಚವ್ಹಾಣ್ ಆರೋಪಿಯಾಗಿದ್ದಾರೆ. ಇದರಲ್ಲಿ ದಕ್ಷಿಣ ಮುಂಬೈನಲ್ಲಿ ರಕ್ಷಣಾ ಸಚಿವಾಲಯದ ಒಡೆತನದ ಭೂಮಿಯಲ್ಲಿ ಅಗತ್ಯ ಅನುಮತಿಗಳನ್ನು ಪಡೆಯದೆ 31 ಅಂತಸ್ತಿನ ಐಷಾರಾಮಿ ಕಟ್ಟಡವನ್ನು ನಿರ್ಮಿಸಲಾಗಿದೆ ಎಂಬ ಆರೋಪ ಇದೆ. ಕಳೆದ ವಾರ ಸಂಸತ್ತಿನಲ್ಲಿ ಮಂಡಿಸಲಾದ ಶ್ವೇತಪತ್ರದಲ್ಲಿ ಆದರ್ಶ ಹೌಸಿಂಗ್ ಸೊಸೈಟಿ ಹಗರಣ ಉಲ್ಲೇಖವಾದ ಬೆನ್ನಲ್ಲೇ ಚವ್ಹಾಣ್ ಕಾಂಗ್ರೆಸ್ ತೊರೆದಿದ್ದಾರೆ ಎನ್ನಲಾಗಿದೆ. ಇದನ್ನು ಚವ್ಹಾಣ್ ನಿರಾಕರಿಸಿದ್ದಾರೆ.

'ಈ ಪ್ರಕರಣದಲ್ಲಿ ಬಾಂಬೆ ಹೈಕೋರ್ಟ್ ನನ್ನ ಪರವಾಗಿ ತೀರ್ಪು ನೀಡಿದೆ. ಕೆಲ ಸಂಸ್ಥೆಗಳು ಅದನ್ನು ಪ್ರಶ್ನಿಸಿವೆ. ನಾನು ಇದನ್ನು ಸಾಕಷ್ಟು ಎದುರಿಸಿದ್ದೇನೆ. ಅದು ಪ್ರಮುಖ ವಿಷಯವೇ ಅಲ್ಲ' ಎಂದು ಅವರು ಪ್ರತಿಕ್ರಿಯಿಸಿದರು.



ಮಾಜಿ ಮುಖ್ಯಮಂತ್ರಿ ಅಶೋಕ್ ಚವ್ಹಾಣ್ ಅವರನ್ನು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಚಂದ್ರಶೇಖರ್ ಬವಾಂಕುಲೆ ಬಿಜೆಪಿಗೆ ಬರಮಾಡಿಕೊಂಡರು. ಉಪ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಇದ್ದಾರೆ –ಪಿಟಿಐ ಚಿತ್ರ

ರಾಜ್ಯಸಭಾ ಚುನಾವಣೆ: ಜಯಾ ಕಣಕ್ಕೆ

ಲಖನೌ (ಪಿಟಿಐ): ಸಮಾಜವಾದಿ ಪಕ್ಷವು ಜಯಾ ಬಚ್ಚನ್ ಅವರನ್ನು ರಾಜ್ಯಸಭಾ ಚುನಾವಣೆಯಲ್ಲಿ ಮತ್ತೆ ಕಣಕ್ಕೆ ಇಳಿಸಿದೆ. ಜಯಾ ಅವರು ಉತ್ತರ ಪ್ರದೇಶ ವಿಧಾನಸಭೆಯಿಂದ ರಾಜ್ಯಸಭೆಗೆ ಮರು ಆಯ್ಕೆ ಕೋರಿ ಮಂಗಳವಾರ ನಾಮಪತ್ರ ಸಲ್ಲಿಸಿದ್ದಾರೆ.

ಜಯಾ ಅಲ್ಲದೆ, ಪಕ್ಷವು ಮಾಜಿ ಸಂಸದ ರಾಮ್‌ಜಿಲಾಲ್ ಸುಮನ್ ಮತ್ತು ನಿವೃತ್ತ ಐಎಎಸ್ ಅಧಿಕಾರಿ ಅಲೋಕ್ ರಂಜನ್ ಅವರನ್ನೂ ಉತ್ತರ ಪ್ರದೇಶ ವಿಧಾನಸಭೆಯಿಂದ ಕಣಕ್ಕೆ ಇಳಿಸಿದೆ. ಇವರು ಕೂಡ ನಾಮಪತ್ರವನ್ನು ಮಂಗಳವಾರ ಸಲ್ಲಿಸಿದ್ದಾರೆ.

ಜಯಾ ಅವರು ಈಗ ನಾಲ್ಕನೆಯ ಬಾರಿಗೆ ರಾಜ್ಯಸಭೆಯ ಸದಸ್ಯರಾಗಿದ್ದಾರೆ. ಐದನೆಯ ಅವಧಿಗೆ ಆಯ್ಕೆ ಕೋರಿ ನಾಮಪತ್ರ ಸಲ್ಲಿಸಲಿದ್ದಾರೆ.

ಸುಮನ್ ಅವರು ಫಿರೋಜಾಬಾದ್ ಕ್ಷೇತ್ರದಿಂದ ನಾಲ್ಕು ಬಾರಿ ಲೋಕಸಭೆಗೆ ಆಯ್ಕೆಯಾಗಿದ್ದರು. ರಂಜನ್ ಅವರು ಎಸ್‌ಪಿ ನೇತೃತ್ವದ ಸರ್ಕಾರ ಇದ್ದಾಗ ಉತ್ತರ ಪ್ರದೇಶದ ಮುಖ್ಯ ಕಾರ್ಯದರ್ಶಿ ಆಗಿದ್ದರು. ರಾಜ್ಯಸಭೆಗೆ ಫೆಬ್ರುವರಿ 27ರಂದು ಚುನಾವಣೆ ನಡೆಯಲಿದೆ.

ಇಸ್ರೇಲ್ ಪಡೆಯಿಂದ ಇಬ್ಬರು ಒತ್ತೆಯಾಳು ರಕ್ಷಣೆ

ವಾಯುದಾಳಿ, 67 ಸಾವು

ರಫಾ, ಗಾಜಾ ಪಟ್ಟಿ (ಎ.ಪಿ): ಗಾಜಾ ಪಟ್ಟಿಯ ಮನೆಯೊಂದರಲ್ಲಿ ಬಿಗಿ ಭದ್ರತೆಯಲ್ಲಿರಿಸಿದ್ದ ಇಬ್ಬರು ಒತ್ತೆಯಾಳುಗಳನ್ನು ಇಸ್ರೇಲ್ ಪಡೆಗಳು ರಕ್ಷಿಸಿವೆ. ಇನ್ನೊಂದೆಡೆ ವಾಯುದಾಳಿ ಮುಂದುವರಿದಿದ್ದು, 67 ಜನರು ಅಸುನೀಗಿದ್ದಾರೆ.

ಗಾಜಾಪಟ್ಟಿಯಲ್ಲಿ ಸಂಘರ್ಷ ಆರಂಭವಾದ ಬಳಿಕ ಇದು, ಹಮಾಸ್‌ಬಂಡುಕೋರರ ವಶದಿಂದ ಒತ್ತೆಯಾಳುಗಳ ಮೊದಲ ರಕ್ಷಣೆಯಾಗಿದೆ. ರಫಾ ಪಟ್ಟಣದಲ್ಲಿ ವಾಯುದಾಳಿಯಿಂದ ಹಲವು ಕಟ್ಟಡಗಳು ಜಖಂಗೊಂಡಿವೆ.

'ಸೋಮವಾರ ಬೆಳಗಿನ ಜಾವ ವಾಯುದಾಳಿ ನಡೆದಿದ್ದು, ಮಹಿಳೆಯರು, ಮಕ್ಕಳು ಒಳಗೊಂಡು 67 ಜನರು ಮೃತರಾದರು' ಎಂದು ಗಾಜಾ ಆರೋಗ್ಯ ಸಚಿವಾಲಯದ ವಕ್ತಾರ ಅಶ್ರಫ್ ಅಲ್ ಖಿದ್ರಾ ಖಚಿತಪಡಿಸಿದ್ದಾರೆ.

'ರಫಾದ ಅಬು ಯೂಸುಫ್ ನಜ್ಜರ್ ಆಸ್ಪತ್ರೆಯಲ್ಲಿ ಕನಿಷ್ಠ 50 ಶವಗಳನ್ನು ನೋಡಿರುವುದಾಗಿ' ಎ.ಪಿ ಸುದ್ದಿಸಂಸ್ಥೆಯ ಪ್ರತಿನಿಧಿ ವರದಿ ಮಾಡಿದ್ದಾರೆ.


ಇಸ್ರೇಲ್ ಪಡೆಗಳ ಪ್ರಕಾರ, ಇನ್ನು ಸುಮಾರು 100 ಒತ್ತೆಯಾಳುಗಳು ಹಮಾಸ್ ವಶದಲ್ಲಿ ಇದ್ದಾರೆ. ಒತ್ತೆಯಾಳಾಗಿದ್ದ ಅವಧಿಯಲ್ಲಿಯೇ ಸುಮಾರು 30 ಜನರು ಮೃತಪಟ್ಟಿದ್ದಾರೆ.

ಗಾಜಾಪಟ್ಟಿಯಲ್ಲಿ ಕದನ ವಿರಾಮ ಘೋಷಣೆ ಮತ್ತು ಒತ್ತೆಯಾಳುಗಳ ಬಿಡುಗಡೆ ಕುರಿತು ಇಸ್ರೇಲ್ ಮತ್ತು ಹಮಾಸ್ ನಡುವಿನ ಚರ್ಚೆಯಲ್ಲಿ ಪ್ರಗತಿ ಕಂಡುಬಂದಿದೆ ಎಂದು ಅಧಿಕಾರಿಗಳು ಈಜಿಪ್ಟ್ ರಾಜಧಾನಿ ಕೈರೊದಲ್ಲಿ ತಿಳಿಸಿದ್ದಾರೆ.



ಇಸ್ರೇಲ್ ಸೇನೆಯ ವಾಯುದಾಳಿ ಹಿನ್ನೆಲೆಯಲ್ಲಿ ಗಾಜಾಪಟ್ಟಿಯ ರಫಾ ನಗರದಿಂದ ಜನರು ಸುರಕ್ಷಿತ ಸ್ಥಳಗಳತ್ತ ವಲಸೆ ಹೊರಟರು –ಎಎಫ್‌ಪಿ ಚಿತ್ರ

ಷೇರುಪೇಟೆ ವಹಿವಾಟು 482



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	21,616
ಇಂದಿನ ಅಂತ್ಯ	21,743
▲	127
ದಿನದ ಗರಿಷ್ಠ	21,766

ರಾಮನಗರ ರೇಷ್ಮೆಗೂಡು



ಮಿಶ್ರತಳಿ (ಸಿ.ಬಿ) ₹159-438

ದ್ವಿತಳಿ (ಬಿ.ವಿ) ₹335-542

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹590
12 ಕ್ಕೆ	₹78
ಮೈಸೂರು	
100ಕ್ಕೆ	₹592

ಖಾದ್ಯ ತೈಲ ಮುಂಬೈ (10 ಕೆಜಿಗೆ)



(ಆವರಣದಲ್ಲಿ ಹಿಂದಿನ ದಿನದ ದರ)

ಶೇಂಗಾ (ರಿಫೈನ್ಡ್)	₹1450 (1450)
ಸೋಯಾ (ರಿಫೈನ್ಡ್)	₹895 (895)
ಸೂರ್ಯಕಾಂತಿ (ರಿಫೈನ್ಡ್)	₹905 (905)
ಪಾಮೋಲಿನ್	₹859 (856)

ಮಧ್ಯಪ್ರದೇಶದಲ್ಲಿ ಕೊಯ್ಲು ಆರಂಭ • ಎರಡು ವಾರದಲ್ಲಿ ಧಾರಣೆ ಇಳಿಕೆ ನಿರೀಕ್ಷೆ

ಇಳಿಯದ ಬೆಳ್ಳುಳ್ಳಿ ದರ: ಗ್ರಾಹಕರು ತತ್ತರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಳೆದ ಎರಡು ದಿನಗಳಿಂದ ಸಗಟು ಬೆಳ್ಳುಳ್ಳಿ ದರವು ಕೆ.ಜಿಗೆ ₹30ರಿಂದ ₹40 ಇಳಿಕೆಯಾಗಿದ್ದರೂ, ಚಿಲ್ಲರೆ ಮಾರುಕಟ್ಟೆಯಲ್ಲಿ ಧಾರಣೆ ಇಳಿಕೆಯಾಗಿಲ್ಲ. ಇದರಿಂದ ಗ್ರಾಹಕರು ಸಂಕಷ್ಟಕ್ಕೆ ಸಿಲುಕುವಂತಾಗಿದೆ.

ಬೆಂಗಳೂರಿನ ಯಶವಂತಪುರದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗೆ ಮಧ್ಯಪ್ರದೇಶದಿಂದ ಅತಿಹೆಚ್ಚಿನ ಪ್ರಮಾಣದಲ್ಲಿ ಬೆಳ್ಳುಳ್ಳಿ ಪೂರೈಕೆಯಾಗುತ್ತದೆ. ಪ್ರತಿದಿನ 3 ಸಾವಿರದಿಂದ 4 ಸಾವಿರ ಚೀಲ (ಪ್ರತಿ ಚೀಲ 50 ಕೆ.ಜಿ) ಆವಕ ವಾಗುತ್ತಿದೆ. ಎರಡು ದಿನಗಳ ಹಿಂದೆ 'ಎ' ದರ್ಜೆಯ ಹೈಬ್ರೀಡ್ ಬೆಳ್ಳುಳ್ಳಿಯ ಸಗಟು ಧಾರಣೆಯು ಪ್ರತಿ ಕೆ.ಜಿಗೆ ₹330ರಿಂದ ₹340 ಇತ್ತು. ಸದ್ಯ ₹300ಕ್ಕೆ ಇಳಿಕೆಯಾಗಿದೆ.

ಮಧ್ಯಪ್ರದೇಶದಲ್ಲಿ ಬೆಳ್ಳುಳ್ಳಿ ಕೊಯ್ಲು ಆರಂಭವಾಗಿದೆ. ಹಾಗಾಗಿ, ಆವಕ ಹೆಚ್ಚಾಗುತ್ತಿರುವುದರಿಂದ ಸಗಟು ದರದಲ್ಲಿ ಇಳಿಕೆಯಾಗಿದೆ. ಆದರೆ, ಚಿಲ್ಲರೆ ಮಾರುಕಟ್ಟೆಯಲ್ಲಿ ಜವಾರಿ ಬೆಳ್ಳುಳ್ಳಿ ಪ್ರತಿ ಕೆ.ಜಿಗೆ ₹450 ದಾಟಿದೆ. ಹೈಬ್ರೀಡ್ ಬೆಳ್ಳುಳ್ಳಿ ಕೆ.ಜಿಗೆ ₹400ರಿಂದ ₹430 ಇದೆ.

ರಾಜ್ಯದಲ್ಲಿ ಡಿಸೆಂಬರ್ ಎರಡನೇ ವಾರದಲ್ಲಿ ಬೆಳ್ಳುಳ್ಳಿ ದರವು ಏರಿಕೆಯ ಹಾದಿ ಹಿಡಿದಿತ್ತು. ಅಂದಿನಿಂದ ಇಲ್ಲಿಯವರೆಗೂ ಬೆಲೆ ಇಳಿಕೆಯಾಗಿಲ್ಲ.

ಯಶವಂತಪುರದ ಮಾರುಕಟ್ಟೆಯಿಂದ ಬೆಂಗಳೂರು ನಗರ ಸೇರಿದಂತೆ ಬೆಂಗಳೂರು ಗ್ರಾಮಾಂತರ, ತುಮಕೂರು, ರಾಮನಗರ, ಮಂಡ್ಯ, ಕೋಲಾರ, ಚಿಕ್ಕಬಳ್ಳಾಪುರ ಜಿಲ್ಲೆಗಳಿಗೆ ಬೆಳ್ಳುಳ್ಳಿ ಪೂರೈಕೆಯಾಗುತ್ತದೆ.

'ಬೆಂಗಳೂರು ನಗರ ಸೇರಿದಂತೆ ಇತರೇ ಜಿಲ್ಲೆಗಳಿಗೆ ಮಧ್ಯಪ್ರದೇಶ, ರಾಜಸ್ಥಾನ, ಗುಜರಾತ್‌ನಿಂದ ಬೆಳ್ಳುಳ್ಳಿ ಪೂರೈಕೆಯಾಗುತ್ತದೆ. ಇನ್ನೆರಡು ವಾರದೊಳಗೆ ಆವಕ ಹೆಚ್ಚಾಗಲಿದ್ದು, ಸಗಟು ದರವು ಕೆ.ಜಿಗೆ ₹200ಕ್ಕೆ ಇಳಿಕೆಯಾಗಲಿದೆ. ಆಗಷ್ಟೇ ಚಿಲ್ಲರೆ ಮಾರುಕಟ್ಟೆಯಲ್ಲಿಯೂ ಧಾರಣೆ ಕಡಿಮೆಯಾಗಲಿದೆ' ಎಂದು ಬೆಂಗಳೂರಿನ ಬೆಳ್ಳುಳ್ಳಿ ಸಗಟು ವ್ಯಾಪಾರಿಯಾದ ಗುಜರಾತ್ ಟ್ರೇಡರ್ಸ್‌ನ ಜುಬೇರ್ 'ಪ್ರಜಾವಾಣಿ'ಗೆ ತಿಳಿಸಿದರು.

ಹೊಸಪೇಟೆಯಲ್ಲಿ ದರ ಕಡಿಮೆ



ಹುಬ್ಬಳ್ಳಿ: ಹುಬ್ಬಳ್ಳಿಯ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗೆ (ಎಪಿಎಂಸಿ) ವಿಜಯಪುರ, ಗದಗ ಸೇರಿದಂತೆ ವಿವಿಧೆಡೆಯಿಂದ ಬೆಳ್ಳುಳ್ಳಿ ಆವಕ ವಾಗುತ್ತಿದೆ. ಆದರೆ, ಸಗಟು ದರ ಮಾತ್ರ ಏರುಗತಿಯಲ್ಲೇ ಇದೆ.

ಹೈಬ್ರೀಡ್ ಚಿಕ್ಕ ಬೆಳ್ಳುಳ್ಳಿಯ ಸಗಟು ದರ ಪ್ರತಿ ಕ್ವಿಂಟಲ್‌ಗೆ ₹18 ಸಾವಿರದಿಂದ ₹25 ಸಾವಿರ ಇದೆ. ಹೈಬ್ರೀಡ್ ದೊಡ್ಡ ಗಾತ್ರದ ಬೆಳ್ಳುಳ್ಳಿ ಕ್ವಿಂಟಲ್‌ಗೆ ₹25 ಸಾವಿರದಿಂದ ₹30 ಸಾವಿರ ಇದೆ. ವಿಜಯಪುರ ಮತ್ತು ಗದಗ ಜಿಲ್ಲೆಯಿಂದ ಪೂರೈಕೆಯಾಗುವ ಜವಾರಿ ಹೊಸ ಬೆಳ್ಳುಳ್ಳಿ ಸಗಟು ದರವು ಪ್ರತಿ ಕ್ವಿಂಟಲ್‌ಗೆ ₹28 ಸಾವಿರದಿಂದ ₹30 ಸಾವಿರ ಇದೆ.

ಹೊಸಪೇಟೆ ಎಪಿಎಂಸಿಗೆ ಆಂಧ್ರಪ್ರದೇಶ, ತೆಲಂಗಾಣ ಭಾಗದಿಂದ ಬೆಳ್ಳುಳ್ಳಿ ಪೂರೈಕೆ ಆಗುತ್ತದೆ. ಬೇರೆ ಜಿಲ್ಲೆಗಳಿಗೆ ಹೋಲಿಸಿದರೆ ಇಲ್ಲಿ ಧಾರಣೆ ಸ್ವಲ್ಪ ಕಡಿಮೆ ಇದೆ.

ಕಳೆದ ತಿಂಗಳು ಸಗಟು ಬೆಳ್ಳುಳ್ಳಿ ಧಾರಣೆ ಕೆ.ಜಿಗೆ ₹180 ಇತ್ತು. ಸದ್ಯ ₹220ಕ್ಕೆ ಏರಿಕೆಯಾಗಿದೆ. ಚಿಲ್ಲರೆ ದರ ಕೆ.ಜಿಗೆ ₹210ರಿಂದ ₹230 ಇತ್ತು. ಈಗ ₹280ರಿಂದ ₹300ಕ್ಕೆ ಏರಿದೆ.

'ಕೃತಕ ಅಭಾವ ಸೃಷ್ಟಿಸಿ ಬೆಲೆ ಹೆಚ್ಚಿಸುವ ಸಾಧ್ಯತೆಯಿದೆ. ಈ ಭಾಗದಲ್ಲೂ ಚಿಲ್ಲರೆ ಧಾರಣೆಯು ಕೆ.ಜಿ ₹350 ದಾಟುವ ಸಾಧ್ಯತೆಯಿದೆ' ಎಂದು ಹೊಸಪೇಟೆಯ ಸಗಟು ವ್ಯಾಪಾರಿ ಬಿ. ಸತೀಶ್ ಹೇಳಿದರು.

ಮಂಗಳೂರಿನಲ್ಲಿ ತಗ್ಗಿದ ಆವಕ

ಮಂಗಳೂರು: ಇಲ್ಲಿನ ಮಾರುಕಟ್ಟೆಯಲ್ಲಿ ಬೆಳ್ಳುಳ್ಳಿ ಆವಕ ಕಡಿಮೆಯಾಗಿದೆ.

'ಒಂದು ತಿಂಗಳಿನಿಂದಲೂ ದರದಲ್ಲಿ ಏರಿಳಿತವಾಗುತ್ತಿದೆ. ಈಗ ಹೊಸ ಸರಕು ಮಾರುಕಟ್ಟೆಗೆ ಬರುತ್ತಿದೆ. ಆದರೆ, ಬೇಡಿಕೆ ಇರುವಷ್ಟು ಪೂರೈಕೆ ಆಗುತ್ತಿಲ್ಲ. ಗ್ರಾಹಕರು ಕೂಡ ದರ ಹೆಚ್ಚಳದಿಂದಾಗಿ ಖರೀದಿ ಕಡಿಮೆ ಮಾಡಿದ್ದಾರೆ. ಒಂದು ಕೆ.ಜಿ ಖರೀದಿಸುವವರು ಕಾಲು ಕೆ.ಜಿ ಕೊಂಡೊಯ್ಯುತ್ತಾರೆ' ಎನ್ನುತ್ತಾರೆ ಹಂಪನಕಟ್ಟೆಯ ಕಿರಾಣಿ ವ್ಯಾಪಾರಿ ಗೋಪಾಲ ಪೈ.'ಮಾರುಕಟ್ಟೆಗೆ ಹಸಿ ಬೆಳ್ಳುಳ್ಳಿ ಹೆಚ್ಚು ಆವಕವಾಗುತ್ತಿದೆ. ಇದನ್ನು ದಾಸ್ತಾನು ಮಾಡಿದರೆ ದಿನದಿಂದ ದಿನಕ್ಕೆ ತೂಕ ತಗ್ಗುತ್ತದೆ. ಇದರಿಂದ ಚಿಲ್ಲರೆ ವ್ಯಾಪಾರಸ್ಥರಿಗೆ ನಷ್ಟವಾಗುತ್ತದೆ' ಎಂದರು.

ಸಂಕ್ಷಿಪ್ತ ಸುದ್ದಿ

ಐಐಎಂ ವಿದ್ಯಾರ್ಥಿಗೆ ₹1 ಕೋಟಿ ವೇತನ

ಇಂಧೋರ್ (ಪಿಟಿಐ): ಇಂಧೋರ್‌ನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ನ (ಐಐಎಂ) ವಿದ್ಯಾರ್ಥಿಗೆ ಇ–ಕಾಮರ್ಸ್ ಕಂಪನಿಯೊಂದರಲ್ಲಿ ವಾರ್ಷಿಕ ₹1 ಕೋಟಿ ವೇತನದ ಉದ್ಯೋಗ ದೊರೆಕಿದೆ.

ಪ್ರಸಕ್ತ ವರ್ಷ ಸಂಸ್ಥೆಯಲ್ಲಿ ನಡೆದ ಉದ್ಯೋಗ ನೇಮಕಾತಿಯ ಅಂತಿಮ ಸುತ್ತಿನಲ್ಲಿ ದೊರೆತಿರುವ ಅತಿಹೆಚ್ಚಿನ ವಾರ್ಷಿಕ ವೇತನದ ಪ್ಯಾಕೇಜ್ ಇದಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

₹20 ಲಕ್ಷ ಕೋಟಿ ದಾಟಿದ ರಿಲಯನ್ಸ್ ಮಾರುಕಟ್ಟೆ ಮೌಲ್ಯ

ನವದೆಹಲಿ (ಪಿಟಿಐ): ಉದ್ಯಮಿ ಮುಕೇಶ್ ಅಂಬಾನಿ ಒಡೆತನದ ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್‌ನ ಮಾರುಕಟ್ಟೆ ಮೌಲ್ಯವು (ಎಂ–ಕ್ಯಾಪ್) ₹20 ಲಕ್ಷ ಕೋಟಿ ದಾಟಿದೆ.

ಮಂಗಳವಾರ ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್‌ನಲ್ಲಿ ಷೇರಿನ ಮೌಲ್ಯ ಶೇ 1.88 ಮತ್ತು ನಿಫ್ಟಿಯಲ್ಲಿ ಶೇ 1.89ರಷ್ಟು ಏರಿಕೆಯಾಗಿದೆ.

ಇ.ವಿ ದರ ಇಳಿಕೆ

ನವದೆಹಲಿ (ಪಿಟಿಐ): ಟಾಟಾ ಮೋಟರ್ಸ್‌ನ ಎಲೆಕ್ಟ್ರಿಕ್ ವಾಹನಗಳ ಘಟಕವು ನೆಕ್ಸಾನ್ ಮತ್ತು ಟಿಯಾಗೊ ಎಲೆಕ್ಟ್ರಿಕ್ ಕಾರಿನ ಬೆಲೆಯನ್ನು ಇಳಿಕೆ ಮಾಡಿದೆ. ಗ್ರಾಹಕರಿಗೆ ಬ್ಯಾಟರಿ ಬೆಲೆ ಕಡಿತದ ಮೊತ್ತ ರವಾನಿಸಲು ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಕಂಪನಿ ತಿಳಿಸಿದೆ.

ಪ್ರಸ್ತುತ ನೆಕ್ಸಾನ್ ಇ.ವಿ ಮಾದರಿಯ ಕಾರಿನ ಬೆಲೆಯಲ್ಲಿ ₹1.2 ಲಕ್ಷ ಕಡಿತ ಮಾಡಿದ್ದು, ₹14.49 ಲಕ್ಷ ಆರಂಭಿಕ ಬೆಲೆಗೆ ದೊರೆಯಲಿದೆ. ಟಿಯಾಗೊ ಇ.ವಿ ಬೆಲೆಯಲ್ಲಿ ₹70 ಸಾವಿರದವರೆಗೆ ಕಡಿತಗೊಳಿಸಲಾಗಿದೆ. ಈ ಕಾರು ₹7.99 ಲಕ್ಷ ಆರಂಭಿಕ ಬೆಲೆಗೆ ದೊರೆಯಲಿದೆ.

ಮುಂಬೈ ಧಾರಣೆ

ಶೇಂಗಾ

13-02-2024

ಜಾವಾ 70/80(ಹೊಸ)	11000-11100
ಜಾವಾ 80/90(ಹೊಸ)	10600-10700
ದಪ್ಪ ಮಧ್ಯಪ್ರದೇಶ(ಹೊಸ)	9800-9900
ದಪ್ಪ ಗುಜರಾತ್(ಹೊಸ)	10600-10700

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1460 (1460)
ಒಂದು ವಾರದ ಡೆಲಿವರಿ	1455 (1455)
ಸೋಯಾ ಕಚ್ಚಾ	858 (855)
ಪಾಮ್ ವಾರದ ಡೆಲಿವರಿ	857 (854)
ಸೂರ್ಯಕಾಂತಿ ಎಣ್ಣೆ ಕಚ್ಚಾ	850 (860)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ

₹62,000 (62,150)

ಬೆಳ್ಳಿ ಕೆ.ಜಿ ₹70,850 (70,850)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಎನ್.ಆರ್.ಪುರ ರಬ್ಬರ್



(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4 ₹160.50

ಆರ್‌ಎಸ್‌ಎಸ್-5 ₹155.50

ಗುಡ್ ಲಾಟ್ ₹139

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	1000-1100
ನಡುಗೋಲು	1250-1300
ರಾಶಿ	1350-1400
ರಾಶಿ ಉತ್ತಮ	1450-1500
ಹೆರಕಿದ್ದು	2000-2100
ಹಸಿರು ಸಾಧಾರಣ	1300-1400
ಹಸಿರು ಉತ್ತಮ	1800-1850
ಹಸಿರು ಅತಿ ಉತ್ತಮ	2200-2300
ಕಾಳು ಮೆಣಸು	530
ಅಡಿಕೆ	
ಬಂಟ್ವಾಳ	
ಕೋಕ	18000-28500
ಹೊಸತು	28500-34500
ಹಳತು	35000-44500
ಕಾರ್ಕಳ	
ಹೊಸತು	25000-34500
ಹಳತು	30000-44500
ಪುತ್ತೂರು	
ಹೊಸತು	26500-34500
ಸಾಗರ	
ಬಿಳಿಗೋಟು	22499-22499
ಚಾಲಿ	31899-32599
ಕೋಕ	24569-24569
ಕೆಂಪುಗೋಟು	23969-32155
ರಾಶಿ	33269-46599
ಸಿಪ್ಪೆಗೋಟು	13366-17266
ಶಿವಮೊಗ್ಗ	
ಬೆಟ್ಟೆ	30379-55109
ಗೊರಬಲು	29699-38169
ರಾಶಿ	30379-48099
ಸರಕು	41000-81096
ಸಿದ್ದಾಪುರ	
ಬಿಳಿಗೋಟು	28299-31576
ಚಾಲಿ	35019-37499
ಕೋಕ	27399-31399
ಹೊಸಚಾಲಿ	31179-35179
ಕೆಂಪುಗೋಟು	30089-35899
ರಾಶಿ	42419-47139
ತಟ್ಟಿಬೆಟ್ಟೆ	39899-43819
ಶಿರಸಿ	
ಬೆಟ್ಟೆ	38399-44599
ಬಿಳಿಗೋಟು	25391-32113
ಚಾಲಿ	35208-38752
ಕೆಂಪುಗೋಟು	30218-35418
ರಾಶಿ	43218-47509
ಯಲ್ಲಾಪುರ	
ಅಪಿ	56899-64169
ಬಿಳಿಗೋಟು	21569-31899
ಚಾಲಿ	32299-38509
ಕೋಕ	16879-27710
ಕೆಂಪುಗೋಟು	26899-37810
ರಾಶಿ	46099-55269
ತಟ್ಟಿಬೆಟ್ಟೆ	36890-45479

ಕಾಫಿ (50 ಕೆ.ಜಿಗೆ ₹ ಗಳಲ್ಲಿ)



	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್	ಅಲ್ಲಾನಾ	ನ್ಯೂಯಾರ್ಕ್
ಎಪಿ	14,500	14,500	-	195.60 ಸೆಂಟ್ಸ್
ಎಸಿ	7,952	7,800	-	
ಆರ್‌ಪಿ	13,200	13,400	-	ಲಂಡನ್
ಆರ್‌ಸಿ	7,560	280 on OT	-	3,324 ಡಾಲರ್ಸ್

ಪ್ರಶ್ನೋತ್ತರ



ಪ್ರಮೋದ ಶ್ರೀಕಾಂತ ದೈತೋಟ

ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ದಾವಣಗೆರೆ ಕೃಷ್ಣ, ಬೆಂಗಳೂರು.

- **ಪ್ರಶ್ನೆ: ಮುಂದಿನ ಕೆಲವು ವರ್ಷಗಳ ನಂತರ ನಿವೃತ್ತಿ ಹೊಂದಿದಾಗ ನನ್ನ ಬಳಿ ಪಿ.ಎಫ್ ಹಾಗೂ ಗ್ರಾಚ್ಯುಟಿ ಇತ್ಯಾದಿಗಳಿಂದ ಸುಮಾರು ₹1 ಕೋಟಿಯಷ್ಟು ನಿಧಿ ಇರುವ ಸಾಧ್ಯತೆ ಇದೆ. ಖಾಸಗಿ ವೃತ್ತಿಯಾಗಿರುವುದರಿಂದ ಪಿಂಚಣಿಯನ್ನು ನಾನೇ ವ್ಯವಸ್ಥೆ ಮಾಡಿಕೊಳ್ಳಬೇಕು. ತಿಂಗಳಿಗೆ ₹50,000 ಪಿಂಚಣಿ ಬೇಕಿದೆ. ಇದಕ್ಕಾಗಿ 60 ವಯಸ್ಸಿಗೆ ನಿವೃತ್ತಿ ಹೊಂದಿದ ನಂತರ ಮುಂದಿನ ಸುಮಾರು 30 ವರ್ಷಗಳ ತನಕ ಪಿಂಚಣಿ ಮೊತ್ತ ಪ್ರತಿ ಮೂರು ವರ್ಷಗಳಿಗೊಮ್ಮೆ ಶೇ 10ರಷ್ಟು ಏರಿಕೆ ಕಾಣುವಂತಿರಬೇಕಾದರೆ ಸಿಗುವ ಹಣವನ್ನು ಯಾವ ರೀತಿ ಹೂಡಿಕೆ ಮಾಡಬೇಕು?**

ಉತ್ತರ: ಸಾಮಾನ್ಯವಾಗಿ ನಿವೃತ್ತಿ ಬದುಕಿನ ನಂತರದ ಆರ್ಥಿಕ ಅಗತ್ಯಗಳಿಗೆ ವೃತ್ತಿ ಬದುಕಿನ ಆದ್ಯ ಹಂತದಲ್ಲೇ ಯೋಜನೆ ನಿರೂಪಿಸುವುದು ಇಂದಿನ ಅಗತ್ಯ. ಅದರಲ್ಲೂ ಸ್ವಉದ್ಯೋಗಿಗಳಿಗೆ ಹಾಗೂ ಖಾಸಗಿ ವೃತ್ತಿಯಲ್ಲಿ ಇರುವವರಿಗೆ ಇದು ತೀರಾ ಅನಿವಾರ್ಯ. ನೀವು ನೀಡಿರುವ ಮಾಹಿತಿಗೆ ಸಂಬಂಧಿಸಿ ಕೆಲವು ಹೂಡಿಕೆ ಮಾಹಿತಿಯನ್ನು ಈ ಕೆಳಗಿನಂತೆ ನೀಡಬಹುದು.

1. ನಿವೃತ್ತಿ ನಿಧಿಯ ಹೂಡಿಕೆ: ನೀವು ನಿವೃತ್ತಿ ಸಂದರ್ಭದಲ್ಲಿ ಸುಮಾರು ಒಂದು ಕೋಟಿ ಮೊತ್ತವನ್ನು ಪಿ.ಎಫ್ ಹಾಗೂ ಗ್ರಾಚ್ಯುಟಿ ಇತ್ಯಾದಿಗಳಿಂದ ಬರಬಹುದು ಎಂದು ಊಹಿಸಿದ್ದೀರಿ. ಮುಂದೆ ಸಿಗಬಹುದಾದ ಮೊತ್ತವನ್ನು ಆ ಸಂದರ್ಭದಲ್ಲಿ ಸಮಯೋಚಿತವಾಗಿ, ಸೂಕ್ತ ಯೋಜನೆಗಳಲ್ಲಿ ಹೂಡಿಕೆ ಮಾಡಿ ನೀವು ನಿರೀಕ್ಷಿಸುವ ಮಾಸಿಕ ಆದಾಯ/ಪಿಂಚಣಿಯನ್ನು ಆ ಸಂದರ್ಭದಲ್ಲೂ ಪಡೆಯಬಹುದು. ನಿಮ್ಮ ಮೊತ್ತವನ್ನು ಪ್ರಸ್ತುತ ಅಂಚೆ ಇಲಾಖೆಯಲ್ಲಿ ಲಭ್ಯ ಇರುವ ವಿವಿಧ ಯೋಜನೆಗಳಲ್ಲಿ ಹೂಡಿಕೆ ಮಾಡಬಹುದು. ಮುಂದಿನ ವರ್ಷಗಳಲ್ಲೂ ಇವು ಮುಂದುವರಿಯಲಿದ್ದು ಶೇ 8ರ ಅಂದಾಜು ಆದಾಯ ಬಂದರೂ ವರ್ಷಕ್ಕೆ ₹8 ಲಕ್ಷ ಆದಾಯ ಸಿಗಲಿದೆ. ನಿವೃತ್ತ ಉದ್ಯೋಗಿಗಳಿಗೆ ಸಿಗುವ ಏಕ ಕಂತಿನ ಮೊತ್ತವನ್ನು ಇದರಲ್ಲಿ ₹30 ಲಕ್ಷದ ತನಕ ಹೂಡಿಕೆ ಮಾಡಬಹುದು. ಪ್ರಸ್ತುತ ಇದಕ್ಕೆ ಶೇ8.2ರಷ್ಟು ಬಡ್ಡಿ ಸಿಗುತ್ತದೆ.

ಇದಲ್ಲದೆ, ರಾಷ್ಟ್ರೀಯ ಉಳಿತಾಯ ಮಾಸಿಕ ಆದಾಯ ಯೋಜನೆಗಳಲ್ಲೂ (ಎಂಐಎಸ್) ಹೂಡಿಕೆ ಮಾಡಬಹುದು. ಇದಕ್ಕೆ ₹9 ಲಕ್ಷದ ಮಿತಿ ಇದೆ. ಪತಿ-ಪತ್ನಿ ಇಬ್ಬರ ಹೆಸರಲ್ಲಿ ಜಂಟಿ ಖಾತೆ ತೆರೆದು ಹೂಡಿದರೆ ₹15 ಲಕ್ಷ ಹೂಡಲು ಅವಕಾಶವಿದೆ. ಇದಕ್ಕೆ ಪ್ರಸ್ತುತ ಶೇ 7.2ರಷ್ಟು ಬಡ್ಡಿದರ ಇದೆ. ಉಳಿದ ಮೊತ್ತವನ್ನು ಯಾವುದೇ ಆರ್ಥಿಕ ಅಪಾಯ ಇರದ ಹೂಡಿಕೆಗಳಾದ ಬ್ಯಾಂಕಿನ ನಿಖರ ಠೇವಣಿ, ಪಿಪಿಎಫ್ ಇತ್ಯಾದಿಗಳಲ್ಲಿ ಹೂಡಿಕೆ ಮಾಡಿ ಬಡ್ಡಿ ಪಡೆಯಬಹುದು.

2. ನಿವೃತ್ತಿ ಪಿಂಚಣಿಗಾಗಿ ಹೂಡಿಕೆ: ನೀವು ನೀಡಿದ ಮಾಹಿತಿಯಲ್ಲಿ ನಿಮ್ಮ ಪ್ರಸ್ತುತ ವಯಸ್ಸು ಹಾಗೂ ನಿವೃತ್ತಿಗಿರುವ ಮುಂದಿನ ಕಾಲಾವಧಿ ಏನೆಂಬುದನ್ನು ತಿಳಿಸಿಲ್ಲ. ಆದರೂ ನಿಮ್ಮ ಪ್ರಸ್ತುತ ಇರುವ ತಿಂಗಳ ಆದಾಯದಲ್ಲಿ ಒಂದಿಷ್ಟು ಮೊತ್ತವನ್ನು ಎನ್‌ಪಿಎಸ್‌ನಲ್ಲಿ ಹೂಡಿಕೆ ಮಾಡಿ. ಇದು ಸ್ವಉದ್ಯೋಗಿಗಳಿಗೆ ಹಾಗೂ ಖಾಸಗಿ ವೃತ್ತಿಯಲ್ಲಿ ಇರುವವರಿಗೆ ತಮ್ಮ 60ನೆಯ ವಯಸ್ಸಿನಿಂದ ಮುಂದೆ ಪಿಂಚಣಿ ಹಾಗೂ ಏಕ ಕಂತಿನ ಮೊತ್ತ ಪಡೆಯುವಲ್ಲಿ ನೆರವಾಗುತ್ತದೆ. 'ಆಟೊ ಚಾಯ್ಸ್' ಹೂಡಿಕೆ ವಿಧಾನವನ್ನು ಆಯ್ಕೆ ಮಾಡುವ ಮೂಲಕ ಹೂಡಿಕೆಯಾದ ಮೊತ್ತವನ್ನು ನಿಮ್ಮ ವಯೋಮಾನಕ್ಕೆ ಅನುಗುಣವಾಗಿ ಸಂಬಂಧಿತ ಎನ್‌ಪಿಎಸ್ ಪಾಲುದಾರ ಸಂಸ್ಥೆಗಳೇ ಹೂಡಿಕೆ ನಿರ್ವಹಣೆ ಮಾಡುತ್ತವೆ.

ಈ ಹೂಡಿಕೆಯ ಒಂದಷ್ಟು ಭಾಗವನ್ನು ಈಕ್ವಿಟಿ ಮಾರುಕಟ್ಟೆಯಲ್ಲೂ, ಉಳಿದ ಮೊತ್ತವನ್ನು ನಿಶ್ಚಿತ ಆದಾಯ ಬರುವ ಸರ್ಕಾರಿ ಬಾಂಡ್, ಕಂಪನಿಗಳ ಸಾಲಪತ್ರ ಇತ್ಯಾದಿಗಳಲ್ಲಿ ಪ್ರತಿ ಹೂಡಿಕೆ ಮಾಡುತ್ತವೆ. ನಿಮ್ಮ 60ನೆಯ ವಯಸ್ಸಿಗೆ ಆ ಸಂದರ್ಭದಲ್ಲಿರುವ ಮೊತ್ತದ ಶೇ 60ರಷ್ಟನ್ನು ನಿಮಗೆ ಒಂದೇ ಕಂತಿನಲ್ಲಿ ಹಿಂದಿರುಗಿಸಲಾಗುತ್ತದೆ. ಉಳಿದ ಮೊತ್ತವನ್ನು ನಿಮ್ಮ ಮಾಸಿಕ ಪಿಂಚಣಿಗಾಗಿ ಉಳಿಸಿಕೊಳ್ಳಲಾಗುತ್ತದೆ.

ಪ್ರತಿ ಮೂರು ವರ್ಷಕ್ಕೊಮ್ಮೆ ಶೇ 10ರ ದರದಲ್ಲಿ ಪಿಂಚಣಿಯಲ್ಲಿ ವೃದ್ಧಿ ಪಡೆಯಲು ನಿರೀಕ್ಷಿಸುತ್ತಿದ್ದೀರಿ. ಇದಕ್ಕಾಗಿ ಈಗಲೇ ಪ್ರತಿ ತಿಂಗಳೂ ಈಕ್ವಿಟಿ ವಿಭಾಗದ ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡಿ. ಇದು ಷೇರು ಮಾರುಕಟ್ಟೆಗೆ ನೇರ ಸಂಬಂಧಿಸಿದ್ದರಿಂದ ದೀರ್ಘಾವಧಿಯಲ್ಲಿ ಬಡ್ಡಿ ಆದಾಯಕ್ಕಿಂತ ಅಧಿಕ ಆದಾಯ/ಲಾಭ ನಿರೀಕ್ಷಿಸಲು ಸಾಧ್ಯ.

ರಮೇಶ್ ಕುಮಾರ್, ಕೋರಮಂಗಲ, ಬೆಂಗಳೂರು.

- **ಪ್ರಶ್ನೆ: ಇತ್ತೀಚೆಗೆ ಮಂಡಿಸಿರುವ ಕೇಂದ್ರದ ಮಧ್ಯಂತರ ಬಜೆಟ್‌ನಲ್ಲಿ ಹಿಂದಿನ ಅನೇಕ ತೆರಿಗೆ ಬಾಕಿಗಳ ಬಗ್ಗೆ ಮನ್ನಾ ಮಾಡುವ ಪ್ರಸ್ತಾವ ಇಡಲಾಗಿದೆ. ನನ್ನ ಹೆಸರಲ್ಲಿ 20 ವರ್ಷ ಹಿಂದಿನ ಒಂದೆರಡು ವರ್ಷಗಳ ಹಳೆಯ ತೆರಿಗೆ ಬಾಕಿ ಇದೆ. ಇದು ಆನ್‌ಲೈನ್ ಫೈಲಿಂಗ್ ಆರಂಭವಾಗುವ ಮೊದಲು ಇದ್ದ ಪೇಪರ್ ಆಧಾರಿತ ರಿಟರ್ನ್ಸ್ (ಆರ್ಥಿಕ ವರ್ಷ 2002-03 ಹಾಗೂ 2004-05) ಸಲ್ಲಿಕೆಗೆ ಸಂಬಂಧಿಸಿದ್ದು. ಇನ್ನೂ ಪೋರ್ಟಲ್‌ನಲ್ಲಿ ₹12 ಸಾವಿರ ಹಾಗೂ ₹8 ಸಾವಿರದ ಅಂದಾಜು ತೆರಿಗೆ ಪಾವತಿ ಬಾಕಿ ಇದೆ ಎಂದು ತೋರಿಸುತ್ತಿದೆ. ಇದರಿಂದ ಕೆಲವು ವರ್ಷ ರಿಫಂಡ್ ಬಂದಿಲ್ಲ. ಇದನ್ನು ಮನ್ನಾ ಮಾಡಿ ಮುಂದಕ್ಕೆ ಸರಿಪಡಿಸಬಹುದೇ. ಇದಕ್ಕೇನು ಮಾಡಬೇಕು.**

ಉತ್ತರ: ಈ ಬಾರಿ ಮಂಡಿಸಲಾದ ಬಜೆಟ್ ಯಾವುದೇ ಪೂರ್ಣ ಪ್ರಮಾಣದ ಬಜೆಟ್ ಅಲ್ಲ. ಅದು ಕೇವಲ ಲೇಖಾನುದಾನವಷ್ಟೇ. ಆದರೆ, ಹಳೆಯ ತೆರಿಗೆ ಮನ್ನಾದ ಬಗ್ಗೆ ಅಗತ್ಯ ಪ್ರಸ್ತಾವಗಳನ್ನು ಮಾಡಿ ತೆರಿಗೆ ಇಲಾಖೆ ಹಾಗೂ ತೆರಿಗೆದಾರರ ಮಧ್ಯೆ ಇದ್ದ ಅನೇಕ ವ್ಯಾಜ್ಯಗಳನ್ನು ನಿವಾರಿಸಲು ಕೇಂದ್ರ ಸರ್ಕಾರ ಮುಂದಡಿ ಇಟ್ಟಿರುವುದು ಅನೇಕರಿಗೆ ನೆರವಾದೀತು. ಆರ್ಥಿಕ ವರ್ಷ 2009-10ರ ತನಕದ ತೆರಿಗೆ ಡಿಮಾಂಡ್‌ಗಳಿಗೆ ಸಂಬಂಧಿಸಿ ₹25 ಸಾವಿರದ ತನಕ ಹಾಗೂ ಆರ್ಥಿಕ ವರ್ಷ 2010-11ರಿಂದ 2014-15ರ ಅವಧಿಯ ತೆರಿಗೆ ಡಿಮಾಂಡ್‌ಗಳಿಗೆ ₹10 ಸಾವಿರದ ತನಕ ಮನ್ನಾ ಮಾಡುವ ಪ್ರಸ್ತಾವ ಇಡಲಾಗಿದೆ. ಇದಕ್ಕೆ ಪೇಪರ್ ಆಧಾರಿತ ದತ್ತಾಂಶ ವರ್ಗಾವಣೆ ಸಂದರ್ಭದಲ್ಲಿ ತೆರಿಗೆ ಇಲಾಖೆಯಲ್ಲೂ ಸಾಕಷ್ಟು ಪುರಾವೆಗಳು ಇಲ್ಲದಿರುವುದೂ ಕಾರಣ. ಈ ಬಗ್ಗೆ ತೆರಿಗೆದಾರರನ್ನು ಬೆನ್ನತ್ತಿ ತೆರಿಗೆ ಸಂಗ್ರಹಿಸುವ ಖರ್ಚು ಹೆಚ್ಚಾಗುತ್ತಿರುವುದು, ಎಲ್ಲರ ಸಮಯವೂ ವ್ಯರ್ಥವಾಗುತ್ತಿರುವುದು ಕೂಡ ಕಾರಣ.

ನಿಮ್ಮ ವಿಚಾರಕ್ಕೆ ಸಂಬಂಧಿಸಿ ಹೇಳುವುದಾದರೆ, ಕೇಂದ್ರೀಯ ನೇರ ತೆರಿಗೆ ಮಂಡಳಿಯಿಂದ ಅಧಿಕೃತ ಮಾಹಿತಿ ಹಾಗೂ ಅದಕ್ಕೆ ಯಾವೆಲ್ಲ ಹಂತದ ತೆರಿಗೆ ವ್ಯಾಜ್ಯಗಳು ಅರ್ಹ ಎಂಬುದರ ಬಗ್ಗೆ ಇನ್ನೂ ಸುತ್ತೋಲೆ ಬರಬೇಕಾಗಿದೆ. ತದನಂತರವಷ್ಟೇ ಈ ಸಂಬಂಧ ನಿಜವಾದ ಅರ್ಹ ತೆರಿಗೆದಾರರನ್ನು ಗುರುತಿಸುವುದು ಸಾಧ್ಯ. ಅಲ್ಲಿಯ ತನಕ ನೀವು ಸಂಪೂರ್ಣ ಮಾಹಿತಿಗಾಗಿ ಕಾಯಬೇಕಾಗುತ್ತದೆ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.

ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001.

ಇ–ಮೇಲ್: businessdesk@prajavani.co.in

ಸವಾಲುಗಳ ಸುಳಿಯಿಂದ ಎದ್ದುಬಂದ ದೇವದತ್ತ

ಭಾರತ ಟೆಸ್ಟ್ ತಂಡಕ್ಕೆ ಆಯ್ಕೆಯಾದ ಕರ್ನಾಟಕದ ಪ್ರಥಮ ಎಡಗೈ ಬ್ಯಾಟರ್

• ಗಿರೀಶ ದೊಡ್ಡಮನಿ

ಬೆಂಗಳೂರು: ಭಾರತ ಕ್ರಿಕೆಟ್ ತಂಡಕ್ಕೆ ಹಲವು ಶ್ರೇಷ್ಠ ಆಟಗಾರರನ್ನು ನೀಡಿದ ಹೆಗ್ಗಳಿಕೆ ಕರ್ನಾಟಕದ್ದು. ಆದರೆ ಇದುವರೆಗೂ ರಾಜ್ಯದಿಂದ ಪರಿಣತ ಎಡಗೈ ಬ್ಯಾಟರ್ ರಾಷ್ಟ್ರೀಯ ತಂಡದಲ್ಲಿ ಸ್ಥಾನ ಪಡೆದಿರಲಿಲ್ಲ. ಇದೀಗ ಆ ಕೊರತೆಯನ್ನು ದೇವದತ್ತ ಪಡಿಕ್ಕಲ್ ನಿವಾರಿಸಿದ್ದಾರೆ.

ಇಂಗ್ಲೆಂಡ್ ವಿರುದ್ಧದ ಟೆಸ್ಟ್ ಕ್ರಿಕೆಟ್ ಸರಣಿಯ ಮೂರು ಪಂದ್ಯಗಳಿಗೆ ಅವರು ಆಯ್ಕೆಯಾಗಿ ದ್ದಾರೆ. ಕನ್ನಡಿಗ ಕೆ.ಎಲ್. ರಾಹುಲ್ ಗಾಯಗೊಂಡಿರುವುದರಿಂದ 23 ವರ್ಷದ ಪಡಿಕ್ಕಲ್‌ಗೆ ಅವಕಾಶ ಒದಗಿ ಬಂದಿದೆ. ಆದರೆ ದೇವದತ್ತಗೆ ಈ ಅವಕಾಶ ಸುಲಭವಾಗಿ ಸಿಕ್ಕಿಲ್ಲ. ಕಳೆದ ನಾಲ್ಕು ವರ್ಷಗಳಲ್ಲಿ ಕಾಡಿದ ಅನಾರೋಗ್ಯದ ಸಮಸ್ಯೆಗಳನ್ನು ಮೀರಿ ನಿಂತಿದ್ದಾರೆ.

'ದೇವದತ್ತ ಕಳೆದ 12 ವರ್ಷಗಳಿಂದ ನನ್ನ ಬಳಿ ತರಬೇತಿ ಪಡೆಯುತ್ತಿದ್ದಾರೆ. ಕಠಿಣ ಪರಿಶ್ರಮ, ನಿರಂತರ ಏಕಾಗ್ರತೆ ಮತ್ತು ಛಲ ಬಿಡದ ಪ್ರಯತ್ನಗಳಿಗೆ ಯಾವತ್ತೂ ಉತ್ತಮ ಫಲ ದೊರೆಯುತ್ತದೆ ಎನ್ನುವುದಕ್ಕೆ ಅವರು ಉತ್ತಮ ಉದಾಹರಣೆ. ಆರೋಗ್ಯ ಕೈಕೊಟ್ಟಾಗಲೂ ಎದೆಗುಂದಲಿಲ್ಲ. ಭಾರತ ತಂಡದಲ್ಲಿ ಟೆಸ್ಟ್ ಕ್ರಿಕೆಟ್ ಆಡುವ ಗುರಿಯನ್ನು ಬಿಟ್ಟುಕೊಡಲಿಲ್ಲ. ಅದಕ್ಕಾಗಿಯೇ ಅವರಿಗೆ ಈ ಅವಕಾಶ ಒದಗಿಬಂದಿದೆ. ಹಾಗೆ ನೋಡಿದರೆ ಎರಡು, ಮೂರು ವರ್ಷಗಳ ಹಿಂದೆಯೇ ಭಾರತ ತಂಡದಲ್ಲಿ ಸ್ಥಾನ ಪಡೆಯಬೇಕಿತ್ತು. ಆದರೆ ಕಾಡಿದ ಅನಾರೋಗ್ಯದಿಂದಾಗಿ ಇಲ್ಲಿಯವರೆಗೆ ಕಾಯಬೇಕಾಯಿತು. ಈಗ ಎಲ್ಲವೂ ಇದೆ. ಭವಿಷ್ಯದಲ್ಲಿ ದೊಡ್ಡ ಆಟಗಾರನಾಗುವ ಸಾಮರ್ಥ್ಯ ಈ ಹುಡುಗನಿಗೆ ಇದೆ' ಎಂದು ದೇವದತ್ತ ಅವರ ಬಾಲ್ಯದ ಕೋಚ್, ಕರ್ನಾಟಕ ಇನ್‌ಸ್ಟಿಟ್ಯೂಟ್ ಆಫ್ ಕ್ರಿಕೆಟ್ (ಕೆಐಒಸಿ) ಸಂಸ್ಥೆಯ ಇರ್ಫಾನ್ ಸೇಟ್ ಸಂತಸ ವ್ಯಕ್ತಪಡಿಸಿದರು.

'2020ರ ಐಪಿಎಲ್‌ನಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡಕ್ಕೆ ದೇವದತ್ತ ಆಯ್ಕೆಯಾಗಿದ್ದರು. ಆದರೆ ಆಗ ಅವರಿಗೆ ಕೋವಿಡ್ ಆಗಿತ್ತು. ಆದ್ದರಿಂದ ಮೊದಲ ಪಂದ್ಯದಲ್ಲಿ ಆಡಲು ಸಾಧ್ಯವಾಗಿರಲಿಲ್ಲ. ಚೇತರಿಸಿಕೊಂಡ ಅವರು ನಂತರದ ಪಂದ್ಯಗಳಲ್ಲಿ ಆಡಿದ್ದರು. ಆ ಟೂರ್ನಿಯಲ್ಲಿ 473 ರನ್‌ಗಳನ್ನು ಕಲೆಹಾಕಿ ಉದಯೋನ್ಮುಖ ಆಟಗಾರ ಪ್ರಶಸ್ತಿ ಗಳಿಸಿದ್ದರು. 2020–21ರ ವಿಜಯ್ ಹಜಾರೆ ಟ್ರೋಫಿ (ಏಕದಿನ) ಕ್ರಿಕೆಟ್ ಟೂರ್ನಿಯಲ್ಲಿಯೂ ನಾಲ್ಕು ಶತಕ ಗಳಿಸಿದ್ದರು. ಲಿಸ್ಟ್ ಎ ಪಂದ್ಯದಲ್ಲಿ ಈ ಸಾಧನೆ ಮಾಡಿದ ಮೊದಲ ಬ್ಯಾಟರ್ ಆಗಿದ್ದರು. 2021ರ ಐಪಿಎಲ್‌ನಲ್ಲಿಯೂ ಅವರು 400ಕ್ಕೂ ಹೆಚ್ಚು ರನ್ ಗಳಿಸಿದ್ದರು. ಅದೇ ವರ್ಷ ಶ್ರೀಲಂಕಾ ಎದುರಿನ ಟಿ20 ಸರಣಿಯಲ್ಲಿ ಆಡಲು ಭಾರತ ತಂಡದಲ್ಲಿ ಸ್ಥಾನ ಗಳಿಸಿದ್ದರು' ಎಂದು ಇರ್ಫಾನ್ ಹೆಮ್ಮೆ ವ್ಯಕ್ತಪಡಿಸುತ್ತಾರೆ.



ದೇವದತ್ತ ಪಡಿಕ್ಕಲ್

ಆದರೆ ಅದೇ ವರ್ಷ ದೇವದತ್ತ ಆರೋಗ್ಯ ಕೈಕೊಟ್ಟಿತು. ಪಚನಕ್ರಿಯೆಗೆ ಸಂಬಂಧಿಸಿದ ಸಮಸ್ಯೆ ಕಾಡಿತು. ದೇಹದ ತೂಕ ಇಳಿದುಹೋಯಿತು. ಚೇತರಿಸಿಕೊಳ್ಳಲು ದೀರ್ಘ ಕಾಲ ಹಿಡಿಯಿತು. ಸುಮಾರು ಒಂದೂವರೆ ವರ್ಷ ಅವರು ಕ್ರಿಕೆಟ್‌ಗೆ ಮರಳಲು ಶ್ರಮಪಡಬೇಕಾಯಿತು. ಒಂದು ಐಪಿಎಲ್ ಆವೃತ್ತಿಯಿಂದಲೂ ಹೊರಗುಳಿದರು. ಆದರೆ ವಾಪಸಾದ ನಂತರ ಅವರು ಬೇಗನೆ ಲಯಕ್ಕೆ ಮರಳಿದ್ದು ವಿಶೇಷ.

ಪ್ರಸಕ್ತ ರಣಜಿ ಋತುವಿನಲ್ಲಿಯೂ ಅವರ ಅಮೋಘ ಆಟ ಕರ್ನಾಟಕದ ಗೆಲುವಿನಲ್ಲಿ ಪ್ರಮುಖ ವಹಿಸಿದೆ. ಈ ಋತುವಿನಲ್ಲಿ ಅವರು ನಾಲ್ಕು ಪಂದ್ಯ ಆಡಿದ್ದಾರೆ. ಮೂರು ಶತಕ ಹೊಡೆದಿದ್ದಾರೆ. ಟೂರ್ನಿಯ ಮಧ್ಯದಲ್ಲಿಯೇ ಅವರಿಗೆ ಭಾರತ ಎ ತಂಡಕ್ಕೆ ಬುಲಾವ್ ಬಂದಿತ್ತು. ಇಂಗ್ಲೆಂಡ್ ಲಯನ್ಸ್ ವಿರುದ್ಧದ ಪಂದ್ಯಗಳಲ್ಲಿಯೂ ಅವರು ಮಿಂಚಿದ್ದರು. ಅಲ್ಲಿಯೂ ಒಂದು ಶತಕ ಹೊಡೆದಿದ್ದರು. ಇದರಿಂದಾಗಿ ಅಜಿತ್ ಅಗರ್ಕರ್ ನೇತೃತ್ವದ ಆಯ್ಕೆ ಸಮಿತಿಯ ಗಮನ ಸೆಳೆದಿದ್ದರು.

ಮೂರು ಮಾದರಿಯಲ್ಲಿಯೂ ರನ್‌ಗಳನ್ನು ಹರಿಸಬಲ್ಲ ಆಟಗಾರ ಎಂಬುದನ್ನು ದೇಶಿ ಮತ್ತು ಐಪಿಎಲ್‌ನಲ್ಲಿ ಸಾಬೀತುಪಡಿಸಿರುವ ದೇವದತ್ತ, ಪ್ರತಿದಿನ ನೆಟ್ಸ್‌ನಲ್ಲಿ 400ಕ್ಕೂ ಹೆಚ್ಚು ಎಸೆತಗಳನ್ನು ಬ್ಯಾಟಿಂಗ್ ಅಭ್ಯಾಸ ಮಾಡುತ್ತಾರೆ. ಥ್ರೋಡೌನ್, ಯಂತ್ರ ಮತ್ತು ಬೌಲರ್‌ಗಳ ಎಸೆತಗಳನ್ನು ಎದುರಿಸುತ್ತಾರೆ. ಫೀಲ್ಡಿಂಗ್‌ನಲ್ಲಿಯೂ ಚುರುಕಾಗಿದ್ದಾರೆ.

'ಕ್ರಿಕೆಟ್‌ನಲ್ಲಿ ಅಷ್ಟೇ ಅಲ್ಲ. ಓದಿನಲ್ಲಿಯೂ ಮುಂದಿದ್ದಾರೆ. ಹತ್ತನೇ ತರಗತಿಯಲ್ಲಿದ್ದಾಗ ವಯೋಮಿತಿಯ ಟೂರ್ನಿಗಳಲ್ಲಿ ಆಡುತ್ತಿದ್ದರು. ಒಂದಿಷ್ಟೂ ಬಿಡುವು ಇರಲಿಲ್ಲ. ಪಂದ್ಯ ಆಡಲು ಹೋದಲ್ಲೆಲ್ಲ ಪುಸ್ತಕಗಳನ್ನು ಒಯ್ಯುತ್ತಿದ್ದರು. ಮಿತಭಾಷಿಯಾಗಿರುವ ಅವರು ಬಿಡುವಾದಾಗಲೆಲ್ಲ ಓದುತ್ತಿದ್ದರು. ಐಸಿಎಸ್‌ಸಿ ಪಠ್ಯದಲ್ಲಿ ಶೇ 95ರಷ್ಟು ಅಂಕ ಗಳಿಸಿದ್ದರು. ಅವರ ಕುಟುಂಬವು ಕೇರಳ ಮೂಲದ್ದು. ಆದರೆ ದೇವದತ್ತ ಕನ್ನಡದಲ್ಲಿ ಚೆನ್ನಾಗಿ ಮಾತನಾಡುತ್ತಾರೆ' ಎಂದು ಇರ್ಫಾನ್ ಹೇಳುತ್ತಾರೆ.

ಮೂರು ಟೆಸ್ಟ್‌ಗಳಲ್ಲಿ ಕೊನೆಯ ಪಕ್ಷ ಒಂದರಲ್ಲಾದರೂ ಪದಾರ್ಪಣೆಯ ಅವಕಾಶ ಸಿಗುತ್ತದೆ ಎಂಬ ಭರವಸೆ ಅವರದ್ದು.

25ರಂದು ದೆಹಲಿ ಮ್ಯಾರಥಾನ್

ನವದೆಹಲಿ (ಪಿಟಿಐ): ಭಾರತ ಅಥ್ಲೆಟಿಕ್ ಫೆಡರೇಷನ್‌ನ (ಎಎಫ್‌ಐ) ರಾಷ್ಟ್ರೀಯ ಕ್ರೀಡಾಕೂಟ ಮತ್ತು ಪ್ಯಾರಿಸ್ ಒಲಿಂಪಿಕ್ಸ್‌ಗೆ ಅರ್ಹತಾ ಕೂಟವೆಂದೇ ಗುರುತಿಸಿರುವ 9ನೇ ಆವೃತ್ತಿಯ 'ನವದೆಹಲಿ ಮ್ಯಾರಥಾನ್' ಇದೇ 25ರಂದು ಇಲ್ಲಿನ ಜೆಎಲ್‌ಎನ್ ಕ್ರೀಡಾಂಗಣದಲ್ಲಿ ನಡೆಯಲಿದೆ.

ಪುರುಷ ಮತ್ತು ಮಹಿಳೆಯರ ವಿಭಾಗದ ಮ್ಯಾರಥಾನ್ ವಿಜೇತರು ತಲಾ ₹ 1.5 ಲಕ್ಷ ಮತ್ತು ಎರಡನೇ ಸ್ಥಾನ ಪಡೆಯುವವರು ತಲಾ ₹ 1ಲಕ್ಷ ಬಹುಮಾನ ಪಡೆಯುವರು.

ಪ್ಯಾರಿಸ್ ಒಲಿಂಪಿಕ್ಸ್‌ಗೆ ಅರ್ಹತೆ ಪಡೆಯಲು ಪುರುಷ ಮತ್ತು ಮಹಿಳಾ ಸ್ಪರ್ಧಿಗಳು ಕ್ರಮವಾಗಿ 2 ಗಂಟೆ 8 ನಿಮಿಷ 10 ಸೆಕೆಂಡ್ ಮತ್ತು 2 ಗಂಟೆ 26 ನಿಮಿಷ 50 ಸೆಕೆಂಡ್‌ನ ಒಳಗಾಗಿ ಗುರಿಯನ್ನು ತಲುಪಬೇಕಿದೆ.

ಟೋಕಿಯೊ ಒಲಿಂಪಿಕ್ಸ್‌ಗೆ ಭಾರತದ ಅಥ್ಲೀಟ್‌ಗಳು ಅರ್ಹತೆ ಪಡೆಯಲು ವಿಫಲವಾಗಿದ್ದರು. ಕಳೆದ ಆವೃತ್ತಿಯಲ್ಲಿ ಪುರುಷರ ಎಲೈಟ್ ವಿಭಾಗದಲ್ಲಿ ಮಾನ್ ಸಿಂಗ್ (2 ಗಂಟೆ 14 ನಿಮಿಷ 13 ಸೆಕೆಂಡ್) ಚಿನ್ನ ಗೆದ್ದರೆ, ಮಹಿಳೆಯರ ವಿಭಾಗದಲ್ಲಿ ಜ್ಯೋತಿ ಶಂಕರ್ (2 ಗಂಟೆ 53 ನಿಮಿಷ 4 ಸೆಕೆಂಡ್) ಅಗ್ರಸ್ಥಾನ ಪಡೆದಿದ್ದರು.

ನಿಯಮ ರೂಪಿಸಲು ಬಿಸಿಸಿಐ ಚಿಂತನೆ

ರಣಜಿಯಲ್ಲಿ ಆಡಿದರಷ್ಟೇ ಐಪಿಎಲ್

ಮುಂಬೈ (ಪಿಟಿಐ): ಜಾರ್ಖಂಡ್ ವಿಕೆಟ್ ಕೀಪರ್-ಬ್ಯಾಟರ್ ಇಶಾನ್ ಕಿಶನ್ ಪ್ರಥಮ ದರ್ಜೆ ಕ್ರಿಕೆಟ್ ಆಡಲು ಹಿಂಜರಿಯುತ್ತಿರುವುದು ಮತ್ತು ಐಪಿಎಲ್ ಮೇಲೆ ಮಾತ್ರ ಗಮನ ಹರಿಸುತ್ತಿರುವ ಕಾರಣ ಐಪಿಎಲ್ ಹರಾಜು ಪೂಲ್‌ಗೆ ಅರ್ಹರಾಗಲು ಆಟಗಾರರಿಗೆ ಕನಿಷ್ಠ ಸಂಖ್ಯೆಯ ರಣಜಿ ಟ್ರೋಫಿ ಪಂದ್ಯಗಳನ್ನು ಆಡಬೇಕೆಂದು ಬಿಸಿಸಿಐ ಕಡ್ಡಾಯಗೊಳಿಸುವ ಸಾಧ್ಯತೆ ಇದೆ.

ಫೆಬ್ರವರಿ 16 ರಿಂದ ರಣಜಿ ಟ್ರೋಫಿ ಟೂರ್ನಿಯ ಕೊನೆಯ ಸುತ್ತಿನ ಪಂದ್ಯ ಆರಂಭವಾಗಲಿದೆ. ಇಶಾನ್ ತವರು ಜಾರ್ಖಂಡ್ ತಂಡವು ಜೆಮ್‌ಶೆಡ್‌ಪುರದಲ್ಲಿ ರಾಜಸ್ಥಾನ ವಿರುದ್ಧ ಆಡಲಿದೆ. ಅದರಲ್ಲಿ ಆಡಲು ಇಶಾನ್‌ಗೆ ಬಿಸಿಸಿಐ ಈಗಾಗಲೇ ಸೂಚನೆ ನೀಡಿದೆ ಎಂದು ತಿಳಿದುಬಂದಿದೆ.

ಮಾನಸಿಕ ಒತ್ತಡದಿಂದಾಗಿ ವಿಶ್ರಾಂತಿ ಬಯಸಿದ್ದ ಇಶಾನ್, ದಕ್ಷಿಣ ಆಫ್ರಿಕಾದ ಟೆಸ್ಟ್ ಸರಣಿಯ ಮಧ್ಯದಲ್ಲಿ ಹಿಂದಿರುಗಿದ್ದರು. ಆದರೆ, ಅವರು ರಣಜಿ ಟೂರ್ನಿಯಲ್ಲಿಯೂ ಆಡಲಿಲ್ಲ.



ಇಶಾನ್ ಕಿಶನ್

ಇದೀಗ ಐಪಿಎಲ್ ಆಡಲು ಸಿದ್ಧತೆ ಆರಂಭಿಸಿದ್ದಾರೆ. ಮುಂಬೈ ಇಂಡಿಯನ್ಸ್ ತಂಡದ ನಾಯಕ ಹಾರ್ದಿಕ್ ಪಾಂಡ್ಯ ಅವರೊಂದಿಗೆ ಬರೋಡಾದಲ್ಲಿ ಅಭ್ಯಾಸ ನಡೆಸಿದ್ದಾರೆ. ಯುವ ಆಟಗಾರರ ಗುಂಪು ಐಪಿಎಲ್‌ನಿಂದ ಐಪಿಎಲ್ ಆಡುವುದನ್ನು ಅಭ್ಯಾಸವನ್ನಾಗಿ ಮಾಡಿಕೊಳ್ಳದಂತೆ ಕಟ್ಟುನಿಟ್ಟಾದ ನೀತಿಯನ್ನು ರೂಪಿಸುವ ಅಗತ್ಯವಿದೆ.

'ಯುವ ಆಟಗಾರರು ಕೆಂಪು ಚೆಂಡಿನ ಕ್ರಿಕೆಟ್ ಆಡಲು ಹೆಚ್ಚು ಒಲವು ತೋರುತ್ತಿಲ್ಲವೆಂಬ ಸಂಗತಿ ಬಿಸಿಸಿಐ ಗಮನಕ್ಕೆ ಬಂದಿದೆ. ಕೆಲವು ಆಟಗಾರರು ಭಾರತ ತಂಡದಿಂದ ಹೊರಗಿದ್ದರೆ, ಸೈಯದ್ ಮುಷ್ತಾಕ್ ಅಲಿ ಟಿ20 ಟೂರ್ನಿಯಲ್ಲಿ ಆಡುತ್ತಾರೆ. ನಂತರ ದೀರ್ಘ ಮಾದರಿಯ ಕ್ರಿಕೆಟ್ ಟೂರ್ನಿಗಳಲ್ಲಿ ರಾಜ್ಯ ತಂಡಕ್ಕೆ ಮರಳುವುದಿಲ್ಲ. ಅಂತಹ ಆಟಗಾರರಿಗೆ ಪಾಠ ಕಲಿಸಲು ಮಂಡಳಿ ಯೋಚಿಸುತ್ತಿದೆ. ಐಪಿಎಲ್‌ನಲ್ಲಿ ಆಡುವ ಮತ್ತು ಹರಾಜು ಪ್ರಕ್ರಿಯೆಗೆ ಪರಿಗಣಿಸಲು ರಣಜಿ ಟ್ರೋಫಿಯಲ್ಲಿ ಮೂರ್ನಾಲ್ಕು ಪಂದ್ಯಗಳಲ್ಲಿ ಕಡ್ಡಾಯವಾಗಿ ಆಡಬೇಕೆಂಬ ನಿಯಮ ರೂಪಿಸುವ ಚಿಂತನೆ ನಡೆದಿದೆ' ಎಂದು ಬಿಸಿಸಿಐನ ಹಿರಿಯ ಸದಸ್ಯರೊಬ್ಬರು ಹೇಳಿದ್ದಾರೆ.

'ಗಾಯಾಳಾಗಿರುವ ಹಾರ್ದಿಕ್ ಪಾಂಡ್ಯ ಈಗ ಚೇತರಿಸಿಕೊಳ್ಳುತ್ತಿ ದ್ದಾರೆ. ಟೆಸ್ಟ್ ಮಾದರಿಯ ಪಂದ್ಯಗಳಲ್ಲಿ ಆಡುವ ಒತ್ತಡ ನಿಭಾಯಿಸಲು ಅವರ ದೇಹ ಸಿದ್ಧವಾಗಿಲ್ಲ. ಐಸಿಸಿ ಟೂರ್ನಿಗಳಲ್ಲಿ ಅವರು ಫಿಟ್ ಆಗಿರುವುದು ಮುಖ್ಯವಾಗಿದೆ' ಎಂದರು.

ಸಿ.ಕೆ. ನಾಯ್ಡು ಟ್ರೋಫಿ: ರಾಜ್ಯ ತಂಡಕ್ಕೆ ಸ್ಮರಣ್ ಸಾರಥ್ಯ

ಬೆಂಗಳೂರು: ಸ್ಮರಣ್ ಆರ್. ಅವರು ಕರ್ನಲ್ ಸಿ.ಕೆ.ನಾಯ್ಡು ಟ್ರೋಫಿ ಕ್ರಿಕೆಟ್ ಟೂರ್ನಿಯ ಪಾಂಡಿಚೇರಿ ವಿರುದ್ಧದ ಪಂದ್ಯದಲ್ಲಿ ಕರ್ನಾಟಕ ತಂಡವನ್ನು ಮುನ್ನಡೆಸಲಿದ್ದಾರೆ.

15 ಮಂದಿ ಆಟಗಾರರ ಕರ್ನಾಟಕ ತಂಡವನ್ನು ರಾಜ್ಯ ಕ್ರಿಕೆಟ್ ಸಂಸ್ಥೆ ಮಂಗಳವಾರ ಬಿಡುಗಡೆ ಮಾಡಿದೆ.

ಇದೇ 18ರಿಂದ 21ರವರೆಗೆ ಬೆಂಗಳೂರಿನಲ್ಲಿ ಪಂದ್ಯ ನಡೆಯಲಿದೆ.

ತಂಡ ಹೀಗಿದೆ: ಸ್ಮರಣ್ ಆರ್. (ನಾಯಕ), ಅನೀಶ್ವರ್ ಗೌತಮ್ (ಉಪನಾಯಕ), ವಿಶಾಲ್ ಓನತ್, ಮ್ಯಾಕ್ನೀಲ್ ಎಚ್. ನೊರೊನ್ಹಾ, ಕೃತಿಕ್ ಕೃಷ್ಣ (ವಿಕೆಟ್ ಕೀಪರ್), ಮೊಹ್ಸಿನ್ ಖಾನ್, ಯಶೋವರ್ಧನ್ ಪರಂತಪ್, ರಾಜವೀರ್ ವಾಧ್ವಾ, ಮೊನೀಶ್ ರೆಡ್ಡಿ, ಅಕ್ಷನ್ ಎಸ್. ರಾವ್, ಲೋಚನ್ ಗೌಡ (ವಿಕೆಟ್ ಕೀಪರ್), ಪ್ರಖರ ಚತುರ್ವೇದಿ, ರೋಹಿತ್ ಕುಮಾರ್ ಎ.ಸಿ, ಪಾರಸ್ ಗುರುಬಕ್ಷ್ ಆರ್ಯ, ಗೌತಮ್ ಮಿಶ್ರಾ.

ಕುಸ್ತಿ ಫೆಡರೇಷನ್: ಅಮಾನತು ಹಿಂದಕ್ಕೆ

ನವದೆಹಲಿ (ಪಿಟಿಐ): ಭಾರತದ ಕುಸ್ತಿ ಫೆಡರೇಷನ್ ಮೇಲೆ ಹೇರಿದ್ದ ತಾತ್ಕಾಲಿಕ ನಿಷೇಧವನ್ನು ಯುನೈಟೆಡ್ ವರ್ಲ್ಡ್ ರೆಸ್ಲಿಂಗ್ (ಯುಡಬ್ಲ್ಯುಡಬ್ಲ್ಯು) ಹಿಂಪಡೆದಿದೆ. ಕುಸ್ತಿ ಸಂಸ್ಥೆ ವಿರುದ್ಧ ಪ್ರತಿಭಟನೆ ನಡೆಸಿರುವ ಬಜರಂಗ್ ಪೂನಿಯಾ, ವಿನೇಶಾ ಫೋಗಾಟ್ ಮತ್ತು ಸಾಕ್ಷಿ ಮಲಿಕ್ ಅವರ ವಿರುದ್ಧ ತಾರತಮ್ಯ ಮಾಡಬಾರದು ಎಂಬ ಬಗ್ಗೆ ಲಿಖಿತ ಖಾತರಿ ನೀಡಬೇಕು ಎಂದು ಫೆಡರೇಷನ್‌ಗೆ ನಿರ್ದೇಶನ ನೀಡಿದೆ.

ಭಾರತ ಕುಸ್ತಿ ಫೆಡರೇಷನ್ ನಿಗದಿತ ಅವಧಿಯೊಳಗೆ ಚುನಾವಣೆ ನಡೆಸದ ಕಾರಣ ಕಳೆದ ವರ್ಷದ ಆಗಸ್ಟ್ 23ರಂದು ತಾತ್ಕಾಲಿಕ ನಿಷೇಧ ಹೇರಿತ್ತು.

'ಫೆಬ್ರುವರಿ 9ರಂದು ಸಭೆ ಸೇರಿದ ಯುಡಬ್ಲ್ಯುಡಬ್ಲ್ಯು ಬ್ಯೂರೊ, ಅಮಾನತಿನ ಬಗ್ಗೆ ಮರುಪರಿಶೀಲನೆ ನಡೆಸಿ ಎಲ್ಲ ಮಾಹಿತಿಗಳ ಆಧಾರದ ಮೇಲೆ ಅಮಾನತನ್ನು ಹಿಂಪಡೆಯಲು ನಿರ್ಧರಿಸಿತು' ಎಂದು (ಯುಡಬ್ಲ್ಯುಡಬ್ಲ್ಯು) ಪ್ರಕಟಣೆಯಲ್ಲಿ ತಿಳಿಸಿದೆ.

ಹೀಗಾಗಿ ಇನ್ನು ಮುಂದೆ ಅಂತರ ರಾಷ್ಟ್ರೀಯ ಕುಸ್ತಿ ಸ್ಪರ್ಧೆಗಳಲ್ಲಿ ದೇಶದ ಹೆಸರಿನಲ್ಲಿ ಪೈಲ್ವಾನರು ಭಾಗವಹಿಸಲು ಅವಕಾಶವಾಗಲಿದೆ.



ಸಂಜಯ್ ಸಿಂಗ್

ಕಳೆದ ವರ್ಷದ ಡಿಸೆಂಬರ್‌ನಲ್ಲಿ ನಡೆದ ಚುನಾವಣೆಯಲ್ಲಿ ಮಾಜಿ ಅಧ್ಯಕ್ಷ ಬ್ರಿಜ್ ಭೂಷಣ್ ಶರಣ್ ಸಿಂಗ್ ಆಪ್ತ ಸಂಜಯ್ ಸಿಂಗ್ ಫೆಡರೇಷನ್ ಅಧ್ಯಕ್ಷರಾಗಿ ಆಯ್ಕೆಯಾಗಿದ್ದರು. ಆದರೆ ಕೆಲದಿನಗಳಲ್ಲೇ ಕ್ರೀಡಾ ಸಂಹಿತೆ ಉಲ್ಲಂಘನೆ ಆಧಾರದಲ್ಲಿ ಫೆಡರೇಷನ್‌ಅನ್ನು ಅಮಾನತುಗೊಳಿಸಲಾಗಿತ್ತು.

'ಯುಡಬ್ಲ್ಯುಡಬ್ಲ್ಯು ಮಾನ್ಯತೆ ದೊರೆತ ಕಾರಣ ಅಡ್‌ಹಾಕ್ ಸಮಿತಿಗೆ ಈಗ ಏನೂ ಮಹತ್ವ ಇಲ್ಲ. ಒಲಿಂಪಿಕ್ ವರ್ಷವಾಗಿರುವ ಕಾರಣ ನಾವು ಶೀಘ್ರ ಟ್ರಯಲ್ಸ್‌ಗಳನ್ನು ನಡೆಸಲಿದ್ದೇವೆ. ಕುಸ್ತಿಪಟುಗಳ ಭವಿಷ್ಯ ಅತಂತ್ರವಾಗದಂತೆ ನೋಡಿಕೊಳ್ಳುತ್ತೇವೆ' ಎಂದು ಸಂಜಯ್ ಸಿಂಗ್ ತಿಳಿಸಿದ್ದಾರೆ.

ಕರ್ನಾಟಕ ತಂಡಕ್ಕೆ ಧೀರಜ್ ಗೌಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ರಣಜಿ ಕ್ರಿಕೆಟ್ ತಂಡಕ್ಕೆ ಧೀರಜ್ ಜೇ ಗೌಡ ಅವರನ್ನು ಆಯ್ಕೆ ಮಾಡಲಾಗಿದೆ.

ದೇವದತ್ತ ಪಡಿಕ್ಕಲ್ ಅವರು ಭಾರತ ತಂಡದಲ್ಲಿ ಆಡಲು ತೆರಳಿರುವುದರಿಂದ ತೆರವಾಗಿರುವ ಸ್ಥಾನಕ್ಕೆ ಧೀರಜ್ ಅವರನ್ನು ಆಯ್ಕೆ ಮಾಡಲಾಗಿದೆ. ಈಚೆಗೆ ಕೂಚ್ ಬಿಹಾರ್ ಟ್ರೋಫಿ ಜಯಿಸಿದ್ದ ಕರ್ನಾಟಕದ 19 ವರ್ಷದೊಳಗಿನವರ ತಂಡಕ್ಕೆ ಧೀರಜ್ ನಾಯಕತ್ವ ವಹಿಸಿದ್ದರು.

ಹುಬ್ಬಳ್ಳಿಯಲ್ಲಿ ಇದೇ 16ರಿಂದ ನಡೆಯಲಿರುವ ಚಂಡೀಗಡ ಎದುರಿನ ಪಂದ್ಯಕ್ಕೆ ತಂಡವನ್ನು ಆಯ್ಕೆ ಮಾಡಲಾಗಿದೆ. ಈ ಕುರಿತು ಕೆಎಸ್‌ಸಿಎ ಪ್ರಕಟಣೆ ನೀಡಿದೆ.

ತಂಡ: ಮಯಂಕ್ ಅಗರವಾಲ್ (ನಾಯಕ), ನಿಕಿನ್ ಜೋಸ್ (ಉಪನಾಯಕ), ಆರ್. ಸಮರ್ಥ್, ಮನೀಷ್ ಪಾಂಡೆ, ಶರತ್ ಶ್ರೀನಿವಾಸ್ (ವಿಕೆಟ್‌ಕೀಪರ್), ಕೆ.ವಿ. ಅನೀಶ್, ವೈಶಾಖ ವಿಜಯಕುಮಾರ್, ವಿ. ಕೌಶಿಕ್, ಕಿಶನ್ ಬೆದರೆ, ಹಾರ್ದಿಕ್ ರಾಜ್, ವಿದ್ವತ್ ಕಾವೇರಪ್ಪ, ಎಂ. ವೆಂಕಟೇಶ್, ಸುಜಯ್ ಸತೇರಿ, ಕೆ. ಶಶಿಕುಮಾರ್ ಧೀರಜ್ ಜೆ. ಗೌಡ. ಕೋಚ್: ಪಿ.ವಿ. ಶಶಿಕಾಂತ್, ಬೌಲಿಂಗ್ ಕೋಚ್: ಮನ್ಸೂರ್ ಅಲಿ ಖಾನ್, ಫೀಲ್ಡಿಂಗ್ ಕೋಚ್: ಶಬರೀಶ್ ಮೋಹನ್, ಮ್ಯಾನೇಜರ್: ಎ. ರಮೇಶ್ ರಾವ್



ಧೀರಜ್ ಗೌಡ

ವಿಂಡೀಸ್‌ಗೆ ಮಣಿದ ಆಸ್ಟ್ರೇಲಿಯಾ

ಪರ್ತ್ (ಎಎಫ್‌ಪಿ): ಆಂಡ್ರೆ ರಸೆಲ್ (71, 29 ಎಸೆತ, 4x4, 6x7) ಮತ್ತು ಶೆರ್ಫೇನ್ ರುದರ್‌ಫೋರ್ಡ್ (ಔಟಾಗದೇ 67, 40 ಎಸೆತ, 4x5, 6x5) ಅವರ ನಡುವೆ ಆರನೇ ವಿಕೆಟ್‌ಗೆ ದಾಖಲೆಯ ಜೊತೆಯಾಟದ ನೆರವಿನಿಂದ ವೆಸ್ಟ್ ಇಂಡೀಸ್ ಮೂರನೇ ಹಾಗೂ ಅಂತಿಮ ಟಿ20 ಪಂದ್ಯದಲ್ಲಿ ಆಸ್ಟ್ರೇಲಿಯಾ ತಂಡವನ್ನು ಮಂಗಳವಾರ 37 ರನ್‌ಗಳಿಂದ ಸೋಲಿಸಿತು.

ಇವರಿಬ್ಬರ ಬಿರುಗಾಳಿ ಬ್ಯಾಟಿಂಗ್‌ನಿಂದ ವೆಸ್ಟ್ ಇಂಡೀಸ್ 6 ವಿಕೆಟ್‌ಗೆ 220 ರನ್‌ಗಳ ಸವಾಲಿನ ಮೊತ್ತ ಪೇರಿಸಿತು. ಉತ್ತರವಾಗಿ ಆಸ್ಟ್ರೇಲಿಯಾ 5 ವಿಕೆಟ್‌ಗೆ 183 ರನ್ ಗಳಿಸಲಷ್ಟೇ ಶಕ್ತವಾಯಿತು. ತವರಿನಲ್ಲಿ ಕೊನೆಯ ಟಿ20 ಪಂದ್ಯ ಆಡಿದ ಡೇವಿಡ್ ವಾರ್ನರ್ ಸರ್ವಾಧಿಕ 81 (49ಎ, 4x9, 6x3) ರನ್ ಗಳಿಸಿದರು. ರಸೆಲ್ ಪಂದ್ಯದ ಆಟಗಾರ ಗೌರವಕ್ಕೆ ಪಾತ್ರರಾದರು. ಸರಣಿ 2–1ರಲ್ಲಿ ಆಸ್ಟ್ರೇಲಿಯಾ ಪಾಲಾಯಿತು.



ಆಂಡ್ರೆ ರಸೆಲ್ ಬ್ಯಾಟಿಂಗ್ ವೈಖರಿ. ಎಎಫ್‌ಪಿ ಚಿತ್ರ

ಸ್ಕೋರುಗಳು: ವೆಸ್ಟ್ ಇಂಡೀಸ್: 20 ಓವರುಗಳಲ್ಲಿ 6 ವಿಕೆಟ್‌ಗೆ 220 (ರೋಸ್ಟನ್ ಚೇಸ್ 37, ಶೆರ್ಫೇನ್ ರುದರ್‌ಫೋರ್ಡ್ 67, ಆ್ಯಂಡ್ರೆ ರಸೆಲ್ 71; ಕ್ಸೇವಿಯರ್ ಬಾರ್ಟ್ಲೆಟ್ 37ಕ್ಕೆ2); ಆಸ್ಟ್ರೇಲಿಯಾ: 20 ಓವರುಗಳಲ್ಲಿ 5 ವಿಕೆಟ್‌ಗೆ 183 (ಡೇವಿಡ್ ವಾರ್ನರ್ 81, ಟಿಮ್ ಡೇವಿಡ್ ಔಟಾಗದೇ 41; ರೊಮಾರಿಯೊ ಶೆಫರ್ಡ್ 31ಕ್ಕೆ2, ರೋಸ್ಟನ್ ಚೇಸ್ 19ಕ್ಕೆ 2)

ಸುಮಿತ್ ನಗಾಲ್ ಶುಭಾರಂಭ

ಬೆಂಗಳೂರು ಓಪನ್ ಟೆನಿಸ್: ರಾಮಕುಮಾರ್‌ಗೆ ಇಂದು ನಾರ್ಡಿ ಸವಾಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತದ ಅಗ್ರಗಣ್ಯ ಆಟಗಾರ ಸುಮಿತ್ ನಗಾಲ್ ಇಲ್ಲಿ ನಡೆಯುತ್ತಿರುವ ಬೆಂಗಳೂರು ಓಪನ್ ಟೆನಿಸ್ ಟೂರ್ನಿಯಲ್ಲಿ ಶುಭಾರಂಭ ಮಾಡಿದರು. ಪುರುಷರ ಸಿಂಗಲ್ಸ್‌ನ ಮೊದಲ ಸುತ್ತಿನಲ್ಲಿ ಅವರು ಫ್ರಾನ್ಸ್ ಆಟಗಾರ ಜೆಫ್ರಿ ಬ್ಲಾಂಕಾನಿಯಾಕ್ಸ್ ವಿರುದ್ಧ ನಿರಾಯಾಸ ಗೆಲುವು ಸಾಧಿಸಿದರು.

ನಗರದ ಕೆಎಸ್‌ಎಲ್‌ಟಿಎ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಪಂದ್ಯದಲ್ಲಿ ವಿಶ್ವದ 98ನೇ ಕ್ರಮಾಂಕದ ನಗಾಲ್ ಅವರು 6-2, 6-2ರಿಂದ ಜೆಫ್ರಿ ಅವರನ್ನು ಹಿಮ್ಮೆಟ್ಟಿಸಿದರು. ಈ ಫ್ರಾನ್ಸ್ ಆಟಗಾರನ ವಿರುದ್ಧ ಭಾರತದ ಆಟಗಾರನಿಗೆ ಇದು ನಾಲ್ಕನೇ ಗೆಲುವಾಗಿದೆ. ಇದಕ್ಕೂ ಮೊದಲು ಆಸ್ಟ್ರೇಲಿಯನ್ ಓಪನ್‌ನ ಕ್ವಾಲಿಫೈಯರ್ ಸುತ್ತಿನಲ್ಲೂ ಜೆಫ್ರಿ ಪರಾಭವಗೊಂಡಿದ್ದರು.

ಚಾಲೆಂಜರ್ ಮಟ್ಟದ ಆರನೇ ಕಿರೀಟದ ಮೇಲೆ ಕಣ್ಣಿಟ್ಟಿರುವ ತವರಿನ ನೆಚ್ಚಿನ ಆಟಗಾರ ನಗಾಲ್, ಉತ್ತಮ ಸರ್ವ್ ಮತ್ತು ನಿಖರ ಹೊಡೆತಗಳ ಮೂಲಕ ಪಂದ್ಯದ ಮೇಲೆ ಸಂಪೂರ್ಣ ಹಿಡಿತ ಸಾಧಿಸಿ ಎರಡನೇ ಸುತ್ತು ಪ್ರವೇಶಿಸಿದರು. ಒಂದು ಗಂಟೆ 28 ನಿಮಿಷ ನಡೆದ ಹೋರಾಟದಲ್ಲಿ ಎರಡನೇ ಶ್ರೇಯಾಂಕದ ನಗಾಲ್, ಆರಂಭದಿಂದಲೇ ಮುನ್ನಡೆಯನ್ನು ಕಾಯ್ದುಕೊಂಡರು. ಎದುರಾಳಿ ಆಟಗಾರನಿಗೆ ಪುಟಿದೇಳಲು ಎಲ್ಲೂ ಅವಕಾಶ ನೀಡದೆ ನೇರ ಸೆಟ್‌ಗಳ ಜಯ ಸಂಪಾದಿಸಿದರು.

ಮುಂದಿನ ಸುತ್ತಿನಲ್ಲಿ ಅವರು ಹಾಂಗ್‌ಕಾಂಗ್‌ನ ಕೋಲ್ಮನ್ ವಾಂಗ್ ಅವರನ್ನು ಎದುರಿಸಲಿದ್ದಾರೆ. ವಾಂಗ್ ಅವರು ಮೊದಲ ಸುತ್ತಿನ ಪಂದ್ಯದಲ್ಲಿ ಬೆಲ್ಜಿಯಂನ ರಫೆಲ್ ಕೊಲಿಗ್ನಾನ್ ಅವರನ್ನು 6-4, 7-6 (4) ರಿಂದ ಮಣಿಸಿದ್ದರು.

ಇದಕ್ಕೂ ಮೊದಲು ಅಗ್ರ ಶ್ರೇಯಾಂಕದ ಇಟಲಿಯ ಲುಕಾ ನಾರ್ಡಿ ಅವರಿಗೆ ಶ್ರೇಯಾಂಕರಹಿತ ಆಟಗಾರ ಫ್ರಾನ್ಸ್‌ನ ಡಾನ್ ಆ್ಯಡೆಡ್ ಅವರಿಂದ ಪ್ರಬಲ ಸ್ಪರ್ಧೆ ಎದುರಾಯಿತು. ಎರಡು ಗಂಟೆ 20 ನಿಮಿಷ ನಡೆದ ಹೋರಾಟದಲ್ಲಿ 3-6, 6-3, 7-6 (0)ರಿಂದ ನಾರ್ಡಿ ಮೇಲುಗೈ ಸಾಧಿಸಿದರು. ಮುಂದಿನ ಸುತ್ತಿನಲ್ಲಿ ಅವರು ಭಾರತದ ರಾಮಕುಮಾರ್ ರಾಮನಾಥನ್ ವಿರುದ್ಧ ಸೆಣಸಲಿದ್ದಾರೆ.

ಇನ್ನೊಂದು ಪಂದ್ಯದಲ್ಲಿ ಕೆನಡಾದ ವಾಸೆಕ್ ಪೊಸ್ಪಿಸಿಲ್ 7-6(2), 3-6, 6-4ರಿಂದ ಉಕ್ರೇನ್‌ನ ಎರಿಕ್ ವಾನ್ಶೆಲ್ಬೋಯಿಮ್ ಅವರನ್ನು ಸೋಲಿಸಿದರು. ವಿಶ್ವದ ಮಾಜಿ 17ನೇ ಕ್ರಮಾಂಕದ ಆಟಗಾರ ಬರ್ನಾರ್ಡ್ ಟಾಮಿಕ್ (ಆಸ್ಟ್ರೇಲಿಯಾ) ಆರಂಭಿಕ ಸುತ್ತಿನಲ್ಲಿ ಆಘಾತ ಅನುಭವಿಸಿದರು. 31 ವರ್ಷದ ಅವರು 6-3, 3-6, 3-6 ರಲ್ಲಿ ಅಮೆರಿಕದ ಟ್ರಿಸ್ಟಾನ್ ಬೋಯರ್ ವಿರುದ್ಧ ಸೋತರು. ಇನ್ನೊಂದು ಪಂದ್ಯದಲ್ಲಿ ಫ್ರಾನ್ಸ್‌ನ ಬೆಂಜಮಿನ್ ಬೊಂಜಿ 6-3, 6-2ರಿಂದ ಆಸ್ಟ್ರೇಲಿಯಾದ ಫಿಲೀಪ್ ಸೆಕುಲಿಕ್ ಅವರನ್ನು ಸೋಲಿಸಿದರು.

ಡಬಲ್ಸ್ ವಿಭಾಗದಲ್ಲಿ ಟೂರ್ನಿಗೆ ವೈಲ್ಡ್ ಕಾರ್ಡ್ ಪ್ರವೇಶ ಪಡೆದಿದ್ದ ಭಾರತದ ಸಾಯಿ ಕಾರ್ತಿಕ್ ರೆಡ್ಡಿ ಮತ್ತು ಮನೀಷ್ ಸುರೇಶ್‌ಕುಮಾರ್ ಜೋಡಿ 2-6, 6-7 (8) ಅಂತರದಲ್ಲಿ ಫ್ರಾನ್ಸ್‌ನ ಕಾನ್‌ಸ್ಟಾಂಟಿನ್ ಕೌಜ್ಮಿನ್ ಮತ್ತು ಮ್ಯಾಕ್ಸಿಂ ಜಾನ್ವಿಯರ್ ಅವರಿಗೆ ಮಣಿಯಿತು.

ಭಾರತದ ಇಂದಿನ ಪಂದ್ಯಗಳು

ರಾಮಕುಮಾರ್ ರಾಮನಾಥನ್- ಲುಕಾ ನಾರ್ಡಿ (ಇಟಲಿ) ಮಧ್ಯಾಹ್ನ 12.30. ಪ್ರಜ್ವಲ್ ದೇವ್- ಆ್ಯಡಂ ವಾಲ್ಟನ್ (ಆಸ್ಟ್ರೇಲಿಯಾ) ಬೆಳಿಗ್ಗೆ 11



ಭಾರತದ ಸುಮಿತ್ ನಗಾಲ್ ಆಟದ ವೈಖರಿ –ಪ್ರಜಾವಾಣಿ ಚಿತ್ರ/ ಪುಷ್ಕರ್ ವಿ.

ರಾಜ್‌ಕೋಟ್‌ನಲ್ಲಿ ಭಾರತ ಕ್ರಿಕೆಟ್ ತಂಡದ ಅಭ್ಯಾಸ; ಗಿಲ್ ಗೈರು

ಜುರೇಲ್, ಸರ್ಫರಾಜ್‌ಗೆ ಅವಕಾಶ ಸಾಧ್ಯತೆ

ರಾಜ್‌ಕೋಟ್ (ಪಿಟಿಐ): ಮುಂಬೈನ ಬ್ಯಾಟರ್ ಸರ್ಫರಾಜ್ ಖಾನ್ ಮತ್ತು ಉತ್ತರಪ್ರದೇಶದ ವಿಕೆಟ್‌ಕೀಪರ್ ಧ್ರುವಚಾಂದ್ ಜುರೇಲ್ ಅವರಿಗೆ ಇಂಗ್ಲೆಂಡ್ ಎದುರಿನ ಮೂರನೇ ಟೆಸ್ಟ್‌ನಲ್ಲಿ ಪದಾರ್ಪಣೆ ಮಾಡುವ ಅವಕಾಶ ಸಿಗುವ ನಿರೀಕ್ಷೆ ಇದೆ. ಆರಂಭಿಕ ಬ್ಯಾಟರ್ ಶುಭಮನ್ ಗಿಲ್ ಅವರು ಮಂಗಳವಾರ ಅಭ್ಯಾಸದಲ್ಲಿ ಭಾಗವಹಿಸಲಿಲ್ಲ.

ಗಾಯಗೊಂಡಿರುವ ಕೆ.ಎಲ್. ರಾಹುಲ್ ಮತ್ತು ಲಯ ಕಂಡುಕೊಳ್ಳುವಲ್ಲಿ ಶ್ರೇಯಸ್ ಅಯ್ಯರ್ ವಿಫಲರಾಗಿದ್ದಾರೆ. ಆದ್ದರಿಂದ ಮಧ್ಯಮ ಕ್ರಮಾಂಕದಲ್ಲಿ ಆಡಲು ಸರ್ಫರಾಜ್ ಅವರಿಗೆ ಅವಕಾಶ ನೀಡುವ ಸಾಧ್ಯತೆ ಇದೆ. ವಿಕೆಟ್‌ಕೀಪರ್ ಕೋನಾ ಭರತ್ ಅವರು ಬ್ಯಾಟಿಂಗ್‌ನಲ್ಲಿ ನಿರೀಕ್ಷೆಯ ಮಟ್ಟಕ್ಕೆ ಆಡುತ್ತಿಲ್ಲ. ಕಳೆದ ಏಳು ಇನಿಂಗ್ಸ್‌ಗಳಲ್ಲಿ ಅವರು ಒಂದೂ ಅರ್ಧಶತಕ ಹೊಡೆದಿಲ್ಲ. ಆದರೆ ಬ್ಯಾಟಿಂಗ್‌ನಲ್ಲಿಯೂ ಚೆನ್ನಾಗಿರುವ ಜುರೇಲ್ ಅವರಿಗೆ ಕೀಪಿಂಗ್ ಹೊಣೆ ನೀಡಿದರೆ ಅಚ್ಚರಿಯೇನಿಲ್ಲ. ಮಂಗಳವರದ ಅಭ್ಯಾಸದಲ್ಲಿ ಅವರು ಕೆಲವು ಕಠಿಣ ಕ್ಯಾಚ್‌ಗಳನ್ನು ಚುರುಕಾಗಿ ಡೈವ್ ಮಾಡುವ ಮೂಲಕ ಪಡೆದು ಗಮನ ಸೆಳೆದರು.

ಇನ್ನೊಂದೆಡೆ ಗಿಲ್ ಅವರಿಗೆ ವಿಶಾಖಪಟ್ಟಣದ ಪಂದ್ಯದಲ್ಲಿ ಫೀಲ್ಡಿಂಗ್ ಮಾಡುವಾಗ ಬಲಗೈ ತೋರುಬೆರಳಿಗೆ ಗಾಯವಾಗಿತ್ತು. ಆ ಪಂದ್ಯದಲ್ಲಿ ಇಂಗ್ಲೆಂಡ್‌ನ ಎರಡನೇ ಇನಿಂಗ್ಸ್‌ನಲ್ಲಿ ಗಿಲ್ ಫೀಲ್ಡಿಂಗ್ ಮಾಡಿರಲಿಲ್ಲ. ಆದರೆ ಗಾಯವೇನೂ ಗಂಭೀರವಲ್ಲ ಎಂದೂ ತಂಡದ ವೈದ್ಯಕೀಯ ಮೂಲಗಳು ತಿಳಿಸಿದ್ದವು. ಇದರಿಂದಾಗಿ ಅವರು ಮುಂದಿನ ಪಂದ್ಯದಲ್ಲಿ ಆಡುವುದು ಬಹುತೇಕ ಖಚಿತವಾಗಿದೆ.

ಒಂದೊಮ್ಮೆ ಸರ್ಫರಾಜ್ ಸ್ಥಾನ ಪಡೆದರೆ, ರಜತ್ ಪಾಟೀದಾರ್ ಅವರೊಂದಿಗೆ ಸ್ಲಿಪ್ ಫೀಲ್ಡಿಂಗ್ ಮಾಡುವುದು ಖಚಿತ. ಇದರಿಂದಾಗಿ ಅವರಿಬ್ಬರೂ ಸೇರಿದಂತೆ ಆರಂಭಿಕ ಬ್ಯಾಟರ್ ಯಶಸ್ವಿ ಜೈಸ್ವಾಲ್ ಅವರು ಕ್ಯಾಚ್ ಪಡೆಯುವ ಅಭ್ಯಾಸ ಮಾಡಿದರು.

ರೋಹಿತ್ ಶರ್ಮಾ ಮತ್ತು ಮುಖ್ಯ ಕೋಚ್ ರಾಹುಲ್ ದ್ರಾವಿಡ್ ಅವರು ಪಿಚ್ ಪರಿಶೀಲನೆ ನಡಸಿದರು. ಅದರ ನಂತರ ರೋಹಿತ್ ಕೂಡ ಕ್ಯಾಚಿಂಗ್ ಅಭ್ಯಾಸದಲ್ಲಿ ತೊಡಗಿದರು.

ಸೌರಾಷ್ಟ್ರ ಕ್ರಿಕೆಟ್ ಸಂಸ್ಥೆ ಕ್ರೀಡಾಂಗಣದಲ್ಲಿ ಗುರುವಾರದಿಂದ ಮೂರನೇ ಟೆಸ್ಟ್ ನಡೆಯಲಿದೆ.



ಭಾರತ ತಂಡದ ವಿಕೆಟ್‌ಕೀಪರ್ ಧ್ರುವ ಜುರೇಲ್! ಪಿಟಿಐ ಚಿತ್ರ

ಬೆನ್ ಸ್ಟೋಕ್ಸ್‌ಗೆ 100ನೇ ಪಂದ್ಯ

ಇಂಗ್ಲೆಂಡ್ ತಂಡದ ನಾಯಕ ಬೆನ್ ಸ್ಟೋಕ್ಸ್ ಅವರು ತಮ್ಮ ವೃತ್ತಿ ಜೀವನದ 100ನೇ ಟೆಸ್ಟ್ ಆಡಲಿದ್ದಾರೆ. ರಾಜ್‌ಕೋಟ್‌ನಲ್ಲಿ ನಡೆಯಲಿರುವ ಪಂದ್ಯದಲ್ಲಿ ಅವರು ಈ ಮೈಲಿಗಲ್ಲು ಮುಟ್ಟಲಿದ್ದಾರೆ. ಸ್ಟೋಕ್ಸ್ ಅವರು 99 ಟೆಸ್ಟ್‌ಗಳಲ್ಲಿ 6251 ರನ್ ಗಳಿಸಿದ್ದಾರೆ. 13 ಶತಕ ಮತ್ತು 31 ಅರ್ಧಶತಕ ಗಳಿಸಿದ್ದಾರೆ.

'ಬೆನ್ ಅವರು ಟೆಸ್ಟ್ ಕ್ರಿಕೆಟ್ ಮಾದರಿಯ ಸ್ವರೂಪವನ್ನೇ ಬದಲಾಯಿಸಿದ್ದಾರೆ. ತಮ್ಮ ಬ್ಯಾಟಿಂಗ್ ಮತ್ತು ನಾಯಕತ್ವದ ಮೂಲಕ ದೀರ್ಘ ಮಾದರಿಯ ಆಟಕ್ಕೆ ಹೊಸತನ ತುಂಬಿದ್ದಾರೆ. ಅವರ ಬಗ್ಗೆ ಅಪಾರ ಗೌರವವಿದೆ' ಎಂದು ಇಂಗ್ಲೆಂಡ್ ಆಟಗಾರ ಓಲಿ ಪೋಪ್ ಹೇಳಿದ್ದಾರೆ.

ಕ್ರಿಕೆಟಿಗ ದತ್ತಾಜಿರಾವ್ ಗಾಯಕವಾಡ ಇನ್ನಿಲ್ಲ

ನವದೆಹಲಿ (ಪಿಟಿಐ): ಭಾರತ ಕ್ರಿಕೆಟ್ ತಂಡದ ನಾಯಕರಾಗಿದ್ದ ದತ್ತಾಜಿರಾವ್ ಗಾಯಕವಾಡ (95) ಅವರು ಮಂಗಳವಾರ ಬರೋಡಾದಲ್ಲಿ ನಿಧನರಾದರು.

ದಿವಂಗತ ವಿಜಯ ಹಜಾರೆ ಅವರ ಸಮಕಾಲೀನರಾಗಿದ್ದ ದತ್ತಾಜಿರಾವ್ ಭಾರತ ತಂಡವನ್ನು 11 ಟೆಸ್ಟ್‌ಗಳಲ್ಲಿ ಪ್ರತಿನಿಧಿಸಿದ್ದರು. ಹಜಾರೆಯವರಷ್ಟೇ ಕೌಶಲಪೂರ್ಣ ಬ್ಯಾಟರ್ ಕೂಡ ಆಗಿದ್ದರು. ಮೂಲತಃ ಬರೋಡಾದವರೇ ಆದ ದತ್ತಾಜಿರಾವ್ 1950ರಲ್ಲಿ ತಮ್ಮ ಕವರ್ ಡ್ರೈವ್‌ಗಳಿಂದ ಮುಂಬೈನಂತಹ ಬಲಿಷ್ಠ ತಂಡಗಳಿಗೆ ಸಿಂಹಸ್ವಪ್ನರಾಗಿದ್ದರು. ಇಂಗ್ಲೆಂಡ್ ಕ್ರಿಕೆಟ್ ಲೇಖಕ ಕ್ರಿಸ್ಟೋಫರ್ ಮಾರ್ಟಿನ್-ಜೆಂಕಿನ್ಸ್ ಅವರು ದತ್ತಾಜಿರಾವ್ ಕವರ್ ಡ್ರೈವ್‌ಗಳನ್ನು 'ಅಹ್ಲಾದಕರ' ಎಂದು ಬಣ್ಣಿಸಿದ್ದರು.

ಆದರೆ 1952 ರಿಂದ 1961ರವರೆಗೆ ರಾಷ್ಟ್ರೀಯ ತಂಡದಲ್ಲಿ ಅವರು ಹೆಚ್ಚು ರನ್ (352) ಗಳಿಸಲಿಲ್ಲ. 110 ಪ್ರಥಮ ದರ್ಜೆ ಪಂದ್ಯಗಳಲ್ಲಿ ಅವರು 5788 ರನ್ ಗಳಿಸಿದರು. ಬರೋಡ ತಂಡವು 1957–58ರಲ್ಲಿ ರಣಜಿ ಟ್ರೋಫಿ ಜಯಿಸಲು ಅವರ ಆಟವೇ ಪ್ರಧಾನವಾಗಿತ್ತು. ಆ ಋತುವಿನಲ್ಲಿ ಸರ್ವಿಸಸ್ ವಿರುದ್ಧ ಶತಕ ಬಾರಿಸಿದ್ದರು.

50ರ ದಶಕದಲ್ಲಿ ಪ್ರಥಮ ದರ್ಜೆ ಕ್ರಿಕೆಟ್‌ನಲ್ಲಿ ದತ್ತಾಜಿ ಮತ್ತು ವಿಜಯ್ ಹಜಾರೆ ಅವರ ನಡುವಣ 'ಪೈಪೋಟಿ' ಇತ್ತು. ರಣಜಿ ಫೈನಲ್‌ನಲ್ಲಿ ದತ್ತಾಜಿ ಶತಕ ಗಳಿಸಿದರು. ಆದರೆ, ಅದೇ ಪಂದ್ಯದಲ್ಲಿ ಹಜಾರೆ ಅವರು ದ್ವಿಶತಕ ಗಳಿಸಿದ್ದರು. ಸೆಮಿಫೈನಲ್‌ನಲ್ಲಿಯೂ ಹೋಳ್ಕರ್ ವಿರುದ್ಧದ ಪಂದ್ಯದಲ್ಲಿ ದತ್ತಾಜಿ 145 ರನ್ ಗಳಿಸಿದ್ದರು.

ಒಂದು ಬಾರಿ ಮುಂಬೈ ಎದುರಿನ ಪಂದ್ಯದಲ್ಲಿ ದತ್ತಾಜಿ ದ್ವಿಶತಕ ಗಳಿಸಿದ್ದರು. ಆದರೇ ಅದೇ ಪಂದ್ಯದಲ್ಲಿ ಹಜಾರೆ ಅವರು ಗಳಿಸಿದ್ದ 126 ರನ್‌ಗಳ ಇನಿಂಗ್ಸ್ ಈಗಲೂ ಸ್ಮರಣೀಯವಾಗಿದೆ.

1952ರಲ್ಲಿ ದತ್ತಾಜಿ ಅವರು ಲೀಡ್ಸ್‌ನಲ್ಲಿ ಇಂಗ್ಲೆಂಡ್ ಎದುರಿನ ಟೆಸ್ಟ್‌ಗೆ ಪದಾರ್ಪಣೆ ಮಾಡಿದ್ದರು. 1959ರಲ್ಲಿ ಇಂಗ್ಲೆಂಡ್ ವಿರುದ್ಧದ ಸರಣಿಯ ಐದು ಟೆಸ್ಟ್‌ಗಳಲ್ಲಿ ನಾಲ್ಕರಲ್ಲಿ ದತ್ತಾಜಿರಾವ್ ಆಡಿದ್ದರು. 1961ರಲ್ಲಿ ಚೆನ್ನೈನಲ್ಲಿ ಪಾಕಿಸ್ತಾನ ವಿರುದ್ಧ ನಡೆದ ಟೆಸ್ಟ್ ಪಂದ್ಯದಲ್ಲಿ ಅವರು ಕೊನೆಯ ಬಾರಿ ಆಡಿದ್ದರು.

ರಣಜಿ ಕ್ರಿಕೆಟ್‌ನಲ್ಲಿ ಬರೋಡಾ ತಂಡವನ್ನು 1947 ರಿಂದ 1961ರವರೆಗೆ ಪ್ರತಿನಿಧಿಸಿದ್ದರು. 47.56ರ ಸರಾಸರಿಯಲ್ಲಿ 3139 ರನ್ ಗಳಿಸಿದ್ದರು. ಅದರಲ್ಲಿ 14 ಶತಕಗಳಿದ್ದವು. ಮಹಾರಾಷ್ಟ್ರ ಎದುರು ಅವರು ಗಳಿಸಿದ್ದ 249 ರನ್ ವೈಯಕ್ತಿಕ ಗರಿಷ್ಠ ಸ್ಕೋರ್. ಅವರ ಮಗ ಅನ್ಷುಮನ್ ಗಾಯಕವಾಡ 1970 ರಿಂದ 80ರವರೆಗೆ ಭಾರತ ತಂಡದಲ್ಲಿ 40 ಟೆಸ್ಟ್ ಆಡಿದರು.

ಅನ್ಷುಮನ್ ಅವರು ರಕ್ಷಣಾತ್ಮಕ ಬ್ಯಾಟಿಂಗ್‌ನಲ್ಲಿ ತಂದೆಗಿಂತಲೂ ಉತ್ತಮವಾಗಿದ್ದರು. ದತ್ತಾಜಿಯವರು ಹಳೆಯ ತಲೆಮಾರಿನ ಕ್ರಿಕೆಟ್‌ನ ಪ್ರಮುಖ ಕೊಂಡಿಯಾಗಿದ್ದರು. ಅವರ ನಿಧನದೊಂದಿಗೆ 50ರ ದಶಕದ ಕ್ರಿಕೆಟ್ ಕೊಂಡಿಯೊಂದು ಕಳಚಿದಂತಾಗಿದೆ.



ದತ್ತಾಜಿರಾವ್ ಗಾಯಕವಾಡ್

ಪ್ಲೇಆಫ್‌ಗೆ ಲಗ್ಗೆ ಹಾಕಿದ ಪೈರೇಟ್ಸ್

ಕೋಲ್ಕತ್ತ (ಪಿಟಿಐ): ಕೊನೆಯ ಹಂತದ ಒತ್ತಡವನ್ನು ಸಮರ್ಥವಾಗಿ ನಿಭಾಯಿಸಿದ ಪಟ್ನಾ ಪೈರೇಟ್ಸ್ ತಂಡ ಪ್ರೊ ಕಬಡ್ಡಿ ಲೀಗ್ 10ನೇ ಆವೃತ್ತಿಯ ರೋಚಕ ಪಂದ್ಯದಲ್ಲಿ ಮಂಗಳವಾರ ತೆಲುಗು ಟೈಟನ್ಸ್ ತಂಡವನ್ನು 38–36 ರಲ್ಲಿ ಎರಡು ಅಂಕಗಳಿಂದ ಮಣಿಸಿ ಐದನೇ ತಂಡವಾಗಿ ಪ್ಲೇಆಫ್‌ಗೆ ಲಗ್ಗೆಹಾಕಿತು.

ಈಗಾಗಲೇ ಜೈಪುರ ಪಿಂಕ್ ಪ್ಯಾಂಥರ್ಸ್, ಪುಣೇರಿ ಪಲ್ಟನ್, ದಬಾಂಗ್ ಡೆಲ್ಲಿ ಮತ್ತು ಗುಜರಾತ್ ಜೈಂಟ್ಸ್ ತಂಡಗಳು ಪ್ಲೇಆಫ್‌ಗೆ ಅರ್ಹತೆ ಪಡೆದಿವೆ.

ನೇತಾಜಿ ಒಳಾಂಗಣ ಕ್ರೀಡಾಂಗಣದಲ್ಲಿ ಈ ಗೆಲುವಿನೊಡನೆ ಒಟ್ಟು 68 ಅಂಕಗಳನ್ನು ಕಲೆಹಾಕಿದ ಪೈರೇಟ್ಸ್ ಅಂಕಪಟ್ಟಿಯಲ್ಲಿ ನಾಲ್ಕನೇ ಸ್ಥಾನ ಪಡೆಯಿತು.

ಹಾಕಿ: ಭಾರತಕ್ಕೆ ಇಂದು ಡಚ್ ಸವಾಲು

ರೂರ್ಕೆಲಾ (ಪಿಟಿಐ): ಸೋಲುಗಳಿಂದ ಜರ್ಝರಿತವಾಗಿರುವ ಭಾರತ ತಂಡ ಬುಧವಾರ ನಡೆಯಲಿರುವ ಮಹಿಳಾ ಪ್ರೊ ಲೀಗ್ ಹಾಕಿ ಟೂರ್ನಿಯಲ್ಲಿ ಅಜೇಯ ನೆದರ್ಲೆಂಡ್ಸ್ ತಂಡದ ಸವಾಲನ್ನು ಎದುರಿಸಬೇಕಾಗಿದೆ.

ಭಾರತ ಹಾಕಿ ತಂಡ ಇತ್ತೀಚಿನ ದಿನಗಳಲ್ಲಿ ಲಯವನ್ನು ಕಂಡುಕೊಳ್ಳಲು ಪರದಾಡುತ್ತಿದೆ. ಪ್ಯಾರಿಸ್ ಒಲಿಂಪಿಕ್ಸ್‌ಗೆ ಅರ್ಹತೆ ಪಡೆಯಲು ವಿಫಲವಾದ ತಂಡ ಪ್ರೊ ಲೀಗ್‌ನಲ್ಲೂ ನಿರೀಕ್ಷಿತ ಪ್ರದರ್ಶನ ನೀಡಿಲ್ಲ. ಭುವನೇಶ್ವರ ಮತ್ತು ರೂರ್ಕೆಲಾದಲ್ಲಿ ಸವಿತಾ ಪೂನಿಯಾ ನಾಯಕತ್ವದ ತಂಡ ಆಡಿರುವ ಐದು ಪಂದ್ಯಗಳ ಪೈಕಿ ನಾಲ್ಕರಲ್ಲಿ ಸೋತಿದ್ದು ತಂಡದ ಸ್ಥೈರ್ಯವನ್ನು ಉಡುಗಿಸಿದೆ.

ಚೀನಾ, ನೆದರ್ಲೆಂಡ್ಸ್, ಆಸ್ಟ್ರೇಲಿಯಾ ಎದುರು ಸೋಲನುಭವಿಸಿದ ನಂತರ ಭಾರತ ಏಕೈಕ ಜಯವನ್ನು ಅಮೆರಿಕ ವಿರುದ್ಧ ದಾಖಲಿಸಿತ್ತು.ಸೋಮವಾರ ನಡೆದ ಪಂದ್ಯದಲ್ಲಿ ಚೀನಾ ಎದುರು ಮತ್ತೊಮ್ಮೆ 2–1 ರಿಂದ ಸೋಲನ್ನು ಕಂಡಿದೆ. ಬಲಿಷ್ಠ ನೆದರ್ಲೆಂಡ್ಸ್ 9 ಪಂದ್ಯ ಗಳಿಂದ 27 ಪಾಯಿಂಟ್ಸ್ ಕಲೆಹಾಕಿ ಅಗ್ರಸ್ಥಾನದಲ್ಲಿದೆ. ಭಾರತ 9 ತಂಡಗಳ ಲೀಗ್‌ನಲ್ಲಿ ಐದು ಪಂದ್ಯಗಳಿಂದ ಮೂರು ಪಾಯಿಂಟ್ಸ್ ಗಳಿಸಿದ್ದು, ಐದನೇ ಸ್ಥಾನದಲ್ಲಿದೆ.